
ಹುಬ್ಬಳ್ಳಿ
ಬುಧವಾರ, 29 ಏಪ್ರಿಲ್ 2026
ಸಂಪುಟ 16, ಸಂಚಿಕೆ 35, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಬಂಗಾಳ: ಇಂದು 2ನೇ ಹಂತದ ಮತ | 02
ಪಾಲಿಕೆ ಚುನಾವಣೆ: ಬಿಜೆಪಿ ಕ್ಲೀನ್‌ಸ್ವೀಪ್ | 02
ಉಗ್ರವಾದ: ಇಬ್ಬಗೆ ನೀತಿ ಸಲ್ಲ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಹಸ್ತ

ದಿನದ ಮಾತು

ಕಣ್ಣಿರುವವನಿಗಿಂತಲೂ ಕಣ್ಣಿಲ್ಲದವನು ಕಡಿಮೆ ಬಾರಿ ಎಡವಿ ಬೀಳುತ್ತಾನೆ.
▲ಅಜ್ಞಾತ

ನೀರಿಳಿಯದ ಗಂಟಲೊಳಗೆ ಕಡುಬು ತುರುಕಿದಂತೆ

ಖಾರಾ ಬಾತ್
◆ವಿನಾಯಕ ಭಟ್ಟ ಮೂರೂರು

◆ಪುಟ ೬

ಕಿರುಸುದ್ದಿ

ಖಾಲಿದ್ ಕಾರ್ಯಕ್ರಮದ ಸ್ಥಳದಲ್ಲಿ ಭಾರೀ ಪ್ರತಿಭಟನೆ

◆**ಬೆಂಗಳೂರು:** ದೆಹಲಿ ಗಲಭೆ ಪ್ರಕರಣದ ಆರೋಪಿ ಉಮರ್ ಖಾಲಿದ್ ಕುರಿತ ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದು, ಪ್ರತಿಭಟನೆಗೆ ಮುಂದಾದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ದೊಮ್ಮಲೂರು ಸಮೀಪದ ಬೆಂಗಳೂರು ಅಂತಾರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಉಮರ್ ಖಾಲಿದ್ ಆ್ಯಂಡ್ ಹಿಸ್ ವರ್ಲ್ಡ್ ಪುಸ್ತಕಕ್ಕೆ ಸಂಬಂಧಿಸಿದ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. 2020ರ ದೆಹಲಿ ಗಲಭೆ ಪ್ರಕರಣದಲ್ಲಿ ಯುಎಪಿಎ ಕಾಯ್ದೆಯಲ್ಲಿ ಜೈಲುಪಾಲಾಗಿರುವ ವ್ಯಕ್ತಿಯ ಕುರಿತಾದ ಕಾರ್ಯಕ್ರಮಕ್ಕೆ ಅನುಮತಿ ನೀಡಬಾರದು ಎಂದು ಬಿಜೆಪಿ ಆಗ್ರಹಿಸಿತ್ತು.

◆ಪುಟ ೪

ದೇಶದಲ್ಲಿ ಗಮನಾರ್ಹ ಪ್ರಗತಿ: ಸಚಿವೆ ನಿರ್ಮಲಾ

◆**ಮಂಗಳೂರು:** ಕಳೆದ ಒಂದು ದಶಕದಲ್ಲಿ ಭಾರತವು ಆರ್ಥಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಭಿಪ್ರಾಯ ಪಟ್ಟರು. ಮಂಗಳೂರಿನ ದೇರಳ ಕಟ್ಟೆಯ ಕೆ.ಎಸ್.ಹೆಗ್ಡೆ ಸಭಾಂಗಣದಲ್ಲಿ ಮಂಗಳ ವಾರ ನಡೆದ ನಿಟ್ಟೆ ಡಾ.ಎನ್. ವಿನಯ ಹೆಗ್ಡೆ ಉಪನ್ಯಾಸ ಕಾರ್ಯಕ್ರಮದಲ್ಲಿ 'ವಿಕಸಿತ ಭಾರತ-2047ರ ದೃಷ್ಟಿಕೋನ' ಎಂಬ ವಿಷಯದ ಕುರಿತಾಗಿ ಉಪನ್ಯಾಸ ನೀಡಿದರು.

◆ಪುಟ ೪

ಸಹೋದರಿ ಅಸ್ಥಿಪಂಜರ ಹೊತ್ತು ತಂದ ಸಹೋದರ

◆ಪುಟ ೭

ಯುದ್ಧ ಇನ್ನೂ ಮುಗಿದಿಲ್ಲ ಇರಾನ್ ಸೇನಾ ವಕ್ತಾರ!

◆ಪುಟ ೭



ದಾವುದ್ ಸಾಮ್ರಾಜ್ಯದ ಪತನ

◆ಪುಟ ೭

ಸುದ್ದಿ ಸಮಗ್ರ



ಸಿಕ್ಕಿಂನಲ್ಲಿ ಮಂಗಳವಾರ ಯುವ ಪ್ರತಿಭೆಗಳ ಜತೆ ಪ್ರಧಾನಿ ಮೋದಿ ಫುಟ್ಬಾಲ್ ಆಡಿದ ಕ್ಷಣ.

ಸಿಕ್ಕಿಂ ಭಾರತದ ಅಷ್ಟಲಕ್ಷ್ಮಿ: ಪ್ರಧಾನಿ ಮೋದಿ ಬಣ್ಣನೆ

ಆ್ಯಕ್ಟ್ ಈಸ್ಟ್, ಆ್ಯಕ್ಟ್ ಫಾಸ್ಟ್

◆**ಗ್ಯಾಂಗ್ಟಕ್:** ತಮ್ಮ ಸರಕಾರವು ತನ್ನ 'ಆ್ಯಕ್ಟ್ ಈಸ್ಟ್' ನೀತಿಗಷ್ಟೇ ಬದ್ಧವಾಗಿರುವುದಲ್ಲ, ಬದಲಿಗೆ ಸಿಕ್ಕಿಂ ಈಶಾನ್ಯದ 'ಅಷ್ಟಲಕ್ಷ್ಮಿ' ಎಂಬ ಭಾವನೆಯಲ್ಲಿ ಈ ರಾಜ್ಯದ ಅಭಿವೃದ್ಧಿಗಾಗಿ 'ಆ್ಯಕ್ಟ್ ಫಾಸ್ಟ್' ನೀತಿಯ ದೃಢ ಸಂಕಲ್ಪವನ್ನೂ ಮಾಡಿ ಕೆಲಸ ಮಾಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿಯವರು ಮಂಗಳವಾರ ತಿಳಿಸಿದ್ದಾರೆ. ಈಶಾನ್ಯದ ರಾಜ್ಯಗಳೆಂದರೆ ಸಮೃದ್ಧಿ, ಸಂಪತ್ತು ಮತ್ತು ಮಂಗಳಕರ ಬಹುಮುಖಿ ಸ್ವರೂಪದ ಪ್ರತೀಕ ಎಂಬುದಾಗಿ ಮೋದಿಯವರು ಬಣ್ಣಿಸಿದ್ದಾರೆ.

ಅವರು ಸಿಕ್ಕಿಂನ ರಾಜ್ಯ ಸ್ಥಾನಮಾನದ ಸ್ವರ್ಣ ಮಹೋತ್ಸವ ಸಮಾರೋಪದಲ್ಲಿ ಮಾತನಾಡಿ, ಪ್ರವಾಸೋದ್ಯಮವೇ ಸಿಕ್ಕಿಂನ ಆರ್ಥಿಕತೆಯ ಆಧಾರಸ್ತಂಭವಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರವು ಈಶಾನ್ಯದಲ್ಲಿ ಸಂಪರ್ಕ ವ್ಯವಸ್ಥೆಗೆ ವಿಶೇಷ ಒತ್ತು ನೀಡಿ ಕೆಲಸ ಮಾಡುತ್ತಿದೆ. ಇದರಿಂದ ಪ್ರವಾಸಿಗರ ಒಳಹರಿವು ಹೆಚ್ಚುವಂತಾಗಿದೆ. ಇದರಿಂದ ಈಶಾನ್ಯ ರಾಜ್ಯಗಳ ಆರ್ಥಿಕತೆಗೆ ವಿಶೇಷ ಉತ್ತೇಜನ ಲಭಿಸುತ್ತಿದೆ ಎಂದರು.

ಸಿಕ್ಕಿಂನ ಮೂಲಸೌಕರ್ಯಗಳನ್ನು ಹೆಚ್ಚಿಸಲು ತಮ್ಮ ಸರಕಾರ ಬದ್ಧವಾಗಿದ್ದು, ಪಶ್ಚಿಮ ಬಂಗಾಳದ ಬಾಗ್ಡೋಗ್ರಾದಿಂದ ಎಕ್ಸ್‌ಪ್ರೆಸ್ ಹೆದ್ದಾರಿ, ನಾಥುಲಾದಲ್ಲಿ ಇನ್ನೊಂದು ಎಕ್ಸ್‌ಪ್ರೆಸ್ ವೇ, ಗ್ಯಾಂಗ್ಟಕ್‌ನಲ್ಲಿ ರಿಂಗ್ ರೋಡ್, ರಾಜ್ಯದಲ್ಲಿ ರೋಪ್‌ವೇ ಮತ್ತು ಸ್ಕೈವೇ ಯೋಜನೆ ಸೇರಿದಂತೆ ಪ್ರವಾಸಿಗರ ಹರಿವು ಹೆಚ್ಚಿಸಲು ಹಲವು ಯೋಜನೆಗಳನ್ನು ರೂಪಿಸಿದೆ. ➡ಪುಟ ೪

ಸಿಕ್ಕಿಂಗೆ ₹4000 ಕೋಟಿ ಯೋಜನೆ

◆**ಗ್ಯಾಂಗ್ಟಕ್:** ಸಿಕ್ಕಿಂಗೆ ರಾಜ್ಯ ಸ್ಥಾನಮಾನ ಲಭಿಸಿದ ಸ್ವರ್ಣ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡ ಪ್ರಧಾನಿ ನರೇಂದ್ರ ಮೋದಿಯವರು ರಾಜ್ಯಕ್ಕೆ 4000 ಕೋಟಿ ರೂ.ಗಳಿಗೂ ಅಧಿಕ ಮೊತ್ತದ ಅಭಿವೃದ್ಧಿ ಯೋಜನೆಗಳನ್ನು ನೀಡಿರುವುದಕ್ಕೆ ಸಿಕ್ಕಿಂ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್ ಅವರು ಪ್ರಧಾನಿಯವರಿಗೆ ಕೃತಜ್ಞತೆ ಸಲ್ಲಿಸಿದರು. ರಾಜ್ಯದ ಮೂಲಸೌಕರ್ಯಗಳು, ಸಂಪರ್ಕ ಯೋಜನೆಗಳು, ಆರೋಗ್ಯ ಕ್ಷೇತ್ರದ ಅಭಿವೃದ್ಧಿ, ಶಿಕ್ಷಣ, ವಿದ್ಯುತ್, ನಗರ ಅಭಿವೃದ್ಧಿ, ಪರಿಸರ, ಪ್ರವಾಸೋದ್ಯಮ ಮತ್ತು ಕೃಷಿ ಸಂಬಂಧಿತ ಹಲವು ಯೋಜನೆಗಳನ್ನು ಪ್ರಧಾನಿಯವರು ಸಿಕ್ಕಿಂಗೆ ಘೋಷಿಸಿದ್ದಾರೆ. ➡ಪುಟ ೪

ಪ್ರಧಾನಿಗೆ ಸಿಕ್ಕಿಂ ಸಿಎಂ ಕೃತಜ್ಞತೆ

ಪಹಲ್ಗಾಮ್ ಮಾದರಿ ಘಟನೆ | ಕಲ್ಮಾ ಓದಲು ಒತ್ತಾಯ
ಇಬ್ಬರು ಸೆಕ್ಯುರಿಟಿಗೆ ಚೂರಿ ಇರಿತ | ಎಟಿಎಸ್‌ನಿಂದ ತನಿಖೆ

ಮುಂಬೈ ಉಗ್ರ ದಾಳಿ

◆**ಮುಂಬೈ:** ಪಹಲ್ಗಾಮ್ ನಲ್ಲಿ ನಡೆದ ದಾಳಿಯ ಮಾದರಿಯಲ್ಲೇ ಸಂತ್ರಸ್ತರ ಗುರುತು ಪರಿಶೀಲಿಸಿ ದಾಳಿ ನಡೆಸಿದ ಮತ್ತೊಂದು ಬೆಚ್ಚಿಬೀಳಿಸುವ ಘಟನೆ ಮಹಾರಾಷ್ಟ್ರದ ಮುಂಬೈ ಸಮೀಪ ಮೀರಾ ರಸ್ತೆಯಲ್ಲಿ ಬೆಳಕಿಗೆ ಬಂದಿದೆ.

ಸೋಮವಾರ ಮುಂಜಾನೆ ವೇಳೆ ಭದ್ರತಾ ಸಿಬ್ಬಂದಿ ಮೇಲೆ ನಡೆದ ಚೂರಿ ದಾಳಿಯಲ್ಲಿ, ಮೊದಲು ಅವರ ಹೆಸರು ಮತ್ತು ಧರ್ಮ ವಿಚಾರಿಸಿ, ನಿರ್ದಿಷ್ಟ ಪ್ರಾರ್ಥನೆ ಹೇಳಲು ಒತ್ತಾಯಿಸಿದ ಬಳಿಕ ಇರಿಯಲಾಗಿದೆ ಎಂಬ ಸಂಗತಿ ತನಿಖೆಗೆ ಗಂಭೀರ ಉಗ್ರ ಆಯಾಮ ನೀಡಿದೆ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಈಗ ಏಕಾಂಗಿ ಉಗ್ರ ದಾಳಿ ಎಂದು ಪರಿಗಣಿಸಿ ಮಹಾರಾಷ್ಟ್ರ ಭಯೋತ್ಪಾದನಾ ನಿಯಂತ್ರಣ ದಳ(ಎಟಿಎಸ್) ಸಮಗ್ರ ತನಿಖೆ ಆರಂಭಿಸಿದೆ.

ಮುಂಬೈ ಮೀರಾ ರಸ್ತೆ ದಾಳಿಗೆ ಉಗ್ರ ಆಯಾಮ

ಸೋಮವಾರ ಮುಂಜಾನೆ ಸುಮಾರು ನಾಲ್ಕು ಗಂಟೆಗೆ ನಯಾ ನಗರದಲ್ಲಿನ ನಿರ್ಮಾಣ ಹಂತದ ಪ್ರದೇಶದಲ್ಲಿ ಈ ದಾಳಿ ನಡೆದಿದೆ. ಭದ್ರತಾ ಸಿಬ್ಬಂದಿಯಾದ ರಾಜಕುಮಾರ ಮಿಶ್ರಾ ಮತ್ತು ಸುಬ್ರತೋ ಸೇನ್ ಕರ್ತವ್ಯದಲ್ಲಿದ್ದ ವೇಳೆ, ಜೈಬ್ ಜುಬೈರ್ ಅನ್ಸಾರಿ ಎಂಬಾತ ಸ್ಥಳಕ್ಕೆ ಬಂದು ಅವರೊಂದಿಗೆ ಮಾತನಾಡಲು ಆರಂಭಿಸಿದ್ದಾನೆ. ಪ್ರಾಥಮಿಕವಾಗಿ ಯಾವುದೇ ಅನುಮಾನ ಮೂಡದಂತೆ ನಡೆದುಕೊಂಡ ಆರೋಪಿ, ನಂತರ ಅವರ ಹೆಸರು, ಮೂಲಸ್ಥಳ ಹಾಗೂ ಧರ್ಮ ವಿಚಾರಿಸಿದ್ದಾನೆ. ಬಳಿಕ ಇಸ್ಲಾಮಿಕ್ ಕಲ್ಮಾ ಪಠಿಸಲು ಹೇಳಿದ್ದಾನೆ. ಅವರು ಅದನ್ನು ಹೇಳಲು ವಿಫಲವಾದಾಗ ತಕ್ಷಣವೇ ಚೂರಿ ತೆಗೆದು ನಿರ್ದಾಕ್ಷಿಣ್ಯವಾಗಿ ಇರಿದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ➡ಪುಟ ೪



- ಸಂತ್ರಸ್ತರ ಧರ್ಮ ಗುರಿಯಾಗಿಸಿ ದಾಳಿ
- ಕಲ್ಮಾ ಹೇಳಲು ಒತ್ತಾಯಿಸಿ ವಿಫಲ, ಚೂರಿ ಇರಿತ
- ಇಬ್ಬರು ಭದ್ರತಾ ಸಿಬ್ಬಂದಿಗೆ ಗಂಭೀರ ಗಾಯ
- ಏಕಾಂಗಿ ಉಗ್ರ ದಾಳಿ ಮಾದರಿ ಶಂಕೆ
- ಪ್ರಕರಣ ಎಟಿಎಸ್‌ಗೆ ಹಸ್ತಾಂತರ

ಏನು ಈ ಏಕಾಂಗಿ ಉಗ್ರ ದಾಳಿ?

ಏಕಾಂಗಿ ಉಗ್ರ ಎಂದರೆ ಯಾವುದೇ ಸಂಘಟಿತ ಉಗ್ರ ಸಂಘಟನೆಯ ನೇರ ಮಾರ್ಗದರ್ಶನವಿಲ್ಲದೆ, ತೀವ್ರವಾದ ಸಿದ್ಧಾಂತಗಳಿಂದ ಪ್ರೇರಿತನಾಗಿ ಒಬ್ಬ ವ್ಯಕ್ತಿ ನಡೆಸುವ ಹಿಂಸಾಚಾರ. ಇತ್ತೀಚಿನ ವರ್ಷಗಳಲ್ಲಿ ಆನ್‌ಲೈನ್ ವೇದಿಕೆಗಳ ಮೂಲಕ ಸ್ವಯಂ ಮೂಲಭೂತವಾದಿತನ ಹೆಚ್ಚುತ್ತಿರುವುದು ಈ ಮಾದರಿಯ ದಾಳಿಗಳಿಗೆ ಕಾರಣವಾಗುತ್ತಿದೆ.

ಐಸಿಸ್ ಮಾದರಿ ಪ್ರೇರಿತ

ಇಲ್ಲಿಯವರೆಗೆ ಯಾವುದೇ ಉಗ್ರ ಸಂಘಟನೆಯೊಂದಿಗೆ ನೇರ ಸಂಪರ್ಕದ ದೃಢ ಸಾಕ್ಷ್ಯ ಸಿಕ್ಕಿಲ್ಲವಾದರೂ, ಐಸಿಸ್ ಮಾದರಿಯ ಪ್ರಚಾರದಿಂದ ಪ್ರೇರಿತನಾಗಿರುವ ಸಾಧ್ಯತೆಗಳನ್ನು ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಸಂಘಟಿತ ನೇಮಕಾತಿ ಇಲ್ಲದೆ, ಆನ್‌ಲೈನ್ ಪ್ರಚಾರದ ಮೂಲಕ ವ್ಯಕ್ತಿಗಳು ಸ್ವಯಂ ಮೂಲಭೂತವಾದಿಗೊಳ್ಳುವ ಪ್ರವೃತ್ತಿ ಹೆಚ್ಚುತ್ತಿರುವುದನ್ನು ಈ ಘಟನೆ ಮತ್ತೊಮ್ಮೆ ಹೊರಹಾಕಿದೆ ಎಂದು ಭದ್ರತಾ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.



ಆನ್‌ಲೈನ್ ಮೂಲಭೂತ ವಾದಿತನ ಸುಳಿವು

ಪ್ರಾಥಮಿಕ ತನಿಖೆಯಲ್ಲಿ ಆರೋಪಿ ಟೆಲಿಗ್ರಾಂ ವಾಹಿನಿಗಳ ಮೂಲಕ ಹಿಂಸಾತ್ಮಕ ಜಿಹಾದ್ ಪ್ರಚಾರ ವೀಕ್ಷಿಸಿದ್ದಾನೆ ಎಂಬ ಮಾಹಿತಿ ಲಭ್ಯವಾಗಿದೆ. ಗಾಜಾ ಸೇರಿದಂತೆ ಜಾಗತಿಕ ಸಂಘರ್ಷಗಳ ಉಲ್ಲೇಖಗಳು ಹಾಗೂ ಜಿಹಾದ್ ಕುರಿತ ಟಿಪ್ಪಣಿಗಳು ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ. ನೇರ ಉಗ್ರ ಸಂಘಟನೆಯ ಸಂಪರ್ಕದ ಸಾಕ್ಷ್ಯ ಸಿಕ್ಕಿಲ್ಲವಾದರೂ, ಐಸಿಸ್ ಮಾದರಿಯ ಪ್ರಚಾರದಿಂದ ಪ್ರೇರಿತನಾಗಿರುವ ಸಾಧ್ಯತೆಗಳನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

2,016 ಕೋಟಿ ರೂ. ದಾಖಲೆ ವಹಿವಾಟು: ಎಂ.ಬಿ.ಪಾಟೀಲ್

ಕೆಎಸ್ಡಿಎಲ್‌ಗೆ ₹507 ಕೋಟಿ ಲಾಭ

◆**ಬೆಂಗಳೂರು:** 110 ವರ್ಷ ಇತಿಹಾಸವಿರುವ, ಸರಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತವು (ಕೆಎಸ್‌ಡಿಎಲ್) 2025-26ನೇ ಹಣಕಾಸು ವರ್ಷದಲ್ಲಿ ಇದೇ ಮೊದಲ ಬಾರಿಗೆ 2,016 ಕೋಟಿ ರೂ. ವಹಿವಾಟು ನಡೆಸಿದ್ದು, 507 ಕೋಟಿ ರೂ. ಲಾಭ ಗಳಿಸಿದೆ. ಇದು ಸಂಸ್ಥೆಯ ಪಾಲಿಗೆ ಚಾರಿತ್ರಿಕ ಮೈಲಿಗಲ್ಲಾಗಿದ್ದು, ಸಾರ್ವಜನಿಕ ಉದ್ದಿಮೆಗಳ ಸಾಧನೆಯಲ್ಲಿ ಕಿರೀಟಪ್ರಾಯವಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಮಂಗಳವಾರ ಹೇಳಿದ್ದಾರೆ. ಸಂಸ್ಥೆಯ ಈ ಅಪೂರ್ವ ಸಾಧನೆ ಸಂಭ್ರಮಾಚರಣೆ ನಿಮಿತ್ತ ನಗರದ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ಮೈಸೂರು ಸ್ಯಾಂಡಲ್‌ನ ಸಾಧನೆ ಶಿಖರ ಕಾರ್ಯಕ್ರಮದಲ್ಲಿ ಸಿಬ್ಬಂದಿ, ಅಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಂಸ್ಥೆಯು ಮೊದಲ 1 ಸಾವಿರ ಕೋಟಿ ರೂ. ವಹಿವಾಟು ತಲುಪಲು 105 ವರ್ಷ ತೆಗೆದುಕೊಂಡಿತ್ತು. ➡ಪುಟ ೪



ರೈತರಿಗೆ ಉತ್ತೇಜನ

ಸಂಸ್ಥೆಯ ಹೆಮ್ಮೆಯ ಉತ್ಪನ್ನವಾದ ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಗೆ ಗಂಧದ ಎಣ್ಣೆಯೇ ಮೂಲವಸ್ತುವಾಗಿದೆ. ಇದರ ಸುಗಮ ಪೂರೈಕೆಗೆ ಸಂಸ್ಥೆಯು ರೈತರೊಂದಿಗೆ ಕೈಜೋಡಿಸಿದ ಗ್ರೋ ಮೋರ್ ಸ್ಯಾಂಡಲ್ ಕಾರ್ಯಕ್ರಮ ರೂಪಿಸಿದೆ. **10** ವರ್ಷಗಳಲ್ಲಿ **10** ಸಾವಿರ ಎಕರೆ ಗಂಧದ ನೆಡುತೋಪು ಬೆಳೆಸಲಾಗುವುದು. ➡ಪುಟ ೪



ಲೋಕಭವನದಲ್ಲಿ ನೂತನವಾಗಿ ನಿರ್ಮಿಸಿರುವ ನವೀಕೃತ ಸ್ವಾಗತ ಕೇಂದ್ರ ಮತ್ತು ಕಾಮಧೇನು ಲೋಕ ಗೋಶಾಲೆಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಉದ್ಘಾಟಿಸಿದರು. ಈ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಶಾಸಕ ಎ.ಎಸ್. ಪೊನ್ನಣ್ಣ, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಸತ್ಯನಾರಾಯಣ್ ಸೇರಿದಂತೆ ಇತರರಿದ್ದರು.

ಕೈ ವರಿಷ್ಠರ ಜತೆ ಸಚಿವರ ಚರ್ಚೆ

◆**ಬೆಂಗಳೂರು:** ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದಿಲ್ಲಿಗೆ ಹೋಗಿ ಬಂದ ಬೆನ್ನಲ್ಲೇ ಸಚಿವರಾದ ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ ಮತ್ತು ಕೆ.ಎಚ್. ಮುನಿಯಪ್ಪ ಅವರು ದಿಲ್ಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿ ರಾಜ್ಯ ರಾಜಕೀಯ ಬೆಳವಣಿಗೆ ಕುರಿತು ಚರ್ಚೆ ನಡೆಸಿದ್ದಾರೆ. ಪಕ್ಷದಲ್ಲಿನ ಇತ್ತೀಚಿನ ಬೆಳವಣಿಗೆ ಹಾಗೂ ಗೊಂದಲಗಳ ಬಗ್ಗೆ ವರಿಷ್ಠರಿಂದ ಸ್ಪಷ್ಟ ಸಂದೇಶ ಬಯಸಿರುವ ಈ ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ್ದು, ಸಂಪುಟ ವಿಸ್ತರಣೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮತ್ತು ನಾಯಕತ್ವ ಬದಲಾವಣೆ ಗೊಂದಲದ ಬಗ್ಗೆ ಚರ್ಚಿಸಿದ್ದಾರೆ. ಅಲ್ಲದೇ ರಾಜ್ಯ ರಾಜಕೀಯದ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಸ್ಪಷ್ಟನೆ ನೀಡುವಂತೆ ಹೈಕಮಾಂಡ್ ನಾಯಕರಿಗೆ ಮನವಿ ಮಾಡಿದ್ದಾರೆ. ➡ಪುಟ ೪

ಮಹದೇವಪ್ಪ, ಮುನಿಯಪ್ಪ, ಸತೀಶ್ ಜಾರಕಿಹೊಳಿ ದಿಲ್ಲಿಗೆ ದೌಡು



ಮೇ ಅಂತ್ಯಕ್ಕೆ ರಷ್ಯಾ ಪೂರೈಕೆ | ರಕ್ಷಣೆ ಬಲವರ್ಧನೆ

ಸೇನೆಗೆ 4 ಸುದರ್ಶನ ಚಕ್ರ ಬಲ

◆**ಹೊಸದಿಲ್ಲಿ:** ಮೇ ತಿಂಗಳಾಂತ್ಯದೊಳಗೆ 4 ಎಸ್-400 ಟ್ರಿಯಂಫ್ ವಾಯು ರಕ್ಷಣಾ ವ್ಯವಸ್ಥೆಗಳನ್ನು (ಸುದರ್ಶನ ಚಕ್ರ) ರಷ್ಯಾ ಪೂರೈಕೆ ಮಾಡಲಿದ್ದು, ಅವುಗಳನ್ನು ಪಾಕಿಸ್ತಾನ ವಿರುದ್ಧ ಭಾರತದ ಕ್ಷಿಪಣಿ ವ್ಯವಸ್ಥೆ ಬಲಗೊಳಿಸುವ ನಿಟ್ಟಿನಲ್ಲಿ ರಾಜಸ್ಥಾನ ಸೆಕ್ಟರ್‌ನಲ್ಲಿ ನಿಯೋಜಿಸುವ ಸಾಧ್ಯತೆಯಿದೆ ಎಂದು ಭಾರತೀಯ ಸೇನೆಯ ಮೂಲಗಳು ಮಂಗಳವಾರ ತಿಳಿಸಿವೆ.

ಕಳೆದ ವಾರ ನಾಲ್ಕು ಸುದರ್ಶನ ಚಕ್ರ (ಎಸ್-400)ಗಳ ರವಾನೆಗೂ ಮುನ್ನ ಭಾರತೀಯ ವಾಯುಪಡೆ (ಐಎಎಫ್) ಅಧಿಕಾರಿಗಳು ಅಗತ್ಯ ಪರಿಶೀಲನೆ ನಡೆಸಿದ್ದು, ನಂತರ ಅವುಗಳನ್ನು ಹಡಗುಗಳಿಗೆ ಲೋಡ್ ಮಾಡಲಾಗಿದೆ.

ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ಪ್ರದೇಶಗಳ ಮೇಲೆ ನಡೆಸಿದ ಆಪರೇಷನ್ ಸಿಂದೂರ ಪ್ರತಿದಾಳಿಯಲ್ಲಿ ಭಾರತ, ಸುದರ್ಶನ ಚಕ್ರ ಎಂದೇ ಕರೆಯಲ್ಪಡುವ ಎಸ್-400 ವಾಯು ರಕ್ಷಣಾ ವ್ಯವಸ್ಥೆಗಳನ್ನೇ ಹೆಚ್ಚು ಪರಿಣಾಮಕಾರಿ ರೀತಿ ಬಳಸಿಕೊಂಡಿತ್ತು. ಸಿಂದೂರ ಕಾರ್ಯಾಚರಣೆ ವಾರ್ಷಿಕೋತ್ಸವದ ಸಂದರ್ಭ ರಷ್ಯಾ ಇನ್ನೂ 4 ಎಸ್-400 ವಾಯು ರಕ್ಷಣಾ ವ್ಯವಸ್ಥೆಗಳನ್ನು ಪೂರೈಕೆ ಮಾಡಲಿದೆ. ➡ಪುಟ ೪



- 280 ಹೆಚ್ಚುವರಿ ಎಸ್-400 ಶೀಘ್ರ ಖರೀದಿ ಸಾಧ್ಯತೆ
- 400 ಕಿ.ಮೀ. ಪಾಕ್ ಗಡಿಯೊಳಗೆ ದಾಳಿ ನಡೆಸುವ ಉದ್ದೇಶದಿಂದ ರಾಜಸ್ಥಾನದಲ್ಲಿ ನಿಯೋಜನೆ
- 400 ಕಿ.ಮೀ. ದೂರವ್ಯಾಪ್ತಿ ಕ್ಷಿಪಣಿ ದಾಳಿ ಸಾಮರ್ಥ್ಯ

ರಕ್ಷಣಾ ಆಧುನೀಕರಣ ◆ಪುಟ ೪

ಒಳಮೀಸಲಾತಿಗೆ ಸರ್ಕಾರ ಆದೇಶ

◆**ಬೆಂಗಳೂರು:** ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ.17ರಿಂದ ಶೇ.15ಕ್ಕೆ ಸೀಮಿತಗೊಳಿಸಿ ಒಳಮೀಸಲಾತಿಯನ್ನು ಜಾರಿಗೊಳಿಸಲು ತೀರ್ಮಾನಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಈ ಮೀಸಲಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಡುತ್ತದೆ ಎಂದು ಆದೇಶದಲ್ಲಿ ತಿಳಿಸಿದೆ. ಪರಿಶಿಷ್ಟ ಜಾತಿಗೆ ಲಭ್ಯ ಶೇ.15 ಮೀಸಲಾತಿಯಲ್ಲಿ ಪ್ರವರ್ಗ ಎ (ಎಡಗೈ ಸಂಬಂಧಿತ ಜಾತಿಗಳು), ಪ್ರವರ್ಗ ಬಿ (ಬಲಗೈ ಸಂಬಂಧಿತ ಜಾತಿಗಳು) ಮತ್ತು ಪ್ರವರ್ಗ ಸಿಗೆ (ಸ್ಪೃಶ್ಯ, ಅತಿ ಸೂಕ್ಷ್ಮ, ಸೂಕ್ಷ್ಮ, ಅಲೆಮಾರಿ ಜಾತಿಗಳು) ಕ್ರಮವಾಗಿ ಶೇ. 5.25, 5.25, 4.50 ಪ್ರಮಾಣದಲ್ಲಿ ಒಳಮೀಸಲಾತಿ ಜಾರಿಗೊಳಿಸಿ ಆದೇಶಿಸಲಾಗಿದೆ.

◆ವಿವರ ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,60,000**(2,60,000) ಅಪರಂಜಿ ಚಿನ್ನ: **1,50,930**(1,53,710) ಆಭರಣ ಚಿನ್ನ: **1,38,350**(1,40,900) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **76,886**(416↓) ಎನ್‌ಎಸ್‌ಇ **23,995**(97↓)

$1 = ₹94.26

ಕಿರುಸುದ್ದಿ

ಹು-ಧಾ ಮಹಾನಗರ ಪಾಲಿಕೆ ವಿಭಜನೆ ಬೇಡ: ಪ್ರದೀಪ್ ಶೆಟ್ಟರ್



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ (ಎಚ್ಡಿಎಂಸಿ) ವಿಭಜನಾ ಉದ್ದೇಶದ ಬಗ್ಗೆ ಗಂಭೀರ ಕಾಳಜಿಯ ವಿಷಯ ಕುರಿತು ನಾನು ರಾಜ್ಯಪಾಲರು ಮತ್ತು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಮಹಾ ಪೌರರಿಗೆ ಪತ್ರ ಬರೆದಿದ್ದು, ಮಹಾನಗರ ಪಾಲಿಕೆ ವಿಭಜನೆ ಮಾಡದಂತೆ ನಿಮ್ಮ ಮಧ್ಯಪ್ರವೇಶವನ್ನು ತಡೆಯಲು ಬಲವಾಗಿ ಒತ್ತಾಯಿಸಿದ್ದೇನೆ ಎಂದು ವಿಧಾನ ಪರಿಷತ್ ಸದಸ್ಯ ಪ್ರದೀಪ್ ಶೆಟ್ಟರ್ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟನೆ ಹೊರಡಿಸಿರುವ ಅವರು, ಹುಬ್ಬಳ್ಳಿ-ಧಾರವಾಡಗಳ ಏಕತೆ ಕೇವಲ ಇತಿಹಾಸದ ವಿಷಯವಲ್ಲ; ಇದು ಕಾರ್ಯತಂತ್ರದ ಆರ್ಥಿಕ ಅಗತ್ಯವಾಗಿದೆ, ಈ ಹಂತದಲ್ಲಿ ನಿಗಮವನ್ನು ವಿಭಜಿಸುವುದು, 16 ನೇ ಹಣಕಾಸು ಆಯೋಗವು ದೊಡ್ಡ, ಉನ್ನತ-ಕಾರ್ಯನಿರ್ವಹಣೆಯ ನಗರ ಕೇಂದ್ರಗಳನ್ನು ಪುರಸ್ಕರಿಸಲು ಸಿದ್ಧವಾಗಿದೆ, ಇದು ನಮ್ಮ ನಾಗರಿಕರ ಕೇಂದ್ರ ಅಭಿವೃದ್ಧಿ ನಿಃಯ ಸರಿಯಾದ ಪಾಲನ್ನು ಕಸಿದುಕೊಳ್ಳುವ ಹಿಮ್ಮುಖ ಹೆಜ್ಜೆಯಾಗಿದೆ. ಆದ್ದರಿಂದ, ರಾಜ್ಯ ಸರ್ಕಾರವು ವಿಭಜನೆಯ ಯಾವುದೇ ಪ್ರಸ್ತಾಪವನ್ನು ಕೈಬಿಡಲು ಸಲಹೆ ನೀಡುವಂತೆ ನಾನು ರಾಜ್ಯಪಲಾರಿಗೆ ವಿನಂತಿಸಿ ಪತ್ರ ಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ ಮತ್ತು ಬದಲಿಗೆ ನಮ್ಮ ಜನರ 16 ನೇ ಹಣಕಾಸು ಆಯೋಗದ ಕಲ್ಯಾಣದಿಂದ ಪ್ರಯೋಜನೆ ಗರಿಷ್ಠಗೊಳಿಸಲು ಅಸ್ತಿತ್ವದಲ್ಲಿರುವನ್ನು ಬಲಪಡಿಸುವತ್ತ ಗಮನಹರಿಸಲು ಈ ಮೂಲಕ ಒತ್ತಾಯಿಸುತ್ತೇನೆ.

ಬೃಹತ್ ಪ್ರತಿಭಟನಾ ಸಭೆ ಸಿದ್ಧತೆ ಪರಿಶೀಲನೆ



ಹುಬ್ಬಳ್ಳಿ: ಕೇಂದ್ರ ಸರ್ಕಾರದ ಮಹಿಳಾ ಮೀಸಲಾತಿ ವಿರೋಧಿಸಿ ವಿರೋಧ ಪಕ್ಷಗಳ ನಡೆ ಖಂಡಿಸಿ ಮೇ 1ರಂದು ನಡೆಯಲಿರುವ ಬೃಹತ್ ಪ್ರತಿಭಟನಾ ಸಭೆಯ ಹಿನ್ನೆಲೆ ಶಾಸಕ ಮಹೇಶ ಟೆಂಗಿನಕಾಯಿ ಮಂಗಳವಾರ ನಗರದ ನೆಹರು ಮೈದಾನ ಭೇಟಿ ನೀಡಿ ಸಿದ್ಧತೆ ಪರಿಶೀಲನೆ ನಡೆಸಿದರು. ಹು-ಧಾ ಮಹಾನಗರ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ, ಮುಖಂಡರಾದ ಲಿಂಗರಾಜ್ ಪಾಟೀಲ್ ಹಾಗೂ ಪಕ್ಷದ ಪ್ರಮುಖ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಹು-ಧಾ ಮಹಾನಗರ ಪಾಲಿಕೆ ಸಾಮಾನ್ಯ ಸಭೆ ಏ.30ರಂದು

ಹುಬ್ಬಳ್ಳಿ: ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಸಾಮಾನ್ಯ ಸಭೆ ಏ.30 ರಂದು ಬೆಳಗ್ಗೆ 11ಕ್ಕೆ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಅವಳಿನಗರ ಹಲವಾರು ಸಮಸ್ಯೆಗಳ ಕುರಿತು ಚರ್ಚೆ ನಡೆಯಲಿದೆ ಎಂದು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಪರಿಷತ್ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೋಕ್ಸೋ ಕಾನೂನು ಉಪನ್ಯಾಸ ಇಂದು

ಧಾರವಾಡ: ಇಲ್ಲಿನ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾನೂನು ಮತ್ತು ನ್ಯಾಯ ಮಂಟಪದ ವತಿಯಿಂದ ಪೋಕ್ಸೋ ಕಾನೂನು ವಿಷಯ ಕುರಿತು ವಿಶೇಷ ಉಪನ್ಯಾಸ ಏ.29ರಂದು ಸಂಜೆ 6ಕ್ಕೆ ಸಂಘದ ರಾ.ಹ.ದೇಶಪಾಂಡೆ ಸಭಾಭವನದಲ್ಲಿ ಜರುಗಲಿದೆ.

ವಿಶ್ರಾಂತ ಜಿಲ್ಲಾ ನ್ಯಾಯಾಧೀಶ ಎಸ್.ಎಚ್. ಮಿಟ್ಟಲಕೋಡ ಉಪನ್ಯಾಸ ನೀಡಲಿದ್ದು, ಧಾರವಾಡ ವಕೀಲರ ಸಂಘದ ಅಧ್ಯಕ್ಷ ಸಿ.ಎಸ್.ನೇಗಿಹಾಳ ಅಧ್ಯಕ್ಷತೆ ವಹಿಸುವರು. ಹುರಕಡ್ಲಿ ಅಜ್ಜ ಕಾನೂನು ಕಾಲೇಜಿನ ಡಾ.ಸವಿತಾ ಪಾಟೀಲ, ಕವಿಸಂ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅತಿಥಿಗಳಾಗಿ ಆಗಮಿಸಲಿದ್ದು, ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಹಾಗೂ ಕಾನೂನು-ನ್ಯಾಯ ಮಂಟಪದ ಸಂಚಾಲಕ ಶಿವಾನಂದ ಭಾವಿಕಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹುಬ್ಬಳ್ಳಿ: ಅಂತಾರಾಷ್ಟ್ರೀಯ ಹೊಮಿಯೋ ಪತಿ ದಿನದ ಅಂಗವಾಗಿ ಜಿಲ್ಲಾ ಆಯುಷ್ ಫೆಡರೇಶನ್ ಆಫ್ ಇಂಡಿಯಾ ಹಾಗೂ ಕರ್ನಾಟಕ ಹೊಮಿಯೋ ಪತಿ ವೈದ್ಯಕೀಯ ಸಂಘದ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮಕ್ಕೆ ಶಾಸಕ ಮಹೇಶ ಟೆಂಗಿನಕಾಯಿ ಚಾಲನೆ ನೀಡಿದರು.

ಎಸ್ಸೆಸ್ಸೆಲ್ಸಿ ಫಲಿತಾಂಶ: ವಿದ್ಯಾರ್ಥಿಗಳ ಸಾಧನೆ

ಹುಬ್ಬಳ್ಳಿ: ಹುಬ್ಬಳ್ಳಿ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ 2025-26 ನೇ ಸಾಲಿನ ಗ್ರಾಮೀಣ ಹಾಗೂ ಶಹರ ವಲಯಗಳಲ್ಲಿರುವ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾಗಿ ಉತ್ತಮ ಸಾಧನೆ ಮಾಡಿದ್ದಾರೆ.ಅರಳಿಕಟ್ಟಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದ ವಿದ್ಯಾರ್ಥಿ ರಾಹುಲ್ ರಾಹುತ್ 548 ಅಂಕ (87.88%), ಬ್ಯಾಹಟ್ಟಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ವಿದ್ಯಾರ್ಥಿ ಗಣೇಶ್ ಬಡಿಗೇರ್ 446 ಅಂಕ (71.36%), ಹುಬ್ಬಳ್ಳಿ ಬಸವೇಶ್ವರನಗರದ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದ ವಿದ್ಯಾರ್ಥಿ ಆಕಾಶ್ ಬುಡ್ಡಿ 481 ಅಂಕ (76.96%), ವಿದ್ಯಾರ್ಥಿ ಹನುಮಂತ ರಮೇಶ್ ಭಜಂತ್ರಿ 518 ಅಂಕ (89.88%), ವಿದ್ಯಾರ್ಥಿ ಮಾಂತೇಶ್ ಫಕೀರಪ್ಪ ಕಾಮದೇನು 495 ಅಂಕ (79.20%), ವರೂರು ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದ ವಿದ್ಯಾರ್ಥಿ ನೀಲಕಂಠಯ್ಯ ಹಿರೇಮಠ 560 ಅಂಕ (89.6%), ಭೈರಿದೇವರಕೊಪ್ಪ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದ ವಿದ್ಯಾರ್ಥಿ ಪುಟ್ಟರಾಜ ಭಜಂತ್ರಿ 466 ಅಂಕ (74.56%), ವಿದ್ಯಾರ್ಥಿನಿ ರೇಣುಕಾ ಮಾಸಗಟ್ಟಿ 589 ಅಂಕ (94.24%), ವಿದ್ಯಾರ್ಥಿನಿ ಶ್ರೀನಿಧಿ ಕಿರೆಸೂರ 596 ಅಂಕ (95.36%) ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾಗಿ ಸಾಧನೆಗೈದಿದ್ದಾರೆ ಎಂದು ಹುಬ್ಬಳ್ಳಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ನಾಗರತ್ನಾ ಕ್ಯಾಸನೂರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಧಾರವಾಡ: ರಾಜ್ಯದ ಉನ್ನತ ಶಿಕ್ಷಣ ಇಲಾಖೆ ಅಧೀನ ಕಾರ್ಯದರ್ಶಿ ಸೂಚನೆ ಮೇರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾಗಿ ಕವಿವಿ ವ್ಯವಹಾರ (ಎಂಬಿಎ) ವಿಭಾಗದ ಪ್ರಾಧ್ಯಾಪಕ ಪ್ರೊ.ಎಂ.ಎಂ.ಕಡಕೋಳ ಅಧಿಕಾರ ವಹಿಸಿಕೊಂಡರು. ನಿಕಟಪೂರ್ವ ಕುಲಸಚಿವ ಪ್ರೊ.ಎನ್.ವೈ.ಮಟ್ಟಿಹಾಳ ಅಧಿಕಾರ ಹಸ್ತಾಂತರಿಸಿದರು.

ಜನ ಸಂಪರ್ಕ ಸಭೆ ; ರೈತರ ಸಮಸ್ಯೆಗೆ ಸ್ಪಂದಿಸಲು ಅಧಿಕಾರಿಗಳಿಗೆ ಸೂಚನೆ

ಜನರ ಸಮಸ್ಯೆ ಆಲಿಸಿದ ಸಚಿವ ಲಾಡ್



ಕುಂದಗೋಳ : ತಾಲೂಕಿನ ಬೆನಕನಹಳ್ಳಿ, ಸಂಶಿ, ಕಮಡೊಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಪಿಂಚಣಿ, ನಮ್ಮ ಹೊಲ ನಮ್ಮ ರಸ್ತೆ, ಕಾರ್ಮಿಕ ಇಲಾಖೆ, ಕಂದಾಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಜನರ ಅಹವಾಲುಗಳಿಗೆ ಕಾರ್ಮಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಸ್ಪಂದಿಸಿದರು.

ಪಟ್ಟಣದ ಸವಾಯಿ ಗಂಧರ್ವರ ಸ್ಮಾರಕ ಭವನದಲ್ಲಿ ಮಂಗಳವಾರ ಜಿಲ್ಲಾಡಳಿತದಿಂದ ಆಯೋಜಿಸಿದ ಜಿಲ್ಲಾ ಮಟ್ಟದ ಜನ ಸಂಪರ್ಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಜನರ ಸಮಸ್ಯೆ ತ್ವರಿತವಾಗಿ ಪರಿಹರಿಸುವ ಮತ್ತು ಆಡಳಿತ ಜನರಿಗೆ ಇನ್ನಷ್ಟು ಹತ್ತಿರ ತರುವ ಉದ್ದೇಶದಿಂದ ಇಂದು ತಾಲೂಕು ಕೇಂದ್ರದಲ್ಲಿ ಜನ ಸಂಪರ್ಕ ಸಭೆ ಯಶಸ್ವಿಯಾಗಿ ಏರ್ಪಡಿಸಲಾಗಿತ್ತು. ಈ ಜನ ಸಂಪರ್ಕ ಸಭೆಯಲ್ಲಿ ವಿವಿಧ ಗ್ರಾಮಗಳಿಂದ ಬಂದ ಜನರು ತಮ್ಮ ಸಮಸ್ಯೆಗಳು, ಬೇಡಿಕೆ ಹಾಗೂ ಸಲಹೆ ನೇರವಾಗಿ ಸಚಿವರಿಗೆ ತಿಳಿಸಿದರು.

ಸಾರ್ವಜನಿಕರು ಕುಡಿಯುವ ನೀರಿನ ಕೊರತೆ, ರಸ್ತೆ ದುರಸ್ತಿ, ಒಳಚರಂಡಿ ವ್ಯವಸ್ಥೆ, ವಿದ್ಯುತ್ ವ್ಯತ್ಯಯ, ಆರೋಗ್ಯ ಸೇವೆಗಳ ಅಭಾವ, ಶಾಲಾ ಸೌಲಭ್ಯಗಳ ಕೊರತೆ ಸೇರಿದಂತೆ ಹಲವು ಪ್ರಮುಖ ವಿಷಯಗಳ ಬಗ್ಗೆ ತಿಳಿಸಿದರು. ಸಾರ್ವಜನಿಕರಿಂದ ಸಲ್ಲಿಸಲ್ಪಟ್ಟ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸಲಾಯಿತು. ವಿಕಲಚೇತನರು ಸಮಸ್ಯೆ ಹೇಳಿಕೊಳ್ಳಲು ಮುಂದಾದಾಗ ಸಚಿವರು ಅವರ ಬಳಿ ತೆರಳಿ ಅವರ ಸಮಸ್ಯೆ ಆಲಿಸಿದರು. ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಸಮಸ್ಯೆ ಪರಿಹರಿಸುವಂತೆ ಸೂಚಿಸಿದರು. ಅಲ್ಲದೇ ಸಂತೋಷ ಲಾಡ್ ಫೌಂಡೇಶನ್ ವತಿಯಿಂದ ಧನ ಸಹಾಯ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ವಿವಿಧ ಇಲಾಖೆಗಳ ಅರ್ಜಿ ಸ್ವೀಕರಿಸುವ ಸುಮಾರು 11 ಕೌಂಟರ್ ಗಳನ್ನು ತೆರಯಲಾಗಿತ್ತು. ಅಲ್ಲದೇ ಆರೋಗ್ಯ ಇಲಾಖೆ ಸಿಬ್ಬಂದಿ ಜನರ ಆರೋಗ್ಯ ತಪಾಸಣೆ ಮಾಡಿದರು.

ಶಾಸಕ ಎಂ.ಆರ್.ಪಾಟೀಲ, ಧಾರವಾಡ ಜಿಲ್ಲಾ ಪಂಚ ಗ್ಯಾರಂಟಿ ಯೋಜನೆಗಳ ಜಿಲ್ಲಾ ಅಧ್ಯಕ್ಷ ಎಸ್.ಆರ್.ಪಾಟೀಲ, ಜಿಲ್ಲಾಧಿಕಾರಿ ಸ್ನೇಹಲ್ ಆರ್. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ, ಹು-ಧಾ ಮಹಾನಗರ ಪಾಲಿಕೆ ಆಯುಕ್ತ ರುದ್ರೇಶ ಘಾಳಿ, ಜಿಪಂ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಉಪ ವಿಭಾಗಾಧಿಕಾರಿ ಶಾಲಂ ಹುಸೇನ, ತಹಶೀಲ್ದಾರ್ ರಾಜು ಮಾವರಕರ ಉಪಸ್ಥಿತರಿದ್ದರು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಸತೀಶ ಕೊಬ್ಬಯ್ಯನವರ, ಮಾಜಿ ಶಾಸಕ ಎಂ.ಎಸ್.ಅಕ್ಕಿ, ಮುಖಂಡರಾದ ಚಂದ್ರಶೇಖರ ಜುಟ್ಟಲ, ಪ್ರೇಮನಾಥ ಚಿಕ್ಕತುಂಬಳ ಸೇರಿದಂತೆ , ವಿವಿಧ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅ ಕಾರಿಗಳು, ಕುಂದಗೋಳ ತಾಲೂಕು ಮಟ್ಟದ ಅಧಿಕಾರಿಗಳು, ಸಂಘ ಸಂಸ್ಥೆಗಳ ಸದಸ್ಯರು, ಸಾರ್ವಜನಿಕರು ಭಾಗವಹಿಸಿದ್ದರು.

151 ಅಹವಾಲುಗಳು ಸಲ್ಲಿಕೆ

ಒಟ್ಟಾರೆಯಾಗಿ 151 ಆಹವಾಲುಗಳು ಜನರಿಂದ ಸಲ್ಲಿಕೆಯಾಗಿದ್ದವು. ಪ್ರಮುಖವಾಗಿ ಕಂದಾಯ ಇಲಾಖೆಯಲ್ಲಿ ಅತಿ ಹೆಚ್ಚು 48 ಪ್ರಕರಣ, ಗ್ರಾಮೀಣಾಭಿವೃದ್ಧಿ, ರಾಪಂ ಇಲಾಖೆಯಲ್ಲಿ 33 ಪ್ರಕರಣ, ನಗರಾಭಿವೃದ್ಧಿ ಇಲಾಖೆ 12 ಪ್ರಕರಣ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ 10 ಪ್ರಕರಣ, ಇಂಧನ ಇಲಾಖೆ 6 ಪ್ರಕರಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಸಬಲೀಕರಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವಸತಿ ಮತ್ತು ಕಾರ್ಮಿಕ ಇಲಾಖೆಗಳಲ್ಲಿ 5 ಪ್ರಕರಣ, ಗೃಹ ಮತ್ತು ಸಾರಿಗೆ ಇಲಾಖೆ ತಲಾ 4 ಪ್ರಕರಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ 3 ಪ್ರಕರಣ, ಲೋಕೋಪಯೋಗಿ ಇಲಾಖೆಯಲ್ಲಿ 2 ಪ್ರಕರಣಗಳು ದಾಖಲಾಗಿವೆ.

ಉತ್ತಮ ಆರೋಗ್ಯ ಸೇವೆ ನೀಡಲು ಬದ್ಧ

ಕುಂದಗೋಳ : ಪ್ರತಿ ತಾಲೂಕ ಆಸ್ಪತ್ರೆಯಲ್ಲಿ ರೋಗ, ಅರವಳಿಕೆ, ಮಕ್ಕಳ ತಜ್ಞರು ಇರುವಂತೆ ಮರುಹೊಂದಾಣಿಕೆಯಲ್ಲಿ ಕ್ರಮ ಕೈಗೊಳ್ಳುತ್ತಿದ್ದು, ಇದರಿಂದ ಹೆಚ್ಚಿನ ಆರೋಗ್ಯ ಸೇವೆ ನಿಡಲು ಸಾಧ್ಯ ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ತಾಲೂಕಿನ ಇಂಗಳಗಿ ಗ್ರಾಮದಲ್ಲಿನ ನೂತನ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿ, ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ತಾರತಮ್ಯ ಇಲ್ಲ, ಜನರಿಗೆ ಸೇವೆ ನಿಡಲು ಅರ್ಹತೆ ಆಧಾರದಲ್ಲಿ ಅನುದಾನ ನಿಡುವ ಕಾರ್ಯ ಮಾಡುತ್ತಿದ್ದೇವೆ, ಇನ್ನೂ ಗ್ರಾಮೀಣ ಭಾಗದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಾರ್ಯ ಬಹಳ ಮುಖ್ಯವಾಗಿದೆ. ನಮ್ಮ ಸರ್ಕಾರ ಜನರಿಗೆ ಉತ್ತಮ ಆರೋಗ್ಯಸೇವೆ ನಿಡುವ ಕಾರ್ಯ ಮಾಡುತ್ತಿದ್ದೇವೆ ಎಂದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ಈ ಮೊದಲು ದೇಶದಲ್ಲಿ 350 ವೈದ್ಯಕೀಯ ಶಿಕ್ಷಣ ಕೇಂದ್ರಗಳಿದ್ದು, ಈಗ 700 ವೈದ್ಯಕೀಯ ಶಿಕ್ಷಣ ಕೇಂದ್ರಗಳಿದ್ದರೂ ಗ್ರಾಮೀಣ ಪ್ರದೇಶದಲ್ಲಿ ವೈದ್ಯರಕೊರತೆಕಾಡುತ್ತಿರುವುದು ವಿಷಾದನೀಯ ಸಂಗತಿವಾಗಿದೆ. ಜನರಿಗೆ ಆರೋಗ್ಯ ಮತ್ತು ಶಿಕ್ಷಣ ಮುಖ್ಯವಾಗಿದ್ದು, ಕೇಂದ್ರ ಸರ್ಕಾರದ ಅನುದಾನ ಜೊತೆಗೆ ರಾಜ್ಯ ಸರ್ಕಾರಗಳ ಅನುದಾನದಲ್ಲಿ ಆರೋಗ್ಯ ಸಚಿವ ದಿನೇಶ ಗುಂಡುರಾವ್ ಉತ್ತಮ ಕಾರ್ಯ ಮಾಡುತ್ತಿದ್ದು, ಆದರೆ ಕೇಲವು ಕಡೆ ವೈದ್ಯರು ಔಷದಿ ಬರೆದು ಕೊಡುತ್ತಿದ್ದು, ಔಷದಿ ಕೊರತೆ ಬಗ್ಗೆ ಗಮನ ಹರಿಸುವಂತೆ ಸೂಚಿಸಿದರು.

ಶಾಸಕ ಎಂ.ಆರ್.ಪಾಟೀಲ ಮಾತನಾಡಿ, ಸಚಿವರು ನಮ್ಮ ಕ್ಷೇತ್ರದ ಕಮಡೊಳ್ಳಿ ಪಿ.ಎಚ್.ಓ ಕಟ್ಟಡ ನಿರ್ಮಾಣಕ್ಕೆ 3.70 ಕೋಟಿ, ತಾಲೂಕ ಆಸ್ಪತ್ರೆಗೆ 1 ಕೋಟಿ , ಪಿಎಚ್ ಓಗೆ 90ಲಕ್ಷ ಅನುದಾನ ನಿಡಿದ್ದು, ತಾಲೂಕಾಸ್ಪತ್ರೆಗೆ ಡೈನಾಕಾಲಿಸ್ಟ್, ರೇಡಿಯೊಲಾಜಿಸ್ಟ್ ಕೊರತೆಯಿದ್ದು, ಕೂಡಲೆ ವೈದ್ಯರನ್ನು ನೇಮಿಸಬೇಕೆಂದು ಮನವಿ ಮಾಡಿದರು.

ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡಕ್ಕೆ ಭೂದಾನ ನೀಡಿದ ಶಂಕ್ರಪ್ಪಜ್ಜನವರ ಯಲಿವಾಳ, ಶಿವಮ್ಮನವರ ಯಲಿವಾಳ ಅವರ ಕುಟುಂಬದವರಿಗೆ ಸಚಿವರು, ಶಾಸಕರು ಸನ್ಮಾನಿಸಿ ಗೌರವಿಸಿದರು. ಹೆಸ್ಕಾಂ ಅಧ್ಯಕ್ಷ ಸೈಯದ್ ಅಜೀಮ ಪೀರ ಖಾದ್ರಿ, ತಾಲೂಕಾ ಗ್ಯಾರೆಂಟಿ ಸಮಿತಿ ಅಧ್ಯಕ್ಷ ಸತೀಶ್ ಕೊಬ್ಬಯ್ಯನವರ, ಮಾಜಿ ಶಾಸಕ ಎಂ.ಎಸ್. ಅಕ್ಕಿ, ಮಾಜಿ ಜಿಪಂ ಸದಸ್ಯ ಬರ್ಮಣ್ಣ ಮುಗಳಿ, ಉಮೇಶ ಹೇಬಸೂರ, ಭರತ್ ಬೊಮ್ಮಾಯಿ, ಸಿ.ವಾಯ್.ಕರಿಗೌಡ್ರ, ಅನಿಲಕುಮಾರ್ ಪಾಟೀಲ್, ಶಿವಾನಂದ ಬೆಂತೂರ, ಡಿಎಚ್ ಓ ಎಸ್.ಎಂ.ಹೊನಕೇರಿ, ಟಿಎಚ್ಓ ಮಂಜುನಾಥ ಸೊಪ್ಪಿನಮಠ ಅನೇಕರಿದ್ದರು.



ಬಸವಣ್ಣನ ಜಾತ್ರಾ ಮಹೋತ್ಸವ ಮೇ 1ರಂದು



ಉಪ್ಪಿನಬೆಟಗೇರಿ: ಸಮೀಪದ ಮರೇವಾಡ ಗ್ರಾಮದ ಬಸವಣ್ಣ(ನಂದೀಶ್ವರ) ದೇವರ ವಾರ್ಷಿಕ ಜಾತ್ರಾ ಮಹೋತ್ಸವವು ಮೇ 1ರಂದು ನಡೆಯಲಿದ್ದು, ಜಾತ್ರೆ ಅಂಗವಾಗಿ ಏ.30ರಂದು 4.30ಕ್ಕೆ ಬಂಡಿ ಉತ್ಸವ ನಡೆಯುವುದು. ಮರೇವಾಡ ಗ್ರಾಮದ ವಿವಿಧ ಭಜನಾ ತಂಡಗಳಿಂದ ಅಹೋರಾತ್ರಿ ಸಾಮೂಹಿಕ ಶಿವನಾಮಸ್ಮರಣೆಯ ಭಜನಾ ಕಾರ್ಯಕ್ರಮ ದೇವಾಲಯದ ಅಂಗಳದಲ್ಲಿ ಜರುಗುವುದು.

ವಿಶೇಷ ಪೂಜೆ: ಮೇ-1ರಂದು ಪ್ರಾತ:ಕಾಲ ಬಸವಣ್ಣ (ನಂದೀಶ್ವರ) ದೇವರ ಶಿಲಾ ವಿಗ್ರಹಕ್ಕೆ ಏಕಾದಶ ಮಹಾರುದ್ರಾಭಿಷೇಕ, ನೂರೊಂದು ಬಿಲ್ವಾರ್ಚನೆ ಮತ್ತು ಪುಷ್ಪಾಲಂಕಾರದ ವಿಶೇಷ ಪೂಜೆ ಶೇಖರಯ್ಯ ಹಿರೇಮಠ ಹಾಗೂ ಅಂಕಲಯ್ಯ ಯರಗಂಬಳಿಮಠ ವೈದಿಕತ್ವದಲ್ಲಿ ನಡೆಯಲಿದೆ. ದೇವಾಲಯದ ಭಕ್ತ ಮಂಡಳಿ ಹಮ್ಮಿಕೊಳ್ಳುವದಾಸೋಹಸೇವೆಅನ್ನಸಂತರ್ಪಣೆ ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಅಭಿನವ ಶಾಂತಲಿಂಗ ಶಿವಾಚಾರ್ಯ ಶ್ರೀಗಳು, ಮುರುಘಾಮಠದ ಡಾ.ಮಲ್ಲಿಕಾರ್ಜುನ ಶ್ರೀಗಳು ಉದ್ಘಾಟಿಸುವರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಶಾಸಕ ಅಮೃತ ದೇಸಾಯಿ, ಸೀಮಾ ಮಸೂತಿ, ನಗರ ನೀರು ಸರಬರಾಜು ಮಂಡಳಿ ಅಧ್ಯಕ್ಷೆ ಶಿವಲೀಲಾ ವಿನಯಕುಲಕರ್ಣಿ, ಮಂಜುನಾಥ ಮಕ್ಕಳಗೇರಿ, ತವನಪ್ಪ ಅಷ್ಟಗಿ, ಈಶ್ವರ ಶಿವಳ್ಳಿ, ರೇಷ್ಮೆ ಮಂಡಳಿ ಮಾಜಿ ಅಧ್ಯಕ್ಷೆ ಸವಿತಾ ಅಮರಶೆಟ್ಟಿ, ಹು-ಧಾ ಮ.ಪಾಲಿಕೆ ಸದಸ್ಯ ನಿತಿನ್ ಇಂಡಿ, ಬಸವಂತಪ್ಪ ಗಾಯಕವಾಡ, ಶಿವಾನಂದ ಕಮತಗಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಮೇ 1ರಂದು ಸಂಜೆ 4.30ಕ್ಕೆ ರಥೋತ್ಸವ ವೈಭವದಿಂದ ನಡೆಯುವುದು. ರಥೋತ್ಸವದ ಕೊನೆಯಲ್ಲಿ ಅಮ್ಮಿನಬಾವಿ ಬಸವಣ್ಣ(ನಂದೀಶ್ವರ) ದೇವರ ದೇವಾಲಯದ ಪ್ರಧಾನ ಅರ್ಚಕ ಬಸವರಾಜ ಪೂಜಾರ ರಥದಲ್ಲಿ ಕುಳಿತು ವರ್ಷದ ಆಗು-ಹೋಗುಗಳ ಕುರಿತು ಕಾರ್ಣಿಕ(ಹೇಳಿಕೆ) ಹೇಳುವರು. ರಾತ್ರಿ 10ಕ್ಕೆ ಗ್ರಾಮದ ಶ್ರೀಸಾಯಿ ಸ್ವರಸಂಗಮ ಮೆಲೋಡೀಸ್ ಆಷಯಂಡ್ ಆರ್ಕೆಸ್ಟ್ರಾಅವರಿಂದ ರಸಮಂಜರಿ ಹಾಗೂ ಹಾಸ್ಯ ಕಾರ್ಯಕ್ರಮ ಜರುಗುವವು.

ಅಮ್ಮಿನಬಾವಿ ಮತ್ತು ಮರೇವಾಡ ಗ್ರಾಮದ ಬಸವಣ್ಣ(ನಂದೀಶ್ವರ) ದೇವರು ಪರಸ್ಪರ ಸಹೋದರರು ಎಂಬ ಪ್ರತೀತಿ ಇದೆ. ದವನದ ಹುಣ್ಣಿವೆಗೆ ಅಮ್ಮಿನಬಾವಿ ಜಾತ್ರೆಯಾದರೆ, ಮುಂದಿನ ಅಗಿ ಹುಣ್ಣಿವೆಗೆ ಮರೇವಾಡದ ಜಾತ್ರೆ ನಡೆಯುತ್ತ ಬಂದಿದೆ. ಈ ಉಭಯ ಜಾತ್ರೆಗಳಲ್ಲಿ ಪರಸ್ಪರರ ಪಾಲ್ಕಿ-ನಂದಿಕೋಲುಗಳು ಆಯಾ ದೇವಾಲಯಗಳಿಂದ ಬಂದಾಗಲೇ ರಥೋತ್ಸವ ಸಾಂಗವಾಗುತ್ತಿರುವುದು ಪರಂಪರೆಯಲ್ಲಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈ ಪ್ರಸಿದ್ಧ ಜಾತ್ರಾ ಮಹೋತ್ಸವದಲ್ಲಿ ಮರೇವಾಡ ಹಾಗೂ ಸುತ್ತಲಿನ ಎಲ್ಲ ಗ್ರಾಮಗಳ ಭಕ್ತ ಸಮೂಹ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡು ಬಸವಣ್ಣ (ನಂದೀಶ್ವರ) ದೇವರ ಕರಪೆಗೆ ಪಾತ್ರರಾಗಬೇಕೆಂದು ಬಸವಣ್ಣ (ನಂದೀಶ್ವರ) ದೇವರ ದೇವಾಲಯದ ಪ್ರಸಾದ ಮಂಡಳಿ ಮತ್ತು ಜಾತ್ರಾ ಮಹೋತ್ಸವ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿಯೊಬ್ಬರಿಗೂ ಕಾನೂನಿನ ಅರಿವು ಅಗತ್ಯ: ನ್ಯಾ.ನದಾಫ್




ನವಲಗುಂದ: ಒಂದು ಉತ್ತಮ ಸಮಾಜದ ನಿರ್ಮಾಣದಲ್ಲಿ ನ್ಯಾಯಾಂಗದ ಪಾತ್ರ ಅತ್ಯಂತ ನಿರ್ಣಾಯಕವಾಗಿದೆ. ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ನೆಲೆಸಬೇಕಾದರೆ ಪ್ರತಿಯೊಬ್ಬ ನಾಗರಿಕನಿಗೂ ಕಾನೂನಿನ ಅರಿವು ಇರುವುದು ಅತ್ಯಂತ ಅವಶ್ಯಕವಾಗಿದೆ. ಸಮಾನತೆ, ಸ್ವಾತಂತ್ರ್ಯ ಮತ್ತು ಉನ್ನತ ನಾಗರಿಕ ಮೌಲ್ಯ ಎತ್ತಿಹಿಡಿಯಲು ನ್ಯಾಯಾಲಯಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಹಿರಿಯ ನ್ಯಾಯವಾದಿಗಳಾದ ಎಚ್.ಎಂ.ನದಾಫ್ ಹೇಳಿದರು.

ನಗರದ ನ.ತಾ.ಶಿ.ಸ, ಶಂಕರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಆಡಿಯಲ್ಲಿ, ರಾಜ್ಯಶಾಸ್ತ್ರ ವಿಭಾಗ ಮತ್ತು ಎನ್‌ಎಸ್‌ಎಸ್ ಘಟಕಗಳ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ 'ಕಾನೂನು ಅರಿವು' ಕಾರ್ಯಕ್ರಮದಲ್ಲಿ ಅವರು ನ್ಯಾಯಾಂಗದ ಪಾತ್ರ ಮತ್ತು ಕಾನೂನು ಸಾಕ್ಷರತೆ ವಿಷಯ ಕುರಿತು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎಸ್.ವಿ.ಬಡಿಗೇರ ಮಾತನಾಡಿ, ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ವಿವಿಧ ರಾಜರು ತಮ್ಮದೇ ಕಾನೂನು ಜಾರಿಗೆ ತಂದಿದ್ದರು. ಆದರೆ ಆಧುನಿಕ ಯುಗದಲ್ಲಿ ಸಂವಿಧಾನ ಜಾರಿಗೆ ಬಂದ ನಂತರ, ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬ ತತ್ವ ಜಾರಿಯಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಸಂವಿಧಾನ ಮತ್ತು ನ್ಯಾಯಾಂಗದ ಆಶಯಗಳನ್ನು ಅರಿತು ನಡೆಯಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಈ ವೇಳೆ ಮಹಾವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಡಾ.ಪಿ.ಜಿ.ಕೊಪ್ಪದ, ಡಾ.ಎ.ಜಿ.ಜಕ್ಕನಗೌಡರ, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಡಾ.ಆರ್.ಎಸ್.ಹಿರೇಮಠ, ಡಾ.ಆರ್.ಎಂ.ಸರ್ವದೆ, ಡಿ.ಆರ್.ಕಲಬುರ್ಗಿ ಹಾಗೂ ಎ.ಎಸ್.ಕಿತ್ತೂರ ಸೇರಿದಂತೆ ಇತರ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸೈಬರ್ ಕ್ರೈಂ ಬಗ್ಗೆ ಜಾಗೃತಿ ಅಗತ್ಯ: ಪ್ರಸಾದ



ಧಾರವಾಡ: ಸೈಬರ್ ಅಪರಾಧ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ವೃತ್ತಪರರಿಗೆ ಸೈಬರ್ ಭದ್ರತೆ ಜೊತೆ ವೃತ್ತಿ ಅವಕಾಶಗಳ ಕುರಿತು ಅರಿವು ಮುಖ್ಯವಾಗಿದೆ ಎಂದು ಜೆಎಸ್ಎಸ್ ಆಡಳಿತಾಧಿಕಾರಿ ಡಾ.ಅರಿಹಂತ ಪ್ರಸಾದ ಹೇಳಿದರು.

ನಗರದ ಜೆಎಸ್ಎಸ್ ಸಂಸ್ಥೆ ಬಿಸಿಎ, ಎಂಸಿಎ ಮತ್ತು ಎಂಬಿಎ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಅಂತಾರಾಷ್ಟ್ರೀಯ ಸೈಬರ್ ಅಪರಾಧಗಳ ಒಳನೋಟ ಮತ್ತು ಸೈಬರ್ ಭದ್ರತೆಯಲ್ಲಿ ಲ್ವೇಷಿಸುವ ವೃತ್ತಿ ಮಾರ್ಗಗಳ ಉಪನ್ಯಾಸ ಉದ್ಘಾಟಿಸಿ ಮಾತನಾಡಿದರು. ತಂತ್ರಜ್ಞಾನ ಇಲ್ಲದ ಕಾಲಘಟದಲ್ಲಿ ಕಳ್ಳರು ಹೊಂಚು ಹಾಕಿ ಮನೆಯಲ್ಲಿದ್ದ ವಸ್ತು ದೋಚುತ್ತಿದ್ದರು. ಡಿಜಿಟಲ್ ಯುಗದಲ್ಲಿ ಮನಷ್ಯನ ಪ್ರತಿ ವ್ಯವಹಾರ ತಂತ್ರಜ್ಞಾನ ಅವಲಂಬಿಸಿದ ಹಿನ್ನಲೆ ಕಳ್ಳರು ಸೈಬರ್ ಮೊರೆ ಹೋಗಿದ್ದಾರೆ ಎಂದರು.

ಇಂದಿನ ಡಿಜಿಟಲ್ ಯುಗದಲ್ಲಿ ನಿತ್ಯ ಮೊಬೈಲ್, ಇಂಟರ್ನೆಟ್, ಸಾಮಾಜಿಕ ಜಾಲತಾಣ, ಆನ್‌ಲೈನ್ ಸೇವೆ ಹೆಚ್ಚಿದಂತೆ ಸೈಬರ್ ಅಪರಾಧಿ ಹೆಚ್ಚಿವೆ. ಹೀಗಾಗಿ ಸೈಬರ್ ಕ್ರೈಂ ಬಗ್ಗೆ ಸದಾ ಜಾಗೃತಿರಾಗಿರಬೇಕು ಎಂದರು. ಉಪನ್ಯಾಸ ನೀಡಿದ ಡಾ.ಕುಲಕರ್ಣಿ, ಸೈಬರ್ ಅಪರಾಧಗಳು ಹಲವು ರೀತಿ ನಡೆಯುತ್ತಿವೆ. ಫೇಕ್ ಲಿಂಕ್ ಬಳಸಿ ವಂಚನೆ, ಓಟಿಪಿ ಮೂಲಕ ವಂಚನೆ, ಖಾತೆ ಕಳ್ಳತನ ಹೀಗೆ ಕಳ್ಳರು ಅನೇಕ ಮಾರ್ಗಗಳನ್ನು ಕಂಡುಕೊಂಡಿದ್ದಾಗಿ ಮಾಹಿತಿ ನೀಡಿದರು.

ಎಪಿಎಂ ಸಂಸ್ಥೆಯ ನಿರ್ದೇಶಕ ಡಾ.ಸೂರಜ್ ಜೈನ್, ಡಾ. ಕವನ ದೇಶಪಾಂಡೆ, ಪ್ರಾಚಾರ್ಯ ಮಹಾವೀರ ಉಪಾದ್ಯೆ ಇದ್ದರು. ಡಾ.ಮಂಜುನಾಥ ಪೂಜಾರ ಪರಿಚಯಿಸಿದರು. ಪ್ರೊ.ಬಾಹುಬಲಿ ಚಿವಟೆ ನಿರೂಪಿಸಿದರು. ಪ್ರೊ.ವಿವೇಕ ಲಕ್ಷ್ಮೇಶ್ವರ ವಂದಿಸಿದರು.

ಸಂದೇಶ ಸದಾ ದಾರಿದೀಪವಾಗಲಿ: ಶಂಕರ



ಹುಬ್ಬಳ್ಳಿ: ವೀರಶೈವ ಧರ್ಮದ ಮೌಲ್ಯ ಸಮಾಜದ ಪ್ರತಿಯೊಬ್ಬರಿಗೂ ತಲುಪಿಸಿ, ವ್ಯಕ್ತಿತ್ವವನ್ನು ತಿದ್ದಿ ತೀಡುವಲ್ಲಿ ಪಂಚಪೀಠಾಧಿಪತಿಗಳ ಕೊಡುಗೆ ಅಪಾರ' ಎಂದು ಮಾಜಿ ಸಚಿವ ಶಂಕರ ಪಾಟೀಲಮುನೇನಕೊಪ್ಪ ತಿಳಿಸಿದರು.

ಮಂಗಳವಾರ ತಾಲೂಕಿನ ಸುಳ್ಳ ಗ್ರಾಮದಲ್ಲಿ ನಡೆದ ಶ್ರೀಕಲ್ಮೇಶ್ವರ ದೇವಸ್ಥಾನದ ಉದ್ಘಾಟನೆ ಹಾಗೂ ಕಳಸಾರೋಹಣ ಮಹೋತ್ಸವದಲ್ಲಿ ಮಾತನಾಡಿ, ಸುಳ್ಳ ಗ್ರಾಮದಲ್ಲಿ ಇಂತಹ ಅರ್ಥಪೂರ್ಣ ಧಾರ್ಮಿಕ ಸಭೆಯನ್ನು ಆಯೋಜಿಸಿರುವುದು ಅಭಿನಂದನೀಯ. ಜನಜಾಗೃತಿ ಮೂಡಿಸುವ ಮೂಲಕ ಧರ್ಮದ ಆಶಯ ಮನೆಮನೆಗೆ ತಲುಪಿಸುವ ಕೆಲಸ ಇಲ್ಲಿ ನಡೆದಿದೆ. ಮಾನವ ಜನ್ಮ ಸಾರ್ಥಕವಾಗಬೇಕೆಂಬ ಪಂಚಪೀಠಾಧೀಶ್ವರರ ಧರ್ಮ ಸಂದೇಶ ಸದಾ ನಮ್ಮ ದಾರಿದೀಪವಾಗಲಿ' ಎಂದರು. ಈ ವೇಳೆ ಬಾಳೆಹೊನ್ನೂರಿನ ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ ಜಗದ್ಗುರು ಡಾ.ವೀರಸೋಮೇಶ್ವರ ಶಿವಾಚಾರ್ಯ ಶ್ರೀಗಳು, ಶ್ರೀಶೈಲ ಜಗದ್ಗುರು ಪೀಠ ಜಗದ್ಗುರು ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು, ಉಜ್ಜಯಿನಿ ಸದ್ಧರ್ಮ ಸಿಂಹಾಸನ ಮಹಾಸಂಸ್ಥಾನ ಪೀಠ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಈ ಧಾರ್ಮಿಕ ಸಮಾರಂಭದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಗ್ರಾಮೀಣ ಆರೋಗ್ಯ ಸೇವೆಗೆ ಒತ್ತು: ಸಚಿವ ಜೋಶಿ



ಧಾರವಾಡ: ಗ್ರಾಮೀಣ ಭಾಗದ ಸಾರ್ವಜನಿಕರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಕೇಂದ್ರ ಸರ್ಕಾರ ಒತ್ತು ನೀಡಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ತಾಲೂಕಿನ ಅಮ್ಮಿನಬಾವಿ ಗ್ರಾಮದಲ್ಲಿ ಸರ್ಕಾರಿ ಆರೋಗ್ಯ ಕೇಂದ್ರ ಆವರಣದಲ್ಲಿ ಕೇಂದ್ರ-ರಾಜ್ಯ ಸರ್ಕಾರ ನಿರ್ಮಿಸಿದ ಸಮುದಾಯ ಆರೋಗ್ಯ ಕೇಂದ್ರ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಅಮ್ಮಿನಬಾವಿ ಸಮುದಾಯ ಆರೋಗ್ಯ ಕೇಂದ್ರ ಉನ್ನತೀಕರಿಸುವ ಬೇಡಿಕೆ ಇತ್ತು. ಇದೀಗ ಕಾರ್ಯರೂಪಕ್ಕೆ ಬರುತ್ತಿದೆ. ಸಮರ್ಪಕ ವೈದ್ಯರು, ಸಿಬ್ಬಂದಿ, ಔಷಧಿ ಒದಗಿಸುವ ಭರವಸೆ ನೀಡಿದರು.

140 ಕೋಟಿ ಜನಸಂಖ್ಯೆ ಹೊಂದಿದ ಭಾರತದಲ್ಲಿ ಯುವಕರ ಪ್ರಮಾಣ ಹೆಚ್ಚಿದೆ. ಜಾಗತಿಕ ಮಟ್ಟದಲ್ಲಿ ಸೇವಾ ಮತ್ತು ಉತ್ಪಾದನಾ ಕ್ಷೇತ್ರಗಳಲ್ಲಿ ಭಾರತ ವಿಶ್ವಾಸಾರ್ಹ ದೇಶವಾಗಿದೆ ಎಂದು ತಿಳಿಸಿದರು.

ಮಧುಮೇಹ, ಕ್ಯಾನ್ಸರ್ ಹಾಗೂ ಅತಿಯಾದ ತೂಕ (ಒಬೆಸಿಟಿ) ಸಮಸ್ಯೆಗಳು ಹೆಚ್ಚುತ್ತಿರುವ ಹಿನ್ನೆಲೆ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯತೆಯೂ ಇದೆ ಎಂದು ಜೋಶಿ ತಿಳಿಸಿದರು.

ದೇಶದಲ್ಲಿ ವೈದ್ಯರ ಕೊರತೆ ನೀಗಿಸಲು ಮೆಡಿಕಲ್ ಕಾಲೇಜು ಹೆಚ್ಚಿಸಲಾಗಿದೆ. ತರಬೇತಿ ಹೊಂದಿದ ವೈದ್ಯರ ಸಂಖ್ಯೆಯನ್ನು 51 ಸಾವಿರದಿಂದ 1.31 ಲಕ್ಷಕ್ಕೆ ಏರಿಸಲು ಕ್ರಮ ವಹಿಸಿದ್ದಾಗಿ ಹೇಳಿದರು.

ರಾಜ್ಯ ಆರೋಗ್ಯ ಇಲಾಖೆ ಸಚಿವ ದಿನೇಶ ಗುಂಡೂರಾವ್, ಜನರಿಗೆ ಅತ್ಯುತ್ತಮ ಗುಣಮಟ್ಟದ ವೈದ್ಯಕೀಯ ಸೇವೆಗಳು ಒದಗಿಸಲು ಸಮುದಾಯ ಆರೋಗ್ಯ ಕೇಂದ್ರ ಸಹಕಾರಿ ಎಂದು ತಿಳಿಸಿದರು.

ಕೇಂದ್ರದಲ್ಲಿ ತಜ್ಞ ವೈದ್ಯರು, ವೈದ್ಯಾಧಿಕಾರಿಗಳು, ವಿಶೇಷವಾಗಿ ಸ್ತ್ರೀರೋಗ, ಮಕ್ಕಳ ಹಾಗೂ ಅರವಳಿಕೆ ತಜ್ಞರನ್ನು ನಿಯೋಜಿಸಿ, ಜಿಲ್ಲಾಸ್ಪತ್ರೆ ಮೇಲಿನ ಹೊರೆ ಕಡಿಮೆ ಮಾಡುವುದಾಗಿ ಹೇಳಿದರು. ಡಾ.ಪುನೀತ್ ರಾಜಕುಮಾರ ಯೋಜನೆ ಮೂಲಕ ಹೃದಯಾಘಾತದ ತುರ್ತು ಚಿಕಿತ್ಸೆಗಾಗಿ ತಾಲೂಕು ಆಸ್ಪತ್ರೆಗಳಲ್ಲಿ ಇಸಿಜಿ ಪರೀಕ್ಷೆ ಹಾಗೂ ತಕ್ಷಣದ ಚಿಕಿತ್ಸೆ ವ್ಯವಸ್ಥೆ ಮಾಡಲಾಗಿದೆ ಎಂದರು.

ಬಾಲವಿಕಾಸ ಅಕ್ಯಾಡೆಮಿ ಅಧ್ಯಕ್ಷ ಅಡಿವೇಶ ಗಿರೆಪ್ಪಾ ಇಟಗಿ, ಮಾಜಿ ಶಾಸಕರಾದ ಅಮೃತ ದೇಸಾಯಿ, ಸೀಮಾ ಮಸೂತಿ, ವಿಭಾಗಿಯ ಜಂಟಿ ನಿರ್ದೇಶಕಿ ಪುಷ್ಪಾ, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಸಂಗಪ್ಪ ಗಾಬಿ, ತಹಶೀಲ್ದಾರ್ ಡಾ.ಡಿ.ಎಚ್.ಹೂಗಾರ ಇದ್ದರು.

ಗೋಮಾತೆ ರಕ್ಷಣೆಗೆ ಸರ್ಕಾರ ಮುಂದಾಗಲಿ

ಕುಂದಗೋಳ: ತಾಯಿ ಹಾಲುಣಿಸಿದರೆ, ಗೋಮಾತೆ ಜೀವನ ಪೂರ್ತಿ ಹಾಲು ಕೊಡುತ್ತಾಳೆ. ಗೋಮಾತೆ ರಕ್ಷಣೆ ಮತ್ತು ರಾಷ್ಟ್ರ ಮಾತೆ ಸ್ಥಾನ ನೀಡಬೇಕೆಂದು ಕಲ್ಯಾಣಪುರ ಅಭಿನವ ಬಸವಣ್ಣಜ್ಜನವರು ಹೇಳಿದರು.

ಗೋಮಾತೆಯ ಗೌರವದ ಅಭಿಯಾನ ಅಂಗವಾಗಿ ರಾಷ್ಟ್ರದಲ್ಲಿ ಗೋಹತ್ಯೆ ನಿಷೇದ ಕಾನೂನು ಸಂಪೂರ್ಣ ಜಾರಿಯಾಗಬೇಕೆಂದು ತಾಲೂಕು ಘಟಕದಿಂದ ನಡೆದ ಪ್ರತಿಭಟನೆ ಪಾದಯಾತ್ರೆಯಲ್ಲಿ ಪಾಲ್ಗೊಂಡು ಮಾತನಾಡಿ, ಯುವಕರು ಇಂತಹ ಮಹಾನ ಕಾರ್ಯ ಮಾಡುತ್ತಿದ್ದು, ನಾವು ಅವರ ಜೊತೆ ಇರುತ್ತೇವೆ. ಪ್ರತಿ ರೈತರು ಮನೆಯಲ್ಲಿ ಗೋಪಾಲನೆ ಮಾಡಿರಿ ಎಂದರು. ಪಟ್ಟಣದ ಗಾಳಿಮರೆಮ್ಮ ದೇವಸ್ಥಾನ ಹತ್ತಿರ ಹಿರೇಮಠದ ಶಿತಿಕಂಠೇಶ್ವರ ಶ್ರೀಗಳು, ಶಿವಾನಂದ ಮಠದ ಶಿವಾನಂದ ಶ್ರೀಗಳು, ಅಭಿನವ ಬಸವಣ್ಣಜ್ಜನವರ ಸಾನ್ನಿಧ್ಯದಲ್ಲಿ ಗೋಮಾತೆಗೆ ಪೂಜೆ ಸಲ್ಲಿಸಿ ತಹಶೀಲ್ದಾರ್ ಕಚೇರಿಗೆ ಆಗಮಿಸಿ ಶಿರಸ್ತೇದಾರ ಶಾನಬಾಗ ಅವರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.ಪ್ರತಿಭಟನೆಯಲ್ಲಿ ಶ್ರೀರಾಮ ಸೇನೆಯ ಧಾರವಾಡ ಜಿಲ್ಲಾ ಅಧ್ಯಕ್ಷ ಅಣ್ಣಪ್ಪ ದಿವಟಗಿ, ವಿಶ್ವಾಸ ನಾಗಶೆಟ್ಟಿ, ವಿಜಯ ಗೂಡಲಮನಿ, ಗಣೇಶ ಕೋಕಾಟೆ, ಸಿದ್ದು ಧಾರವಾಡಶೆಟ್ರ, ಹರಿಷ ಕೊನೇರಿ, ಗೀರಿಶ ನೆಲಗುಡ್ಡ, ವಿಕಾಸ ಕೀರೆಸೂರ, ಅಬಿಷೇಕ ಯಲಿವಾಳ, ಶಿವು ಅವಾರಿ ಮತ್ತಿತರಿದ್ದರು.



ಗ್ರಾಮದೇವಿ ದರ್ಶನ ಪಡೆದ ಲಾಡ್



ಕಲಘಟಗಿ: ತಾಲೂಕಿನ ಐತಿಹಾಸಿಕ ಸುಕ್ಷೇತ್ರ ತಂಬೂರು ಗ್ರಾಮ ದೇವತೆಯರ ಜಾತ್ರೆಗೆ ಕಾರ್ಮಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಭೇಟಿ ನೀಡಿ ದೇವಿಯರ ದರ್ಶನ ಹಾಗೂ ಆಶೀರ್ವಾದ ಪಡೆದರು.

ಜಿಲ್ಲಾ ಗ್ಯಾರಂಟಿ ಅಧ್ಯಕ್ಷ ಎಸ್.ಆರ್.ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥಗೌಡ ಮುರಳ್ಳಿ, ಆಪ್ತ ಕಾರ್ಯದರ್ಶಿ ಹರಿಶಂಕರ ಮಠದ, ಬಾಬಣ್ಣ ಅಂಚಟಗೇರಿ, ಬಾಳು ಖಾನಾಪುರ, ಸೋಮಶೇಖರ ಬೆನ್ನೂರ, ಬಸವರಾಜ ಬಾವಕಾರ, ಮಹೇಶ್ ಅಲಗೂರ, ಸಿಪಿಐ ಶ್ರೀಶೈಲ ಕೌಜಲಗಿ, ಹನುಮಂತಪ್ಪ ಸರಾವರಿ, ಸಿ ಪಿ ಜಾಬಿನ, ಸಂಜು ಪಾಲೇಕರ, ಸೇರಿದಂತೆ ವಿವಿಧ ಗ್ರಾಮಗಳ ಹಿರಿಯರು ಇದ್ದರು.

ಸೃಷ್ಟಿ ನಾವೀನ್ಯತಾ ಕಾರ್ಯಕ್ರಮ | ಸಚಿವ ಪ್ರಹ್ಲಾದ ಜೋಶಿ ಅಭಿಮತ

ನಾವೀನ್ಯತೆ ವಿಕಸಿತ ಭಾರತದ ಅಡಿಪಾಯ

ಧಾರವಾಡ: ಭಾರತವು ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ಮತ್ತು ನಾವೀನ್ಯತೆಯ ಕೇಂದ್ರವಾಗಿ ಹೊರಹೊಮ್ಮುತ್ತಿದೆ. ಈ ಬದಲಾವಣೆಗೆ ಯುವ ಅಭಿಯಂತರರೇ ಕಾರಣ ಎಂದು ಭಾರತ ಸರ್ಕಾರದ ಆಹಾರ ಇಲಾಖೆ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ನಗರದ ದವಳಗಿರಿಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಅಭಿಯಾಂತ್ರಿಕ ಮತ್ತು ತಾಂತ್ರಿಕ ಕಾಲೇಜಿನಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮಂಗಳವಾರ ಏರ್ಪಡಿಸಿದ ಸೃಷ್ಟಿ-2026ರ ನಾವೀನ್ಯತಾ ವಿನಿಮಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಜಗತ್ತಿನಲ್ಲಿ ಭಾರತ ಅತ್ಯಂತ ವೇಗವಾಗಿ ಬೆಳೆಯುತ್ತಿರುವ 4ನೇ ಆರ್ಥಿಕತೆ ದೇಶ. ಅಲ್ಲದೇ, ಯುವಶಕ್ತಿ ಮತ್ತು ನಾವೀನ್ಯತೆ ಹೊಂದಿದ ರಾಷ್ಟ್ರವೂ ಹೌದು. ನಮ್ಮ 21ನೇ ಶತಮಾನ ಭಾರತದ್ದಾಗಲು ಯುವಜನಾಂಗ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಸಮಾಜ ಎದುರಿಸುವ ನೈಜ ಸಮಸ್ಯೆಗಳಿಗೆ ತಾಂತ್ರಿಕ ಪರಿಹಾರ ಕಂಡುಕೊಳ್ಳಲು 'ಸೃಷ್ಟಿ' ಉತ್ತಮ ವೇದಿಕೆ. 2047ರ ಹೊತ್ತಿಗೆ 'ವಿಕಸತ ಭಾರತ'ವಾಗಿ ಮಾಡುವ ಪ್ರಧಾನಿ ನರೇಂದ್ರ ಮೋದಿ ಕನಸು ಸಾಕಾರಗೊಳ್ಳಲು ತಾಂತ್ರಿಕತೆ ಪಾತ್ರ ದೊಡ್ಡಿದೆ ಎಂದರು.

ದೇಶದ ಆರ್ಥಿಕತೆ ಬಲಪಡಿಸಲು ಸುಸ್ಥಿರ ತಂತ್ರಜ್ಞಾನದ ಅಗತ್ಯವಿದೆ. ಯುವಕರು ಉದ್ಯೋಗಕ್ಕೆ ಅಲೆಯದೆ, ಸ್ಟಾರ್ಟ್‌ಪ್‌ಗಳ ಮೂಲಕ ಉದ್ಯೋಗದಾತರಾಗಬೇಕು. ಕೇಂದ್ರದ ಅನೇಕ ಯೋಜನೆ ಸದ್ಬಳಕೆಯಿಂದ ಹೊಸ ಉದ್ಯಮ ಸ್ಥಾಪಿಸಲು ಸಲಹೆ ನೀಡಿದರು.

ದೇಶದ ಅಭಿವೃದ್ಧಿಗೆ ಶಕ್ತಿ

ಎಬಿವಿಪಿ ಹಲವು ದಶಕಗಳಿಂದ ಕ್ರಿಯಾತ್ಮಕ ವೇದಿಕೆಯನ್ನು ಕಲ್ಪಿಸುವ ಕಾರ್ಯ ಮಾಡುವುದು ಶ್ಲಾಘಿಷಿದ ಸಚಿವ ಪ್ರಹ್ಲಾದ ಜೋಶಿ, ಯುವಜನತೆ ಸಂಶೋಧನೆ ಮತ್ತು ಉದ್ಯಮಶೀಲತೆ ಕಡೆ ಮುಖ ಮಾಡಿ, ದೇಶದ ಅಭಿವೃದ್ಧಿಗೆ ಶಕ್ತಿಯಾಗಲು ಆಶಿಸಿದರು.

ಶಾಸಕ ಅರವಿಂದ ಬೆಲ್ಲದ ಮಾತನಾಡಿ, ಧಾರವಾಡ ಮತ್ತು ಉತ್ತರ ಕರ್ನಾಟಕದ ಕೃಷಿ ಮತ್ತು ಮೂಲಸೌಕರ್ಯ ಸಮಸ್ಯೆಗಳಿಗೆ ವಿದ್ಯಾರ್ಥಿಗಳ ಹೊಸ ತಾಂತ್ರಿಕತೆ ಮೂಲಕ ಸ್ಪಂದಿಸಬೇಕು. ಹೊಸ ಕೌಶಲ್ಯ ಪರಸ್ಪರ ವಿನಿಮಯ ಮಾಡಿಕೊಳ್ಳಲು ಹೇಳಿದರು.

ವೇದಿಕೆಯಲ್ಲಿ ಇಸ್ರೋದ ವಿಜ್ಞಾನಿಯಾದ ಡಾ.ಬಿ.ಎಚ್.ಎಂ.ದಾರುಕೇಶ, ಎಬಿವಿಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಆಶಿಷ್ ಚವ್ಹಾಣ, ಎಸ್ಡಿಎಂ ಸೊಸೈಟಿಯ ಕಾರ್ಯದರ್ಶಿ ವಿ.ಜೀವಂದರಕುಮಾರ್, ಎಸ್ಡಿಎಂ ರಾಜ್ಯಾಧ್ಯಕ್ಷ ಡಾ.ರವಿ ಮಂಡ್ಯ ಇದ್ದರು.

ಕಾರ್ಯಕ್ರಮದಲ್ಲಿ ಎಸ್ಡಿಎಂ ಎಂಜನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಪ್ರೊ.ರಮೇಶ ಚಕ್ರಸಾಲಿ, ಎಬಿವಿಪಿ ರಾಜ್ಯ ಕಾರ್ಯದರ್ಶಿ ಗೋಪಿ ರಂಗಸ್ವಾಮಿ, ಪ್ರೊ.ಇಂದಿರಾ ಉಮರ್ಜಿ, ಸಂಧ್ಯ ಎಸ್.ವಿ ಸೇರಿ ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯಿಂದ ಮನವಿ

ಬೇಡ್ತಿ, ವರದಾ ನದಿ ತಿರುವು ಯೋಜನೆಗೆ ವಿರೋಧ

ಯಲ್ಲಾಪುರ: ಬೇಡ್ತಿ, ವರದಾ ನದಿ ತಿರುವು ಯೋಜನೆಯ ಸಲುವಾಗಿ ಎನ್‌ಡಬ್ಲ್ಯೂಡಿಎ ಮತ್ತು ರಾಜ್ಯ ಸಂಪನ್ಮೂಲ ಇಲಾಖೆ ಇವರು ಸ್ಥಳ ಸಮೀಕ್ಷೆ ನಡೆಸಲು ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದು ಎಂದು ಆಗ್ರಹಿಸಿ, ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯಿಂದ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮಂಗಳವಾರ ಮನವಿ ಸಲ್ಲಿಸಿದರು.



ಬೇಡ್ತಿ ಮತ್ತು ಅಘನಾಶಿನಿ, ಶಾಲ್ಮಲಾ ನದಿ ಕಣಿವೆಗಳ ರಕ್ಷಣೆ ಜವಾಬ್ದಾರಿ ಅರಣ್ಯ ಇಲಾಖೆಯದ್ದಾಗಿದೆ. ಯಲ್ಲಾಪುರ ಮತ್ತು ಶಿರಸಿ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ ಜೀವ ವೈವಿಧ್ಯ ತಾಣಗಳಿವೆ. ಸೀತಾ, ಅಶೋಕಾ, ಮರ ಅರಿಶಿಣ ವೃಕ್ಷಗಳ ವನಗಳಿವೆ. ವಿನಾಶದ ಅಂಚಿನ ಔಷಧಿ ವೃಕ್ಷ ಸಂಕುಲಗಳಿವೆ. ಬೇಡ್ತಿ ಮತ್ತು ಅಘನಾಶಿನಿ ನದಿ ತೀರದ ಅಮೂಲ್ಯ ಸಸ್ಯ ವರ್ಗಗಳ ರಕ್ಷಣೆ ಬಹಳ ಮುಖ್ಯ.

ಈಗಾಗಲೇ ಹಲವು ಬೃಹತ್ ಯೋಜನೆಗಳಿಂದ ಕೆನರಾ ಅರಣ್ಯ ವೃತ್ತ ಜರ್ಝರಿತವಾಗಿವೆ. ಭೂ ಕುಸಿತ ಸೂಕ್ಷ್ಮವಲಯಗಳಾಗಿವೆ. ಈ ಕಾರಣಗಳಿಗೆ ಅರಣ್ಯ, ಪರಿಸರ ಇಲಾಖೆ, ಬೇಡ್ತಿ ಮತ್ತು ಅಘನಾಶಿನಿ ನದಿ ತಿರುವು ಯೋಜನೆಗಳಿಗೆ ಹಾಗೂ ಅರಣ್ಯ ಸಮೀಕ್ಷೆ ನಡೆಸಲು ಅನುಮತಿ ನೀಡಬಾರದು ಎಂದು ಒತ್ತಾಯಿಸಿದರು.

ಕಳೆದ 8 ತಿಂಗಳಿಂದ ಬೇಡ್ತಿ ಅಘನಾಶಿನಿ ಕಣಿವೆಯ ಸಮಗ್ರ ಜನತೆ ಈ ಮೇಲಿನ ವಿಷಯದಲ್ಲಿ ತೀವ್ರ ಜನಾಂದೋಲನ ನಡೆಸುತ್ತಾ ಬಂದಿದೆ. ಸ್ವರ್ಣವಲ್ಲೀ ಶ್ರೀಗಳ ನೇತೃತ್ವದ ಸಮಿತಿಯ ಸರ್ಕಾರಕ್ಕೆ ಇನ್ನೊಮ್ಮೆ ಹಕ್ಕೊತ್ತಾಯ ಮಂಡಿಸುತ್ತೇವೆ. ಶರಾವತಿ ನದಿ ಕಣಿವೆ ಪಶ್ಚಿಮ ಘಟ್ಟದ ಹೃದಯ ಭಾಗವಾಗಿದೆ. ಈ ಕಣಿವೆಯ ಕಾಲು ಭಾಗ ಮುಳುಗಡೆ ಆಗಿದೆ. ಉಳಿದ ಘಟ್ಟದ ಅರಣ್ಯ ಪ್ರದೇಶವನ್ನು ಶರಾವತಿ ಅಭಯಾರಣ್ಯ ಎಂದು ಸರ್ಕಾರವೇ ವನ್ಯ ಜೀವಿ ಕಾಯಿದೆ ಅಡಿ ಘೋಷಣೆ ಮಾಡಿದೆ. ಇದೀಗ ಬೃಹತ್ ಪಂಪ್ಡ್ ಸ್ಟೋರೇಜ್ ಯೋಜನೆಗೆ ಸರ್ಕಾರದ ಅರಣ್ಯ ವನ್ಯ ಜೀವಿ ಇಲಾಖೆ ಒಪ್ಪಿಗೆ ನೀಡಬಾರದು. ಇಲ್ಲಿ

ಈಗಾಗಲೇ 4 ಜಲಾಶಯಗಳು, ಗಣಿಗಾರಿಕೆ, ಇನ್ನಿತರ ಹಲವು ಕಾಮಗಾರಿಗಳಿವೆ. ಕೇಂದ್ರ ವನ್ಯ ಜೀವಿ ಮಂಡಳಿಯ ತಜ್ಞರ ಸಮಿತಿ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಅನುಮತಿ ಬೇಡ ಎಂದು ವರದಿ ನೀಡಿದೆ. ಈ ವರದಿಯನ್ನು ಪರಿಗಣಿಸಿ ಅನುಮತಿ ನೀಡಬಾರದು ಎಂದು ಮನವಿಯಲ್ಲಿ ಆಗ್ರಹ ಮಾಡಲಾಯಿತು.

ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಅನಂತ ಹೆಗಡೆ ಆಶೀಸರ, ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ, ಕೊಳ್ಳ ಸಂರಕ್ಷಣಾ ಸಮಿತಿಯ ಸಂಚಾಲಕ ನರಸಿಂಹ ಸಾತೊಡ್ಡಿ, ಪರಿಸರ ವಿಜ್ಞಾನಿ ಬಾಲಚಂದ್ರ ಸಾಯಿಮನೆ, ಪ್ರಮುಖರಾದ ಟಿ.ಆರ್.ಹೆಗಡೆ,ಡಾರವಿ ಭಟ್ಟ ಬರಗದ್ದೆ, ಜಿ.ಎಸ್. ಭಟ್ಟ ಕಾರೆಮನೆ, ವೆಂಕಟ್ರಮಣ ಬೆಳ್ಳಿ, ರಾಮಕೃಷ್ಣ ಕವಡಿಕೆರೆ, ಕೆ.ಟಿ.ಹೆಗಡೆ ಕೊರಗಿ, ಕೇಶವ ಭಟ್ಟ ಕವಡಿಕೆರೆ, ಗೋಪಾಲಕೃಷ್ಣ ಮಂಗಳಾರ್ತಿ ಉಪಸ್ಥಿತರಿದ್ದರು.

ಪ್ರಮುಖ ನಿರ್ಣಯ

ಇದಕ್ಕೂ ಪೂರ್ವದಲ್ಲಿ ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯು ಅಧ್ಯಕ್ಷ ಅನಂತ ಹೆಗಡೆ ಅಶೀಸರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ನದಿ ತಟದಲ್ಲಿ ಎಲ್ಲೆಲ್ಲಿ ವೃಕ್ಷಾರೋಪಣ ನಡೆಸಬೇಕೆಂಬ ಬಗ್ಗೆ ಸ್ಥಳ ಗುರುತಿಸುವುದು. ಈಗಾಗಲೇ ರಚಿಸಿದ ಕಾವಲು ಪಡೆಗಳಿಗೆ ಜವಾಬ್ದಾರಿ ವಹಿಸಿ ಸರ್ವೆಗೆ ಬರುವವರ ಬಗ್ಗೆ ನಿಗಾ ಇಡಲು ಸೂಚಿಸುವುದು. ಪಂಚಾಯತದ ಗ್ರಾಮಸಭೆಗಳನ್ನು ನಡೆಸಿ ನಿರ್ಣಯ ತೆಗೆದುಕೊಂಡು ಸರಕಾರಕ್ಕೆ ಸಲ್ಲಿಸುವುದು, ಆಯಾ ಭಾಗಗಳಲ್ಲಿ ಜನರಲ್ಲಿ ಜಾಗೃತಿ ಮೂಡಿಸಲು ಮುಖಂಡರಿಗೆ ಮಾಹಿತಿನೀಡುವದು ಸೇರಿದಂತೆ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ಕುಸುಗಲ್ ಗ್ರಾಮದೇವಿಯರ ಜಾತ್ರೆ ಸಂಪನ್ನ

ಹುಬ್ಬಳ್ಳಿ: 22 ವರ್ಷಗಳ ಬಳಿಕ ತಾಲೂಕಿನ ಕುಸುಗಲ್ ಗ್ರಾಮದಲ್ಲಿ ನಡೆದ ಗ್ರಾಮದೇವಿಯರ(ದ್ಯಾಮವ್ವ, ದುರ್ಗವ್ವ) ಜಾತ್ರಾ ಮಹೋತ್ಸವ ಮಂಗಳವಾರ ವೈಭವದಿಂದ ಸಂಪನ್ನಗೊಂಡಿತು.



ಕಳೆದ 9 ದಿನ ಜಾತ್ರೆ ನಡೆದಿದ್ದು, ಇಡೀ ಗ್ರಾಮವೇ ನವವಧುವಿನಂತೆ ಸಿಂಗಾರಗೊಂಡು ಭಕ್ತಿಯ ಸಾಗರದಲ್ಲಿ ಮಿಂದೇದಿತ್ತು. ಜಾತ್ರೆ ಪ್ರಯುಕ್ತ ಗ್ರಾಮದ ಪ್ರವೇಶ ದ್ವಾರದಿಂದ ಹಿಡಿದು ದೇವಸ್ಥಾನದ ಆವರಣ, ಗೋಪುರ, ಪ್ರಮುಖ ರಸ್ತೆ, ಓಣಿ ಹಾಗೂ ಮನೆಗಳನ್ನು ವರ್ಣರಂಜಿತ ದೀಪಗಳಿಂದ ಅಲಂಕರಿಸಲಾಗಿತ್ತು. ಮನೆಗಳ ಎದುರು ಬಣ್ಣ ಬಣ್ಣದ ರಂಗೋಲಿಗಳ ಚಿತ್ತಾರ ಕಳೆಗಟ್ಟಿದ್ದವು.

ದೇವಸ್ಥಾದ ಆವರಣ ಸೇರಿದಂತೆ ವಿವಿಧೆಡೆ ನಿರ್ಮಿಸಿರುವ ಬೃಹತ್ ಪೆಂಡಾಲ್‌ಗಳು ಹಾಗೂ ಮಂಟಪಗಳು ಕಣ್ಣನ ಸೆಳೆದವು. ಕೇಸರಿ ಧ್ವಜ, ರಿಬ್ಬನ್‌ಗಳಿಂದ ಗ್ರಾಮವು ಕಂಗೊಳಿಸುತ್ತಿದೆ. ಪ್ರಮುಖ ವೃತ್ತಗಳಲ್ಲಿ ಅಳವಡಿಸಲಾಗಿರುವ ಬೃಹತ್ ಬ್ಯಾನರ್‌ಗಳು ಭಕ್ತರನ್ನು ಆಕರ್ಷಿಸಿದವು. ರಾತ್ರಿ ವೇಳೆಯಲ್ಲಿ ವಿದ್ಯುತ್ ದೀಪಗಳ ಅಲಂಕಾರ ಗ್ರಾಮದ ಮೆರುಗು ಹೆಚ್ಚಿಸಿದ್ದವು. ದೂರದ ಊರುಗಳಿಗೆ ಉದ್ಯೋಗ ಅರಸಿ ಹೋಗಿದ್ದ ಜನರೆಲ್ಲರೂ ಜಾತ್ರೆಯ ನೆಪದಲ್ಲಿ ಮರಳಿದ್ದು, ಮನೆಮನೆಗಳಲ್ಲಿ ಹಬ್ಬದಂತೆ ಆಚರಿಸಿದರು.

ಜಾತ್ರೆ ಮಹೋತ್ಸವ ಅಂಗವಾಗಿ 9 ದಿನ ಗ್ರಾಮದ ಒಂದು ಮನೆಯಲ್ಲಿ ರಾತ್ರಿ ಅಡುಗೆ ಮಾಡಿರಲಿಲ್ಲ, ಗ್ರಾಮದಲ್ಲಿ ಸಂಪೂರ್ಣ ಮದ್ಯೆ ಹಾಗೂ ಮಾಂಸಹಾರ ನಿಷೇಧಿಸಲಾಗಿತ್ತು. ಜಾತ್ರಾ ಸಮಿತಿಯ ನೇತೃತ್ವದಲ್ಲಿ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನಗಳು ನಡೆದವು. ಪ್ರತಿದಿನ ಬೆಳಗ್ಗೆ ದೇವಿಗೆ ವಿಶೇಷ ಅಭಿಷೇಕ, ಹೋಮ-ಹವನ, ವಿಶೇಷ ಪೂಜೆ ನೆರವೇರಿಸಲಾಯಿತು. ಪ್ರತಿನಿತ್ಯ ಭಕ್ತರ ದಂಡು ಹರಿದು ಬಂದು ದೇವಿ ಕೃಪೆಗೆ ಪಾತ್ರರಾದರು. ಜಾತ್ರೆಯಲ್ಲಿ ಪ್ರವಚನ, ನಾಟಕ, ಭಜನೆ, ಗೀಗಿ ಪದ, ಸೇರಿದಂತೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಭಂಡಾರದಲ್ಲಿ ಮಿಂದೆದ್ದ ಗ್ರಾಮ

ಮಂಗಳವಾರ ಜಾತ್ರಾ ಮಹೋತ್ಸವ ಕೊನೆಯ ದಿನವಾಗಿದ್ದು, ಗ್ರಾಮ ದೇವಿಯರ ಮೂರ್ತಿ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು. ಗ್ರಾಮದ ಸಾವಿರಾರು ಮಹಿಳೆಯರು ಕುಂಭ ಹೊತ್ತು ಗ್ರಾಮದ ಬೀದಿ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಇನ್ನೂ ಪುರುಷರು ಭಂಡಾರ ಆಡುವ ಮೂಲಕ ಸಂಭ್ರದಿಂದ ಆಚರಿಸಿದರು.

ಮುಸ್ಲಿಮರಿಂದ ಅನ್ನ ಸಂತರ್ಪಣೆ

ಗ್ರಾಮದಲ್ಲಿ ಯಾವುದೇ ಹಬ್ಬ ಹರಿದಿನಗಳನ್ನು ಭಾವೈಕ್ಯತೆಯಿಂದ ಆಚರಿಸಲಾಗುತ್ತದೆ. ಅದೇ ರೀತಿ ಗ್ರಾಮ ದೇವಿಯರ ಜಾತ್ರೆಯಲ್ಲಿ ಎಲ್ಲ ಸಮಾಜದ ಬಾಂಧವರು ಭಾಗವಹಿಸಿದ್ದರು. ಪ್ರತಿದಿನವೂ ಒಂದು ಓಣಿಯವರು ಅನ್ನ ಸಂತರ್ಪಣೆ ವ್ಯವಸ್ಥೆಯನ್ನು ನಿರ್ವಹಿಸಿದರು. ಗ್ರಾಮ ಮಸೂತಿ ಓಣಿಯ ರಹಿಮನಸಾಬ್ ಗುದುಗಿ ಎಂಬುವರು ಒಂದು ದಿನ ಸಂಪೂರ್ಣ ಅನ್ನ ಸಂತರ್ಪಣೆ ಮಾಡುವ ಮೂಲಕ ಭಾವೈಕ್ಯತೆ ಮೆರೆದರು. 9 ದಿನದಲ್ಲಿ ಎರಡು ದಿನ ಮುಸ್ಲಿಮ ಸಮಾಜದ ಬಾಂಧವರು ಈ ಈ ಕಾರ್ಯ ನಿರ್ವಹಿಸಿದ್ದರು ಎಂದು ಸಮಿತಿ ಸದಸ್ಯ ಕೆಂಚಪ್ಪ ಶಿವಳ್ಳಿ ತಿಳಿಸಿದರು.

ಚಿರತೆ ಪ್ರತ್ಯಕ್ಷ: ಸ್ಥಳೀಯರಲ್ಲಿ ಆತಂಕ

ಗೋಕರ್ಣ: ಇಲ್ಲಿನ ಓಂ ಬೀಚ್ ರಸ್ತೆಯಿಂದ ಗೋಗರ್ಭ ಹಾಗೂ ಕುಡ್ಲೆ ಕಡಲತೀರಕ್ಕೆ ಸಾಗುವ ಮಾರ್ಗದಲ್ಲಿ ಚಿರತೆ ಓಡಾಡುತ್ತಿದ್ದು, ಜನರು ಆತಂಕಗೊಂಡಿದ್ದಾರೆ.



ಸೋಮವಾರ ರಾತ್ರಿ ಪ್ರವಾಸಿಗರು ಈ ಮಾರ್ಗದಲ್ಲಿ ತೆರಳುವ ವೇಳೆ ಚಿರತೆ ರಸ್ತೆಗೆ ಅಡ್ಡ ಬಂದಿದ್ದು, ಕೆಲಕಾಲ ನಿಂತಿದ್ದು, ನಂತರ ರಸ್ತೆ ದಾಟಿ ಹೋಗಿದೆ. ಮಹಾರಾಷ್ಟ್ರದ ಪ್ರವಾಸಿಗರು ಚಿತ್ರೀಕರಿಸಲಾಗಿದೆ ಎನ್ನಲಾದ ವಿಡಿಯೋ ಎಲ್ಲೆಡೆ ವೈರಲ್ ಆಗಿದೆ. ಈ ಹಿಂದೆ ಸಹ ಕೋಟಿ ತೀರ್ಥದ ಗೋಪಾಲಕೃಷ್ಣ ದೇವಾಲಯದ ಬಳಿ ಬೆಳಗಿನ ಜಾವದಲ್ಲೇ ಸ್ಥಳೀಯರಿಗೆ ಚಿರತೆ ಕಾಣಿಸಿಕೊಂಡಿತ್ತು. ಇದರಂತೆ ನಾಗಬೀದಿ ಹಾಗೂ ಓಂ ಕುಡ್ಲೆ ತೀರಕ್ಕೆ ಸಾಗುವ ಕುಡ್ಲೆ ಕಡಲತೀರ ವೀಕ್ಷಣಾ ಸ್ಥಳದ ಬಳಿ ಸಹ ಚಿರತೆ ಕಾಣಿಸಿಕೊಂಡಿತ್ತು. ಈ ಬಗ್ಗೆ ಪ್ರತ್ಯಕ್ಷದರ್ಶಿಗಳು ಅರಣ್ಯ ಇಲಾಖೆಯವರು ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದ್ದರು. ಆದರೆ, ಈ ಬಗ್ಗೆ ಇದುವರೆಗೂ ಯಾವುದೇ ಕ್ರಮವಾಗಿಲ್ಲ.

ವಿಡಿಯೋ ಬಗ್ಗೆ ಖಾತ್ರಿ ಇಲ್ಲ: ಪ್ರಸ್ತುತ ಹರಿದಾಡುತ್ತಿರುವ ಚಿರತೆ ಓಡಾಟದ ದೃಶ್ಯ ಹಳೆಯದು ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ, ಈ ಈ ಭಾಗದಲ್ಲಿ ಚಿರತೆ ಜನವಸತಿ ಪ್ರದೇಶಕ್ಕೆ ಬಂದಿರುವುದು ವಾಸ್ತವವಾಗಿದ್ದು, ಈ ಬಗ್ಗೆ ಕ್ರಮವಾಗಬೇಕಿದೆ.

ಒಳಮೀಸಲಾತಿಗೆ ಸರ್ಕಾರ ಆದೇಶ

ಬೆಂಗಳೂರು: ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ.17ರಿಂದ ಶೇ.15ಕ್ಕೆ ಸೀಮಿತಗೊಳಿಸಿ ಒಳಮೀಸಲಾತಿಯನ್ನು ಜಾರಿಗೊಳಿಸಲು ತೀರ್ಮಾನಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಈ ಮೀಸಲಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಡುತ್ತದೆ ಎಂದು ಆದೇಶದಲ್ಲಿ ತಿಳಿಸಿದೆ.

ಪರಿಶಿಷ್ಟ ಜಾತಿಗೆ ಲಭ್ಯ ಶೇ. 15 ಮೀಸಲಾತಿಯಲ್ಲಿ ಪ್ರವರ್ಗ ಎ (ಎಡಗೈ ಸಂಬಂಧಿತ ಜಾತಿಗಳು), ಪ್ರವರ್ಗ ಬಿ (ಬಲಗೈ ಸಂಬಂಧಿತ ಜಾತಿಗಳು) ಮತ್ತು ಪ್ರವರ್ಗ ಸಿಗೆ (ಸ್ಪೃಶ್ಯ, ಅತಿ ಸೂಕ್ಷ್ಮ, ಸೂಕ್ಷ್ಮ, ಅಲೆಮಾರಿ ಜಾತಿಗಳು) ಕ್ರಮವಾಗಿ ಶೇ. 5.25, 5.25, 4.50 ಪ್ರಮಾಣದಲ್ಲಿ ಒಳಮೀಸಲಾತಿ ಜಾರಿಗೊಳಿಸಿ ಆದೇಶಿಸಲಾಗಿದೆ. ಜೊತೆಗೆ, ಈಗಾಗಲೇ ಆರ್ಥಿಕ ಇಲಾಖೆ ಅನುಮೋದನೆ ನೀಡಿರುವ 56,432 ಹುದ್ದೆಗಳ ನೇರ ನೇಮಕಾತಿಗೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಲ್ಲ ನೇಮಕಾತಿ ಪ್ರಾಧಿಕಾರಗಳಿಗೆ ಸೂಚನೆಯನ್ನೂ ಕೊಟ್ಟಿದೆ.

ಪ್ರವರ್ಗ-ಸಿಗೆ ಲಭ್ಯವಾಗುವ ಹುದ್ದೆಗಳಲ್ಲಿ ಅಥವಾ ಪ್ರವೇಶಾತಿ ಸೀಟುಗಳಲ್ಲಿ ಶೇ.20 ರಷ್ಟನ್ನು ಪರಿಶಿಷ್ಟ ಜಾತಿಗಳಲ್ಲಿನ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಮೀಸಲಿರಿಸಬೇಕು. ಒಂದು ವೇಳೆ, ಈ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರು ಇಲ್ಲದಿದ್ದರೆ ಆ ಹುದ್ದೆಗಳನ್ನು ಹಾಗೂ ಪ್ರವೇಶಾತಿ ಸೀಟುಗಳನ್ನು ಪ್ರವರ್ಗ ಸಿಯ ಇತರೆ ಜಾತಿಗಳಿಗೆ ನೀಡಬೇಕೆಂದು ಎಂದು ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ನೇಮಕಾತಿಗಳಲ್ಲಿ ಒಳ ಮೀಸಲಾತಿ ಜಾರಿಗೊಳಿಸಲು 400 ರೋಸ್ಟರ್ ಬಿಂದುಗಳ ವರ್ತುಲಗಳನ್ನು ಪಾಲಿಸಲಾಗುವುದು. ಯಾವುದೇ ವೃಂದದಲ್ಲಿ 3ಕ್ಕಿಂತ ಕಡಿಮೆ ಪರಿಶಿಷ್ಟ ಜಾತಿ ಬಿಂದುಗಳು ಲಭ್ಯವಾಗುತ್ತಿದ್ದಲ್ಲಿ, ಪರಿಶಿಷ್ಟ ಜಾತಿಗೆ ಮೀಸಲಾದ ಹುದ್ದೆಗಳನ್ನು ಪರಿಶಿಷ್ಟ ಜಾತಿ ಸಾಮಾನ್ಯ ಎಂದು ಪರಿಗಣಿಸಿ, ನೇಮಕಾತಿ ಮಾಡಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ. ನ್ಯಾಯಾಲಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರಾಜ್ಯ ಸರ್ಕಾರವು ಹೆಚ್ಚಿಸಿರುವ ಶೇ.24ರಷ್ಟು ಮೀಸಲಾತಿ ಪ್ರಮಾಣವನ್ನು ಒಪ್ಪಿದರೆ, ಹೆಚ್ಚುವರಿ ಶೇ.6ರಷ್ಟು ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ನೇಮಕಾತಿ ಮಾಡಬೇಕು ಎಂದೂ ಆದೇಶದಲ್ಲಿದೆ.

ಸರ್ಕಾರ 2025ರ ಸೆ. 3ರಂದು ಹೊರಡಿಸಿದ್ದ ಆದೇಶದ ಅನ್ವಯ ಒಳ ಮೀಸಲಾತಿ ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆಯ ಹಂತದಲ್ಲಿರುವ ಅಥವಾ 2026ರ ಫೆ. 27ರಂದು ಹೊರಡಿಸಿದ ಆದೇಶದ ಅನ್ವಯ ಒಳ ಮೀಸಲಾತಿ ಅಳವಡಿಸದೇ ಹೊರಡಿಸಿರುವ ಎಲ್ಲ ನೇಮಕಾತಿ ಅಧಿಸೂಚನೆಗಳನ್ನು ಹಿಂಪಡೆದು ಪ್ರವರ್ಗ ಎ, ಪ್ರವರ್ಗ ಬಿ, ಪ್ರವರ್ಗ ಸಿಗೆ ಕ್ರಮವಾಗಿ ಶೇ. 5.25, 5.25, 4.50 ಒಳ ಮೀಸಲಾತಿ ಅಳವಡಿಸಿ ತಕ್ಷಣ ಪರಿಷ್ಕೃತ ನೇಮಕಾತಿ ಅಧಿಸೂಚನೆ ಹೊರಡಿಸಿ, ನೇಮಕಾತಿಗಳನ್ನು ಮಾಡಬೇಕು ಎಂದು ರಾಜ್ಯ ಸರ್ಕಾರ ಸೂಚನೆ ನೀಡಿದೆ.

ದಕ್ಷಿಣ ಒಳನಾಡಲ್ಲಿ ಮಳೆ

ಬೆಂಗಳೂರು: ರಾಜ್ಯದ ಕರಾವಳಿ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮುಂದಿನ ಮೂರು ದಿನ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಮಳೆ ಯಾಗುವ ಮುನ್ಸೂಚನೆಯನ್ನು ಭಾರತೀಯ ಹವಾಮಾನ ಇಲಾಖೆ ನೀಡಿದೆ.

ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ, ರಾಜ್ಯದ ಒಳನಾಡು ಜಿಲ್ಲೆಗಳಲ್ಲಿ ಏ. 29, 30 ಮತ್ತು ಮೇ 1ರಂದು ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ. ಈ ವೇಳೆ ಗಾಳಿಯ ವೇಗವು ಗಂಟೆಗೆ 40-50 ಕಿ.ಮೀ. ತಲುಪುವ ಸಾಧ್ಯತೆಯಿದ್ದು, ಆಲಿಕಲ್ಲು ಮಳೆಯಾಗುವ ತೀವ್ರ ಸಂಭವವಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ; ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆಯ ಕೆಲವು ಸ್ಥಳಗಳಲ್ಲಿ ಆಲಿಕಲ್ಲು ಮಳೆ ಯಾದರೆ, ಬಳ್ಳಾರಿ, ವಿಜಯನಗರ, ಹಾಸನ, ಕೊಡಗು, ಮೈಸೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಒಂದೆರಡು ಸ್ಥಳಗಳಲ್ಲಿ ಮಳೆ ಸುರಿಯಲಿದೆ. ಉತ್ತರ ಒಳನಾಡಿನ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಗುಡುಗು ಸಹಿತ ಆಲಿಕಲ್ಲು ಮಳೆ ಸಾಧ್ಯತೆಯಿದೆ. ವಿಜಯಪುರ, ಬಾಗಲಕೋಟೆ, ಬೆಳಗಾವಿ, ಕಲಬುರಗಿ, ಯಾದಗಿರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಒಂದೆರಡು ಸ್ಥಳಗಳಲ್ಲಿ ವರ್ಷಧಾರೆಯಾಗಲಿದೆ.

ಶಂಕುಸ್ಥಾಪನೆ



ಬೆಂಗಳೂರಿನ ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ (ಐ.ಐ.ಎ.)ಯಲ್ಲಿ 75 ಕೋಟಿ ರೂ. ವೆಚ್ಚದ ಅತ್ಯಾಧುನಿಕ ಹೊಸ ಹೆಚ್ಚುವರಿ ಕಟ್ಟಡಕ್ಕೆ ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಅವರು ಶಂಕುಸ್ಥಾಪನೆ ನೆರವೇರಿಸಿದರು. ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ ಅಧ್ಯಕ್ಷ ಎಸ್.ಸೋಮನಾಥ್ ಉಪಸ್ಥಿತರಿದ್ದರು. ಈ ಕಟ್ಟಡವು ಏಳು ಅಂತಸ್ತಿನದ್ದಾಗಿದ್ದು, 1 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಾಣವಾಗಲಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ನಾವು ಮಹಿಳಾ ಮೀಸಲಾತಿ ಪರವೇ ಇದ್ದೇವೆ, ನಮ್ಮ ಪಕ್ಷ ಎಂದಿಗೂ ಮಹಿಳಾ ವಿರೋಧಿ ಅಲ್ಲ - ಮಲ್ಲಿಕಾರ್ಜುನ ಖರ್ಗೆ

- ನಿಮ್ಮದು ನಮಗೆ ಅರ್ಥವಾಗದು. ಹಿಂದೂ ವಿರೋಧಿ ಅಲ್ಲ ಎನ್ನುತ್ತೀರಿ, ರಾಮಮಂದಿರ ನಿರ್ಮಾಣವನ್ನು ಶಕ್ತಿ ಮೀರಿ ವಿರೋಧಿಸಿದಿರಿ. ನಾವು ದೇಶ ವಿರೋಧಿಗಳಲ್ಲ ಅಂತ ಎನ್ನುತ್ತೀರಿ, ದೇಶ ಭಕ್ತರನ್ನು ಅತಿಯಾಗಿ ವಿರೋಧಿಸಿದಿರಿ. ಇದೀಗ ನಾವು ಮಹಿಳಾ ವಿರೋಧಿ ಅಲ್ಲ ಅಂತ ಅನ್ನುತ್ತಿದ್ದೀರಿ, ಮಹಿಳಾ ಮೀಸಲಾತಿಯನ್ನು ಖಂಡತುಂಡವಾಗಿ ವಿರೋಧ ಮಾಡುತ್ತಿದ್ದೀರಿ!

ದಿನ ಭವಿಷ್ಯ

ಮೇಷ ದಿನದಾರಂಭದಲ್ಲಿ ಪ್ರತಿಕೂಲ ಪರಿಸ್ಥಿತಿ ಇದ್ದರೂ ಬಳಿಕ ಎಲ್ಲ ಪೂರಕವಾಗಲಿದೆ. ಆರ್ಥಿಕ ಬಿಕ್ಕಟ್ಟು ನಿವಾರಣೆ. ಮನೆಯಲ್ಲಿ ಶಾಂತ ಸ್ಥಿತಿ.

ವೃಷಭ ವೃತ್ತಿಯಲ್ಲಿ ಒತ್ತಡ ಹೆಚ್ಚು. ಕಠಿಣ ಶ್ರಮ. ದಿನದಂತ್ಯಕ್ಕೆ ತೃಪ್ತಿಕರ ಫಲಿತಾಂಶ. ನಡೆನುಡಿಯಲ್ಲಿ ವಿನಯ ಇರಲಿ. ರೇಗಬೇಡಿ.

ಮಿಥುನ ಜಾಗ ಅಥವಾ ವಾಹನ ಖರೀದಿಯ ಯೋಚನೆಯಿದ್ದರೆ ಕಾಲ ಸೂಕ್ತವಾಗಿದೆ. ಥಿಕ ಪ್ರಗತಿ. ಮಕ್ಕಳ ಕಡೆ ಹೆಚ್ಚು ಕಾಳಜಿ ತೋರಿಸಿರಿ.

ಕಟಕ ಆಪ್ತರ ಜತೆಗೆ ಭಿನ್ನಮತ. ವಾಹನ ಚಾಲನೆಯಲ್ಲಿ ಎಚ್ಚರ ಇರಲಿ. ವಿದ್ಯಾರ್ಥಿಗಳ ಪ್ರಯತ್ನಕ್ಕೆ ಉತ್ತಮ ಫಲ. ಆರ್ಥಿಕ ಕೊರತೆ ನಿವಾರಣೆ.

ಸಿಂಹ ತೋಚಿದ್ದನ್ನು ಖರೀದಿಸುವ ಹವ್ಯಾಸ ಜೇಬಿ ಕತ್ತರಿ ಹಾಕೀತು. ಮಿತವ್ಯಯ ಸಾಧಿಸಿ. ಕೌಟುಂಬಿಕ ಸಹಕಾರ. ವಿದ್ಯಾರ್ಥಿಗಳಿಗೆ ಯಶ.

ಕನ್ಯಾ ಕೆಲ ವಿಷಯಗಳಲ್ಲಿ ಅತಿರೇಕದ ವರ್ತನೆ ತೋರುವಿರಿ. ಇದು ಎಲ್ಲರಿಗೆ ಸಮ್ಮತವೆನಿಸದು. ಕುಟುಂಬ ಸದಸ್ಯರ ಜತೆ ವಾಗ್ವಾದ ನಡೆದೀತು.

ತುಲಾ ಕುಟುಂಬಸ್ಥರ, ಹಿರಿಯರ ಕಿವಿಮಾತು ಕೇಳಿ. ಅಪಥ್ಯವೆಂದು ಪರಿಗಣಿಸಬೇಡಿ. ಅಜೀರ್ಣ ಸಮಸ್ಯೆ. ಮಿತಾಹಾರ ಒಳಿತು.

ವೃಶ್ಚಿಕ ಕಠಿಣ ಕೆಲಸವನ್ನೂ ಸುಲಭದಲ್ಲಿ ಮುಗಿಸುವಿರಿ. ಆರೋಗ್ಯಕ್ಕೆ ಹೆಚ್ಚು ಗಮನ ಕೊಡಿ. ಅಪರಾಹ್ನ ಮನಸ್ಸು ಕೆಡಿಸುವ ಬೆಳವಣಿಗೆ. ದೃಢ ಚಿತ್ತರಾಗಿರಿ.

ಧನು ಮನೆಯಲ್ಲಿ ನೆಮ್ಮದಿ, ಸಹಕಾರ. ವಿರಸ ಶಮನ. ಹೊರಗಿನ ಕೆಲಸದಲ್ಲಿ ಹೆಚ್ಚು ಶ್ರಮ ವಹಿಸುವಿರಿ. ಅಪೇಕ್ಷಿತ ಸಹಕಾರ ದೊರಕಲಾರದು.

ಮಕರ ಆತ್ಮೀಯರ ಸಂಗಡ ಸಂಘರ್ಷ ನಡೆದೀತು. ಎದುರುತ್ತರ ಕೊಡದೆ ಮೌನದಿಂದಿರಿ. ವೃತ್ತಿಯ ಮೇಲೆ ಪರಿಣಾಮ ಬೀರದಂತೆ ಎಚ್ಚರವಿಡಿ..

ಕುಂಭ ಸಹೋದ್ಯೋಗಿ ಜತೆ ವಾಗ್ಯುದ್ಧ. ಸಂಯಮ ಅವಶ್ಯ. ಎಲ್ಲರೂ ನಿಮ್ಮದೇ ತಪ್ಪು ಎನ್ನಬಹುದು. ಎಚ್ಚರಿಕೆಯ ನಡೆಯಿಡಿ. ಧನವ್ಯಯ ಹೆಚ್ಚು.

ಮೀನ ದೈಹಿಕ ನೋವು ಕಾಡಬಹುದು. ವಿಶ್ರಾಂತಿಯ ಅಗತ್ಯ. ಕೆಲವರಿಗೆ ಪಿತ್ರಾರ್ಜಿತ ಆಸ್ತಿ ಲಭ್ಯತೆ. ವಿದ್ಯಾರ್ಥಿಗಳ ಪರಿಶ್ರಮ ಸಾರ್ಥಕ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 0,7,2,

ವಿಕಸಿತ ಭಾರತ-2047ರ ದೃಷ್ಟಿಕೋನ | ಸೀತಾರಾಮನ್ ಉಪನ್ಯಾಸ

ದೇಶದಲ್ಲಿ ಗಮನಾರ್ಹ ಪ್ರಗತಿ

ಮಂಗಳೂರು: ಕಳೆದ ಒಂದು ದಶಕದಲ್ಲಿ ಭಾರತವು ಆರ್ಥಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು ಕೇಂದ್ರ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಅಭಿಪ್ರಾಯಪಟ್ಟರು.

ಮಂಗಳೂರಿನ ದೇರಳಕಟ್ಟೆಯ ಕೆ.ಎಸ್.ಹೆಗ್ಡೆ ಸಭಾಂಗಣದಲ್ಲಿ ಮಂಗಳವಾರ ನಡೆದ ನಿಟ್ಟೆ ಡಾ.ಎನ್.ವಿನಯ ಹೆಗ್ಡೆ ಉಪನ್ಯಾಸ ಕಾರ್ಯಕ್ರಮ ದಲ್ಲಿ 'ವಿಕಸಿತ ಭಾರತ-2047ರ ದೃಷ್ಟಿಕೋನ' ಎಂಬ ವಿಷಯದ ಕುರಿತಾಗಿ ಉಪನ್ಯಾಸ ನೀಡಿದರು. ವಿಕಸಿತ ಭಾರತ ಎಂಬುದು ಬಹು ದೂರದ ಗುರಿಯಲ್ಲ, ಇನ್ನು ಎರಡು ದಶಕಗಳಲ್ಲೇ ಸಾಧಿಸಬೇಕಾದ ಮಹತ್ವದ ಹಂತವಾಗಿದೆ. 2047ರೊಳಗೆ ಭಾರತವನ್ನು ಸಮೃದ್ಧ ಮತ್ತು ಶಕ್ತಿಶಾಲಿ ರಾಷ್ಟ್ರವನ್ನಾಗಿ ರೂಪಿಸುವುದು ನಮ್ಮೆಲ್ಲರ ಜವಾಬ್ದಾರಿಯೂ ಆಗಿದೆ ಎಂದು ಅವರು ಹೇಳಿದರು.

ವಿನಯ ಹೆಗ್ಡೆ ಕೊಡುಗೆ ಮಹತ್ತರ: ಭಾರತದ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ತರವಾದುದು. ಕರಾವಳಿ ಕರ್ನಾಟಕದಲ್ಲಿ ಶಿಕ್ಷಣ ಅವಕಾಶಗಳನ್ನು ವಿಸ್ತರಿಸಿ, ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ಶ್ರೇಷ್ಠತೆಯ ಪ್ರತೀಕವಾಗಿ ಗುರುತಿಸಿಕೊಂಡ ನಿಟ್ಟೆ ವಿನಯ ಹೆಗ್ಡೆಯವರ ಶೈಕ್ಷಣಿಕ ಮತ್ತು ಸಮಾಜ ಸೇವೆಯನ್ನು ಜನತೆ ಮರೆಯಲು ಸಾಧ್ಯವಿಲ್ಲ, ಅವರು ಶೈಕ್ಷಣಿಕ ರಂಗಕ್ಕೆ ಹೊಸ ದಿಕ್ಕು ತೋರಿಸಿದ್ದಾರೆ. ಇಂತಹ ಅನೇಕ ಶಿಕ್ಷಣ ತಜ್ಞರು ಕರಾವಳಿಗೆ ಮಾತ್ರವಲ್ಲದೆ ರಾಜ್ಯ ಮತ್ತು ದೇಶದ ಅಭಿವೃದ್ಧಿಗೂ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ನಿರ್ಮಲಾ ಸೀತಾರಾಮನ್ ಶ್ಲಾಘಿಸಿದರು.

2014ರ ಹಣಕಾಸು ವರ್ಷದಲ್ಲಿ 1.9 ಲಕ್ಷ ಕೋ. ರೂ.ಮಟ್ಟದಲ್ಲಿದ್ದ ಆರ್ಥಿಕ ವಲಯವು 2026ರ ವೇಳೆಗೆ 21.2 ಲಕ್ಷ ಕೋ.ರೂ.ಗೆ ಏರಿಕೆಯಾಗಿದೆ. ಇದು ದೇಶದ ಆರ್ಥಿಕ ಸಾಮರ್ಥ್ಯದಲ್ಲಿ ಮಹತ್ತರ ಬದಲಾವಣೆಯನ್ನು ಸೂಚಿಸುತ್ತದೆ. ಅದೇ ರೀತಿ ಚಂದ್ರಯಾನ-3 ಯಂತಹ ಬಾಹ್ಯಾಕಾಶ ಕ್ಷೇತ್ರದಲ್ಲಿನ ಸಾಧನೆಗಳು ವಿಶ್ವದ ಗಮನ ಸೆಳೆದಿವೆ ಎಂದು ಅವರು ಹೇಳಿದರು.



> ದೇಶದ ಅಭಿವೃದ್ಧಿ ಜನರೊಂದಿಗೆ ಬೆಸೆದುಕೊಂಡು ಸಾಗುತ್ತಿದೆ. ಉತ್ಪಾದನೆ, ಯುವಶಕ್ತಿ ಹಾಗೂ ಮಹಿಳಾ ಸಬಲೀಕರಣ ಭಾರತದ ಅಭಿವೃದ್ಧಿಗೆ ಹೊಸ ದಿಕ್ಕು ತೋರಲಿದೆ. ಈ ನೆಲೆಯಲ್ಲಿ ಸ್ವಾವಲಂಬನೆಗೆ ವಿಶೇಷ ಒತ್ತು ನೀಡಲಾಗಿದೆ.
> ■ **ನಿರ್ಮಲಾ ಸೀತಾರಾಮನ್**, ಕೇಂದ್ರ ಹಣಕಾಸು ಸಚಿವೆ

ಭಾರತವು ಪ್ರಾಚೀನ ಕಾಲದಿಂದಲೂ ಶ್ರೀಮಂತ ಸಂಸ್ಕೃತಿ ಮತ್ತು ಆರ್ಥಿಕ ಶಕ್ತಿಯನ್ನು ಹೊಂದಿದ ದೇಶ. ವಿಶ್ವದೊಂದಿಗೆ ವ್ಯಾಪಾರ, ಸಾಂಸ್ಕೃತಿಕ ವಿನಿಮಯಗಳ ಮೂಲಕ ಭಾರತ ಪ್ರಮುಖ ಸ್ಥಾನವನ್ನು ಪಡೆದಿತ್ತು. ಪ್ರಸಕ್ತ ಭಾರತವು ತನ್ನ ಮೂಲ ಶಕ್ತಿಯನ್ನು ಮರುಪಡೆಯುವ ಮೂಲಕ ವಿಶ್ವದಲ್ಲಿ ತನ್ನ ಸ್ಥಾನವನ್ನು ಮತ್ತಷ್ಟು ಬಲಪಡಿಸುವತ್ತ ದಿಟ್ಟ ಹೆಜ್ಜೆ ಇಟ್ಟಿದೆ ಎಂದು ಅವರು ಹೇಳಿದರು.

ತಂತ್ರಜ್ಞಾನಗಳು ಅಭಿವೃದ್ಧಿಯಾಗಿರುವ ಪ್ರಸಕ್ತ ಕಾಲಘಟ್ಟದಲ್ಲಿ ಯುವಜನತೆ ಹೆಚ್ಚಿನ ಅವಕಾಶ ಗಳು, ನವೀನತೆ ಮತ್ತು ಜಾಗತಿಕ ಮಟ್ಟದ ಸ್ಪರ್ಧಾತ್ಮಕತೆಯನ್ನು ನಿರೀಕ್ಷಿಸುತ್ತಿದ್ದಾರೆ. ಹೀಗಾಗಿ, ಇಂದಿನ ಸಾಧನೆಗಳನ್ನು ದೀರ್ಘಕಾಲಿಕ ಮತ್ತು ಸಮಗ್ರ ಪರಿವರ್ತನೆಗೆ ರೂಪಾಂತರಿಸುವುದು ಮುಂದಿನ ಸವಾಲಾಗಿದೆ ಎಂದು ಅಭಿಪ್ರಾಯಪಟ್ಟರು. ಆಮದುಗಳ ಮೇಲಿನ ಅವಲಂಬನೆಯಿಂದ ದೇಶದ ಅಭಿವೃದ್ಧಿ ನಿರೀಕ್ಷಿಸಲಾಗದು. ಬದಲಾಗಿ, ಉತ್ಪನ್ನಗಳನ್ನು ದೇಶದಲ್ಲೇ ನಿರ್ಮಿಸುವುದರ ಮೂಲಕ ಭಾರತವನ್ನು ಬಲಿಷ್ಠ ಕೈಗಾರಿಕಾ ಕೇಂದ್ರವನ್ನಾಗಿ ರೂಪಿಸಬೇಕಿದೆ ಎಂದು ನಿರ್ಮಲಾ ಸೀತಾರಾಮನ್ ಅಭಿಪ್ರಾಯಪಟ್ಟರು.

ಸುಪ್ರೀಂ ನಿವೃತ್ತ ನ್ಯಾಯಮೂರ್ತಿ, ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ದ.ಕ. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಕರ್ನಾಟಕ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಮತ್ತಿತರರು ಉಪಸ್ಥಿತರಿದ್ದರು. ನಿಟ್ಟೆ ವಿವಿಯ ಕುಲಾಧಿಪತಿ ಡಾ.ಎಂ.ಶಾಂತಾರಾಮ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಲಪತಿ ವಿಶಾಲ್ ಹೆಗ್ಡೆ ಸ್ವಾಗತಿಸಿದರು. ಉಪ ಕುಲಪತಿ ಡಾ.ಎಂ.ಎಸ್.ಮೂಡಿತ್ತಾಯ ವಂದಿಸಿದರು.

ಕೆಎಸ್ಡಿಎಲ್‌ಗೆ ₹507 ಕೋಟಿ ಲಾಭ

ಪುಟ ೧ ಆದರೆ, ಅಲ್ಲಿಂದ 2 ಸಾವಿರ ಕೋಟಿ ರೂ. ಮಟ್ಟವನ್ನು ಕೇವಲ 4 ವರ್ಷಗಳಲ್ಲಿ ತಲುಪಿದೆ. ಅದರಲ್ಲೂ 2022-23 ರಲ್ಲಿ 1,375 ಕೋಟಿ ರೂ. ವಹಿವಾಟು ನಡೆಸಿದ್ದ ಸಂಸ್ಥೆಯು, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಕಳೆದ 3 ವರ್ಷಗಳಲ್ಲಿ 2,016 ಕೋಟಿ ರೂ. ತಲುಪಿದೆ. ಇಷ್ಟು ಅಲ್ಪಾವಧಿಯಲ್ಲಿ ಕೆಎಸ್‌ಡಿಎಲ್ ವಹಿವಾಟು 641 ಕೋಟಿ ರೂ.ಗಳನ್ನು ಹೆಚ್ಚಳ ಕಂಡಿದೆ ಎಂದರು.

ಮೊದಲು ಸಂಸ್ಥೆಯು ಕೇವಲ 34 ಉತ್ಪನ್ನಗಳನ್ನು ಹೊಂದಿತ್ತು. ಮೂರು ವರ್ಷಗಳಲ್ಲಿ ನಾವು 57 ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದೇವೆ. ಈಗ ಒಟ್ಟು 94 ಉತ್ಪನ್ನಗಳಿವೆ. ಯಾವುದೇ ಹೊಸ ನೇಮಕಾತಿ ಇಲ್ಲದೆ, ಯಂತ್ರೋಪಕರಣಗಳ ಖರೀದಿ ಇಲ್ಲದೆ ಇದನ್ನೆಲ್ಲ ಸಾಧಿಸಲಾಗಿದೆ. ಸಂಸ್ಥೆಯ ಉತ್ಪಾದನಾ ಸಾಮರ್ಥ್ಯ 26 ಸಾವಿರ ಮೆಟ್ರಿಕ್ ಟನ್ ಇದ್ದರೂ ಪರಿಣಾಮಕಾರಿ ಕಾರ್ಯವಿಧಾನದ ಮೂಲಕ 2025-26 ರಲ್ಲಿ 47 ಸಾವಿರ ಮೆಟ್ರಿಕ್ ಟನ್ ಉತ್ಪಾದಿಸಲಾಗಿದೆ. ಬಂದಿರುವ 507 ಕೋಟಿ ರೂ. ಲಾಭದಲ್ಲಿ ಸರಕಾರಕ್ಕೆ 157 ಕೋಟಿ ರೂ. ಲಾಭಾಂಶ (ಡಿವಿಡೆಂಡ್) ಮತ್ತು ಸಿಎಂ ಪರಿಹಾರ ನಿಧಿಗೆ 5 ಕೋಟಿ ರೂ ಹಸ್ತಾಂತರಿಸಲಾಗುವುದು. ಹೋದ ವರ್ಷ 135 ಕೋಟಿ ರೂ. ಕೊಡಲಾಗಿತ್ತು. ಇದರಲ್ಲಿ ಈಗ 22 ಕೋಟಿ ರೂ. ಹೆಚ್ಚಳವಾಗಿದೆ ಎಂದು ಸಚಿವ ಎಂ.ಬಿ.ಪಾಟೀಲ್ ವಿವರಿಸಿದರು.

ಸಂಸ್ಥೆಯ ಅಧ್ಯಕ್ಷ ಅಪ್ಪಾಜಿ ಸಿ.ಎಸ್. ನಾಡಗೌಡ ಮಾತನಾಡಿ, ಕಾರ್ಖಾನೆಯ ಈ ಸಾಧನೆಗೆ ಸಹಕರಿಸಿದ ಸಚಿವ ಪಾಟೀಲ ಹಾಗೂ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಆಸ್ಟ್ರೇಲಿಯಾ ಸೇರಿದಂತೆ ದೇಶ ವಿದೇಶಗಳಿಗೆ ಹೋಗಿ ಸಾಬೂನು ಮಾರಾಟ ವಿಸ್ತರಣೆಗೆ ಪ್ರಯತ್ನ ಮಾಡಿದ್ದೇವೆ. ಆಧುನಿಕ ಮಾರಾಟ ವ್ಯವಸ್ಥೆ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿದ್ದು ಇವತ್ತಿನ ಸಾಧನೆಗೆ ಕಾರಣವಾಯಿತು ಎಂದರು. ಮುಂದಿನ ದಿನಗಳಲ್ಲಿ ಯುನೈಟೆಡ್ ಎಮಿರೇಟ್ಸ್ ದೇಶಗಳಲ್ಲಿಯೂ ಮಾರುಕಟ್ಟೆ ವಿಸ್ತರಣೆ ಮಾಡಲು ಯೋಜನೆ ರೂಪಿಸುತ್ತಿದ್ದೇವೆ. ಸೋಪು ಮಾತ್ರವಲ್ಲದೆ, ಕಾಸ್ಮೆಟಿಕ್, ಸುಗಂಧ ದ್ರವ್ಯ ವಿಭಾಗದಲ್ಲೂ ಮಾರುಕಟ್ಟೆ ವಿಸ್ತರಣೆ ಮಾಡುತ್ತೇವೆ ಎಂದರು.

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಪಿಕೆಎಂ ಪ್ರಶಾಂತ್ ಮಾತನಾಡಿ, ಸಂಸ್ಥೆಯ ನೌಕರರಿಗೆ 4.83 ಕೋಟಿ ರೂ.ಗಳನ್ನು ವೇತನ ಒಪ್ಪಂದದ ಮೂಲಕ ನೀಡಲಾಗಿದೆ. 20 ಕೋಟಿ ರೂ. ಕ್ಯಾಂಪಸ್ ಸಂರಕ್ಷಣೆ ವಿನಿಯೋಗಿಸಲಾಗಿದೆ ಎಂದರು. ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಹಾಗೂ ಸಂಸ್ಥೆಯ ನೂರಾರು ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ರೈತರಿಗೆ ಉತ್ತೇಜನ

ಪುಟ ೧ ಇದಕ್ಕಾಗಿ ರೈತರಿಗೆ ಪ್ರತಿ ಗಂಧದ ಗಿಡಕ್ಕೆ 3 ವರ್ಷಗಳಿಗೆ 500 ರೂ. ಪ್ರೋತ್ಸಾಹಧನ ನೀಡಲಾಗುವುದು. ಜತೆಗೆ ಬೆಂಗಳೂರಿನ ಜಿಕೆವಿಕೆ ಮತ್ತು ವಿಜಯಪುರದ ಕೃಷಿ ವಿದ್ಯಾಲಯಗಳ ಸಹಯೋಗದಲ್ಲಿ ಶ್ರೀಗಂಧದ ಅಧ್ಯಯನ ಪೀಠ ತೆರೆಯಲಾಗುವುದು ಎಂದು ಸಚಿವ ಪಾಟೀಲ ತಿಳಿಸಿದರು.



ಸೇನೆಗೆ 4 ಸುದರ್ಶನ ಚಕ್ರ ಬಲ

ಪುಟ ೧ **ಈಗ ನಾಲ್ಕು, ನವೆಂಬರ್‌ನಲ್ಲಿ ಇನ್ನೊಂದು:** ಭಾರತ ಸರ್ಕಾರ ಈಗಾಗಲೇ ಖರೀದಿಗೆ ಅನುಮೋದನೆ ನೀಡಿರುವ ಪ್ರಕಾರ, ನಾಲ್ಕು ಸುದರ್ಶನ ಚಕ್ರಗಳಷ್ಟೇ ಅಲ್ಲ, ಒಪ್ಪಂದದ ಪ್ರಕಾರ, ಐದು ಎಸ್-400 ಕ್ಷಿಪಣಿ ವ್ಯವಸ್ಥೆಗಳನ್ನು ರಷ್ಯಾ ಪೂರೈಕೆ ಮಾಡಲಿದೆ. ಅವುಗಳಲ್ಲಿ ನಾಲ್ಕು ಮೇನಲ್ಲಿ ಭಾರತ ತಲುಪಲಿದ್ದು, ಇನ್ನೊಂದು ನವೆಂಬರ್‌ನಲ್ಲಿ ಬರಲಿದೆ.

2.38 ಲಕ್ಷ ಕೋಟಿ ರೂ. ರಕ್ಷಣಾ ಖರೀದಿ! ಇದೇ ವರ್ಷ ಮಾರ್ಚ್‌ನಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಸ್ವಾಧೀನ ಮಂಡಳಿ (ಡಿಎಸಿ) 2.38 ಲಕ್ಷ ಕೋಟಿ ರೂ. ವೆಚ್ಚದಲ್ಲಿ ರಕ್ಷಣಾ ಖರೀದಿಗೆ ಅವಶ್ಯಕತೆಯ ಸ್ವೀಕೃತಿ (ಎಒಎನ್) ನೀಡಿದ್ದು, ಇದರಲ್ಲಿ ಹಲವು ಯುದ್ಧೋಪಕರಣಗಳ ಖರೀದಿ ಒಳಗೊಂಡಿವೆ.

ರಕ್ಷಣಾ ಆಧುನೀಕರಣ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಭಾರತೀಯ ಸೇನೆಯ ಸಂಪೂರ್ಣ ರೂಪಾಂತರಗೊಳಿಸುತ್ತಿದೆ. ರಕ್ಷಣಾ ಸ್ವಾವಲಂಬನೆ ಮತ್ತು ಎಐ ಯುಗದಲ್ಲಿ ರಕ್ಷಣಾ ಕ್ಷೇತ್ರವನ್ನು ಸಂಪೂರ್ಣ ಆಧುನೀಕರಣಗೊಳಿಸುವುದೇ ಸರ್ಕಾರದ ಧ್ಯೇಯವಾಗಿದೆ. ಸಿಂದೂರ ಸೇರಿ ಇತ್ತೀಚೆಗಿನ ಸಂಘರ್ಷಗಳಲ್ಲಿ ಸೇನೆ 11 ಎಸ್-400 ವ್ಯವಸ್ಥೆಗಳಿಂದ ಕ್ಷಿಪಣಿ ದಾಳಿ ನಡೆಸಿದೆ.

ಎಸ್-400ನಲ್ಲಿನ ಕ್ಷಿಪಣಿ ವ್ಯಾಪ್ತಿ?

40ಎನ್6	400 ಕಿ.ಮೀ.
48ಎನ್6	250 ಕಿ.ಮೀ.
9ಎಂ96ಇ2	120 ಕಿ.ಮೀ.
9ಎಂ96ಇ	40 ಕಿ.ಮೀ.

ಆ್ಯಕ್ಟ್ ಈಸ್ಟ್, ಆ್ಯಕ್ಟ್ ಫಾಸ್ಟ್

ಪುಟ ೧ ನಂಬಿಕೆ ಮತ್ತು ರಾಜಕೀಯ ನೆಲೆಯಲ್ಲಿ ದೇಶವನ್ನು ವಿಭಜಿಸಲು ನಡೆಯುತ್ತಿರುವ ಪ್ರಯತ್ನಗಳ ನಡುವೆ ಸಿಕ್ಕಿಮ್ 'ಏಕ ಭಾರತ್, ಶ್ರೇಷ್ಠ ಭಾರತ್'ನ ಪ್ರತೀಕವಾಗಿದೆ ಎಂದರು.

ಯುವ ಪ್ರತಿಭೆಗಳ ಜತೆ ಮೋದಿ ಫುಟ್ಬಾಲ್: ಇದಕ್ಕೂ ಮುನ್ನ ಬೆಳಗ್ಗೆ ಯುವ ಪ್ರತಿಭೆಗಳ ಜತೆ ಫುಟ್ಬಾಲ್ ಆಡಿದ ಪ್ರಧಾನಿ ಮೋದಿಯವರು, ಸಿಕ್ಕಿಮ್‌ನಲ್ಲಿ ಕ್ರೀಡಾ ಮೂಲಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಪ್ರಯತ್ನ ನಡೆದಿದೆ. ವಿಶೇಷವಾಗಿ ಈಶಾನ್ಯ ರಾಜ್ಯಗಳಲ್ಲಿ ಫುಟ್ಬಾಲ್‌ಗೆ ವಿಶೇಷ ಉತ್ತೇಜನ ನೀಡಲಾಗುವುದು ಎಂದರು. ಸಿಕ್ಕಿಂ ಎಂದರೆ ಪ್ರಕೃತಿ ಮತ್ತು ಸಂಸ್ಕೃತಿಯ ಜೀವಂತ ಪ್ರತೀಕ. ರಾಜ್ಯದ ರಸ್ತೆಗಳ ಸ್ವಚ್ಛತೆ, ಗಾಳಿಯ ಶುದ್ಧತೆಯನ್ನು ಕಾಯ್ದುಕೊಂಡ ಸಿಕ್ಕಿಂ ಜನರನ್ನು ಶ್ಲಾಘಿಸಿದ ಮೋದಿಯವರು, ಪ್ರಕೃತಿ ಸಂರಕ್ಷಣೆಯ ನೈಜ ರಾಯಭಾರಿಗಳು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಿಕ್ಕಿಂ ಭವಿಷ್ಯದ ಬೆಳವಣಿಗೆಯ ಹಬ್ ಆಗಿ ಮೂಡಿಬರಲು ಸಜ್ಜಾಗಿದ್ದು, ನೈಸರ್ಗಿಕ ಕೃಷಿ ಸೇರಿದಂತೆ ಸುಸ್ಥಿರ ಅಭಿವೃದ್ಧಿಯ ಮೂಲಕ ಸಿಕ್ಕಿಂ ಅಭಿವೃದ್ಧಿಯತ್ತ ಸಾಗುತ್ತಿದ್ದು, ಸಿಕ್ಕಿಂ ಪರಿಸರ-ಆರೋಗ್ಯ ಪ್ರವಾಸೋದ್ಯಮದ ವಿಪುಲ ಅವಕಾಶಗಳನ್ನು ಹೊಂದಿದೆ. ಸರಕಾರ ಇದನ್ನು ಉತ್ತೇಜಿಸುತ್ತದೆ. ರಾಜ್ಯದಲ್ಲಿ 1000 ಹೋಮ್ ಸ್ಟೇಗಳನ್ನು ಈ ನಿಟ್ಟಿನಲ್ಲಿ ನಿರ್ಮಿಸುವ ಜತೆಗೆ ಬಿಲ್ಲುಗಾರಿಕೆಯಂತಹ ಎಲ್ಲ ಸಾಹಸ ಪ್ರವಾಸೋದ್ಯಮಕ್ಕೂ ಬೆಂಬಲ ನೀಡಲಾಗುವುದು ಎಂದರು. ಇಂತಹ ವಿಪುಲ ಅವಕಾಶಗಳಿದ್ದರೂ ಹಿಂದಿನ ಕಾಂಗ್ರೆಸ್ ಸರಕಾರ ಈಶಾನ್ಯ ರಾಜ್ಯಗಳನ್ನು ನಿರ್ಲಕ್ಷಿಸಿರುವುದಕ್ಕೆ ಅವರು ಖೇದ ವ್ಯಕ್ತಪಡಿಸಿದರು.

ಸಿಕ್ಕಿಂಗೆ ₹4000 ಕೋಟಿ ಯೋಜನೆ

ಪುಟ ೧ ರಾಜ್ಯದ ಸ್ವರ್ಣ ಸಂಭ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ರಾಜ್ಯಪಾಲ ಓಂ ಪ್ರಕಾಶ್ ಮಾಥುರ್, ಸಂಸದರಾದ ಡಿ.ಟಿ.ಲೆಪ್ಚಾ, ಇಂದ್ರ ಹಂಗ್ ಸುಬ್ಬ ಮುಂತಾದವರ ಉಪಸ್ಥಿತಿ ಹೆಮ್ಮೆಯ ಕ್ಷಣ ಎಂದು ಪ್ರತಿಕ್ರಿಯಿಸಿದರು. ಸಿಕ್ಕಿಂನಲ್ಲಿ ಹೆಲೆನ್ ಲೆಪ್ಚಾ ಮೆಡಿಕಲ್ ಕಾಲೇಜು, 100 ಹಾಸಿಗೆಗಳ ಆಯುರ್ವೇದ ಆಸ್ಪತ್ರೆ, ಮಿನಿ ಸೆಕ್ರೇಟರಿಯೇಟ್, ಇಕೋ -ಟೂರಿಸಂ ಪಿಲಿಗ್ರಿಮೇಜ್ ಕಾಂಪ್ಲೆಕ್ಸ್, ಆಡಳಿತ ಕಚೇರಿ, ನೇತಾಜಿ ಸುಭಾಸ್‌ಚಂದ್ರ ಬೋಸ್ ಸೆಂಟರ್ ಆಫ್ ಎಕ್ಸಲೆನ್ಸ್‌ನಂತಹ ಯೋಜನೆಗಳನ್ನು ಈ ಸಂದರ್ಭ ಪ್ರಧಾನಿಯವರು ಉದ್ಘಾಟಿಸಿದರು. ಪ್ರಧಾನಿ ಮೋದಿಯವರು ಈಶಾನ್ಯ ರಾಜ್ಯಗಳ ಅದರಲ್ಲೂ ಸಿಕ್ಕಿಂ ಬಗ್ಗೆ ಹೊಂದಿರುವ ಪ್ರಾಮಾಣಿಕ ಪ್ರೀತ್ಯಾದರಗಳನ್ನು ವ್ಯಕ್ತಪಡಿಸಿರುವುದಕ್ಕೆ ಅವರು ಧನ್ಯವಾದ ಹೇಳಿದರು.

ಆಯೋಗದ ಆಡಳಿತ ವ್ಯವಸ್ಥೆ ಕುಸಿತ: ಆತಂಕ

ಬೆಂಗಳೂರು: ಕರ್ನಾಟಕ ಮಾಹಿತಿ ಆಯೋಗವು ದ್ವಿತೀಯ ಮೇಲ್ಮನವಿಗಳ ವಿಲೇವಾರಿಯಲ್ಲಿ ರಾಷ್ಟ್ರಮಟ್ಟದಲ್ಲಿ ಮುಂಚೂಣಿಯಲ್ಲಿದ್ದರೂ, ಆಯೋಗದ ಆಡಳಿತ ವ್ಯವಸ್ಥೆಯು ಸಂಪೂರ್ಣವಾಗಿ ಕುಸಿತಗೊಂಡಿದೆ ಎಂದು ರಾಜ್ಯ ಮಾಹಿತಿ ಆಯುಕ್ತರು ಆತಂಕ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ನಡೆದ ಆಯೋಗದ ಸಭೆಯಲ್ಲಿ, ಪ್ರಭಾರ ಕಾರ್ಯದರ್ಶಿಗಳ ನಡೆ ಮತ್ತು ಕಚೇರಿಯ ಆಡಳಿತಾತ್ಮಕ ವೈಫಲ್ಯಗಳ ವಿರುದ್ಧ ಒಮ್ಮತದ ಖಂಡನಾ ನಿರ್ಣಯ ಕೈಗೊಳ್ಳಲಾಗಿದೆ. 2025-26ನೇ ಸಾಲಿನಲ್ಲಿ ಆಯೋಗವು ಒಟ್ಟು 70,000 ಪ್ರಕರಣಗಳನ್ನು ವಿಚಾರಣೆಗೆ ಒಳಪಡಿಸಿದ್ದು, ಅದರಲ್ಲಿ 46,000 ಪ್ರಕರಣಗಳನ್ನು ವಿಲೇವಾರಿ ಮಾಡುವ ಮೂಲಕ ಶೇ.60ಕ್ಕಿಂತ ಹೆಚ್ಚು ಸಾಧನೆ ಮಾಡಿದೆ.

ಕಾರ್ಯದರ್ಶಿಗಳ ಗೈರು: ಆಯೋಗದ ಪ್ರಭಾರ ಕಾರ್ಯದರ್ಶಿಗಳಾದ ಸತೀಶ ಬಿ.ಸಿ. ಅವರು ಅಧಿಕಾರ ವಹಿಸಿಕೊಂಡ ದಿನದಿಂದ ಕಚೇರಿಗೆ ಸರಿಯಾಗಿ ಹಾಜರಾಗುತ್ತಿಲ್ಲ ಮತ್ತು ಆಡಳಿತಾತ್ಮಕ ಕೆಲಸಗಳತ್ತ ಗಮನ ಹರಿಸುತ್ತಿಲ್ಲ ಎಂದು ಸಭೆಯಲ್ಲಿ ಚರ್ಚಿಸಲಾಯಿತು.

ಕಾಂಗ್ರೆಸ್ ವರಿಷ್ಠರ ಜತೆ ಸಚಿವರ ಚರ್ಚೆ

ಪುಟ ೧ 3 ದಿನಗಳ ಹಿಂದೆ ದಿಲ್ಲಿಗೆ ಭೇಟಿ ನೀಡಿದ್ದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ತಮ್ಮ ಮನವಿಯನ್ನು ಮಂಡಿಸಿದ್ದರು. ಆದಾದ ನಂತರ ಕಳೆದೆರಡು ದಿನಗಳಿಂದ ದಿಲ್ಲಿಯಲ್ಲಿರುವ ಮಹದೇವಪ್ಪ, ಸತೀಶ್ ಜಾರಕಿಹೊಳಿ ಅವರು ಕೂಡಾ ಸುದೀರ್ಘ ಚರ್ಚೆ ನಡೆಸಿದ್ದಾರೆ.

ಮುಂದುವರಿಕೆ, ಪದತ್ಯಾಗಕ್ಕೂ ಸಿಎಂ ಸಿದ್ಧ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ಮುಂದುವರಿಸಲು ಮತ್ತು ಪದತ್ಯಾಗ ಎರಡಕ್ಕೂ ಸಿದ್ಧರಾಗಿದ್ದಾರೆ ಎಂದು ಶಾಸಕ ಕೆ.ಎನ್. ರಾಜಣ್ಣ ತಿಳಿಸಿದ್ದಾರೆ ಬೆಂಗಳೂರಲ್ಲಿ ಮಾತನಾಡಿದ ಅವರು, ಹೈಕಮಾಂಡ್ ಗೊಂದಲ ಬಗೆಹರಿಸಬೇಕು. ಗೊಂದಲ ಬಗೆಹರಿಸಿದಷ್ಟು ರಾಜ್ಯಕ್ಕೆ ಒಳ್ಳೆಯದು. ಗೊಂದಲ ಮುಂದುವರಿಯಲು ಹೈಕಮಾಂಡ್ ಅವಕಾಶ ನೀಡಬಾರದು. ಹೈಕಮಾಂಡ್ ಏನು ಹೇಳುತ್ತದೆಯೋ ಅದಕ್ಕೆ ಸಿದ್ದರಾಮಯ್ಯ ಬದ್ಧರಾಗಿದ್ದಾರೆ. ಇದು ಆತುರದಲ್ಲಿ ತೆಗೆದುಕೊಳ್ಳುವ ನಿರ್ಧಾರ ಅಲ್ಲ ಎಂದು ತಿಳಿಸಿದ್ದಾರೆ. ಸಿಎಂ ಜತೆ ಸಭೆ ಮಾಡಿದಾಗಲೂ ಅವರು ಓಪನ್ ಮೈಂಡ್‌ನಲ್ಲಿ ಇದ್ದಾರೆ. ರಾಹುಲ್ ಗಾಂಧಿ ಸೂಚನೆ ಪಾಲನೆ ಮಾಡುತ್ತೇನೆ. ಆಗ ನಿಮ್ಮೆಲ್ಲರ ಸಹಕಾರ ಇರಬೇಕು ಎಂದು ಸಿಎಂ ಅಭಿಮತ ವ್ಯಕ್ತಪಡಿಸಿದ್ದಾರೆ.

ವಿರೋಧದ ನಡುವೆಯೂ ಬಿಐಸಿಯಲ್ಲಿ ಸಂವಾದ

ಖಾಲಿದ್ ವಿರುದ್ಧ ಪ್ರತಿಭಟನೆ

ಬೆಂಗಳೂರು: ದೆಹಲಿ ಗಲಭೆ ಪ್ರಕರಣದ ಆರೋಪಿ ಉಮರ್ ಖಾಲಿದ್ ಕುರಿತ ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದು, ಪ್ರತಿಭಟನೆಗೆ ಮುಂದಾದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ದೊಮ್ಮಲೂರು ಸಮೀಪದ ಬೆಂಗಳೂರು ಅಂತಾರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಉಮರ್ ಖಾಲಿದ್ ಆ್ಯಂಡ್ ಹಿಸ್ ವರ್ಲ್ಡ್ ಪುಸ್ತಕಕ್ಕೆ ಸಂಬಂಧಿಸಿದ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. 2020ರ ದೆಹಲಿ ಗಲಭೆ ಪ್ರಕರಣದಲ್ಲಿ ಯುಎಪಿಎ ಕಾಯ್ದೆಯಲ್ಲಿ ಜೈಲು ಪಾಲಾಗಿರುವ ವ್ಯಕ್ತಿಯ ಕುರಿತಾದ ಕಾರ್ಯಕ್ರಮಕ್ಕೆ ಅನುಮತಿ ನೀಡಬಾರದು ಎಂದು ಬಿಜೆಪಿ ಆಗ್ರಹಿಸಿತ್ತು.

ಕಾರ್ಯಕರ್ತರ ವಶ: ಬಿಜೆಪಿ ಪ್ರತಿಭಟನೆಯ ಎಚ್ಚರಿಕೆಯ ಹಿನ್ನೆಲೆಯಲ್ಲಿ ಬಿಐಸಿ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಕಾರ್ಯಕ್ರಮ ಆರಂಭವಾಗುವ ಒಂದು ಗಂಟೆ ಮುನ್ನವೇ ಸ್ಥಳಕ್ಕೆ ಆಗಮಿಸಿ ಪ್ರತಿಭಟನೆ ನಡೆಸಲು ಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ತಡೆದು ವಶಕ್ಕೆ ಪಡೆದರು. ಈ ವೇಳೆ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ವಾಗ್ವಾದವೂ ನಡೆಯಿತು.

ಬಿಗಿ ಬಂದೋಬಸ್ತ್

ಬಿಜೆಪಿಯ ತೀವ್ರ ವಿರೋಧದ ನಡುವೆಯೂ ಕಾರ್ಯಕ್ರಮ ನಿಗದಿಯಂತೆ ನಡೆಯಿತು. ಈ ಸಂವಾದದಲ್ಲಿ ನಟ ಪ್ರಕಾಶ್ ರಾಜ್, ಇತಿಹಾಸಕಾರ ರಾಮಚಂದ್ರ ಗುಹ, ಜಾನಕಿ ನಾಯರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿ ತಮ್ಮ ವಿಚಾರಗಳನ್ನು ಹಂಚಿಕೊಂಡರು. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತಲ್ಲದೆ, ಕೇವಲ ಪೂರ್ವ ನೋಂದಣಿ ಮಾಡಿಕೊಂಡವರಿಗೆ ಮಾತ್ರ ಕಾರ್ಯಕ್ರಮಕ್ಕೆ ಪ್ರವೇಶ ನೀಡಲಾಗಿತ್ತು.

ನಾಳೆ ಸುಜಯ್ ವಿಚಾರಣೆ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ದತ್ತುಪುತ್ರ ಎಂದು ಹೇಳಿಕೊಂಡು ಅವರ ಹೆಸರಿನ ನಕಲಿ ಲೆಟರ್ ಹೆಡ್ ಹಾಗೂ ಕರ್ನಾಟಕ ರಾಜ್ಯಪಾಲರ ಕಚೇರಿಯ ಮುದ್ರೆಗಳನ್ನು ದುರ್ಬಳಕೆ ಮಾಡಿಕೊಂಡ ಆರೋಪ ಎದುರಿಸುತ್ತಿರುವ ಸುಜಯೇಂದ್ರ ಅಲಿಯಾಸ್ ಸುಜಯ್ ವಿರುದ್ಧದ ಪ್ರಕರಣ ಏ.30ರಂದು ವಿಚಾರಣೆಗೆ ಬರಲಿದೆ. ಪೊಲೀಸರು ಈಗಾಗಲೇ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದು, ಇದರಲ್ಲಿ ಆರೋಪಿಯ ಸ್ಫೋಟಕ ಮಾಹಿತಿ ಹೊರಬಂದಿವೆ ಹೊರಬಂದಿವೆ.



ಏನಿದು ಪ್ರಕರಣ? ಆರೋಪಿ ಸುಜಯೇಂದ್ರ, ತಾನು ಅಮಿತ್ ಶಾ ಅವರ ದತ್ತುಪುತ್ರ ಎಂದು ಹತ್ತಿರದ ವಲಯಗಳಲ್ಲಿ ನಂಬಿಸಿದ್ದ ಎನ್ನಲಾಗಿದೆ. ಈ ಪ್ರಭಾವವನ್ನು ಬಳಸಿಕೊಂಡು ವಿವಿಧ ನೇಮಕಾತಿಗಳು, ವರ್ಗಾವಣೆಗಳು ಮತ್ತು ಸರ್ಕಾರದ ಉನ್ನತ ಮಟ್ಟದ ಶಿಫಾರಸುಗಳಿಗಾಗಿ ಅಮಿತ್ ಶಾ ಅವರ ಹೆಸರಿರುವ ನಕಲಿ ಲೆಟರ್‌ಹೆಡ್‌ಗಳನ್ನು ಸೃಷ್ಟಿಸಿದ್ದ. ಅಷ್ಟೇ ಅಲ್ಲದೆ, ಕರ್ನಾಟಕ ರಾಜ್ಯಪಾಲರ ಹೆಸರಿನ ಲೆಟರ್‌ಹೆಡ್ ಮತ್ತು ನಕಲಿ ಸರ್ಕಾರಿ ಮುದ್ರೆಗಳನ್ನು ಬಳಸಿ ಹಲವು ಅಕ್ರಮ ಶಿಫಾರಸು ಪತ್ರಗಳನ್ನು ಸಿದ್ಧಪಡಿಸಿದ್ದ ಎಂಬ ಗಂಭೀರ ಆರೋಪ ಈತನ ಮೇಲಿದೆ. ಪೊಲೀಸರ ಮುಂದೆ ನೀಡಿರುವ ಹೇಳಿಕೆಯಲ್ಲಿ ಆರೋಪಿ ಸುಜಯ್, ತಾನು ಪ್ರಭಾವಿ ವ್ಯಕ್ತಿಗಳ ಹೆಸರಿನಲ್ಲಿ ನಕಲಿ ಪತ್ರಗಳನ್ನು ಸಿದ್ಧಪಡಿಸಿ ವಿವಿಧ ಇಲಾಖೆಗಳಲ್ಲಿನ ನೇಮಕಾತಿ ಮತ್ತು ಶಿಫಾರಸುಗಳಿಗಾಗಿ ಬಳಸಿದ್ದಾಗಿ ಒಪ್ಪಿಕೊಂಡಿದ್ದಾನೆ ಎಂದು ತಿಳಿದುಬಂದಿದೆ.

ಮುಂಬೈನಲ್ಲಿ ಉಗ್ರ ದಾಳಿ

ಪುಟ ೧ **ಗಂಭೀರ ಗಾಯ:** ಈ ದಾಳಿಯಲ್ಲಿ ಇಬ್ಬರೂ ಭದ್ರತಾ ಸಿಬ್ಬಂದಿ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಒಬ್ಬರ ಸ್ಥಿತಿ ಅತ್ಯಂತ ಗಂಭೀರವಾಗಿದೆ ಎಂದು ತಿಳಿದುಬಂದಿದೆ. ಆರಂಭದಲ್ಲಿ ಇದನ್ನು ಸಾಮಾನ್ಯ ಹಲ್ಲೆ ಪ್ರಕರಣವೆಂದು ದಾಖಲಿಸಲಾಗಿದ್ದರೂ, ತನಿಖೆ ಮುಂದುವರಿದಂತೆ ದಾಳಿಯ ಹಿನ್ನೆಲೆ ಮತ್ತು ವಿಧಾನ ಭದ್ರತಾ ಸಂಸ್ಥೆಗಳ ಗಮನ ಸೆಳೆದಿದೆ.

ಮುಂಬೈ ಪೊಲೀಸರ ಪ್ರಕಾರ, ಆರೋಪಿ ಪೂರ್ವನಿಯೋಜಿತವಾಗಿ ಪೀಡಿತರನ್ನು ಆಯ್ಕೆ ಮಾಡಿಕೊಂಡಿದ್ದಾನೆ ಎಂಬುದು ಸ್ಪಷ್ಟವಾಗುತ್ತಿದೆ. ಧಾರ್ಮಿಕ ಗುರುತಿನ ಆಧಾರದ ಮೇಲೆ ದಾಳಿ ನಡೆಸಲಾಗಿದೆ ಎಂಬ ಶಂಕೆ ಬಲಗೊಂಡಿದ್ದು, ಇದು ಇತ್ತೀಚಿನ ಕೆಲವು ಉಗ್ರ ದಾಳಿಗಳ ಮಾದರಿಯನ್ನು ಹೋಲುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ವಿಶೇಷವಾಗಿ ಪಹಲ್ಗಾಮ್‌ನಲ್ಲಿ ನಡೆದ ಘಟನೆಯಲ್ಲಿ ಪೀಡಿತರ ಗುರುತು ಪರಿಶೀಲಿಸಿ ದಾಳಿ ನಡೆಸಿದ ಘಟನೆಗೆ ಇದು ಹೋಲಿಕೆಯಾಗುತ್ತದೆ ಎಂಬುದನ್ನು ಭದ್ರತಾ ವಲಯಗಳು ಸೂಚಿಸುತ್ತಿವೆ.

ಪ್ರಕರಣವನ್ನು ಮಹಾರಾಷ್ಟ್ರ ಭಯೋತ್ಪಾದನಾ ನಿಯಂತ್ರಣ ದಳಕ್ಕೆ ಹಸ್ತಾಂತರಿಸಿದ ನಂತರ, ತನಿಖೆ ಬಹುಮುಖವಾಗಿ ಮುಂದುವರಿದಿದೆ. ಪ್ರಾಥಮಿಕ ತನಿಖೆಯಲ್ಲಿ ಆರೋಪಿ ಆನ್‌ಲೈನ್ ಮೂಲಕ ಮೂಲಭೂತವಾದಿ ಸಿದ್ಧಾಂತಗಳಿಗೆ ಒಳಗಾಗಿದ್ದಾನೆ ಎಂಬ ಸುಳಿವುಗಳು ದೊರೆತಿವೆ. ವಿಶೇಷವಾಗಿ ಟೆಲಿಗ್ರಾಂ ವಾಹಿನಿಗಳ ಮೂಲಕ ಜಿಹಾದ್ ಹೆಸರಿನಲ್ಲಿ ಹಿಂಸೆಯನ್ನು ಪ್ರೇರೇಪಿಸುವ ವಿಷಯಗಳನ್ನು ಅವನು ವೀಕ್ಷಿಸಿದ್ದಾನೆ ಎನ್ನಲಾಗಿದೆ.

ಗಾಜಾ ಸೇರಿದಂತೆ ಜಾಗತಿಕ ಸಂಘರ್ಷಗಳ ಕುರಿತ ಉಲ್ಲೇಖಗಳು, ಜಿಹಾದ್ ಕುರಿತ ಟಿಪ್ಪಣಿಗಳು ಅವನ ಡಿಜಿಟಲ್ ಸಾಧನಗಳಲ್ಲಿ ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ.

ತನಿಖೆ ತೀವ್ರ: ಆರೋಪಿಯ ಮೀರಾ ರಸ್ತೆಯ ನಿವಾಸದಲ್ಲಿ ಶೋಧ ಕಾರ್ಯ ನಡೆಸಲಾಗಿದ್ದು, ಅವನ ಡಿಜಿಟಲ್ ಚಟುವಟಿಕೆಗಳು, ಸಂಪರ್ಕಗಳು ಹಾಗೂ ಇನ್ನಿತರ ಪ್ರಭಾವಿತರ ಸಾಧ್ಯತೆಗಳ ಬಗ್ಗೆ ಎಟಿಎಸ್ ಅಧಿಕಾರಿಗಳು ವಿಚಾರಣೆ ಮುಂದುವರಿಸಿದ್ದಾರೆ. ಪ್ರಕರಣದ ಮೂಲ ಉದ್ದೇಶ ಮತ್ತು ವ್ಯಾಪ್ತಿಯನ್ನು ಪತ್ತೆ ಹಚ್ಚುವುದು ಈಗ ಪ್ರಮುಖ ಗುರಿಯಾಗಿದೆ.

ಚಳಿಗಾಲದಲ್ಲಿ ಗಡಗಡ ನಡುಗುತ್ತಲೇ ಬೇಸಿಗೆಯನ್ನು ಸ್ವಾಗತಿಸಿದ್ದ ಉತ್ತರ ಕರ್ನಾಟಕದ ಜಿಲ್ಲೆಗಳು ಕಡು ಧಗೆಯಲ್ಲಿ ಈಗ ನಿಗಿನಿಗಿ ಕೆಂಡದಂತಾಗಿವೆ. ತುಸು ಮಧ್ಯಾಹ್ನ ಆರಂಭವಾಯಿತೆಂದರೆ ಸೂರ್ಯನ ಪ್ರಖರತೆ ಗಗನಕ್ಕೆ ಏರುತ್ತಿದ್ದು, ತಾಪಕ್ಕೆ ಜನ ಕಂಗೆಟ್ಟು ಹೋಗಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಹಲವು ಜಿಲ್ಲೆಗಳ ತಾಪಮಾನ 40 ಡಿಗ್ರಿಯ ಗಡಿ ದಾಟಿದ್ದು, ಕಲಬುರ್ಗಿ ಜಿಲ್ಲೆಯಲ್ಲಿ ದೇಶದಲ್ಲೇ ಅತಿ ಹೆಚ್ಚಿನ ತಾಪಮಾನ 45.3 ಡಿಗ್ರಿ ತಾಪಮಾನ ದಾಖಲಾಗಿದೆ. ಮೇ ತಿಂಗಳ ಬೇಸಿಗೆ ದಾಟುವುದು ಹೇಗೆ ಎನ್ನುವ ಚಿಂತೆ ಜನರನ್ನು ಕಾಡಿದೆ. ಉತ್ತರ ಕರ್ನಾಟಕದ ಧಗಧಗ ಬೇಸಿಗೆಯ ನೋಟ ಇಲ್ಲಿದೆ.

ಉತ್ತರ ಕರ್ನಾಟಕ ಧಗಧಗ



ದೇಶದಲ್ಲೇ ಅತಿಹೆಚ್ಚು 45.3 ಡಿಗ್ರಿ ತಾಪಮಾನ

ರಣಧಗೆಗೆ ಕಲಬುರಗಿ ಕಂಗಾಲು!

▸ ರಾಚಪ್ಪಾ ಜಂಬಗಿ

◆ **ಕಲಬುರಗಿ:** ಕಲ್ಯಾಣ ಕರ್ನಾಟಕದ ಕೇಂದ್ರ ಸ್ಥಾನ ಕಲಬುರಗಿ ರಣಬಿಸಿಲಿನ ಕೇಂದ್ರವಾಗಿ ಮಾರ್ಪಟ್ಟಿದೆ. ಜಿಲ್ಲೆಯಾದ್ಯಂತ ದೇಶದಲ್ಲೇ ಅತಿ ಹೆಚ್ಚು ಗರಿಷ್ಠ ತಾಪಮಾನ 45.3 ಡಿಗ್ರಿ ಸೆಲ್ಸಿಯಸ್ ಕಲಬುರಗಿಯೊಂದರಲ್ಲೇ ದಾಖಲಾಗಿದ್ದು, ಇದರಿಂದಾಗಿ ಬಿಸಿಲಿನ ಹೊಡೆತಕ್ಕೆ ಕಲಬುರಗಿ ಮಂದಿ ಅಕ್ಷರಶಃ ಬಸವಳಿದು ಹೋಗಿದ್ದಾರೆ.

ಮನೆಯಿಂದ ಹೊರಹೋಗಲು ನಿರ್ಬಂಧ: ಜಿಲ್ಲೆಯಲ್ಲಿ ಬಿಸಿಲಿನ ತಾಪದಿಂದ ಬಿಸಿ ಗಾಳಿ ಹೆಚ್ಚಾಗುವ ಸಾಧ್ಯತೆ ಇದೆ.ಬಿಸಿಲಿನ ಶಾಖದಿಂದ ತಪ್ಪಿಸಿಕೊಳ್ಳಲು ಮಧ್ಯಾಹ್ನ 12 ರಿಂದ 4 ಗಂಟೆಯವರೆಗೂ ಮನೆಯಿಂದ ಹೊರ ಹೋಗುವುದನ್ನು ತಪ್ಪಿಸಬೇಕಿದ್ದು ಹಾಗೂ ಬಿಸಿ ಗಾಳಿ ಬೀಸುತ್ತಿರುವ ಹಿನ್ನಲೆ ಕಲಬುರಗಿಯಲ್ಲಿ ಪ್ರಾರಂಭದಲ್ಲಿ ಆರೇಂಜ್ ಅಲರ್ಟ್ ಘೋಷಣೆ ಮಾಡಿ ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಂ ಆದೇಶ ಹೊರಡಿಸಿದ್ದಾರೆ.

ಕಲಬುರಗಿಯಲ್ಲಿ ಪ್ರಸಕ್ತ ಬೇಸಿಗೆಯಲ್ಲಿ ಬಿಸಿಲಿನ ತಾಪಮಾನ ಸರಾಸರಿ 40 ಡಿಗ್ರಿ ಮೇಲ್ಪಟ್ಟು ದಾಖಲಾಗಿದ್ದು, ಕಳೆದ 10 ವರ್ಷಗಳ ಅಂಕಿ ಅಂಶಗಳ ಮೇಲೆ ಗಮನ ಹರಿಸಿದಾಗ 2026ರಲ್ಲೇ ಅತ್ಯಧಿಕ ಗರಿಷ್ಠ 45.3 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.ಅದರಂತೆ ಕಳೆದ 2011ರಲ್ಲಿ 42.6, 2012ರಲ್ಲಿ 41.6,2013ರಲ್ಲಿ 42.4,2014ರಲ್ಲಿ 41.7, 2015ರಲ್ಲಿ 42.4, 2016ರಲ್ಲಿ44.5,2017ರಲ್ಲಿ 43.8,2018ರಲ್ಲಿ 43.1,2019ರಲ್ಲಿ 44.2,2020ರಲ್ಲಿ 42.7,2021ರಲ್ಲಿ 41.7,2022ರಲ್ಲಿ 43,2023ರಲ್ಲಿ 41.5,2024ರಲ್ಲಿ 43.3ಮತ್ತು 2025ರಲ್ಲಿ 43.2 ಡಿಗ್ರಿ ದಾಖಲಾದರೆ ಪ್ರಸ್ತುತ 2026ರಲ್ಲಿ ಏಪ್ರಿಲ್ ತಿಂಗಳಲ್ಲಿ ಇಲ್ಲಿಯವರೆಗೆ ಅತಿ ಹೆಚ್ಚು 45.3 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ ಎಂದು ಬೆಂಗಳೂರಿನ ವೈಜ್ಞಾನಿಕ ಡಿ ಹವಾಮಾನ ಕೇಂದ್ರದ ಡಾ.ಲತಾ ಶ್ರೀಧರ್ ಹೊಸ ದಿಗಂತಕ್ಕೆ ತಿಳಿಸಿದರು.

ತಂಪು ಪಾನೀಯಕ್ಕೆ ಮೊರೆ

ನಗರ ಸೇರಿದಂತೆ ಜಿಲ್ಲೆಯಾದ್ಯಂತ ರಣ ಭೀಕರ ಬಿಸಿಲಿಗೆ ಜನ ಅಕ್ಷರಶಃ ಕಂಗಾಲಾಗಿದ್ದು, ನಗರ ಪ್ರದೇಶದ ಶರಣಬಸವೇಶ್ವರರ ದೇವಸ್ಥಾನ,ವಲ್ಲಭಭಾಯಿ ಪಟೇಲ್ ವೃತ್ತ, ಸುಪರ್ ಮಾರ್ಕೆಟ್, ಜಗತ್ ವೃತ್ತ, ಗಂಜ್ ಪ್ರದೇಶ ಸೇರಿದಂತೆ ಹಲವೆಡೆ ಸಾರ್ವಜನಿಕರು ಮಧ್ಯಾಹ್ನದ ಹೊತ್ತಿಗೆ ತಂಪು ಪಾನೀಯಗಳಾದ ನಿಂಬೆ ಶರಬತ್ತು, ಟೆಂಗಿನಕಾಯಿ ಎಳನೀರು, ಜ್ಯೂಸ್ ಇತ್ಯಾದಿ ಪಾನೀಯ ಮೊರೆ ಹೋಗುತ್ತಿರುವುದು ಭಾರೀ ಪ್ರಮಾಣದಲ್ಲಿ ಕಂಡುಬರುತ್ತಿದೆ.

ಬಿಸಿಲಿನಿಂದ ಬೆನ್ನು ತಿರುಗಿಸಿದ ಪ್ರವಾಸಿಗರು

ಹಸಿರು ಜಿಲ್ಲೆಯಲ್ಲಿ ಬಸವಳಿದು ಹೋದ ಜನ..!

▸ ನಾಗರಾಜ ಶೆಟ್ಟಿ

◆ **ಅಂಕೋಲಾ:** ಕರಾವಳಿ, ಮಲೆನಾಡು,ಬಯಲುಸೀಮೆಗಳ ಪ್ರಾಕೃತಿಕ ವೈವಿಧ್ಯತೆ ಹೊಂದಿರುವ ಉತ್ತರ ಕನ್ನಡ ಜಿಲ್ಲೆಯ ಜನರು ಅತೀವ ಬಿಸಿಲ ಬೇಗೆಯಿಂದ ಬಸವಳಿದು ಹೋಗಿದ್ದಾರೆ.

ಬಿಸಿಲ ತಾಪ ಮನುಷ್ಯರಷ್ಟೇ ಅಲ್ಲದೇ ಗಿಡ ಮರಗಳು,ಪ್ರಾಣಿ ಪಕ್ಷಿಗಳಿಗೂ ಕಾಡತೊಡಗಿದ್ದು ದಿನೇದಿನ ಏರುತ್ತಿರುವ ತಾಪಮಾನದಿಂದ ಗಂಭೀರ ಆರೋಗ್ಯ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇರುವುದರಿಂದ ಮದ್ಯಾಹ್ನದ ಉರಿ ಬಿಸಿಲಿನಲ್ಲಿ ಜನ ಓಡಾಡದಂತೆ ಜಿಲ್ಲಾಡಳಿತ ಸೂಚಿಸಿದೆ.

ಏಪ್ರಿಲ್ ತಿಂಗಳ ಕೊನೆಯಲ್ಲಿ ಬಿರು ಬಿಸಿಲಿನ ವಾತಾವರಣ ಆಗಾಗ ಬೀಸುತ್ತಿರುವ ಬಿಸಿಗಾಳಿ ಬೇಸಿಗೆಯ ಕಾವನ್ನು ಹೆಚ್ಚಿಸಿದ್ದು ಜನರು ಮನೆಗಳಿಂದ ಹೊರಬರುವುದೇ ಕಷ್ಟಕರವಾಗಿದೆ. ಕರಾವಳಿ ತಾಲೂಕುಗಳಲ್ಲಿ ಗರಿಷ್ಠ 37 ಡಿಗ್ರಿವರೆಗೆ ಉಷ್ಣಾಂಶ ಕಂಡು ಬಂದಿದ್ದು ಕರಾವಳಿಯ ಆರ್ದ್ರತೆ ತೇವಾಂಶದ ವಾತಾವರಣದಿಂದ 40 ಡಿಗ್ರಿ ತಾಪಮಾನಕ್ಕಿಂತ ಹೆಚ್ಚಿನ ಬಿಸಿಯ ಅನುಭವ ಉಂಟಾಗುತ್ತಿದೆ. ಮಲೆನಾಡು ಭಾಗದ ತಾಲೂಕುಗಳಲ್ಲೂ ಸಹ ಹಿಂದೆಂದಿಗಿಂತಲೂ ಹೆಚ್ಚಿನ ಸೆಖೆ ಭಾದಿಸಿದ್ದು 31 ರಿಂದ 33 ಡಿಗ್ರಿಯ ವರೆಗೆ ತಾಪಮಾನವಿದೆ. ಬಯಲುಸೀಮೆ ಭಾಗದ ತಾಲೂಕುಗಳಲ್ಲಿ ಸರಾಸರಿ 35 ಡಿಗ್ರಿಯಷ್ಟು ತಾಪಮಾನ ಕಂಡು ದಾಖಲಾಗುತ್ತಿದೆ.ಉಷ್ಣಾಂಶದಿಂದ ಜಲ ಮೂಲಗಳು ಬತ್ತತೊಡಗಿದ್ದು ಬಾವಿಗಳಲ್ಲಿ ನೀರು ಪಾತಾಳಕ್ಕೆ ಇಳಿಯುತ್ತಿದೆ.

ವ್ಯಾಪಾರ ವಹಿವಾಟಿನ ಮೇಲೂ ಬಿರು ಬೇಸಿಗೆಯ ಪ್ರಭಾವ ಕಂಡು ಬರತೊಡಗಿದ್ದು ಕರಾವಳಿಯ ಆರ್ಥಿಕತೆಯ ಜೀವಾಳವಾಗಿರುವ ಮತ್ಸ್ಯೋದ್ಯಮ ಕುಸಿದಿದೆ .ಬಿಸಿಲ ತಾಪದಿಂದ ಮೀನುಗಳು ಸಮುದ್ರ ತೀರದಿಂದ ದೂರ ಹೋಗುತ್ತಿದ್ದು ಸಾಂಪ್ರದಾಯಿಕ ಮೀನುಗಾರಿಕೆಗೆಮೀನಿನ ಬರ ಎದುರಾಗಿದೆ.

ಪ್ರವಾಸೋದ್ಯಮದ ಮೇಲೆ ಸಹ ಏರುತ್ತಿರುವ ತಾಪಮಾನದ ಪರಿಣಾಮ ಕಾಣಬಹುದಾಗಿದ್ದು ಕಡಲ ತೀರದ ಪ್ರವಾಸೋದ್ಯಮ ಹೆಚ್ಚಾಗಿ ಅವಲಂಬಿಸಿರುವ ಕರಾವಳಿಯಲ್ಲಿ ಬಿಸಿಲ ತಾಪದಿಂದ ಪ್ರವಾಸಿಗರು ಬಳಲುತ್ತಿದ್ದಾರೆ.

ಮುಂದಿನ ದಿನಗಳಲ್ಲಿ ಉಷ್ಣಾಂಶ ಇನ್ನಷ್ಟು ಹೆಚ್ಚಲಿದೆ ಎನ್ನಲಾಗುತ್ತಿದ್ದು ಜನರ ಆರೋಗ್ಯದ ಮೇಲೆ ಸಹ ಪರಿಣಾಮ ಬೀರುವ ಸಾಧ್ಯತೆ ಇದೆ.



“ ವಿಪರೀತ ಸೆಖೆಗೆ ಕಾಲ ಕಳೆಯಲಾಗುತ್ತಿಲ್ಲ, ಕುಟುಂಬದ ಜೊತೆ ಪ್ರವಾಸಕ್ಕೆ ಬಂದಿದ್ದೆವು ಚಿಕ್ಕ ಮಕ್ಕಳು ಸೆಖೆಯನ್ನು ಸಹಿಸುತ್ತಿಲ್ಲ .ಪ್ರವಾಸ ಮೊಟಕುಗೊಳಿಸಿ ಊರಿಗೆ ಮರಳುವುದೇ ಉತ್ತಮ ಎಂಬ ನಿರ್ಧಾರಕ್ಕೆ ಬಂದಿದ್ದೇವೆ.

■ ವೈಕುಂಠಯ್ಯ.ಬಿ., ಮೈಸೂರು. ಗೋಕರ್ಣಕ್ಕೆ ಬಂದಿದ್ದ ಪ್ರವಾಸಿಗ.

ಬಿಸಿಲಿಗೆ ಹೊರ ಬರದ ಜನ, ಜಾನುವಾರುಗಳು

ಗದಗದಲ್ಲಿ ನಿತ್ಯವೂ ಧಗಧಗ!

▸ ರುದ್ರಗೌಡ ಪಾಟೀಲ

◆ **ಗದಗ:** ಜಿಲ್ಲೆಯ ಇತಿಹಾಸದಲ್ಲೇ ಈ ವರ್ಷದ ಏಪ್ರಿಲ್ ತಿಂಗಳು ಅತ್ಯಂತ ಕಡು ಬೇಸಿಗೆಯ ಕಾಲವಾಗಿ ಮಾರ್ಪಟ್ಟಿದೆ.

ಸೂರ್ಯನ ತೀಕ್ಷ್ಣ ಕಿರಣಗಳಿಗೆ ಜಿಲ್ಲೆ ಅಕ್ಷರಶಃ ತತ್ತರಿಸುತ್ತಿದ್ದು, ತಾಪಮಾನವು ಹಿಂದೆಂದೂ ಕಾಣದ ಮಟ್ಟಕ್ಕೆ ಏರಿಕೆಯಾಗಿ ಹೊಸ ದಾಖಲೆ ಬರೆದಿದೆ.

ಭಾರತೀಯ ಹವಾಮಾನ ಇಲಾಖೆ (ಐಎಂಡಿ) ನೀಡಿರುವ ಅಂಕಿ ಅಂಶಗಳ ಪ್ರಕಾರ, ಜಿಲ್ಲೆಯಲ್ಲಿ ಈ ವರ್ಷ 41.5 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ಇದು ಕಳೆದ ಹಲವು ವರ್ಷಗಳ ಏಪ್ರಿಲ್ ತಿಂಗಳ ಸರಾಸರಿಯನ್ನು ಮೀರಿಸಿದೆ.

'ಬಿಸಿ' ದಾಖಲೆ: ಜಿಲ್ಲೆಯ ತಾಪಮಾನವು ಏರುತ್ತಲೇ ಸಾಗಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ. ಅದರಲ್ಲೂ ಏ.10 ರಂದು ದಾಖಲಾದ ಉಷ್ಣಾಂಶವು ಈ ದಶಕದ ಅತ್ಯಂತ ಗರಿಷ್ಠ ಮಟ್ಟಗಳಲ್ಲಿ ಒಂದಾಗಿದೆ. ಏ.4ರಂದು 38.2 ಡಿಗ್ರಿ ಸೆಲ್ಸಿಯಸ್ ಇದ್ದ ಉಷ್ಣಾಂಶ ಏ.8ಕ್ಕೆ 40.5 ಡಿಗ್ರಿ ಹಾಗೂ ಏ.10ಕ್ಕೆ 41.5 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಮೂಲಕ ವರ್ಷದ ಗರಿಷ್ಠ ತಾಪಮಾನವನ್ನು ಸೃಷ್ಟಿಸಿದೆ. ಏ.13ರ ವೇಳೆಗೆ 40.5 ಡಿಗ್ರಿ ತಾಪಮಾನವಿದ್ದರೂ ಬಿಲಿಸಿನ ಪ್ರಖರತೆ ಅಂಕಿ ಅಂಶಗಳಿಗಿಂತ ಹೆಚ್ಚಿದೆ ಎನ್ನುವ ಅನುಭೂತಿ ನೀಡುತ್ತಿದೆ. ಏ.28 ರಂದು ಜಿಲ್ಲೆಯಲ್ಲಿ 37 ಡಿಗ್ರಿ ಇದೆ.

ಮತ್ತಷ್ಟು ಹೆಚ್ಚಳ ಸಾಧ್ಯತೆ: ಹವಾಮಾನ ಇಲಾಖೆಯ ಮುನ್ಸೂಚನೆಯು ಮತ್ತಷ್ಟು ಆತಂಕಕಾರಿಯಾಗಿದೆ. ಮುಂದಿನ ಹತ್ತು ದಿನಗಳಲ್ಲಿ ಉಷ್ಣ ಅಲೆ (ಊಜಚಿಣ ಘಾಚಿತಿಜ) ಬೀಸುವ ಸಾಧ್ಯತೆಯಿದ್ದು, ತಾಪಮಾನವು ತನ್ನದೇ ಆದ ಹಳೆಯ ದಾಖಲೆಗಳನ್ನು ಮುರಿಯುವ ಸಾಧ್ಯತೆಯಿದೆ.

ಆರೋಗ್ಯದ ಮೇಲೆ ದುಷ್ಪರಿಣಾಮ

ಅತಿಯಾದ ಬಿಸಿಲ ಬೇಗೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆ ಹೆಚ್ಚಿದ್ದು ಜನತೆ ಜಾಗ್ರತೆಯಿಂದ ಇರಬೇಕಿದೆ. ದೇಹದ ಉಷ್ಣಾಂಶದಲ್ಲಿ ಏರಿಕೆ,ಪ್ರಜ್ಞೆ ತಪ್ಪುವುದು,ವಾಂತಿ, ತಲೆ ಸುತ್ತುವುದು, ಹೃದಯ ಬಡಿತದಲ್ಲಿ ಏರುಪೇರು ಮೊದಲಾದ ಆರೋಗ್ಯ ಸಮಸ್ಯೆಗಳು ಉದ್ಭವಿಸುವ ಸಾಧ್ಯತೆ ಇದ್ದು ಜನ ಜಾಗೃತರಾಗಿರಬೇಕೆಂದು ಆರೋಗ್ಯ ಇಲಾಖೆ ಸೂಚನೆ ನೀಡಿದೆ.

ಆರೋಗ್ಯ ಇಲಾಖೆಯ ಮುನ್ನೆಚ್ಚರಿಕೆ

- ಮುಂಜಾಗ್ರತಾ ಕ್ರಮವಾಗಿ ಬಾಯಾರಿಕೆ ಇಲ್ಲದಿದ್ದರೂ ನೀರು ಸೇವಿಸುತ್ತಲೇ ಇರಬೇಕು. ಎಳನೀರು, ಮಜ್ಜಿಗೆ ಮತ್ತು ಹಣ್ಣಿನ ರಸಕ್ಕೆ ಆದ್ಯತೆ ನೀಡುವುದು ಒಳಿತು.



- ಬಿಳಿ ಬಣ್ಣದ ಹಗುರ ಹತ್ತಿ ಬಟ್ಟೆಯನ್ನು ಧರಿಸಬೇಕು.
- ಬೆಳಗ್ಗೆ 11 ಗಂಟೆ ನಂತರ ಮಕ್ಕಳನ್ನು ಹೊರಗಡೆ ಆಟ ವಾಡಲು ಬಿಡಬಾರದು.
- ಮಧ್ಯಾಹ್ನ 12 ಗಂಟೆಯಿಂದ 3ಗಂಟೆ ನಡುವಿನ ಸಮಯದಲ್ಲಿ ನೇರ ಬಿಸಿಲಿನಿಂದ ದೂರ ಇರಬೇಕು
- ಪ್ರತಿ 2 ಗಂಟೆಗೊಮ್ಮೆ 10 ನಿಮಿಷ ವಿಶ್ರಾಂತಿ ಪಡೆಯಬೇಕು.
- ಕೆಲಸದ ಸ್ಥಳದಲ್ಲಿ ಸಾಕಷ್ಟು ಓಆರ್‌ಎಸ್ ಪ್ಯಾಕೇಟ್‌ಗಳನ್ನು ಹೊಂದಿರಬೇಕು.
- ಇಲ್‌ನೆಸ್ ಕಂಡು ಬಂದಲ್ಲಿ ತಕ್ಷಣ ಸಮೀಪದ ಆರೋಗ್ಯ ಕೇಂದ್ರಕ್ಕೆ ಕಳುಹಿಸಬೇಕು.

ಪ್ರಾಣಿಗಳಿಗೂ ಇಲ್ಲಿ ಕೂಲಿಂಗ್ ವ್ಯವಸ್ಥೆ

ಕಾದು ಕೆಂಡವಾದ ಬೆಳಗಾವಿ ಜಿಲ್ಲೆ!

▸ ಬಾಳಗೌಡ ಪಾಟೀಲ್

◆ **ಬೆಳಗಾವಿ:** ರಾಜ್ಯದಲ್ಲೇ ಆಹ್ಲಾದಕರ ವಾತಾವರಣಕ್ಕೆ ಹೆಸರಾದ ಬೆಳಗಾವಿ ಈಗ ಬಿಸಿಲಿನ ಬೇಗೆಯಲ್ಲಿ ಕಾಯ್ದು ಕೆಂಡವಾಗಿದೆ. ಹಿಂದೆಂದೂ ಕಾಣದ ಬಿಸಿ ವಾತಾವರಣ ಬೆಳಗಾವಿ ನಗರ ಹಾಗೂ ಜಿಲ್ಲೆಯಲ್ಲಿ ದಾಖಲಾಗಿದ್ದು, 40.1 ಡಿಗ್ರಿ ಸೆಲ್ಸಿಯಸ್ ಉಷ್ಣತೆಗೆ ಜನಜೀವನ ಕಂಗೆಟ್ಟಿದೆ. ಇದರಿಂದಾಗಿ ಜನ ಮಧ್ಯಾಹ್ನ ಬೀದಿಗೆ ಇಳಿಯಲು ಭಯಪಡುವ ಸ್ಥಿತಿ ಎದುರಾಗಿದೆ. ಬಿಸಿಲಿನ ತಾಪ ವನ್ಯಪ್ರಾಣಿ ಹಾಗೂ ಜಾನುವಾರುಗಳಿಗೂ ತಟ್ಟಿದೆ.

ಗಡಿ ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಉಷ್ಣಾಂಶವು 40.1 ಡಿಗ್ರಿ ದಾಖಲಾಗಿದೆ. ಏಪ್ರಿಲ್ ಅಂತ್ಯದ ವೇಳೆಗೆ ಬಿಸಿಲಿನ ಝಳ ಇನ್ನೂ ಹೆಚ್ಚುವ ಭೀತಿಯನ್ನು ಹವಾಮಾನ ಇಲಾಖೆ ವ್ಯಕ್ತಪಡಿಸಿದೆ.

ಸಾರ್ವಜನಿಕರು ಹಾಗೂ ರೈತಾಪಿ ವರ್ಗದವರು ತಮ್ಮ ಕೆಲಸ ಕಾರ್ಯಗಳನ್ನು ಹೆಚ್ಚಾಗಿ ಬೆಳಿಗ್ಗೆ 6 ಗಂಟೆಯಿಂದ 12 ಗಂಟೆಯ ಒಳಗಾಗಿಯೇ ಮಾಡಿಕೊಳ್ಳಬೇಕು ಹಾಗೂ ಮಧ್ಯಾಹ್ನ 12 ಗಂಟೆಯ ಒಳಗಾಗಿಯೇ ಮನೆಯಲ್ಲಿ ಇರುವುದಕ್ಕೆ ಪ್ರಯತ್ನ ಮಾಡಬೇಕು, ಆದಷ್ಟು ಹೆಚ್ಚು ತಪ್ಪು ಇರುವ ಜಾಗದಲ್ಲಿ ಇರಬೇಕೆಂದು ಜಿಲ್ಲಾಡಳಿತ ಸೂಚನೆ ನೀಡಿದೆ.

ಬಿಸಿಲಿನ ತಾಪ ವನ್ಯಪ್ರಾಣಿ ಹಾಗೂ ಜಾನುವಾರುಗಳಿಗೂ ತಟ್ಟಿದ್ದು, ಬೆಳಗಾವಿ ತಾಲೂಕು ವ್ಯಾಪ್ತಿಯಲ್ಲಿರುವ ಭೂತರಾಮನಹಟ್ಟಿ ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಪ್ರಾಣಿಗಳು ಬಿಸಿಲಿನ ಬೇಗೆಗೆ ಪರಿತಪಿಸಿವೆ.



ಹುಲಿ, ಸಿಂಹ, ಚಿರತೆ, ಕರಡಿ, ಹೈನಾ ಸೇರಿ ಕಡವೆ, ಚಿಂಕೆಯಂತಹ ಸಸ್ಯಾಹಾರ ಪ್ರಾಣಿಗಳನ್ನು ಸಹ ಬಿರುಬಿಸಿಲು ತಡವರಿಸುವಂತೆ ಮಾಡಿದ್ದು, ಇವುಗಳಿಗೆ ವಾಟರ್ ಸ್ಪ್ರಿಂಕ್ಲಿಂಗ್ ಹಾಗೂ ಮಂಜುಮಿಶ್ರಿತ ನೀರಿನ ಸ್ನಾನದ ವ್ಯವಸ್ಥೆ ಮಾಡಲಾಗಿದೆ. ದೇಹದ ಉಷ್ಣಾಂಶ ಸಮ ಕಾಯ್ದುಕೊಳ್ಳಲು ಎಳನೀರು ಹಾಗೂ ಎಲೆಕ್ಟ್ರೋಲಾಯಿಟ್ಸ್ ಅಯ್ದು ಪ್ರಾಣಿಗಳಿಗೆ ನೀಡಲಾಗುತ್ತಿದೆ. ವನ್ಯವೈದ್ಯರು ಹಾಗೂ ಝೂ ಕ್ಯೂರೇಟರ್ ಅವರ ಮೇಲುಸ್ತುವಾರಿಯಲ್ಲಿ ಪ್ರಾಣಿಗಳ ಚಲನವಲನ ಹಾಗೂ ಆರೋಗ್ಯದ ಬಗ್ಗೆ ನಿಗಾ ಇಡಲಾಗಿದೆ ಎಂದು ಬೆಳಗಾವಿ ಡಿಸಿಎಫ್ ಹಾಗೂ 'ಝೂ' ನಿರ್ದೇಶಕ ಡಾ. ಕ್ರಾಂತಿ ತಿಳಿಸಿದ್ದಾರೆ.

ಎರಡು ತಿಂಗಳಲ್ಲಿ ಮೂವರು ಸಾವು!

ಅಂಜನಾದ್ರಿ ಸುತ್ತಲೂ ಗುಡ್ಡ ಆವರಿಸಿರುವುದರಿಂದ ಬಿಸಿಲ ಝಳ ಹೆಚ್ಚಾಗಿರಲಿದೆ. ಕಳೆದ ಎರಡು ತಿಂಗಳಲ್ಲಿ ಅಂಜನಾದ್ರಿ ಯ 575 ಮೆಟ್ಟಿಲು ಏರಿ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ತೆರಳಿದ ಮೂವರು ಬಿಸಿಲ ಝಳದಿಂದ ಉಸಿರಾಟ ತೊಂದರೆಯಿಂದ ಮೃತಪಟ್ಟಿದ್ದಾರೆ. ಇವರಲ್ಲಿ 17 ವರ್ಷದ ಯುವಕ ಇರುವುದು ಗಮನಾರ್ಹ ವಾಗಿದೆ. ಇದನ್ನು ಗಮನಿಸಿದ ಜಿಲ್ಲಾಡಳಿತ ಅಂಜನಾದ್ರಿ ದರ್ಶನ ಸಮಯ ಬದಲಿಸಿದೆ. ಬೆಳಗ್ಗೆ 11 ರಿಂದ ಸಂಜೆ 4 ಗಂಟೆವರೆಗೆ ದರ್ಶನ ಸಂಪೂರ್ಣ ನಿಷೇಧಿಸಿ ಜಿಲ್ಲಾಧಿಕಾರಿ ಡಾ. ಸುರೇಶ್ ಇಟ್ನಾಳ್ ಆದೇಶ ಹೊರಡಿಸಿದ್ದಾರೆ.

ಕೊಪ್ಪಳ ಜಿಲ್ಲೆಯನ್ನೂ ಬಿಡದ ಬಿಸಿಲ ಆಘಾತ!

▸ ಮಂಜುನಾಥ ಗಂಗಾವತಿ

◆ **ಕೊಪ್ಪಳ:** ಜಿಲ್ಲೆಯಲ್ಲಿ ಬಿಸಿಲಿನ ಝಳಕ್ಕೆ ಜನರು ಹೈರಾಣರಾಗಿದ್ದಾರೆ. ಕೊಪ್ಪಳ ನಗರ, ಗಂಗಾವತಿ ಭಾಗದಲ್ಲಿ ಗುಡ್ಡಗಳು ಆವರಿಸಿರುವುದರಿಂದ ಬಿಸಿಲಿನ ಝಳ ಹೆಚ್ಚಾಗಿ ಪರಿಣಮಿಸಿದೆ.

ಜಿಲ್ಲೆಯಲ್ಲಿ ಮಂಗಳವಾರ 40.9 ಡಿಗ್ರಿ ಸೆ. ಬಿಸಿಲು ದಾಖಲಾಗಿದ್ದು, ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಬೆಳಗ್ಗೆ 9 ಗಂಟೆಗೆ 36 ಡಿಗ್ರಿ ಸೆ. ಬಿಸಿಲು ಇರಲಿದ್ದು, ಮಧ್ಯಾಹ್ನ 1 ಗಂಟೆ ವೇಳೆಗೆ 40.9 ಡಿಗ್ರಿ ಸೆ. ಇರಲಿದೆ. ಇದು ಮಧ್ಯಾಹ್ನ 3 ರವರೆಗೂ ಹೀಗೆ ಮುಂದುವರಿಯಲಿದೆ. 4 ಗಂಟೆ ಬಳಿಕ ಒಂದೊಂದೆ ಡಿಗ್ರಿ ಸೆ. ತಾಪಮಾನ ಕಡಿಮೆಯಾಗುತ್ತಿದೆ.



ಏಪ್ರಿಲ್ ಆರಂಭದಲ್ಲಿ 37 ಡಿಗ್ರಿ ಸೆ. ಇದ್ದ ಬಿಸಿಲು 41ಕ್ಕೆ ತಲುಪಿದೆ. ಮೇ ಮೊದಲ ವಾರದಲ್ಲಿ 43 ಡಿಗ್ರಿ ಸೆ. ಗೆ ತಲುಪಲಿದೆ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ.

ನೀರಿಗಾಗಿ ಜಾನುವಾರ ಪರದಾಟ: ಕುಷ್ಟಗಿ, ಕುಕನೂರು, ಯಲಬುರ್ಗಾ ಭಾಗದಲ್ಲಿ ಜಾನುವಾರಗಳು ನೀರಿಗಾಗಿ ಪರದಾಡುತ್ತಿವೆ. ಈ ಪ್ರದೇಶವು ಮಳೆಯಾಶ್ರಿತವಾಗಿದ್ದು, ನಾಲೆಗಳು ಬತ್ತಿ ಹೋಗಿವೆ. ಬೋರ್ ವೆಲ್ ನೀರೇ ಗತಿಯಾಗಿದೆ.

ತಂಪು ಪಾನಿಯ ಮೊರೆ: ಬಿಸಿಲಿನ ತೀವ್ರತೆಯಿಂದ ಜನರು ತಲೆಗೆ ಟೋಪಿ ಹಾಕಿಕೊಂಡು ಇಲ್ಲವೇ ಬಟ್ಟೆ ಸುತ್ತಿಕೊಂಡು ಸಂಚರಿಸುತ್ತಿರುವ ದೃಶ್ಯಗಳು ಸಾಮಾನ್ಯವಾಗಿವೆ. ದೇಹದ ತಾಪಮಾನ ಕಡಿಮೆ ಮಾಡಲು ತಣ್ಣೀರು, ಜ್ಯೂಸ್ ಹಾಗೂ ಮಜ್ಜಿಗೆ ಸೇವಿಸುವವರ ಸಂಖ್ಯೆ ಹೆಚ್ಚಾಗಿದೆ. ಸ್ಥಳೀಯರ ಪ್ರಕಾರ, ಕಳೆದ ಕೆಲವು ದಿನಗಳಿಂದ ಬಿಸಿಲಿನ ತಾಪಮಾನದಲ್ಲಿ ಏರಿಕೆ ಕಂಡುಬಂದಿದ್ದು, ಮಧ್ಯಾಹ್ನ ವೇಳೆಗೆ ಹೊರಗೆ ಕೆಲಸ ಮಾಡುವುದು ಬಹಳ ಕಷ್ಟಕರವಾಗುತ್ತಿದೆ. ಅಗತ್ಯ ಕೆಲಸವಿದ್ದಾಗ ಮಾತ್ರ ಮನೆಯಿಂದ ಹೊರಹೋಗುತ್ತಿದ್ದಾರೆ.

ಹಾಟ್ ಸ್ಪಾಟ್ ಜಿಲ್ಲೆಗಳು

ಪ್ರಸಕ್ತ ವರ್ಷ ಇದೇ ಅವಧಿಯಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳು ಬಿಸಿಲಿನಿಂದಾಗಿ ಕಾದ ಕಬ್ಬಿಣದಂತಾಗಿದೆ. ವಿಶೇಷವಾಗಿ ಗರಿಷ್ಠ ತಾಪಮಾನ ದಾಖಲಾದ ಜಿಲ್ಲೆಗಳಲ್ಲಿ ಕಲಬುರಗಿ- 45.3, ರಾಯಚೂರು- 43.2, ಕೊಪ್ಪಳ- 42.5, ಬಳ್ಳಾರಿ - 42.1, ಬಾಗಲಕೋಟೆ- 41.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿ ಅಗ್ರ ಸ್ಥಾನದಲ್ಲಿವೆ.

ಕೋಟೆ ನಾಡಿನಲ್ಲಿ ಬಿಸಿಲಿನ ಹೊಡೆತ

▸ ಜಗದೀಶ ಎಂ.ಗಾಣಿಗೇರ

◆ **ಬಾಗಲಕೋಟೆ:** ಕೋಟೆ ನಾಡು ಬಾಗಲಕೋಟೆ ಜಿಲ್ಲೆಯಲ್ಲಿ ಬಿಸಿಲಿನ ಧಗೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಸೂರ್ಯನ ಪ್ರಕರತೆಗೆ ಜನ ತತ್ತರಗೊಂಡಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿದ್ದು ಬಿಸಿಲಿನ ಹೊಡೆತಕ್ಕೆ ಜನ ಹೈರಾಣಾಗಿದ್ದಾರೆ.

ಶನಿವಾರ ಜಿಲ್ಲೆಯಲ್ಲಿ ಬಿಸಿಲಿನ ತಾಪ ಶೇ.40ರಷ್ಟು ಇದ್ದಿದ್ದರಿಂದ ಬೆಳಿಗ್ಗೆ ಹತ್ತು ಗಂಟೆಯಾಗುತಿದ್ದಂತೆ ಬಿಸಿಲಿನ ಧಗೆ ಆರಂಭವಾಗುತ್ತಿದೆ. ಮಧ್ಯಾಹ್ನ 12 ರಿಂದ 4 ಗಂಟೆಯವರೆಗೆ ಉರಿ ಬಿಸಿಲು ಇರುವುದರಿಂದ ಅಕ್ಷರಶಃ ಜನ ನಲುಗಿ ಹೋಗಿದ್ದಾರೆ. ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಏ.20ವರೆಗೆ ರಾಜ್ಯದಲ್ಲಿ ಗರಿಷ್ಠ ಬಿಸಿಲಿನತಾಪಮಾನಹೆಚ್ಚಾಗಲಿದ್ದು ಇದರಲ್ಲಿ ಬಾಗಲಕೋಟೆ ಜಿಲ್ಲೆಯೂ ಕೂಡ ಯಲ್ಲೋ ಅಲರ್ಟ್ ನೀಡಲಾಗಿದೆ.

“ ಬಿಸಿಲು ಇರುವದರಿಂದ ಬಾಯಾರಿಕೆ ಆಗದಿದ್ದರೂ ಆಗಾಗ ನೀರು ಕುಡಿಯಬೇಕು.ಬಿಸಿಲಿನಲ್ಲಿ ಕನ್ನಡಕ, ಛತ್ರಿ, ಟೋಪಿ ಬಳಸಬೇಕು. ಆರೋಗ್ಯದ ಬಗ್ಗೆ ಹೆಚ್ಚಿನ ನಿಗಾ ವಹಿಸಿ.

■ ಸಂಗಪ್ಪ, ಜಿಲ್ಲಾಧಿಕಾರಿ, ಬಾಗಲಕೋಟೆ

ಬಿಸಿಲು ಹೆಚ್ಚಾಗಿದ್ದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ ಎಂಬ ಭಯದಿಂದ ಜನ ಕೂಡ ಮಧ್ಯಾಹ್ನ ರಸ್ತೆಗೆ ಇಳಿಯಲು ಹೆದರುತ್ತಿದ್ದಾರೆ.


ಮಧ್ಯಾಹ್ನವಾಗುತ್ತಿದ್ದಂತೆ ರಸ್ತೆಗಳು ಬಿಕೋ ಎನ್ನುತ್ತಿರುವ ದೃಶ್ಯ ನಗರದಲ್ಲಿ ಕಾಣಸಿಗುತ್ತಿದೆ. ನಗರದ ಹಳೆ ಅಂಚೆ ಕಚೇರಿ ಸಮೀಪ ಇರುವ ತರಕಾರಿ ಮಾರುಕಟ್ಟೆಯಲ್ಲಿ ಮಧ್ಯಾಹ್ನವಾಗುತ್ತಿದ್ದಂತೆ ತರಕಾರಿ ಮಾರುವವರ ಸಂಖ್ಯೆ ಕೂಡ ಕಡಿಮೆಯಾಗಿದೆ.

ವಿಜಯನಗರದಲ್ಲಿ ಹೆಚ್ಚುತ್ತಿದೆ ಸೂರ್ಯನ ಪ್ರಖರ 40 ಡಿಗ್ರಿಯತ್ತ ಸಾಗಿದೆ ಉಷ್ಣಾಂಶ!

▸ ವಿರೇಂದ್ರ ನಾಗಲದಿನ್ನಿ

◆ **ವಿಜಯನಗರ:** ಜಿಲ್ಲೆಯಾದ್ಯಂತ ಬಿಸಿಲಿನ ಪ್ರಖರತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ತಾಪಮಾನ 40 ಡಿಗ್ರಿಯತ್ತ ಸಾಗುತ್ತಿದೆ.

ಈ ಬಾರಿ ಬಿಸಿಲಿನ ತಾಪಮಾನ ದಿನೇ ದಿನೇ ಹೆಚ್ಚುತ್ತಿದೆ. ಬೆಳಿಗ್ಗೆ 8 ಗಂಟೆಯಿಂದಲೇ ಆರಂಭಗೊಳ್ಳುವ ಸೂರ್ಯನ ಶಾಖದಿಂದಾಗಿ ಜನರು ಮನೆಯಿಂದ ಹೊರ ಬರಲು ಹಿಂದೇಟು ಹಾಕುವಂತಾಗಿದೆ. ಸೂರ್ಯ ನೆತ್ತಿ ಮೇಲೆ ಬರುತ್ತಿದ್ದಂತೆ ನಗರ ಪ್ರದೇಶದಲ್ಲಿ ರಸ್ತೆಗಳು ಖಾಲಿಖಾಲಿಯಾಗಿದ್ದರೆ, ಕೃಷಿಕಾಯಕದಲ್ಲಿರುವ ಗ್ರಾಮೀಣ ಜನರು ಮರದ ನೆರಳು ಹುಡುಕುವಂತಾಗಿದೆ.



ಕಳೆದ ಒಂದು ವಾರದಿಂದ ಮಧ್ಯಾಹ್ನ 1 ರಿಂದ 4 ಗಂಟೆ ಮಧ್ಯೆ ದಿನದ ಗರಿಷ್ಠ 37 – 38 ಡಿಗ್ರಿ ಉಷ್ಣಾಂಶ ದಾಖಲಾಗಿದೆ. ಮುಂದಿನ ಎರಡು– ಮೂರು ದಿನಗಳ ಕಾಲ ಇದೇ ರೀತಿಯ ವಾತಾವರಣ ಮುಂದುವರಿಯಲಿದ್ದು, ಸೋಮವಾರದ ನಂತರ 40 ಡಿಗ್ರಿಗಿಂತ ಹೆಚ್ಚು ಉಷ್ಣಾಂಶ ದಾಖಲಾಗುವ ಸಾಧ್ಯತೆಗಳಿವೆ ಎಂದು ಹವಾಮಾನ ವರದಿಯಲ್ಲಿ ಮುನ್ಸೂಚನೆ ನೀಡಿದೆ.

ತಂಪು ಪಾನೀಯಗಳಿಗೆ ಮೊರೆ: ಬಿಸಿಲಿನ ತಾಪದಿಂದ ತಪ್ಪಿಸಿಕೊಳ್ಳಲು ಜನರು ಎಳೆ ನೀರು, ಕಬ್ಬಿನ ರಸ ಹಾಗೂ ಇನ್ನಿತರೆ ತಂಪು ಪಾನೀಯ, ಕಲ್ಲಂಗಡಿ ಸೇರಿದಂತೆ ಹೆಚ್ಚು ನೀರಿನ ಅಂಶವಿರುವ ಹಣ್ಣುಗಳತ್ತ ಜನ ಮುಖ ಮಾಡಿದ್ದಾರೆ.

“ ಹೀಟ್ ಸ್ಟ್ರೋಕ್ ತಡೆಯಲು ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ನೀಡಲಾಗಿದೆ. ಜಿಲ್ಲೆಯ ಎಲ್ಲ ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ 3 ಬೆಡ್, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 2 ಬೆಡ್ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಂದು ಬೆಡ್ ಹೀಟ್ ಸ್ಟ್ರೋಕ್‌ಒಳಗಾದ ರೋಗಿಗಳ ಚಿಕಿತ್ಸೆಗೆ ಕಾಯ್ದಿರಿಸಲಾಗಿದೆ.

■ ಡಾ.ಎಲ್.ಆರ್.ಶಂಕರ್ ನಾಯ್ಕ, ಡಿಎಚ್ ಓ

ಪ್ರಖರ ಬಿಸಿಲಿಗೆ ಗುಮ್ಮಟ ನಗರಿ ತತ್ತರ!

▸ ಪರಶುರಾಮ ಶಿವಶರಣ

◆ **ವಿಜಯಪುರ:** ಗುಮ್ಮಟ ನಗರ ಸೇರಿದಂತೆ ಜಿಲ್ಲೆ ಅಕ್ಷರಶಃ ಕಾದ ಕಾವಲಿಯಂತಾಗುತ್ತಿದ್ದು, ಬೇಸಿಗೆ ಬಿಸಿಲಿನ ತಾಪಕ್ಕೆ ಸಾರ್ವಜನಿಕರು ತತ್ತರಿಸುವಂತಾಗಿದೆ.

ಬೆಳಗ್ಗೆ 7 ಗಂಟೆಗೆ ಎಳೆ ಬಿಸಿಲು ಸೂಸುವ ಸೂರ್ಯ ಅನಂತರ ಪ್ರಖರಗೊಳ್ಳುತ್ತಾನೆ. ಮಟಮಟ ಮಧ್ಯಾಹ್ನವಂತೂ ನೆತ್ತಿಮೇಲೆ ಬಂದು, ರಣಭಯಂಕರವಾಗಿ ಕೆಂಡಕಾರುತ್ತಾನೆ. ಮಧ್ಯಾಹ್ನದ ಈ ಹೊತ್ತಲ್ಲಿ, ನಿಂತರೂ, ಕುಂತರೂ ಬೆವರಿನ ತುಂತುರಿನಿಂದ ಜನರು ಬಳಲುವಂತಾಗಿದೆ. ಸಂಜೆ 6 ಗಂಟೆ ವರೆಗೂ ಬಿಸಲಿನ ಬಿಸಿ ತಟ್ಟುವಂತಾಗಿದೆ. ಬೇಸಿಗೆ ಬಿಸಿಲಿನಿಂದ ಬಸವಳಿದ ಜನರು ಕೂಲರ್, ಫ್ಯಾನ್‌ಗೆ ಮೊರೆ ಹೋಗಿದ್ದಾರೆ.



ನಿಗಿನಿಗಿ ಕೆಂಡದಂತಹ ರಸ್ತೆಗಳು: ಮಧ್ಯಾಹ್ನದ ಉರಿಬಿಸಿಲಿನಲ್ಲಿ ಹೊರಗಡೆ ಬಂದರೆ ಸಾಕು, ಪ್ರಖರ ಬಿಸಿಲು ಜೀವಹಿಂಡುತ್ತದೆ. ನಗರ ಸೇರಿದಂತೆ ಜಿಲ್ಲೆಯ ರಸ್ತೆಗಳಲ್ಲಿ ಕಾಲಿಟ್ಟರೆ ಮೇಲಿಂದ ನೆತ್ತಿಸುಡುವ ಉರಿಬಿಸಿಲು, ಕೆಳಗಡೆ ನಿಗಿನಿಗಿ ಕೆಂಡದಂತಹ ರಸ್ತೆಯಿಂದ ಮೇಲೇಳುವ ಝಳ, ಸುತ್ತಲೂ ಹರಿಡಿ ಬರುವ ಬಿಸಿಗಾಳಿಗೆ ಜನರು ನಲಗುವಂತಾಗಿದೆ.

ಸೆಕೆಯ ಗೂಡಾದ ಮನೆಗಳು: ಪ್ರಖರ ಬಿಸಿಲಿಗೆ ಮನೆಗಳು ಸೆಕೆಯ ಗೂಡಾಗಿ ಪರಿಣಮಿಸುತ್ತಿವೆ. ಫ್ಯಾನ್, ಎಸಿ ಸೇರಿದಂತೆ ಎಂತಹದೇ ಹವಾನಿಯಂತ್ರಣಗಳನ್ನು ಅಳವಡಿಸಿದರೂ, ಬಿಸಿಲಿನ ಧಗೆ ಹಾಗೂ ಸೆಕೆಯಿಂದ ಸಮಾಧಾನ ಸಿಗುತ್ತಿಲ್ಲ. ಮನೆಯಲ್ಲಿರುವ ಜನರು ಪರಿತಪಿಸುವಂತಾಗಿದೆ. ಇನ್ನು ತಗಡಿನ ಮನೆಗಳ ನಿವಾಸಿಗಳ ಪರಿಸ್ಥಿತಿಯಂತೂ ಕೇಳುವುದೇ ಬೇಡ. ಇಂತಹ ನಿವಾಸಿಗಳು ಮಧ್ಯಾಹ್ನದ ವೇಳೆ ತಗಡಿನ ಮನೆಯನ್ನು ತೊರೆದು, ಗಿಡ, ಮರಗಳ ನೆರಳನ್ನು ಅರಿಸುವಂತಾಗಿದೆ.

40 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲು: ಜಿಲ್ಲೆಯಲ್ಲಿ ಮಂಗಳವಾರ 40.0 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದರೆ, ಏ.27 ರಂದು 40.0, ಏ.26 ರಂದು 39.5 ಡಿಗ್ರಿ ಸೆಲ್ಸಿಯಸ್ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಬಳ್ಳಾರಿಯಲ್ಲೂ 41 ಡಿಗ್ರಿ ದಾಟಿದ ತಾಪ!

▸ ವೆಂಕಟೇಶ ದೇಸಾಯಿ

◆ **ಬಳ್ಳಾರಿ:** ಗಣಿ ಜಿಲ್ಲೆಯಲ್ಲಿ ಕಡು ಬೇಸಿಗೆಯಲ್ಲಿ ಬಿಸಿಲಿನ ರಣಕೇಕೆ ಮುಂದುವರೆದಿದ್ದು, 41 ಡಿಗ್ರಿಯಷ್ಟು ತಾಪಮಾನ ದಾಖಲಾಗಿದೆ.

ಬೆಳಿಗ್ಗೆ 11 ಆದರೆ ಸಾಕು, ರಣಬಿಸಿಲಿನ ಪ್ರತಾಪ ಜೋರಾಗುತ್ತಿದ್ದು, ಜನರು ಮನೆಬಿಟ್ಟು ಬಾರದ ಸ್ಥಿತಿ ನಿರ್ಮಾಣವಾಗಿದೆ. ಬೆ.12 ರಿಂದ ಸಂಜೆ 4ರ ವರೆಗೆ ನಗರದ ಪ್ರಮುಖ ರಸ್ತೆಗಳು ಜನರಿಲ್ಲದೇ ಬಿಕೋ ಎನ್ನುತ್ತಿರುವುದು ಕಂಡು ಬರುತ್ತಿದ್ದು, ಬಿಸಿಲಿನ ದಾಹ ತೀರಿಸಿಕೊಳ್ಳಲು ಜನರು ತಂಪು ಪಾನೀಯಗಳಿಗೆ ಮೊರೆ ಹೋಗಿದ್ದಾರೆ.

ಸಹಾಯವಾಣಿ ತೆರೆದ ಜಿಲ್ಲಾಡಳಿತ:

ಬಿಸಿಲಿನ ತಾಪಮಾನ ಏರಿಕೆಯಾಗುತ್ತಿರುವ ಹಿನ್ನೆಲೆ ನಗರ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಕುಡಿವ ನೀರಿನ ಸಮಸ್ಯೆ ಬಿಗಡಾಯಿಸಿದ್ದು, ಈ ಹಿನ್ನೆಲೆ ಜನರ ಅನುಕೂಲಕ್ಕಾಗಿ ಜಿಲ್ಲಾಡಳಿತ ಸಹಾಯವಾಣಿ ಕೇಂದ್ರ ಪ್ರಾರಂಭಿಸಿದೆ. ಕುಡಿಯುವ ನೀರು, ಜಾನುವಾರುಗಳಿಗೆ ಮೇವು, ನೀರು ಸೇರಿದಂತೆ ಇನ್ನಿತರೆ ಸಮಸ್ಯೆಗಳಿಗೆ ಸಂಬಂಧಿಸಿ ನಗರದ ಜಿಲ್ಲಾಧಿಕಾರಿ ಕಚೇರಿಯ ಕಂಟ್ರೋಲ್ ರೂಮ್ ನಲ್ಲಿನ 1077 ಅಥವಾ 08392 277100, ಮೊ.8277888866 ಸಹಾಯವಾಣಿ ಸಂಖ್ಯೆ ಪ್ರಾರಂಭಿಸಿದೆ. ಈಗಾಗಲೇ 90 ಕ್ಕೂ ಹೆಚ್ಚು ಕರೆಗಳು ಬಂದಿದ್ದು, ಜಿಲ್ಲಾಡಳಿತದಲ್ಲಿ ನೊಂದಣಿಯಾಗಿವೆ.

ನೀರಿನ ಕೊರತೆ : ಸಮರ್ಪಕ ಮಳೆ ಕೊರತೆಯಿಂದ ದಿನದಿಂದ ದಿನಕ್ಕೆ ಕುಡಿಯುವ ನೀರಿನ ಸಮಸ್ಯೆ ಬಿಗಡಾಯಿಸಿದೆ. ಗ್ರಾಮೀಣ ಭಾಗಗಳಲ್ಲಿ ಹನಿ ನೀರಿಗೂ ಪರದಾಡುವ ಸ್ಥಿತಿ ಎದುರಾಗಿದ್ದು, ತೀರಾ ಸಮಸ್ಯೆ ಇರುವ 14ಕ್ಕೂ ಹೆಚ್ಚು ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.



“ ಗಣಿ ಜಿಲ್ಲೆಯಲ್ಲಿ ಬೇಸಿಗೆ ವೇಳೆ ಜನರಿಗೆ ನೀರಿನ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಜನರ ಅನುಕೂಲಕ್ಕಾಗಿ ಸಹಾಯವಾಣಿ ಕೇಂದ್ರವನ್ನು ಪ್ರಾರಂಭಿಸಿದ್ದು, ನೀರಿನ ಸಮಸ್ಯೆ ಕಂಡು ಬಂದ ಕೂಡಲೇ ಅಧಿಕಾರಿಗಳು ಭೇಟಿ ನೀಡಿ ಕ್ರಮವಹಿಸಲಿದ್ದಾರೆ. ನೀರಿನ ಸಮಸ್ಯೆ ಬಿಗಡಾಯಿಸಲು ಬಿಡೋಲ್ಲ, ಅಗತ್ಯ ಪರಿಹಾರ ಕಂಡುಕೊಳ್ಳಲಾಗುವುದು.

■ ಕೆ.ನಾಗೇಂದ್ರ ಪ್ರಸಾದ್, ಜಿಲ್ಲಾಧಿಕಾರಿ

ಸಂಪಾದಕೀಯ

ತಾಪಮಾನ ಏರಿಕೆಯ ಸವಾಲು

ವಿಶ್ವದ 100 ಅತ್ಯಧಿಕ ಉಷ್ಣತೆಯ ನಗರಗಳಲ್ಲಿ 95 ನಗರಗಳು ಭಾರತದಲ್ಲೇ ಇವೆಯಂತೆ. ಹಾಗೆಂದು ಅಧ್ಯಯನ ವರದಿಯೊಂದು ಹೇಳಿದೆ. ಖಂಡಿತಕ್ಕೂ ಇದು ಹೆಮ್ಮೆ ಪಡುವ ಸಂಗತಿಯಲ್ಲ. ಬದಲಾಗಿ ಇದು ಆತಂಕಪಡುವ ವಿಚಾರ. ಈಗಾಗಲೆ ದೇಶವು ಅಧಿಕ ಉಷ್ಣತೆಯನ್ನು ಅನುಭವಿಸುವ ಮೂಲಕ ಪರಿಸ್ಥಿತಿಯ 'ಖಾರ'ವನ್ನು ಎದುರಿಸುತ್ತಿದೆ. ಈ ಬಾರಿ ಬೇಸಿಗೆಯು ಬಲುಬೇಗನೆ ದೇಶವನ್ನು ಆವರಿಸಿಬಿಟ್ಟಿರುವುದಂತೂ ಜನಜೀವನವನ್ನೆ ಅಸಹನೀಯಗೊಳಿಸಿದೆ. ಉತ್ತರ ಭಾರತವಷ್ಟೇ ಅಲ್ಲದೆ ದಕ್ಷಿಣ ಭಾರತ ಕೂಡಾ ಬೇಸಿಗೆಯ ಉರಿಯನ್ನು ಅನುಭವಿಸುತ್ತಿದೆ. ಏಪ್ರಿಲ್ ತಿಂಗಳಲ್ಲೇ ದೇಶವು ಅಧಿಕ



ತಾಪಮಾನವನ್ನು ಎದುರಿಸುತ್ತಿದ್ದು, ಏಪ್ರಿಲ್ 24, ಕಳೆದ ನಾಲ್ಕು ವರ್ಷಗಳಲ್ಲೇ ಅತ್ಯಂತ ಉಷ್ಣತೆಯ ದಿನವಾಗಿ ದಾಖಲಾಗಿದೆ. ಬಿರುಬೇಸಿಗೆಯ ಅವಧಿ ಇನ್ನಷ್ಟೆ ಬರಬೇಕಿದ್ದು, ಆಗಿನ ಪರಿಸ್ಥಿತಿ ಹೇಗಿರಬಹುದೆಂಬ ಆತಂಕವು ಎಲ್ಲರನ್ನು ಕಾಡುತ್ತಿರುವುದು ಸುಳ್ಳಲ್ಲ. ಈ ಬಾರಿ ಎಲ್‌ನಿನೋ ಪರಿಣಾಮ ಇರುವುದರಿಂದ ಸಾಮಾನ್ಯಕ್ಕಿಂತ ಹೆಚ್ಚೇ ಉಷ್ಣತೆ ಇರಬಹುದೆಂದು ಹವಾಮಾನ ತಜ್ಞರು ಎಚ್ಚರಿಸಿದ್ದು ಅದರ ಸಂಕೇತಗಳು ಈಗಾಗಲೇ ತೋರಿಬರುತ್ತಿರುವಂತಿವೆ. ಎಲ್‌ನಿನೋ ಪರಿಣಾಮದಿಂದಾಗಿ ಈ ಬಾರಿ ಮುಂಗಾರು ಮಳೆ ಕೂಡಾ ಕಡಿಮೆಯಾಗಬಹುದೆಂದು ಹೇಳಲಾಗುತ್ತಿದ್ದು, ಅದು ಇನ್ನೂ ಕಳವಳಕಾರಿ ವಿಚಾರವಾಗಿದೆ.

ಕಳೆದ ಕೆಲವು ವರ್ಷಗಳಿಂದ ಅಧಿಕ ಉಷ್ಣಹವೆ ವ್ಯಾಪಿಸುತ್ತಿರುವ ವಿದ್ಯಮಾನ ಹೆಚ್ಚುತ್ತಿದೆ. ಜಾಗತಿಕ ಪರಿಸರ ನಾಶ, ತಾಪಮಾನ ಏರಿಕೆ, ಹವಾಮಾನ ಬದಲಾವಣೆ ಇದಕ್ಕೆಲ್ಲ ಕಾರಣವಾಗಿರುವುದು ಎಲ್ಲರಿಗೂ ತಿಳಿದಿರುವುದೆ. ಈ ಬಾರಿ ಉಷ್ಣತೆಯು ಇನ್ನೂ ಅಧಿಕವಿರುವುದರಿಂದ ಹಾಗೂ ಮಳೆ ಕಡಿಮೆಯಾಗುವ ಸಾಧ್ಯತೆಗಳಿರುವುದರಿಂದ ಭಾರತವು ಸಂಭವನೀಯ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಲು ಸಜ್ಜಾಗಬೇಕಾಗಿರುವುದು ಅಗತ್ಯವಾಗಿದೆ. ಹಲವಾರು ರಾಜ್ಯಗಳು ಬಯಲಿನಲ್ಲಿ ಕೂಲಿನಾಲಿ ಮಾಡುವಂತಹ ಅವಧಿಯನ್ನು ಕಡಿಮೆ ಮಾಡುವಂತಹ, ಶಾಲಾ ಅವಧಿಯನ್ನು ಬದಲಿಸುವಂತಹ ಕ್ರಮಗಳನ್ನು ಕೈಗೊಂಡಿರುವುದು ಸ್ವಾಗತಾರ್ಹ ನಡೆ. ಜನರಿಗೆ ನೀರಿನ ಕೊರತೆ ಬಾಧಿಸದಂತೆ ಸೂಕ್ತ ಕ್ರಮ ತೆಗೆದುಕೊಳ್ಳುವುದೂ ಅಗತ್ಯವಾಗಿದೆ. ನಿರೀಕ್ಷಿಸಿದಂತೆ ಎಲ್‌ನಿನೋ ಮುಂಗಾರಿನ ಮೇಲೆ ಪ್ರತಿಕೂಲ ಪರಿಣಾಮ ಬೀರಿದರೆ ಅದು ದೇಶದ ಜನಜೀವನದ ಮೇಲೆ, ಆರ್ಥಿಕತೆಯ ಮೇಲೆ ದೊಡ್ಡ ದುಷ್ಪರಿಣಾಮ ಬೀರಬಲ್ಲುದು. ದೇಶವ್ಯಾಪಿಯಾಗಿ ನೀರಿನ ಸಮರ್ಥ ನಿರ್ವಹಣೆ, ಪರಿಸರಸಂವೇದಿ ಕೃಷಿಗೆ ಆದ್ಯತೆ ಮುಂತಾದ ಕ್ರಮಗಳನ್ನು ತೆಗೆದುಕೊಳ್ಳುವ ಆವಶ್ಯಕತೆ ಮೂಡಿಬಂದಿದೆ.

ನೀರಿಳಿಯದ ಗಂಟಲೊಳಗೆ ಕಡುಬು ತುರುಕಿದಂತೆ



ದಿಢೀರನೆ ಹೊಸ ಚರ್ಚೆಯೊಂದು ಹುಟ್ಟಿಕೊಂಡಿದೆ. ಅದು ದೊಡ್ಡ ಹೋರಾಟವಾಗಿ ರೂಪುಗೊಂಡರೂ ಆಶ್ಚರ್ಯವಿಲ್ಲ. ಶಿವಮೊಗ್ಗ ಸಂಸದರಾದ ಬಿ.ವೈ. ರಾಘವೇಂದ್ರ ಅವರು ಶಿವಮೊಗ್ಗ ಜಿಲ್ಲೆಯಲ್ಲಿ ಅಣುವಿದ್ಯುತ್ ಸ್ಥಾವರದ ಬಗ್ಗೆ ಜನರು ಆತಂಕಪಡುವ ಅಗತ್ಯವಿಲ್ಲ. ಪರಿಸರಕ್ಕೆ ಹಾನಿಯಾಗುವ ಯಾವುದೇ ಯೋಜನೆಗೆ ನಮ್ಮ ವಿರೋಧವಿದೆ. ಸಾಗರ ತಾಲೂಕಿನ ಬೇಸೂರು ಗ್ರಾಮದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪನೆ ಬಗ್ಗೆ ಗ್ರಾಮಸ್ಥರು ಆತಂಕಕ್ಕೊಳಗಾಗಿದ್ದಾರೆ. ಸಾಧಕ-ಬಾಧಕ ಚರ್ಚಿಸದೆ ಯೋಜನೆ ಜಾರಿ ಮಾಡಲಾಗುವುದಿಲ್ಲ ಎಂದಿದ್ದಾರೆ.

ಈ ಹೇಳಿಕೆಯ ನಂತರ ಏಪ್ರಿಲ್ 27ರಂದು ಸಾಗರದಲ್ಲಿ ಈ ಯೋಜನೆ ವಿರೋಧಿಸುವ ಕುರಿತು ಒಂದು ಸಭೆ ಕೂಡ ನಡೆದಿದೆ. ದಿಢೀರನೆ ಇದೆಲ್ಲಿಂದ ಅಣುವಿದ್ಯುತ್ ಸ್ಥಾವರ ಯೋಜನೆ ಬಂತು ಎಂಬುದು ಸದ್ಯಕ್ಕೆ ಅಚ್ಚರಿಯ ಸಂಗತಿಯಾಗಿದೆ. ಆದರೆ ಈ ಸುದ್ದಿ ಸಂಪೂರ್ಣ ಸುಳ್ಳೂ ಅಲ್ಲ. ದೇಶಾದ್ಯಂತ ಅಣುವಿದ್ಯುತ್ ಉತ್ಪಾದಿಸುವ ಅಟೊಮಿಕ್ ಎನರ್ಜಿ ಡಿಪಾರ್ಟ್‌ಮೆಂಟ್‌ನವರು ರಾಜ್ಯದ ಕಂದಾಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದು, ಸಾಗರದ ಬೇಸೂರು ಗ್ರಾಮದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪನೆ ಸಾಧ್ಯಾಸಾಧ್ಯತೆ ಕುರಿತು ಮಾಹಿತಿ ಕೇಳಿದ್ದಾರೆ. ಕಂದಾಯ ಕಾರ್ಯದರ್ಶಿಯವರು ಶಿವಮೊಗ್ಗ ಜಿಲ್ಲಾಧಿಕಾರಿಗೆ ಈ ಬಗ್ಗೆ ಮಾಹಿತಿ ಕೇಳಿದ್ದರು.

ಜಿಲ್ಲಾಧಿಕಾರಿಯವರ ಸೂಚನೆಯಂತೆ ಅಧಿಕಾರಿಗಳು ಬೇಸೂರು ಗ್ರಾಮಕ್ಕೆ ತೆರಳಿ ಸಣ್ಣ ಮಟ್ಟದ ಸಮೀಕ್ಷೆ ನಡೆಸಿ ಬಂದಿದ್ದಾರೆ. ಇದರಿಂದಾಗಿ ಗ್ರಾಮಸ್ಥರಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪನೆ ಕುರಿತು ಆತಂಕ ಶುರುವಾಗಿದೆ. ಒಂದು ಅಣುವಿದ್ಯುತ್ ಸ್ಥಾವರ ಸ್ಥಾಪಿಸಬೇಕೆಂದರೆ 1000 ಎಕರೆ ಜಮೀನು ಬೇಕು. ಅಷ್ಟು ಜಾಗದ ಲಭ್ಯತೆ ಕುರಿತು ಅಟೊಮಿಕ್ ಎನರ್ಜಿ ಇಲಾಖೆ ವಿಚಾರಿಸಿರುವುದು ಕೂಡ ನಿಜ. ಅಲ್ಲಿಗೆ ಇದು ಗಾಳಿ ಸುದ್ದಿಯಂತೂ ಅಲ್ಲ ಎಂಬುದು ಸ್ಪಷ್ಟ.

ಸಾಗರದ ತಾಲೂಕಿನಿಂದ ಸಿಗಂದೂರಿಗೆ ಹೋಗುವ ಮಾರ್ಗದಲ್ಲಿ ಹುಲಿದೇವರ ಬನ ಎಂಬ ಪ್ರದೇಶದ ಸಮೀಪವೇ ಬೇಸೂರು ಗ್ರಾಮವಿದೆ. ಈ ಪ್ರದೇಶವೆಲ್ಲ ಹೆಚ್ಚುಕಮ್ಮಿ ಅರಣ್ಯ. ಅಲ್ಲೇ ಅರಣ್ಯಗಳ ನಡುವೆ ಸಣ್ಣ ಸಣ್ಣ ಊರುಗಳಿವೆ. ಇದು ಲಿಂಗನಮಕ್ಕಿ ಅಣೆಕಟ್ಟಿನ ಹಿನ್ನೀರ ಪ್ರದೇಶಗಳೂ ಹೌದು. ಅಣುವಿದ್ಯುತ್ ಸ್ಥಾವರದಲ್ಲಿ ಬಿಸಿ ನಿರ್ವಹಿಸಲು ಅಪಾರ ಪ್ರಮಾಣದ ನೀರಿನ ಅಗತ್ಯವೂ ಇರುತ್ತದೆ.

ಇದೇ ಲಿಂಗನಮಕ್ಕಿ ಅಣೆಕಟ್ಟಿನ ನೀರನ್ನು ಮರುಬಳಕೆ ಮಾಡುವ ನಿಟ್ಟಿನಲ್ಲಿ ತಲಕಳಲೆ ಅಣೆಕಟ್ಟು ಮತ್ತು ಗೇರುಸೊಪ್ಪ ಅಣೆಕಟ್ಟಿನ ನಡುವೆ ಪಂಪ್ಡ್ ಸ್ಟೋರೇಜ್ ವಿದ್ಯುತ್ ಉತ್ಪಾದನೆ ಯೋಜನೆ ಕೂಡ ಪ್ರಸ್ತಾವನೆಯಲ್ಲಿದೆ. ಗೇರುಸೊಪ್ಪ ಡ್ಯಾಂನಿಂದ 0.35 ಟಿಎಂಸಿ ನೀರನ್ನು ಮೇಲ್ಭಾಗದಲ್ಲಿರುವ ತಲಕಳಲೆ ಅಣೆಕಟ್ಟಿಗೆ ಮರುಪೂರಣ ಮಾಡಿ, ಆ ನೀರನ್ನು ಮತ್ತೆ ಗೇರುಸೊಪ್ಪ ಅಣೆಕಟ್ಟಿಗೆ ಹರಿಸುವ ಮಾರ್ಗದಲ್ಲಿ 2000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ ಜಾರಿಯಾಗುವ ಹಂತದಲ್ಲಿದೆ.

ಈ ಯೋಜನೆಗಾಗಿ ಒಟ್ಟು 54.155 ಹೆಕ್ಟೇರ ಅರಣ್ಯ ನಾಶವಾಗುತ್ತದೆ. ಇದಕ್ಕಾಗಿ ಸಮೀಕ್ಷೆ, ಯೋಜನೆಯ ವಿಸ್ತೃತ ವರದಿ ಎಲ್ಲವೂ ಸಿದ್ಧವಾಗಿದೆ.

ಈ ಯೋಜನೆಗಾಗಿ ಯಾವುದೇ ಹೊಸ ಅಣೆಕಟ್ಟು ನಿರ್ಮಾಣ ಮಾಡಲಾಗುತ್ತಿಲ್ಲ. ಈಗಾಗಲೇ ಅಸ್ತಿತ್ವದಲ್ಲಿರುವ ಅಣೆಕಟ್ಟುಗಳನ್ನು ಬಳಸಿಕೊಂಡೇ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ತುಂಬಾ ಹೆಚ್ಚುವರಿ ನೀರಿನ ಅಗತ್ಯವೂ ಇಲ್ಲ. ಸಾಕಷ್ಟು ಜನ ಶರಾವತಿ ನೀರಿನ ಹರಿವೇ ನಿಂತು ಹೋಗುತ್ತದೆ, ನಮ್ಮ ಶರಾವತಿಯನ್ನು ಕಾಪಾಡೋಣ ಎಂದೆಲ್ಲ



ಭಾವನಾತ್ಮಕವಾಗಿ ಮಾತನಾಡಿದ್ದನ್ನು ಕೂಡ ನಾವು ನೋಡಿದ್ದೇವೆ. ಆದರೆ ಪಂಪ್ಡ್ ಸ್ಟೋರೇಜ್ ವಿದ್ಯುತ್ ಯೋಜನೆಗೆ ಕೇವಲ 0.35 ಟಿಎಂಸಿ ನೀರನ್ನು ಮಾತ್ರ ಅದೂ ಒಮ್ಮೆಗೆ ಮಾತ್ರ ಮೇಲೆತ್ತಲಾಗುತ್ತದೆ. ನಂತರ ಅದೇ ನೀರು ತಲಕಳಲೆ ಅಣೆಕಟ್ಟಿನಿಂದ ಗೇರುಸೊಪ್ಪ ಅಣೆಕಟ್ಟಿಗೆ ಬರುತ್ತದೆ. ಮತ್ತೆ ಅದೇ ನೀರನ್ನು ತಲಕಳಲೆ ಅಣೆಕಟ್ಟಿಗೆ ಮೇಲೆತ್ತಲಾಗುತ್ತದೆ.

ಪಂಪ್ಡ್ ಸ್ಟೋರೇಜ್ ಯೋಜನೆಗೆ ಯಾಕಿಷ್ಟು ಕಡಿಮೆ ಪ್ರಮಾಣದ ಅರಣ್ಯ ನಾಶವಾಗುತ್ತದೆಯೆಂದರೆ ಈ ಯೋಜನೆ ಸಂಪೂರ್ಣ ಭೂಗತವಾಗಿರಲಿದೆ. ಈ ಯೋಜನೆಗೆ ಭೂಮಿಯ ಒಳಗೇ ಪೈಪ್‌ಗಳನ್ನು ಅಳವಡಿಸಲಾಗುತ್ತದೆ. ವಿದ್ಯುತ್ ಉತ್ಪಾದನೆಯಾಗುವುದು ಕೂಡ ಭೂಮಿಯ ಒಳಗೇ. ಸಂಪೂರ್ಣ ಯೋಜನೆಗೆ ಹಾಗೂ ವಿದ್ಯುತ್ ಉತ್ಪಾದನೆ ಸ್ಥಳಕ್ಕೆ ಸಿಬ್ಬಂದಿ ತೆರಳಲು ಸೇರಿದಂತೆ ಒಟ್ಟು ನಾಲ್ಕು ಕಡೆ ಸುರಂಗಗಳ ಆರಂಭಕ್ಕೆ ಮಾತ್ರ ಭೂಮಿಯ ಮೇಲ್ಭಾಗದ ಜಾಗ ಬಳಕೆಯಾಗುತ್ತದೆ. ಇಷ್ಟೆಲ್ಲ ದೊಡ್ಡಮಟ್ಟದ ಕೆಲಸ ನಡೆಯುವಾಗ ಪರಿಸರ ಹಾನಿಯಾಗುವುದೇ ಇಲ್ಲ ಎಂದು ಹೇಳಲಾಗುವುದಿಲ್ಲ. ಅಷ್ಟು ಪ್ರಮಾಣದ ಸುರಂಗಗಳನ್ನು ತೋಡಿದಾಗ, ಅಷ್ಟು ಪ್ರಮಾಣದ ಮಣ್ಣನ್ನು ಸಾಗಿಸಬೇಕು, ಯಂತ್ರೋಪಕರಣಗಳನ್ನು ತರಬೇಕು. ಇದನ್ನೆಲ್ಲ ಮಾಡುವಾಗ ಪರಿಸರಕ್ಕೆ ಖಂಡಿತ ಧಕ್ಕೆಯಾಗುತ್ತದೆ. ಆದರೆ ಕೆಲಸ ಮುಗಿದ ನಂತರ ಐದಾರು ವರ್ಷಗಳಲ್ಲಿ ಪರಿಸರ ಮತ್ತೆ ಮೊದಲಿನಂತೆ ಆಗಲು ಅವಕಾಶವಿದೆ. ಯಾಕೆಂದರೆ ಒಮ್ಮೆ ಸುರಂಗ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ಅಲ್ಲಿ ಯಾವ ಚಟುವಟಿಕೆಯೂ ಇರುವುದಿಲ್ಲ. ಎಲ್ಲವೂ ಭೂಮಿಯ ಒಳಗೆ ನಡೆಯುತ್ತಿರುತ್ತದೆ.

ಹೀಗಿದ್ದರೂ ಈ ಯೋಜನೆಗೆ ಸಾಕಷ್ಟು ವಿರೋಧ ವ್ಯಕ್ತವಾಗುತ್ತಿದೆ. ಪಶ್ಚಿಮ ಘಟ್ಟದಂತಹ ಸೂಕ್ಷ್ಮ ಪರಿಸರದ ಪ್ರದೇಶದಲ್ಲಿ ಈ ಯೋಜನೆ ಬೇಡ ಎಂಬ ವಾದವಿದೆ. ಈಗಾಗಲೇ ನಡೆದ ಎರಡು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮಗಳು ವಿಫಲವಾಗಿವೆ.

ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಯೋಜನೆಗೆ 133 ಎಕರೆ ಅರಣ್ಯ ಪ್ರದೇಶ ಬೇಕಿದ್ದರೆ, ಅಣುವಿದ್ಯುತ್ ಸ್ಥಾವರ ಸ್ಥಾಪನೆಗೆ 1000 ಎಕರೆ ಪ್ರದೇಶ ಬೇಕು. 133 ಎಕರೆಗೇ ತಕರಾರು ತೆಗೆದವರು, 1000 ಎಕರೆ ಅರಣ್ಯ ಪ್ರದೇಶ ಸುಮ್ಮನೆ ಕೊಡಲು ಸಾಧ್ಯವೆ?

ಇನ್ನು ಅಣುವಿದ್ಯುತ್ ಸ್ಥಾವರ ಅಪಾಯಕಾರಿಯೇ ಎಂದು ಪ್ರಶ್ನಿಸಿದರೆ ಹೌದು ಮತ್ತು ಇಲ್ಲ ಎಂಬ ಎರಡೂ ಉತ್ತರ ನೀಡಬೇಕಾಗುತ್ತದೆ. ಯಾಕೆಂದರೆ ಉತ್ತರ ಕನ್ನಡ ಜಿಲ್ಲೆಯ ಕೈಗಾ ಸೇರಿದಂತೆ ದೇಶದಲ್ಲಿ ಒಟ್ಟು 9 ರಾಜ್ಯಗಳಲ್ಲಿ ಅಣುವಿದ್ಯುತ್ ಸ್ಥಾವರಗಳಿವೆ. ಒಟ್ಟು 25 ರಿಯಾಕ್ಟರ್‌ಗಳು ಕೆಲಸ ಮಾಡುತ್ತಿವೆ. ದೇಶದಲ್ಲಿ 8,880 ಮೆಗಾ ವ್ಯಾಟ್ ವಿದ್ಯುತ್ತನ್ನು ಅಣು ಸ್ಥಾವರಗಳಿಂದಲೇ ಉತ್ಪಾದನೆ ಮಾಡಲಾಗುತ್ತಿದೆ. ಕೈಗಾ ಸೇರಿದಂತೆ ಎಲ್ಲೂ ಅಣುವಿದ್ಯುತ್ ಸ್ಥಾವರಗಳಿಂದ ಅಪಾಯವಾದ, ಸಮಸ್ಯೆ ಸೃಷ್ಟಿಯಾದ ವರದಿಗಳಿಲ್ಲ. ಅಣುವಿದ್ಯುತ್ ಸ್ಥಾವರದ ಒಳಗೆ ಕೆಲಸ ಮಾಡುವ ಸಿಬ್ಬಂದಿಗೆ, ವಿಜ್ಞಾನಿಗಳಿಗೆ ಆರೋಗ್ಯ ಸಮಸ್ಯೆ ಕಾಣಿಸಿಕೊಂಡ ಉದಾಹರಣೆಗಳಿವೆ. ಆದರೆ ಅದರ ಸಮೀಪದ ಊರುಗಳಲ್ಲಿ ವಾಸವಾಗಿರುವವರಿಗೆ ತೊಂದರೆಯಾದ ಉದಾಹರಣೆಗಳು ಕಡಿಮೆ. ಈ ದೃಷ್ಟಿಯಿಂದ ನೋಡಿದರೆ ಇವುಗಳಿಂದ ಅಪಾಯವಿಲ್ಲ.

ಆದರೆ ಯಾವುದಾದರೂ ಕಾರಣಕ್ಕೆ ಅಣುವಿದ್ಯುತ್ ಸ್ಥಾವರಕ್ಕೆ ಹಾನಿಯಾದರೆ, ಆಗ ಮಾತ್ರ ಇದರ ಅಪಾಯ ಅಸುಪಾಸಿನ ಊರುಗಳನ್ನು ಮಾತ್ರವಲ್ಲ, ಅದರಿಂದ ದೂರವಿರುವ ಜನರ ಮೇಲೂ ದೀರ್ಘಕಾಲದ ಪರಿಣಾಮಗಳನ್ನು ಬೀರುತ್ತದೆ. ಜಪಾನ್‌ನಲ್ಲಿ ನಡೆದ ದುರಂತದ ನೈಜ ಘಟನೆಗಳನ್ನು ಆಧರಿಸಿದ ವೆಬ್ ಸಿರೀಸ್ ಒಂದಿದೆ. ಅದನ್ನು ನೋಡಿದರೆ ನಮ್ಮ ಊರಿನ ಹತ್ತಿರದಲ್ಲೆಲ್ಲೂ ಅಣುವಿದ್ಯುತ್ ಸ್ಥಾವರ ಸ್ಥಾಪಿಸಲು ಜನರು ಯಾವ ಕಾರಣಕ್ಕೂ ಅವಕಾಶ ನೀಡಲು ಸಾಧ್ಯವೇ ಇಲ್ಲ ಅನ್ನುವ ಹಾಗಿದೆ. ಅದರಲ್ಲೂ ಲಿಂಗನಮಕ್ಕಿಯಂತಹ ದೊಡ್ಡ ಅಣೆಕಟ್ಟಿನ ಹಿನ್ನೀರಿನಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪನೆಯಾದರೆ, ದುರದೃಷ್ಟವಶಾತ್ ಅಣೆಕಟ್ಟಿನ ನೀರು ಅಣು ವಿಕಿರಣಕ್ಕೆ ಒಳಗಾದರೆ, ಅದರ ಪರಿಣಾಮಗಳನ್ನು ಬಹುಶಃ ನಾವ್ಯಾರೂ ಊಹಿಸಿಕೊಳ್ಳಲೂ ಸಾಧ್ಯವಿಲ್ಲವೇನೊ.

ಪಶ್ಚಿಮ ಘಟ್ಟದ ನಿವಾಸಿಗಳಾದ ನಮಗೆ ಪಂಪ್ಡ್ ಸ್ಟೋರೇಜ್‌ನ ನೀರೇ ಗಂಟಲಲ್ಲಿ ಇಳಿಯುತ್ತಿರಲಿಲ್ಲ. ಹೀಗಿರುವಾಗ ಈಗ ಅಣು ವಿದ್ಯುತ್ ಸ್ಥಾವರವೆಂಬ ಕಡುಬು ತುರುಕುವ ಯತ್ನ ನಡೆದಂತೆ ಭಾಸವಾಗುತ್ತಿದೆ. ನೀರಿಳಿಯದ ಗಂಟಲಲ್ಲಿ ಕಡುಬು ಇಳಿದೀತೆ?

ಸಹೃದಯರ ಲಕ್ಷಣಗಳು

ಸ್ವಚ್ಛತಾ ತ್ಯಾಗಿತಾ ಶೌರ್ಯಂ ಸಮಾನಸುಖದುಃಖತಾ।
ಅನುರಾಗಶ್ಚ ದಾಕ್ಷಿಣ್ಯಂ ಸತ್ಯಂ ಶೌಚಂ ಸುಹೃದ್ಗುಣಾಃ॥ -ಕರ್ನಾಟಕ ಪಂಚತಂತ್ರ

ಸ್ವಚ್ಛತೆ, ತ್ಯಾಗ, ಶೌರ್ಯ, ಸಮಾನವಾದ ಸುಖದುಃಖ, ಸ್ನೇಹ, ದಾಕ್ಷಿಣ್ಯ, ಸತ್ಯ, ಶೌಚ ಇವು ಮಿತ್ರಗುಣಗಳು -ಎಂಬುದು ಶ್ಲೋಕಾರ್ಥ.

ಉತ್ತಮ ಗೆಳೆಯರ ಲಕ್ಷಣಗಳ ಕುರಿತು ಸಾಕಷ್ಟು ಜನರು ಹೇಳಿದ್ದಾರೆ. ನೂರಾರು ಸುಭಾಷಿತಗಳು ಸನ್ಮಿತ್ರರ ಕುರಿತಾಗಿ ಹೇಳಿವೆ. ಬದುಕಿನಲ್ಲಿ ಭರವಸೆ ತುಂಬುವಲ್ಲಿ ಮಿತ್ರರ ಪಾತ್ರ ಬಹುದೊಡ್ಡದು. ಅಷ್ಟೇ ಅಲ್ಲ, ಅನಿವಾರ್ಯ ಕೂಡ. ಇದರ ಮಹತ್ವವನ್ನು ಮಿತ್ರರಿಲ್ಲದವರ ಪಾಡನ್ನು ನೋಡಿ ತಿಳಿಯಬಹುದು. ಜೀವನದಲ್ಲಿ ನೆಮ್ಮದಿಯ ಕ್ಷಣಗಳನ್ನು ಅನುಭವಿಸುವುದಕ್ಕೆ ಆತ್ಮೀಯ ಸ್ನೇಹಿತರು ಇರಬೇಕು. ಎಲ್ಲ ಸ್ನೇಹಿತರೂ ಆತ್ಮೀಯರಲ್ಲ, ಬೇರೆ ಬೇರೆ ಕಾರಣಗಳಿಂದಾಗಿ ಸ್ನೇಹವಾಗುತ್ತದೆ. ತಮ್ಮ ತಮ್ಮ



ಲಾಭಕ್ಕಾಗಿ ಸ್ನೇಹ ಮಾಡುವವರಿದ್ದಾರೆ. ಅವರು ತಮಗೆ ಸಿಗಬೇಕಾದುದು ಸಿಕ್ಕಮೇಲೆ ಮಾಯವಾಗಿಬಿಡುತ್ತಾರೆ. ಇಂಥವರನ್ನು ನಂಬಿದರೆ ನಷ್ಟವೇ ಗತಿ. ಗೆಳೆತನ ಬೆಳೆಸುವಾಗ ಗುಣ, ನಡತೆ, ಸ್ವಭಾವಗಳನ್ನು ಪರೀಕ್ಷಿಸಿ ಮುಂದುವರಿಯಬೇಕು.

ಗೆಳೆತನವನ್ನು ಮುಂದುವರಿಸಬೇಕೆ, ಬೇಡವೇ, ಮುಂದುವರಿಸುವುದಾದರೆ ಯಾವೆಲ್ಲ ಗುಣಗಳನ್ನು ಗುರುತಿಸಿಕೊಳ್ಳಬೇಕು ಎಂಬುದನ್ನು ಈ ಶ್ಲೋಕದಲ್ಲಿ ಹೇಳಲಾಗಿದೆ. ಅವುಗಳನ್ನು ಸ್ವಚ್ಛತೆ, ತ್ಯಾಗ, ಶೌರ್ಯ, ಸಮಾನ ಸುಖ-ದುಃಖಗಳು, ಸ್ನೇಹ, ದ್ರಾಕ್ಷಿಣ್ಯ, ಸತ್ಯ ಮತ್ತು ಶುದ್ಧತೆ ಎಂದು ಉಲ್ಲೇಖಿಸಲಾಗಿದೆ.

ಉತ್ತಮಸ್ನೇಹಿತನೆನಿಸಬೇಕಾದರೆ ಅವನ ಮನಸ್ಸು ವಾಕ್, ಶರೀರಶುದ್ಧವಾಗಿರಬೇಕು. ವಿಶ್ವಾಸಾರ್ಹತೆಗೆ ಇವೇ ಕಾರಣ. ಇವುಗಳನ್ನು ಗುರುತಿಸಲು ಸಾಧ್ಯವಾದರೆ ಮೈತ್ರಿಗೆ ಮನಸ್ಸು ಮಾಡಬಹುದು. ತ್ಯಾಗ ಮನೋಭಾವ ಸನ್ಮಿತ್ರರ ಮತ್ತೊಂದು ಲಕ್ಷಣ. ಮಿತ್ರನ ನೋವು ನಲಿವುಗಳಲ್ಲಿ ತ್ಯಾಗಭಾವನೆಯನ್ನು ತೋರಿಸುವವನನ್ನು ಸನ್ಮಿತ್ರನೆಂದು ಒಪ್ಪಿಕೊಳ್ಳಬಹುದು. ಗೆಳೆಯನು ಆಪತ್ತಿಗೆ ಒಳಗಾದಾಗ ಧೈರ್ಯ ತೋರಿ, ಶೌರ್ಯ ಪ್ರದರ್ಶಿಸಿ, ಆಪತ್ತಿನಿಂದ ಪಾರು ಮಾಡುವವನು ಗೆಳೆತನಕ್ಕೆ ಯೋಗ್ಯನಾದವನು. ಸನ್ಮಿತ್ರನೆನಿಸಿಕೊಂಡವನು ಹೀಗಿರಬೇಕು. ಆಪತ್ತು ಬಂದಾಗ ಬೆನ್ನು ಹಾಕಿ ಸಾಗುವವನು ಸನ್ಮಿತ್ರನಾಗಲು ಸಾಧ್ಯವಿಲ್ಲ.

ಆತ್ಮೀಯನ ಸುಖ ದುಃಖಗಳಲ್ಲಿ ಮನಃಪೂರ್ವಕವಾಗಿ ಸಮರ್ಪಿಸಿಕೊಳ್ಳುವವನು ನಿಜಕ್ಕೂ ಸ್ನೇಹಕ್ಕೆ ಅರ್ಹನಾದವನು. ಸುಖದಲ್ಲಿ ಜತೆಗಿದ್ದು, ದುಃಖದಲ್ಲಿ ದೂರ ಸಾಗುತ್ತಾನೆ ಎಂದಾದರೆ ಅವರಿಂದ ದೂರ ಇರುವುದೇ ಒಳ್ಳೆಯದು. ಯಾವುದೇ ಲಾಭ ನಷ್ಟಗಳ ಲೆಕ್ಕಾಚಾರವಿಲ್ಲದೆ ಪ್ರೀತಿಯನ್ನು ತೋರಿಸುವವನು ಆತ್ಮೀಯನು ಮಾತ್ರ. ಮಿತ್ರನ ನೋವು ನಲಿವುಗಳಲ್ಲಿ, ಸುಖ ದುಃಖಗಳಲ್ಲಿ ಸ್ಪಂದನೆ ಅತ್ಯವಶ್ಯ. ನಿಷ್ಕಲ್ಮಶ ಪ್ರೀತಿಯನ್ನು ನೀಡಬೇಕಾದುದು ಆತ್ಮೀಯನೆನಿಸಿಕೊಳ್ಳುವವನ ಆದ್ಯ ಕರ್ತವ್ಯ.

ದಾಕ್ಷಿಣ್ಯ ಸ್ವಭಾವವಿರಬೇಕು. ಸ್ನೇಹವನ್ನು ಬೇಕಾಬಿಟ್ಟಿಯಾಗಿ ಬಳಸಿಕೊಳ್ಳದೆ ನಯ, ನಾಜೂಕು, ದಾಕ್ಷಿಣ್ಯವನ್ನು ರೂಢಿಸಿಕೊಂಡು ಗೆಳೆತನವನ್ನು ಎಚ್ಚರಿಕೆಯಿಂದ ಮುಂದುವರಿಸುವವನೇ ನಿಜವಾದ ಸನ್ಮಿತ್ರ. ಮಿತ್ರನನ್ನು ನಂಬಿಸುವುದಕ್ಕಾಗಿ, ಮೋಸಗೊಳಿಸುವುದಕ್ಕಾಗಿ ಸುಳ್ಳನ್ನು ಹೇಳುವುದು ಸನ್ಮಿತ್ರರಿಗೆ ಭೂಷಣವಲ್ಲ. ಒಂದೊಮ್ಮೆ ಹಾಗೆ ಮಾಡಿದಲ್ಲಿ ಮಿತ್ರತ್ವಕ್ಕೆ ಮಾರಕ.

ಹೀಗೆ ನಾವು ಯಾರನ್ನಾದರೂ ಆತ್ಮೀಯನನ್ನಾಗಿ ಮಾಡಿಕೊಳ್ಳುವಲ್ಲಿ ಈ ಎಲ್ಲ ಗುಣಗಳನ್ನು ಗುರುತಿಸಿ ಸ್ವೀಕರಿಸಬೇಕು.

ಬಿಜೆಪಿ ಮತ್ತು ಇತರ ಪಕ್ಷಗಳ ನಡುವಿನ ವ್ಯತ್ಯಾಸ!

ಅರುಣ್ ಆನಂದ್

> ಬಿಜೆಪಿ ಪಾಲಿಗೆ ಸಿದ್ಧಾಂತವೇ ಕಾರ್ಯಕರ್ತರನ್ನು ಒಂದಾಗಿಡುವ 'ಬಂಧ'ವಾಗಿದ್ದರೆ, ಇತರ ಪಕ್ಷಗಳಿಗೆ ಅಧಿಕಾರವೇ ಇಂತಹ ಬಂಧ.

ಆಮ್ ಆದ್ಮಿ ಪಕ್ಷದ ಏಳು ಮಂದಿ ರಾಜ್ಯಸಭಾ ಸದಸ್ಯರು ಇತ್ತೀಚೆಗೆ ತಮ್ಮ ಪಕ್ಷ ತೊರೆದು ಬಿಜೆಪಿ ಸೇರಿದರು. ಇದೇನೂ ಮೊದಲಲ್ಲ. 2014ರಿಂದ ಆರಂಭಿಸಿ ವಿವಿಧ ಪಕ್ಷಗಳ ಹಲವಾರು ಮುಖಂಡರು ತಮ್ಮ ಪಕ್ಷ ತೊರೆದು ಬಿಜೆಪಿಯನ್ನು ಸೇರಿದ್ದಿದೆ.

ಇದು ಮಹತ್ವದ ಪ್ರಶ್ನೆಯೊಂದನ್ನು ಎತ್ತುತ್ತದೆ ಹಾಗೂ ಅದು ವಿರೋಧ ಪಕ್ಷಗಳ ಪಾಲಿಗೂ ಅತ್ಯಂತ ಮುಖ್ಯ ಪಾಠವನ್ನು ತಿಳಿಹೇಳುತ್ತದೆ. ಈ ವಿರೋಧ ಪಕ್ಷಗಳು ತಮ್ಮ ಮುಖಂಡರನ್ನು ಹಿಡಿದಿಟ್ಟುಕೊಳ್ಳಲೇ ವಿಫಲವಾಗುತ್ತಿರುವುದೇಕೆ? ಇದೇವೇಳೆ, ಬಿಜೆಪಿಯು ವಿಭಜನಗೊಳ್ಳದೇ ಉಳಿದಿರುವುದೇ ಹೇಗೆ? ಸ್ವಾತಂತ್ರ್ಯದ ಬಳಿಕ ಹಲವಾರು ದಶಕಗಳ ಕಾಲ ಬಿಜೆಪಿ ವಿರೋಧ ಪಕ್ಷದ ಸ್ಥಾನದಲ್ಲೇ ಇದ್ದರೂ ಮುಖಂಡರು ದೊಡ್ಡ ಪ್ರಮಾಣದಲ್ಲಿ ಪಕ್ಷದಿಂದ ಹೊರಹೋದ ನಿದರ್ಶನಗಳಿಲ್ಲ. ಕಾಂಗ್ರೆಸ್ ಸರಕಾರಗಳು ಮತ್ತು ಅದರ ನೇತೃತ್ವದ ಸಮ್ಮಿಶ್ರ ಸರಕಾರಗಳು ಬಿಜೆಪಿ ಮತ್ತು ಅದಕ್ಕಿಂತ ಮುನ್ನ ಭಾರತೀಯ ಜನಸಂಘದ ಮುಖಂಡರನ್ನು ಸೆಳೆಯಲು ಪ್ರಯತ್ನ ನಡೆಸಿಲ್ಲವೆಂದಲ್ಲ, ಆದರೆ ಆ ಪ್ರಯತ್ನ ಸಫಲವಾಗಿರಲೇ ಇಲ್ಲ.

1975ರಿಂದ 1977ರ ಅವಧಿಯಲ್ಲಂತೂ ಕಾಂಗ್ರೆಸ್ ಸರಕಾರವು ತುರ್ತುಪರಿಸ್ಥಿತಿಯನ್ನು ಹೇರಿ ಪ್ರಮುಖ ಬಿಜೆಪಿ ನಾಯಕರನ್ನು ಹಾಗೂ ಪಕ್ಷದ ಸಾವಿರಾರು ಕಾರ್ಯಕರ್ತರನ್ನು ಜೈಲಿಗಟ್ಟಿತ್ತು. ಆದರೂ ಬಿಜೆಪಿ ನಾಯಕರು ಕಾಂಗ್ರೆಸನ್ನು ಒಲಿಸಲು ಮುಂದಾಗಲಿಲ್ಲ.

ಸೈದ್ಧಾಂತಿಕ ಬಂಧ

ಬೇರೆ ಪಕ್ಷಗಳಿಗೆ ಮುಖಂಡರ ವಲಸೆ ತಡೆಯುವಲ್ಲಿ ಬಿಜೆಪಿಗೆ ವರದಾನವಾಗಿರುವುದು ಪಕ್ಷದ ಸಿದ್ಧಾಂತ. ಅದುವೇ ಬಿಜೆಪಿ ಮತ್ತು ಇತರ ಪಕ್ಷಗಳ ನಡುವಿರುವ ವ್ಯತ್ಯಾಸ ಕೂಡಾ. ಬಿಜೆಪಿಯಂತೆ ಇತರ ಮುಖ್ಯವಾಹಿನಿಯ ಪಕ್ಷಗಳು ಬಲವಾದ ಸೈದ್ಧಾಂತಿಕ ತಳಹದಿ ಹೊಂದಿಲ್ಲ. ಕಮ್ಯುನಿಸ್ಟ್ ಪಕ್ಷ ಬಲಿಷ್ಠ ಸೈದ್ಧಾಂತಿಕ ತಳಹದಿ ಹೊಂದಿದೆಯಾದರೂ 1960ರಿಂದ 1970ರ ಅವಧಿಯಲ್ಲಿ ಅದು ಅಧಿಕಾರವನ್ನು ಸಾಂಸ್ಥಿಕವಾಗಿ ದುರ್ಬಳಕೆ ಮಾಡಿಕೊಂಡುದು ಅದರ ಮೇಲಿನ ವಿಶ್ವಾಸ ಜನರಿಗೆ ಕುಸಿಯಲು ಕಾರಣವಾಯಿತು. ಬಳಿಕ ಕಮ್ಯುನಿಸ್ಟ್ ಸಿದ್ಧಾಂತ ಕೂಡಾ ಪೇಲವವಾಗತೊಡಗಿತು. ಅದರಿಂದಾಗಿ ಅದು ಕಾಂಗ್ರೆಸ್‌ನ 'ಬಿ' ತಂಡದಂತೆ ವರ್ತಿಸಲಾರಂಭಿಸಿತು. ಈಗಂತೂ ಕಮುನಿಸ್ಟ್ ಪಕ್ಷವು ಅಪ್ರಸ್ತುತವಾಗಿಬಿಟ್ಟಿದೆ.

ಜನಸಂಘ ಮತ್ತು ಬಿಜೆಪಿಗಳಿಗೆ ಆರಂಭ ಕಾಲ ಅತ್ಯಂತ ಕಠಿಣವೇ ಆಗಿತ್ತು. ಕಾಂಗ್ರೆಸ್, ಎಡಪಕ್ಷಗಳು ಮತ್ತು ಕೆಲವು ಪ್ರಾದೇಶಿಕ ಪಕ್ಷಗಳು ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು ಹಾಗೂ ಹಲವು ರಾಜ್ಯಗಳಲ್ಲಿ ಅಧಿಕಾರವನ್ನೂ ಹಂಚಿಕೊಂಡಿದ್ದವು. 1980ರ ದಶಕದಲ್ಲಂತೂ ಬಿಜೆಪಿಗೆ ಅತ್ಯಂತ ಸವಾಲಿನ ಸ್ಥಿತಿ ಎದುರಾಗಿತ್ತು. ಆದರೆ ಪಕ್ಷದ ಸಿದ್ಧಾಂತವೇ ಮುಖಂಡರನ್ನು ಮತ್ತು ಕಾರ್ಯಕರ್ತರನ್ನು ಒಂದಾಗಿ ಬೆಸೆದು ಬಿಗಿಯಾಗಿ ಹಿಡಿದಿಟ್ಟಿತು. ಚುನಾವಣೆಯಲ್ಲಿ ಗೆಲ್ಲುವುದು ಅಥವಾ ಸೋಲುವುದು ಪಕ್ಷದ ಪಾಲಿಗೆ ಪ್ರಮುಖವಾಗಲಿಲ್ಲ. ಪಕ್ಷದ ಆರಂಭಿಕ ದಶಕಗಳಲ್ಲಿ ಕಾರ್ಯಕರ್ತರಾಗಿ ದುಡಿದವರು ಆರೆಸ್ಸೆಸ್‌ನಲ್ಲಿ ಸ್ವಯಂಸೇವಕರಾಗಿದ್ದವರೆ. ಸಂಘದ ಧ್ಯೇಯ ಮತ್ತು ಸಿದ್ಧಾಂತಗಳಲ್ಲಿ ಅಚಲ ನಿಷ್ಠೆಯಿದ್ದವರೇ ಬಿಜೆಪಿಯ ಏಳಿಗೆಗಾಗಿ ಶ್ರಮಿಸಿದರು.

ಬಿಜೆಪಿ ಮತ್ತು ಇತರ ಎಡಪಂಥಿಯೇತರ ಪಕ್ಷಗಳ ನಡುವಿನ ಪ್ರಮುಖ ವ್ಯತ್ಯಾಸವೆಂದರೆ ಬಿಜೆಪಿಯು 'ಏಕಾತ್ಮ ಮಾನವತಾವಾದ' ಎಂಬ



ಬಲವಾದ ಮತ್ತು ವ್ಯವಸ್ಥಿತವಾದ ಸೈದ್ಧಾಂತಿಕ ನೆಲೆಗಟ್ಟು ಹೊಂದಿರುವುದು. ಈ ಸಿದ್ಧಾಂತವನ್ನು ರೂಪಿಸಿದವರು ಪಕ್ಷದ ಮಾಜಿ ಅಧ್ಯಕ್ಷ ಹಾಗೂ ಸಿದ್ಧಾಂತವಾದಿ ದೀನ್‌ದಯಾಳ್ ಉಪಾಧ್ಯಾಯ ಅವರು. ಇತರ ಪಕ್ಷಗಳು ಅವಲಂಬಿಸಿರುವುದು ಕಾಲಕಾಲಕ್ಕೆ ಬದಲಾಗುವ 'ಚುನಾವಣಾ ಪ್ರಣಾಳಿಕೆ'ಯನ್ನು. ಈ ಪ್ರಣಾಳಿಕೆಗಳಾದರೋ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ರೂಪಿಸಿದ ವಿಷಯಗಳು. ಆದರೆ ಬಿಜೆಪಿಯ ಚುನಾವಣಾ ಪ್ರಣಾಳಿಕೆಗಳು ಅದರ ವಿಸ್ತೃತ ಸೈದ್ಧಾಂತಿಕ ನೆಲೆಯನ್ನು ಆಧರಿಸಿದಂತಹವು ಹಾಗೂ ಸೈದ್ಧಾಂತಿಕ ಚೌಕಟ್ಟಿನೊಳಗೇ ಇರುವಂತಹವು. ಹಾಗಾಗಿ ಬಿಜೆಪಿಯ ಸಿದ್ಧಾಂತ ಅಥವಾ ಪ್ರಣಾಳಿಕೆಗಳಲ್ಲಿ ನಿರಂತರತೆ ಇದೆ. ಪಕ್ಷವನ್ನು ಸೇರುವ ಯಾವನೇ ಕಾರ್ಯಕರ್ತನಿಗೆ ಮೊದಲ ದಿನದಿಂದಲೇ ಯಾವುದೇ ಗೊಂದಲ ಕಾಡುವುದಿಲ್ಲ.

ಇತರ ಪಕ್ಷಗಳಲ್ಲಿ ಮುಖಂಡರಿಗೆ ಪಕ್ಷದ ಹಿತಾಸಕ್ತಿಗಿಂತಲೂ ತಮ್ಮ ವೈಯಕ್ತಿಕ ಹಿತಾಸಕ್ತಿ ಮುಖ್ಯವಾಗಿರುತ್ತದೆ. ಹಾಗಾಗಿ ಮುಖಂಡರಿಗೆ ಆಗಾಗ ಅಸಮಾಧಾನ, ಅತೃಪ್ತಿ ಕಾಡುವುದು ಸಹಜ. ಪಕ್ಷವು ತಮಗೆ ಅಧಿಕಾರ ಹಂಚದಿದ್ದಾಗ ಅವರು ಅಸಮಾಧಾನಗೊಂಡು ಪಕ್ಷ ತ್ಯಜಿಸುತ್ತಾರೆ. ಆದರೆ, ಬಿಜೆಪಿಯಲ್ಲಿ ವೈಯಕ್ತಿಕ ಹಿತಾಸಕ್ತಿ ಗಣನೆಗೆ ಬರುವುದಿಲ್ಲ. ಸಿದ್ಧಾಂತವೇ ಮುಖ್ಯವಾಗುತ್ತದೆ. ಸಿದ್ಧಾಂತವನ್ನು ಅಪ್ಪಿಕೊಂಡವರು ವೈಯಕ್ತಿಕ ಹಿತಾಸಕ್ತಿ ಕಡೆಗಣಿಸಿ ಪಕ್ಷದ ಹಿತಕ್ಕಾಗಿ ದುಡಿಯುತ್ತಾರೆ.

ಬಿಜೆಪಿಯಲ್ಲಿ ವೈಯಕ್ತಿಕ ಹಿತಾಸಕ್ತಿಗಿಂತಲೂ ಪಕ್ಷದ ಸಿದ್ಧಾಂತವೇ ಮುಖ್ಯವಾಗುವುದು ಹೇಗೆ ಎಂಬುದು ಹಲವಾರು ನಿದರ್ಶನಗಳಿಂದ ಬಾರಿ ಬಾರಿ ಸಾಬೀತಾಗಿದೆ. ಭಾರತೀಯ ಜನಸಂಘದ ಅಧ್ಯಕ್ಷ ಮತ್ತು ಹಿರಿಯ ಮುಖಂಡ ಪ್ರೊ. ಬಲರಾಜ್ ಮಧೋಕ್ ಅವರು ಸೈದ್ಧಾಂತಿಕ ಭಿನ್ನಾಭಿಪ್ರಾಯ ಹೊಂದಿದಾಗ ಅವರು ಪಕ್ಷವನ್ನು ಬಿಡಬೇಕಾಯಿತು. ಹಿರಿಯ ಬಿಜೆಪಿ ಮುಖಂಡ ಜಸ್ವಂತ್ ಸಿಂಗ್ ಅವರು ಮೊಹಮ್ಮದ್ ಅಲಿ ಜಿನ್ನಾನನ್ನು ಹೊಗಳಿ, ವಲ್ಲಭಭಾಯಿ ಪಟೇಲ್ ಅವರನ್ನು ಟೀಕಿಸುವ ರೀತಿಯಲ್ಲಿ ಪುಸ್ತಕ ಬರೆದಾಗ ಅವರನ್ನು 2009ರಲ್ಲಿ ಪಕ್ಷದಿಂದ ಉಚ್ಚಾಟಿಸಲಾಯಿತು. 2005ರಲ್ಲಿ ಎಲ್.ಕೆ. ಆಡ್ವಾಣಿಯವರು ಪಾಕಿಸ್ತಾನಕ್ಕೆ ಭೇಟಿ ನೀಡಿದ್ದಾಗ ಜಿನ್ನಾನನ್ನು 'ಜಾತ್ಯತೀತವಾದಿ' ಎಂದು ಹೊಗಳಿದ ಬಳಿಕ, ಪಕ್ಷದ ಅಧ್ಯಕ್ಷತೆ ತ್ಯಜಿಸಬೇಕಾಯಿತು.

ಕಾರ್ಯಕರ್ತರು V/S ಸದಸ್ಯರು

ಬಿಜೆಪಿ ಧ್ಯೇಯನಿಷ್ಠ ಕಾರ್ಯಕರ್ತರ ಪಕ್ಷ ಎಂದು ಹೇಳುವುದನ್ನು ನಾವು ಆಗಾಗ ಕೇಳುತ್ತೇವೆ. ಅದು ಸತ್ಯ ಕೂಡಾ. ಉಳಿದೆಲ್ಲ ಪಕ್ಷಗಳು 'ಸದಸ್ಯರನ್ನು' ಹೊಂದಿರುವ ಪಕ್ಷಗಳು. ಅದೇಕೆ ಹಾಗೆ? ಕಾರಣ ಸ್ಪಷ್ಟ. ಬಿಜೆಪಿಯು ಸಿದ್ಧಾಂತವನ್ನು ಆಧರಿಸಿದೆ. ಇತರ ಪಕ್ಷಗಳಿಗೆ ನಿಶ್ಚಿತ ಸಿದ್ಧಾಂತವಿಲ್ಲ.

ಬಿಜೆಪಿಯಲ್ಲಿ ಪಕ್ಷದ ಸದಸ್ಯರನ್ನು ವಿವಿಧ ತರಬೇತಿ ಕಾರ್ಯಕ್ರಮಗಳ ಮೂಲಕ ಕಾರ್ಯಕರ್ತರನ್ನಾಗಿ ರೂಪಿಸಲಾಗುತ್ತದೆ. ಇಂತಹ ತರಬೇತಿ ಕಾರ್ಯಕ್ರಮಗಳನ್ನು ಸಿದ್ಧಾಂತಗಳ ಆಧಾರದಲ್ಲಿ ನಡೆಸಬೇಕಾಗುತ್ತದೆ. ಸದಸ್ಯರು ಕಾರ್ಯಕರ್ತರಾಗಿ ರೂಪುಗೊಂಡ ಬಳಿಕ ಅವರು ನಿರಂತರವಾಗಿ ಪಕ್ಷದ ಏಳಿಗೆಗಾಗಿ ಶ್ರಮಿಸುವ ಮನೋಭಾವ, ಬದ್ಧತೆ ಬೆಳೆಸಿಕೊಳ್ಳುತ್ತಾರೆ. ಪಕ್ಷವು ಅಧಿಕಾರದಲ್ಲಿದೆಯೋ ಇಲ್ಲವೋ ಎಂಬುದು ಅವರಿಗೆ ಗೌಣ. ಅಧಿಕಾರದಲ್ಲಿ ಇಲ್ಲದಾಗಲೂ ಅವರು ಪಕ್ಷಕ್ಕಾಗಿ ದುಡಿಯುತ್ತಾರೆ.

ಬಿಜೆಪಿಯೇತರ ಪಕ್ಷಗಳಲ್ಲಿ ಸದಸ್ಯರಾಗಿರುವವರು ಅಧಿಕಾರಕ್ಕಾಗಿ ಹಪಹಪಿಸುವ ಮಂದಿಗಳು. ಅವರನ್ನು ಬಂಧಿಸುವ ನಿಶ್ಚಿತ ಸಿದ್ಧಾಂತವಿಲ್ಲ. ಸಿದ್ಧಾಂತ ಇಲ್ಲದಿರುವುದರಿಂದ ತರಬೇತಿ ಕಾರ್ಯಕ್ರಮಗಳಿರುವುದಿಲ್ಲ. ಹಾಗಾಗಿ ಧ್ಯೇಯನಿಷ್ಠ ಕಾರ್ಯಕರ್ತರೂ ಇರುವುದಿಲ್ಲ. ಇಂತಹ ಪಕ್ಷವು ಅಧಿಕಾರ ಕಳಕೊಂಡಾಗ ಅದರ ಮುಖಂಡರು ಮತ್ತು ಸದಸ್ಯರು ಪಕ್ಷ ಬಿಡುವ ಸಾಧ್ಯತೆಗಳು ಹೆಚ್ಚಿರುತ್ತವೆ. ಅವರನ್ನು ಪಕ್ಷಕ್ಕೆ ಕಟ್ಟಿಹಾಕುವಂತಹ ಬಂಧವು ಯಾವುದೂ ಇಲ್ಲದಿರುವುದೇ ಅದಕ್ಕೆ ಕಾರಣ.

ಬಿಜೆಪಿ ಪಾಲಿಗೆ ಸಿದ್ಧಾಂತವೇ ಕಾರ್ಯಕರ್ತರನ್ನು ಒಂದಾಗಿಡುವ 'ಬಂಧ'ವಾಗಿದ್ದರೆ, ಇತರ ಪಕ್ಷಗಳಿಗೆ ಅಧಿಕಾರವೇ ಇಂತಹ ಬಂಧ.

ಬಿಜೆಪಿಗಿರುವ ಸವಾಲುಗಳು

ಇಂತಿರುವಾಗಿ ಮತ್ತೊಂದು ಆಯಾಮದತ್ತಲೂ ಚಿಂತಿಸಬೇಕಾಗಿರುವುದು ಅಗತ್ಯವಾಗಿದೆ. ಇತರ ಪಕ್ಷಗಳಿಂದ ಬರುವ ಕಾರ್ಯಕರ್ತರು ಮತ್ತು ಮುಖಂಡರನ್ನು ಬಿಜೆಪಿ ತನ್ನ ಸೈದ್ಧಾಂತಿಕ ಚೌಕಟ್ಟಿನೊಳಗೆ ಸೇರಿಸಿಕೊಳ್ಳುವುದು ಹೇಗೆ? ಅದರ ಜತೆಗೇ ಪಕ್ಷದ ಉನ್ನತಿಗಾಗಿ ಹಲವಾರು ವರ್ಷಗಳಿಂದ ದುಡಿದವರು ಮತ್ತು ಹೊಸದಾಗಿ ಪಕ್ಷಕ್ಕೆ ಬಂದವರ ಮಧ್ಯೆ ತಿಕ್ಕಾಟ ಉಂಟಾಗುವ ಸಾಧ್ಯತೆಗಳೂ ಇವೆ. ಕೆಲವೊಮ್ಮೆ ಹೊಸದಾಗಿ ಬಂದವರು ಹಳಬರನ್ನು ಹಿಂದೆ ಸರಿಸಿ ತಾವೇ ಮುಂಚೂಣಿಗೆ ಬರುವುದೂ ಇದೆ. ಬಿಜೆಪಿ ಇದನ್ನು ಸಮತೋಲನದಿಂದ ನಿಭಾಯಿಸುವಲ್ಲಿ ಈವರೆಗೆ ಸಫಲತೆ ಸಾಧಿಸಿದೆ. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾರಂತವರು ಇದಕ್ಕೆ ಉತ್ತಮ ಉದಾಹರಣೆ. ಅವರು ಬಿಜೆಪಿಯ ಸಿದ್ಧಾಂತವನ್ನು ತಮ್ಮೊಳಗೆ ಅಳವಡಿಸಿಕೊಂಡಿರುವುದನ್ನು ಅವರ ಮಾತಿನಲ್ಲಷ್ಟೇ ಅಲ್ಲದೆ, ಅವರ ಕೃತಿಯಲ್ಲೂ ಕಾಣಬಹುದಾಗಿದೆ.

ಇತರ ಪಕ್ಷಗಳಿಂದ ಬಿಜೆಪಿಗೆ ಬಂದ ಹಲವಾರು ಮುಖಂಡರು ಪಕ್ಷದೊಂದಿಗೆ ಹೊಂದಿಕೊಂಡಿದ್ದಾರೆ. ತಾವು ಪಕ್ಷಕ್ಕೆ ಸೇರಿದಾಗಿನಿಂದಲೂ ಅನುಸರಿಸಬೇಕಾದ ಸೈದ್ಧಾಂತಿಕ ಚೌಕಟ್ಟಿನ ಅರಿವು ಅವರಿಗಿದ್ದುದರಿಂದ ಅದು ಅವರಿಗೆ ಕಷ್ಟವಾಗಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಬಿಜೆಪಿ ಸಾಮಾನ್ಯ ಕಾರ್ಯಕರ್ತರಿಗೆ ತಮ್ಮದು ತಮ್ಮದು ಕಾಂಗ್ರೆಸಿನಂತೆ ಅಥವಾ ಇನ್ನಿತರ ಕೆಲವು ಪಕ್ಷಗಳಂತೆ ವಂಶವಾದಿ ಪಕ್ಷವಲ್ಲ ಎಂಬ ವಿಶ್ವಾಸವಿದೆ.

ಸಿದ್ಧಾಂತವೆಂಬುದು ಬಿಜೆಪಿಯ ಮಾರ್ಗದರ್ಶಿ ಅಂಶವಾಗಿದೆ. ಹಾಗಾಗಿ ಬಿಜೆಪಿಯು ಕಾರ್ಯಕರ್ತರಿಗಾಗಿ ಕಾರ್ಯಕರ್ತರಿಂದ ನಡೆಸಲ್ಪಡುವ ಕಾರ್ಯಕರ್ತರ ಪಕ್ಷವಾಗಿದೆ. ಈ ಕಾರ್ಯಕರ್ತರೆಲ್ಲ ಸಮಾಜದ ಸಾಮಾನ್ಯ ವರ್ಗದಲ್ಲೇ ಕಂಡುಬರುವವರಾಗಿದ್ದಾರೆ. ಹಾಗಾಗಿಯೇ ಬಿಜೆಪಿಯೆಡೆಗೆ ಬೇರೆ ಪಕ್ಷಗಳಿಂದ ವಲಸೆ ಬರುತ್ತಾರೆಯೇ ಹೊರತು ಬಿಜೆಪಿಯಿಂದ ಈ ರೀತಿಯ ದೊಡ್ಡ ವಲಸೆ ನಡೆಯುವುದಿಲ್ಲ.

ಸಾರ್ವಜನಿಕ ಆಸ್ತಿಗಳಿಗೆ ಹೆಸರು ನೀಡುವಲ್ಲಿ ಪಾರದರ್ಶಕತೆ ಮತ್ತು ನ್ಯಾಯ ಒದಗಿಸುವ ಅಗತ್ಯ

ಪತ್ರ ಮಿತ್ರ

ನಮ್ಮ ದೇಶದಲ್ಲಿ, ವಿಶೇಷವಾಗಿ ರಾಜ್ಯದ ವಿವಿಧ ಭಾಗಗಳಲ್ಲಿ, ರಸ್ತೆ, ವೃತ್ತ, ಬಡಾವಣೆ, ವಿದ್ಯಾಲಯ, ಸರ್ಕಾರಿ ಕಟ್ಟಡಗಳು ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಗಣ್ಯ ವ್ಯಕ್ತಿಗಳ ಹೆಸರನ್ನು ಇಡುವ ಪದ್ಧತಿ ಬಹುಕಾಲದಿಂದ ನಡೆದುಬರುತ್ತಿದೆ. ಇದು ಒಂದು ಮಟ್ಟಿಗೆ ಸಮಾಜಕ್ಕೆ ಕೊಡುಗೆ ನೀಡಿದವರನ್ನು ಸ್ಮರಿಸುವ ಒಳ್ಳೆಯ ಪರಂಪರೆ ಆಗಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಈ ಪದ್ಧತಿಯ ಬಳಕೆ ಬಗ್ಗೆ ಹಲವಾರು ಪ್ರಶ್ನೆಗಳು ಉದ್ಭವಿಸುತ್ತಿವೆ. ಈ ವಿಷಯದಲ್ಲಿ ಸರಕಾರವು ಸಮಗ್ರ ಚಿಂತನೆ ನಡೆಸಿ, ಸ್ಪಷ್ಟ ನೀತಿಯನ್ನು ರೂಪಿಸುವ ಅಗತ್ಯ ಕಂಡುಬರುತ್ತಿದೆ.

ಒಂದು ಪ್ರದೇಶದಲ್ಲಿ ಅಥವಾ ನಗರದಲ್ಲಿ ಒಂದೇ ವ್ಯಕ್ತಿಯ ಹೆಸರನ್ನು ಹಲವು ಸ್ಥಳಗಳಿಗೆ ಮತ್ತೆ ಮತ್ತೆ ಬಳಸುವ ಉದಾಹರಣೆಗಳು ಹೆಚ್ಚುತ್ತಿವೆ. ಉದಾಹರಣೆಗೆ, ಒಂದೇ ವ್ಯಕ್ತಿಯ ಹೆಸರಿನಲ್ಲಿ ರಸ್ತೆ, ವೃತ್ತ, ಉದ್ಯಾನವನ, ಶಾಲೆ, ಹಾಗೂ ಇನ್ನಿತರ ಸಾರ್ವಜನಿಕ ಸೌಲಭ್ಯಗಳು ಇರುವುದು ಸಾಮಾನ್ಯವಾಗಿದೆ. ಇದರಿಂದ ಇತರ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಹಲವಾರು ಗಣನೀಯ ವ್ಯಕ್ತಿಗಳನ್ನು ಕಡೆಗಣಿಸಿದಂತಾಗುತ್ತದೆ. ಸಮಾಜದಲ್ಲಿ ಹಲವು ಕ್ಷೇತ್ರಗಳಲ್ಲಿ ಶ್ರಮಿಸಿದವರು ಇದ್ದಾರೆ. ಆದರೆ, ಹೆಸರು ನೀಡುವ ಸಂದರ್ಭದಲ್ಲಿ ಈ ವೈವಿಧ್ಯತೆಯನ್ನು ಪರಿಗಣಿಸದೇ ಕೆಲವು ಹೆಸರುಗಳನ್ನು ಮಾತ್ರ ಪುನರಾವರ್ತಿಸುವುದು ನ್ಯಾಯಸಮ್ಮತವಲ್ಲ.

ಇನ್ನೊಂದು ಪ್ರಮುಖ ಸಮಸ್ಯೆ ಎಂದರೆ, ಸರಕಾರಿ ಅನುದಾನದಿಂದ ನಿರ್ಮಿಸಲಾದ ಕಟ್ಟಡಗಳು ಮತ್ತು ಸೌಲಭ್ಯಗಳಿಗೆ ಪ್ರಸ್ತುತ ರಾಜಕೀಯ ನಾಯಕರು ಅಥವಾ ಅವರ ಕುಟುಂಬ ಸದಸ್ಯರ ಹೆಸರನ್ನು ನೀಡುವುದು. ಬಸ್ ತಂಗುದಾಣಗಳು, ಕ್ರೀಡಾಂಗಣಗಳು, ಸಮುದಾಯ ಭವನಗಳು ಇತ್ಯಾದಿಗಳಿಗೆ ಶಾಸಕರು, ಸಂಸದರು ಅಥವಾ ಅವರ ಹತ್ತವರ ಹೆಸರನ್ನು ಇಡುವ ಪದ್ಧತಿ ಹಲವೆಡೆ ಕಂಡುಬರುತ್ತಿದೆ. ಇದು ಜನರಲ್ಲಿ ತಪ್ಪು ಸಂದೇಶವನ್ನು ಮೂಡಿಸುತ್ತದೆ. ಸರಕಾರಿ ಹಣದಿಂದ ನಿರ್ಮಿಸಲಾದ ಈ ಸೌಲಭ್ಯಗಳು ಸಾರ್ವಜನಿಕರ ಸ್ವತ್ತು ಆಗಿದ್ದು, ಅವುಗಳನ್ನು ಯಾವುದೇ ವ್ಯಕ್ತಿಯ ಖಾಸಗಿ ಸಾಧನೆ ಎಂದು ಭಾವಿಸುವ ಪರಿಸ್ಥಿತಿ ಉಂಟಾಗಬಾರದು.

ಈ ರೀತಿಯ ಹೆಸರಿಡುವ ಕ್ರಮವು ಜನರಲ್ಲಿ 'ಇದು ಆ ವ್ಯಕ್ತಿಯದ್ದೇ' ಎಂಬ ಭಾವನೆಯನ್ನು ಹುಟ್ಟಿಸುತ್ತದೆ. ಇದರಿಂದ ಸಾರ್ವಜನಿಕ ಆಸ್ತಿಗಳ ಮೇಲಿನ ಜನರ ಹಕ್ಕು ಮತ್ತು ಹೊಣೆಗಾರಿಕೆಯ ಭಾವನೆ ಕುಗ್ಗುತ್ತದೆ. ಸರ್ಕಾರದ ಯೋಜನೆಗಳು ಜನರಿಗಾಗಿ, ಜನರ ಹಣದಿಂದ ನಿರ್ಮಾಣವಾಗಿರುವುದರಿಂದ, ಅವುಗಳ ಹೆಸರಿಡುವಲ್ಲಿ ರಾಜಕೀಯ ಪ್ರಭಾವ ಇರಬಾರದು ಎಂಬುದು ಮೂಲಭೂತ ತತ್ವವಾಗಿರಬೇಕು.

ಕೆಲವೆಡೆ ರಾಜಕಾರಣಿಗಳ ಹತ್ತವರ ಹೆಸರನ್ನು ರಸ್ತೆ ಅಥವಾ ವೃತ್ತಗಳಿಗೆ ಇಡುವುದು ಸಹ ಗಮನಕ್ಕೆ ಬರುತ್ತದೆ. ಅವರ ಕುಟುಂಬದವರು ಸಮಾಜಕ್ಕೆ ಕೊಡುಗೆ ನೀಡಿದ್ದರೆ ಅದನ್ನು ಗೌರವಿಸುವುದು ತಪ್ಪಲ್ಲ. ಆದರೆ, ಈ ಕೊಡುಗೆಗಳನ್ನು ಸ್ಪಷ್ಟವಾಗಿ ಮೌಲ್ಯಮಾಪನ ಮಾಡದೆ, ಕೇವಲ ರಾಜಕೀಯ ಪ್ರಭಾವದ ಆಧಾರದ ಮೇಲೆ ಹೆಸರಿಡುವುದು ಸರಿಯಲ್ಲ. ಇದು ಇತರ ಅರ್ಹ ವ್ಯಕ್ತಿಗಳಿಗೆ ಮಾಡಿದ ಅನ್ಯಾಯವಾಗುತ್ತದೆ.

ಈ ಎಲ್ಲಾ ಸಮಸ್ಯೆಗಳ ಹಿನ್ನೆಲೆಯಲ್ಲಿ ಈ ಕೆಳಗಿನ ಕ್ರಮಗಳನ್ನು ಸರ್ಕಾರ ಪರಿಗಣಿಸಬೇಕಾಗಿದೆ:

ಒಂದು ನಗರ ಅಥವಾ ಗ್ರಾಮದಲ್ಲಿ ಒಬ್ಬ ವ್ಯಕ್ತಿಯ ಹೆಸರನ್ನು ಒಂದೇ ಸಲ ಮಾತ್ರ ಬಳಸುವ ನಿಯಮವನ್ನು ಜಾರಿಗೊಳಿಸಬೇಕು. ಇದರಿಂದ ಹೆಸರುಗಳ ವೈವಿಧ್ಯತೆ ಹೆಚ್ಚುತ್ತದೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರಿಗೆ ಗೌರವ ನೀಡಲು ಅವಕಾಶ ಸಿಗುತ್ತದೆ.

ಹೆಸರು ನೀಡುವ ಪ್ರಕ್ರಿಯೆಯನ್ನು ಪಾರದರ್ಶಕ ಮತ್ತು ವ್ಯವಸ್ಥಿತಗೊಳಿಸಬೇಕು. ಒಂದು ಸ್ವತಂತ್ರ ಸಮಿತಿ ರಚಿಸಿ, ಅದರಲ್ಲಿ ಇತಿಹಾಸಕಾರರು, ಸಮಾಜ ಶಾಸ್ತ್ರಜ್ಞರು, ಸ್ಥಳೀಯ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಸೇರಿಕೊಂಡಂತೆ ಮಾಡಬೇಕು. ಈ ಸಮಿತಿಯು ವ್ಯಕ್ತಿಗಳ ಕೊಡುಗೆ, ಪ್ರಾಮುಖ್ಯತೆ ಮತ್ತು ಸಮಾಜದ ಮೇಲೆ ಬೀರಿದ ಪರಿಣಾಮಗಳನ್ನು ಆಧರಿಸಿ ಹೆಸರುಗಳನ್ನು ಆಯ್ಕೆ ಮಾಡಬೇಕು.

ಯೋಜನೆಗಳ ಸ್ವರೂಪಕ್ಕೆ ಅನುಗುಣವಾಗಿ ಹೆಸರುಗಳನ್ನು ಆಯ್ಕೆ ಮಾಡುವ ನೀತಿ ರೂಪಿಸಬೇಕು. ಉದಾಹರಣೆಗೆ, ಕ್ರೀಡಾಂಗಣಗಳಿಗೆ ಕ್ರೀಡಾಪಟುಗಳ ಹೆಸರು, ಶಿಕ್ಷಣ ಸಂಸ್ಥೆಗಳಿಗೆ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದವರ ಹೆಸರು, ಆರೋಗ್ಯ ಕೇಂದ್ರಗಳಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಕೊಡುಗೆ ನೀಡಿದವರ ಹೆಸರು ನೀಡಬೇಕು. ಇದರಿಂದ ಆ ಕ್ಷೇತ್ರದ ಮಹತ್ವ ಮತ್ತು ಪ್ರೇರಣೆ ಎರಡೂ ಹೆಚ್ಚುತ್ತದೆ.

ಪ್ರಸ್ತುತ ಅಧಿಕಾರದಲ್ಲಿರುವ ರಾಜಕೀಯ ವ್ಯಕ್ತಿಗಳ ಹೆಸರನ್ನು ಸರಕಾರಿ ಯೋಜನೆಗಳಿಗೆ ಇಡುವುದನ್ನು ತಡೆಯಬೇಕು. ಅದನ್ನು ರಾಜಕೀಯ ಲಾಭಕ್ಕಾಗಿ ಬಳಸುವ ಸಾಧ್ಯತೆ ಹೆಚ್ಚಿರುತ್ತದೆ. ಆದ್ದರಿಂದ, ಕನಿಷ್ಠ ಒಂದು ನಿರ್ದಿಷ್ಟ ಅವಧಿ (ಉದಾಹರಣೆಗೆ 10 ಅಥವಾ 20 ವರ್ಷ) ನಂತರ ಮಾತ್ರ ಹೆಸರು ಪರಿಗಣಿಸುವ ನಿಯಮ ಇರಬೇಕು.

ಸಾರ್ವಜನಿಕರಿಂದ ಸಲಹೆಗಳನ್ನು ಸ್ವೀಕರಿಸುವ ವ್ಯವಸ್ಥೆಯನ್ನು ರೂಪಿಸಬೇಕು. ಜನರು ತಮ್ಮ ಪ್ರದೇಶದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳ ಹೆಸರುಗಳನ್ನು ಶಿಫಾರಸು ಮಾಡಲು ಅವಕಾಶ ನೀಡಿದರೆ, ಇದು ಹೆಚ್ಚು ನ್ಯಾಯಯುತ ಮತ್ತು ಸಮಗ್ರ ಪ್ರಕ್ರಿಯೆಯಾಗುತ್ತದೆ.

ಈ ಕ್ರಮಗಳನ್ನು ಅನುಸರಿಸಿದರೆ, ಸಾರ್ವಜನಿಕ ಆಸ್ತಿಗಳಿಗೆ ಹೆಸರು ನೀಡುವ ಪ್ರಕ್ರಿಯೆ ಹೆಚ್ಚು ನ್ಯಾಯಯುತ, ಪಾರದರ್ಶಕ ಮತ್ತು ಸಮಾನತೆಯ ತತ್ವಗಳನ್ನು ಪ್ರತಿಬಿಂಬಿಸುತ್ತದೆ. ಇದು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಶ್ರಮಿಸಿದವರನ್ನು ಗುರುತಿಸುವುದಕ್ಕೂ, ಮುಂದಿನ ತಲೆಮಾರಿಗೆ ಪ್ರೇರಣೆಯಾಗುವುದಕ್ಕೂ ಸಹಾಯಕವಾಗುತ್ತದೆ.

ಸಾರಾಂಶವಾಗಿ, ಹೆಸರಿಡುವಿಕೆ ಒಂದು ಸಾಮಾನ್ಯ ಆಡಳಿತಾತ್ಮಕ ಕ್ರಮವಲ್ಲ; ಅದು ನಮ್ಮ ಸಂಸ್ಕೃತಿ, ಮೌಲ್ಯಗಳು ಮತ್ತು ಇತಿಹಾಸವನ್ನು ಪ್ರತಿಬಿಂಬಿಸುವ ಮಹತ್ವದ ಪ್ರಕ್ರಿಯೆಯಾಗಿದೆ. ಆದ್ದರಿಂದ, ಇದರಲ್ಲಿ ತಾರತಮ್ಯ, ರಾಜಕೀಯ ಪ್ರಭಾವ ಅಥವಾ ಅನ್ಯಾಯಕ್ಕೆ ಅವಕಾಶ ನೀಡದೇ, ಸಮಗ್ರ ಹಾಗೂ ಚಿಂತಿತ ನೀತಿಯನ್ನು ರೂಪಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ವಿಷಯದ ಗಂಭೀರತೆಯನ್ನು ಮನಗಂಡು, ಸಂಬಂಧಿತ ಅಧಿಕಾರಿಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ವಿನಂತಿ.

-ಜಿ. ನಾಗೇಂದ್ರ ಕಾವೂರು, ಸಂಡೂರು

ಗುಜರಾತ್ ಮಹಾನಗರ ಪಾಲಿಕೆ ಚುನಾವಣೆ

ಬಿಜೆಪಿಗೆ 15/15

ಅಹಮದಾಬಾದ್: ಗುಜರಾತ್‌ನಲ್ಲಿ ಏ.26ರಂದು ನಡೆದ ಮಹಾನಗರ ಪಾಲಿಕೆಗಳ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ಪಕ್ಷವು 15ರಲ್ಲಿ 15 ಮಹಾನಗರ ಪಾಲಿಕೆಗಳನ್ನು ಗೆದ್ದು ಭರ್ಜರಿ ಸಾಧನೆ ಮಾಡಿದೆ. ಮೊರ್ಬಿ ಮತ್ತು ಪೋರಬಂದರ್ ಮಹಾನಗರ ಪಾಲಿಕೆಗಳಲ್ಲಿ ಎಲ್ಲಾ ಸ್ಥಾನಗಳನ್ನು ಗೆದ್ದು ಕ್ಲೀನ್ ಸ್ವೀಪ್ ಸಾಧಿಸಿರುವುದು ಗಮನಾರ್ಹ.

ಒಟ್ಟು 17 ಮಹಾನಗರ ಪಾಲಿಕೆಗಳ ಪೈಕಿ 15ಕ್ಕೆ ಈ ಬಾರಿ ಚುನಾವಣೆ ನಡೆದಿದ್ದು, ಉಳಿದ ಎರಡು ಪಾಲಿಕೆಗಳ ಅವಧಿ ಇನ್ನೂ ಮುಗಿದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಾಜ್ಯ ಚುನಾವಣಾ ಆಯೋಗದ ಪ್ರಕಾರ, ಅಹಮದಾಬಾದ್, ಸೂರತ್, ವಡೋದರಾ, ರಾಜ್‌ಕೋಟ್, ಜಾಮ್‌ನಗರ, ಭಾವನಗರ, ಗಾಂಧೀಧಾಮ್, ಸುರೇಂದ್ರನಗರ, ಮಹೇಸಾಣಾ, ಆನಂದ್, ನಡಿಯಾದ್, ನವಸಾರಿ ಹಾಗೂ ವಾಪಿ ಸೇರಿದಂತೆ ಎಲ್ಲ ಪ್ರಮುಖ ನಗರಗಳಲ್ಲಿ ಬಿಜೆಪಿ ಜಯ ಸಾಧಿಸಿದೆ.

ಅಹಮದಾಬಾದ್ ಮಹಾನಗರ ಪಾಲಿಕೆಯಲ್ಲಿ ಒಟ್ಟು 192 ಸ್ಥಾನಗಳ ಪೈಕಿ ಬಿಜೆಪಿ 160 ಸ್ಥಾನಗಳನ್ನು ಗೆದ್ದರೆ, ಕಾಂಗ್ರೆಸ್ 32 ಸ್ಥಾನಗಳಿಗೆ ತೃಪ್ತಿಪಟ್ಟಿದೆ. ಕಳೆದ ಚುನಾವಣೆಯಲ್ಲಿ ಏಳು ಸ್ಥಾನಗಳನ್ನು ಗೆದ್ದಿದ್ದ ಎಐಎಂಐಎಂ ಈ ಬಾರಿ ಒಂದೂ ಸ್ಥಾನ ಗೆಲ್ಲದೇ ಶೂನ್ಯ ಸಾಧನೆ ಮಾಡಿದೆ.

ಸೂರತ್ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ 120ರಲ್ಲಿ 115 ಸ್ಥಾನಗಳನ್ನು ಗೆದ್ದರೆ, ಕಾಂಗ್ರೆಸ್ ಕೇವಲ ಒಂದು ಸ್ಥಾನಕ್ಕೆ ಸೀಮಿತವಾಯಿತು. ಹಿಂದಿನ ಬಾರಿ 27 ಸ್ಥಾನಗಳನ್ನು ಗೆದ್ದಿದ್ದ ಆಮ್ ಆದ್ಮಿ ಪಕ್ಷ ಈ ಬಾರಿ ಕೇವಲ ನಾಲ್ಕು ಸ್ಥಾನಗಳಿಗೆ ಕುಸಿತ ಕಂಡಿದೆ.

ರಾಜ್‌ಕೋಟ್‌ನಲ್ಲಿ ಒಟ್ಟು 72 ಸ್ಥಾನಗಳ ಪೈಕಿ ಬಿಜೆಪಿ 65 ಸ್ಥಾನಗಳನ್ನು ಪಡೆದುಕೊಂಡಿದ್ದು, ಕಾಂಗ್ರೆಸ್ ಏಳು ಸ್ಥಾನಗಳನ್ನು ಗೆದ್ದಿದೆ. ವಡೋದರಾ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ 76ರಲ್ಲಿ 69 ಸ್ಥಾನಗಳನ್ನು ಗೆದ್ದರೆ, ಕಾಂಗ್ರೆಸ್ ಆರು ಸ್ಥಾನಗಳನ್ನು ಹಾಗೂ ಇನ್ನೊಬ್ಬ ಅಭ್ಯರ್ಥಿ ಒಂದು ಸ್ಥಾನವನ್ನು ಪಡೆದಿದ್ದಾರೆ. ಜಾಮ್‌ನಗರ ಮತ್ತು ಭಾವನಗರ ಮಹಾನಗರ ಪಾಲಿಕೆಗಳಲ್ಲೂ ಬಿಜೆಪಿ ಭಾರೀ ಅಂತರದಿಂದ ಜಯ ಸಾಧಿಸಿದೆ. ಸುರೇಂದ್ರನಗರ ಮತ್ತು ನಡಿಯಾದ್ ಪಾಲಿಕೆಗಳಲ್ಲಿ ಮಾತ್ರ ಬಿಜೆಪಿ ತಲಾ ಒಂದು ಸ್ಥಾನ ಕಳೆದುಕೊಂಡಿದೆ. ಹೊಸದಾಗಿ ರಚನೆಯಾದ ನವಸಾರಿ, ಗಾಂಧೀಧಾಮ್, ಮೊರ್ಬಿ, ವಾಪಿ, ಆನಂದ್, ನಡಿಯಾದ್, ಮಹೇಸಾಣಾ, ಪೋರಬಂದರ್ ಮತ್ತು ಸುರೇಂದ್ರನಗರ ಮಹಾನಗರ ಪಾಲಿಕೆಗಳಲ್ಲಿ ಇದೇ ಮೊದಲ ಬಾರಿಗೆ ನಡೆದ ಚುನಾವಣೆಯಲ್ಲೂ ಬಿಜೆಪಿ ಗೆಲುವು ಸಾಧಿಸಿದೆ.

ಮಂಗಳವಾರ ಬೆಳಿಗ್ಗೆ ಕಠಿಣ ಭದ್ರತಾ ವ್ಯವಸ್ಥೆಯ ನಡುವೆ ಮತ ಎಣಿಕೆ ಪ್ರಾರಂಭವಾಗಿತ್ತು. ಈ ಬಾರಿ 15 ಮಹಾನಗರ ಪಾಲಿಕೆಗಳ ಜೊತೆಗೆ 84 ನಗರಸಭೆಗಳು, 34 ಜಿಲ್ಲಾ ಪಂಚಾಯಿತಿಗಳು ಹಾಗೂ 260 ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆದಿತ್ತು. ಒಟ್ಟು 4.18 ಕೋಟಿಗೂ ಹೆಚ್ಚು ಮತದಾರರು ಮತ ಚಲಾಯಿಸಲು ಅರ್ಹರಾಗಿದ್ದರು.

ಇದಕ್ಕೂ ಮುನ್ನ ಇತರ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲು ನಿಯಮಗಳಲ್ಲಿ ತಿದ್ದುಪಡಿ ಮಾಡಲಾಗಿದ್ದು, ಹಲವಾರು ಜಿಲ್ಲೆಗಳಲ್ಲಿ ಕ್ಷೇತ್ರ ಮರುಹಂಚಿಕೆ ಹಾಗೂ ವಾರ್ಡ್ ಪುನರ್ ರಚನೆ ಕೈಗೊಳ್ಳಲಾಗಿತ್ತು.

> **ರಾಜ್ಯ ಸರ್ಕಾರದ ಅಸಾಧಾರಣ ಕೆಲಸ, ಬಿಜೆಪಿಯ ಉತ್ತಮ ಆಡಳಿತವನ್ನು ಬೆಂಬಲಿಸಿ ಮತ ಚಲಾಯಿಸಿದ್ದಾರೆ. ಗುಜರಾತ್ ಮತ್ತು ಬಿಜೆಪಿ ನಡುವಿನ ಸಂಬಂಧ ಇನ್ನಷ್ಟು ಬಲವಾಗಿದೆ. ಮುಂದಿನ ದಿನಗಳಲ್ಲಿ ನಾವಿನ್ನೂ ಶ್ರಮಿಸಿ ರಾಜ್ಯವನ್ನು ಪ್ರಗತಿಯ ಉತ್ತುಂಗಕ್ಕೆ ಕೊಂಡೊಯ್ಯುತ್ತೇವೆ ಎಂದು ಜನತೆಗೆ ಭರವಸೆ ನೀಡುತ್ತೇನೆ.**
> ■ **ನರೇಂದ್ರ ಮೋದಿ,** ಪ್ರಧಾನಿ



ಶಾಂಘೈ ಶೃಂಗಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್

ಉಗ್ರವಾದ: ಇಬ್ಬಗೆ ನೀತಿ ಸಲ್ಲ

ಬಿಷ್ಕೇಕ್(ಕಿರ್ಗಿಸ್ತಾನ್: ಭಯೋತ್ಪಾದನೆಯನ್ನು ಎದುರಿಸುವ ವಿಷಯದಲ್ಲಿ ಇಬ್ಬಗೆ ನೀತಿ ಸಲ್ಲ ಎಂಬುದಾಗಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಂಗಳವಾರ ವಿಶ್ವಕ್ಕೆ ಬಲವಾದ ಸಂದೇಶ ನೀಡಿದ್ದಾರೆ. ಭಯೋತ್ಪಾದನೆ ಮತ್ತು ಉಗ್ರವಾದದ ಬಗ್ಗೆ ಶೂನ್ಯ ಸಹನೆ ಹಾಗೂ ವಿಶ್ವಶಾಂತಿಯ ಬಗ್ಗೆ ಆದ್ಯ ಬದ್ಧತೆ ಇದು ಭಾರತದ ನೀತಿಯಾಗಿದೆ ಎಂದು ಅವರು ಒತ್ತಿ ಹೇಳಿದರು.

ಕಿರ್ಗಿಸ್ತಾನದ ರಾಜಧಾನಿ ಬಿಷ್ಕೇಕ್‌ನಲ್ಲಿ ನಡೆದ ಷಾಂಘಾಯ್ ಸಹಕಾರ ಸಂಸ್ಥೆ(ಎಸ್‌ಸಿಒ)ಯ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪಹಲ್ಗಾಮ್‌ನಲ್ಲಿ ಕಳೆದ ಏ.22ರಂದು ನಡೆದ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ಭಾರತ ನಡೆಸಿದ 'ಆಪರೇಷನ್ ಸಿಂದೂರ್'ನ್ನು ಉಲ್ಲೇಖಿಸಿ, ಭಯೋತ್ಪಾದಕ ಮೂಲ ನೆಲೆಗಳು ಹೆಚ್ಚು ಕಾಲ ಸಮರ್ಥನೀಯ ಶಿಕ್ಷೆಗೆ ಅತೀತವಾಗಿ ಉಳಿಯಲಾಗದು ಮತ್ತು ಭಯೋತ್ಪಾದಕರು ಎಲ್ಲೇ ಇದ್ದರೂ ತಪ್ಪಿಸಿಕೊಳ್ಳಲಾಗದು ಎಂಬುದನ್ನು ನಾವು ದೃಢವಾಗಿ ತೋರಿಸಿಕೊಟ್ಟಿದ್ದೇವೆ ಎಂದರು. .

ಭಯೋತ್ಪಾದನೆಯು ಜಗತ್ತಿಗೆ ಅತ್ಯಂತ ಗಂಭೀರ ಬೆದರಿಕೆಯಾಗಿದ್ದು, ಜಾಗತಿಕ ಸಮುದಾಯವು ಇಂದು ತೀವ್ರವಾದ , ಮತಾಂಧತೆ ಮತ್ತು ಭಯೋತ್ಪಾದನೆಯ ಹಿಡಿತದಿಂದ ತತ್ತರಿಸಿರುವುದನ್ನು ಉಲ್ಲೇಖಿಸಿದ ರಾಜನಾಥ್ ಸಿಂಗ್ ಅವರು, ಗಡಿಯಾಚೆಯ ಸರಕಾರಿ ಪ್ರಾಯೋಜಿತ ಭಯೋತ್ಪಾದನೆಯನ್ನು ನಾವು ನಿರ್ಲಕ್ಷಿಸಲಾಗದು. ಭಯೋತ್ಪಾದನೆಯನ್ನು ಎದುರಿಸುವ ವಿಷಯದಲ್ಲಿ ದ್ವಂದ್ವ ನಿಲುವಿಗೆ ಸ್ಥಾನವಿಲ್ಲ ಎಂದು ಸ್ಪಷ್ಟಪಡಿಸಿದರು. ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಎಂಬುದನ್ನು ತೋರಿಸಿಕೊಟ್ಟಿದ್ದೇವೆ ಎಂದರು.



ದಾವೂದ್ ಸಾಮ್ರಾಜ್ಯದ ಪತನ

ಮಂಗಳವಾರ ಮುಂಜಾನೆ ದಿಲ್ಲಿಯ ತಾಂತ್ರಿಕ ವಿಮಾನ ನಿಲ್ದಾಣದಲ್ಲಿ ವಿಶೇಷ ವಿಮಾನವೊಂದು ಇಳಿಯುತ್ತಿದ್ದಂತೆ ಭಾರತದ ಆಂತರಿಕ ಭದ್ರತಾ ಕಾರ್ಯತಂತ್ರದಲ್ಲಿ ಒಂದು ಪ್ರಮುಖ ಮೈಲಿಗಲ್ಲು ದಾಖಲಾಯಿತು. ಆ ವಿಮಾನದಲ್ಲಿ ಇದ್ದವನು ಸಲೀಂ ಡೋಲಾ. ಈತ ಭೂಗತ ಪಾತಕಿ ದಾವೂದ್ ಇಬ್ರಾಹಿಂನ ಅಂತಾರಾಷ್ಟ್ರೀಯ ಮಾದಕವಸ್ತು ಮತ್ತು ಲಾಜಿಸ್ಟಿಕ್ಸ್ ವಿಭಾಗದ ಮುಖ್ಯಸ್ಥ ಎಂದು ಹೇಳಲಾದ ವ್ಯಕ್ತಿ. ಇಸ್ತಾಂಬುಲ್‌ನಲ್ಲಿ ಡೋಲಾನ ಬಂಧನ, ಕೇವಲ ಒಂದು ಸಾಮಾನ್ಯ ಕಾರ್ಯಾಚರಣೆಯಲ್ಲ. ಇದು ದೇಶಕ್ಕೆ ಬೇಕಾದ ಮೋಸ್ಟ್ ವಾಂಟೆಡ್ ಅಪರಾಧಿಗಳನ್ನು ಪತ್ತೆಹಚ್ಚಲು ಕಳೆದ ಒಂದು ದಶಕದಿಂದ ನಡೆಸುತ್ತಿರುವ ನಿರಂತರ ಹೋರಾಟದ ಮಹತ್ವದ ವಿಜಯ. 2014 ರಿಂದೀಚೆಗೆ, ಭಾರತೀಯ ಗುಪ್ತಚರ ಸಂಸ್ಥೆಗಳು ಕೇವಲ ರಾಜತಾಂತ್ರಿಕ ಪ್ರತಿಭಟನೆಗಳಿಗೆ ಸೀಮಿತವಾಗದೆ, ಹುಡುಕಿ ಮತ್ತು ವಶಪಡಿಸಿಕೊಳ್ಳಿ ಎಂಬ ಆಕ್ರಮಣಕಾರಿ ನೀತಿಯನ್ನು ಅಳವಡಿಸಿಕೊಂಡಿವೆ. ಈ ಮೂಲಕ ಭೂಗತ ಲೋಕದ ಪಾತಕಿಗಳಿಗೆ ಅಂತಾರಾಷ್ಟ್ರೀಯ ಗಡಿಗಳು ಇನ್ನು ಮುಂದೆ ಸುರಕ್ಷಿತ ಕವಚಗಳಲ್ಲ ಎಂಬ ಬಲವಾದ ಸಂದೇಶ ರವಾನಿಸಲಾಗಿದೆ.

ಲಾಜಿಸ್ಟಿಕ್ಸ್ ಸೂತ್ರಧಾರನ ಬಂಧನ

ಸಲೀಂ ಡೋಲಾ ದೀರ್ಘಕಾಲದವರೆಗೆ ದಾವೂದ್ ಸಿಂಡಿಕೇಟ್‌ನ ಸಂಶ್ಲೇಷಿತ ಮಾದಕವಸ್ತು ಜಾಲದ ಅದೃಶ್ಯ ಸೂತ್ರಧಾರನಾಗಿದ್ದ. ಟರ್ಕಿಯಲ್ಲಿ ಆತನನ್ನು ವಶಕ್ಕೆ ಪಡೆದದ್ದು ಭಾರತೀಯ ಮತ್ತು ಟರ್ಕಿಶ್ ಏಜೆನ್ಸಿಗಳ ನಡುವಿನ ಅತ್ಯಂತ ಸಂಕೀರ್ಣ ಸಮನ್ವಯ ಫಲ ನೀಡಿದೆ. ಡೋಲಾ ಈ ಕ್ರಿಮಿನಲ್ ಸಾಮ್ರಾಜ್ಯದ ಹಣಕಾಸು ಮತ್ತು ಲಾಜಿಸ್ಟಿಕ್ಸ್ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸುತ್ತಿದ್ದ ಎಂದು ತನಿಖಾಧಿಕಾರಿಗಳು ನಂಬಿದ್ದಾರೆ. ಅಂದರೆ, ಜಾಗತಿಕ ಭಯೋತ್ಪಾದನಾ ಹಣಕಾಸು ಮತ್ತು ಮಾದಕವಸ್ತು ಜಾಲದ ನಡುವಿನ ಕೊಂಡಿಯಾಗಿ ಈತ ಕೆಲಸ ಮಾಡುತ್ತಿದ್ದ. ಯುರೇಷಿಯಾ ಭಾಗದಲ್ಲಿ ಈ ಹಿಂದೆ ಪಾತಕಿಗಳು ಅನುಭವಿಸುತ್ತಿದ್ದ ರಕ್ಷಣೆ ಈಗ ವೇಗವಾಗಿ ಕ್ಷೀಣಿಸುತ್ತಿದೆ ಎಂಬುದಕ್ಕೆ ಈತನ ಹಸ್ತಾಂತರವೇ ಸಾಕ್ಷಿ.

ನೆರೆಹೊರೆಯಲ್ಲಿ ಬಿಗಿಯಾದ ಜಾಲ

ಸಿಂಡಿಕೇಟ್ ಅನ್ನು ಹಂತಹಂತವಾಗಿ ಕಿತ್ತೊಗೆಯುವ ಕಾರ್ಯತಂತ್ರ, ಮೊದಲು ಭಾರತದ ನೆರೆಹೊರೆಯ ದೇಶಗಳಿಂದಲೇ ಪ್ರಾರಂಭವಾಯಿತು. 2019ರಲ್ಲಿ ಕಾಠ್ಮಂಡುವಿನಲ್ಲಿ ಯೂನಸ್ ಅನ್ಸಾರಿಯನ್ನು ಬಂಧಿಸಿದಾಗ, ಈ ಜಾಲದ ಪ್ರಾದೇಶಿಕ ಹಣಕಾಸು ವ್ಯವಸ್ಥೆಗೆ ದೊಡ್ಡ ಹೊಡೆತ ಬಿದ್ದಿತು. ನಕಲಿ ಭಾರತೀಯ ಕರೆನ್ಸಿ ನೋಟುಗಳ (ಎಫ್‌ಐಸಿಎನ್) ದಂಧೆ ಮತ್ತು ಹವಾಲಾ ಚಾನೆಲ್‌ಗಳಲ್ಲಿ ಅನ್ಸಾರಿ ಪ್ರಮುಖ ಪಾತ್ರ ವಹಿಸುತ್ತಿದ್ದ. ನೆರೆಯ ದೇಶಗಳಲ್ಲಿ ಇಂತಹ ಆಪರೇಟರ್‌ಗಳನ್ನು ನಿಷ್ಕ್ರಿಯಗೊಳಿಸುವ ಮೂಲಕ, ಭಾರತೀಯ ಏಜೆನ್ಸಿಗಳು ಡಿ-ಕಂಪನಿಯ ಸರಬರಾಜು ಮಾರ್ಗಗಳನ್ನು ಯಶಸ್ವಿಯಾಗಿ ಬಂದ್ ಮಾಡಿವೆ.

ಪ್ರಮುಖ ಅಂಶಗಳು

- ಸಲೀಂ ಡೋಲಾ: ಇಸ್ತಾಂಬುಲ್‌ನಲ್ಲಿ ಬಂಧನ; ಮಾದಕವಸ್ತು ಮತ್ತು ಹಣಕಾಸು ವಿಭಾಗದ ಮುಖ್ಯಸ್ಥ.
- ಛೋಟಾ ರಾಜನ್: 2015ರಲ್ಲಿ ಬಾಲಿಯಿಂದ ಹಸ್ತಾಂತರ; ಅಂತಾರಾಷ್ಟ್ರೀಯ ಕಾರ್ಯಾಚರಣೆ ಆರಂಭ.
- ಫಾರೂಕ್ ತಕ್ಲಾ: 1993ರ ಬಾಂಬ್ ಸ್ಫೋಟದ ಆರೋಪಿ; 2018ರಲ್ಲಿ ದುಬೈನಿಂದ ಗಡಿಪಾರು.
- ಆಸ್ತಿ ಜಪ್ತಿ: ಇಕ್ಬಾಲ್ ಮಿರ್ಚಿಯ ಕೋಟ್ಯಂತರ ರೂ. ಮೌಲ್ಯದ ಆಸ್ತಿಗಳ ಮುಟ್ಟುಗೋಲು.
- ಜಾಗತಿಕ ವ್ಯಾಪ್ತಿ: ಟರ್ಕಿ, ಇಂಡೋನೇಷ್ಯಾ, ಥೈಲ್ಯಾಂಡ್ ಮತ್ತು ಯುಎಇಗಳಲ್ಲಿ ಯಶಸ್ವಿ ಕಾರ್ಯಾಚರಣೆಗಳು.

ದೇಶಗಳ ನಡುವೆ ಹಸ್ತಾಂತರ

ಅಪರಾಧಿಗಳನ್ನು ಹಿಡಿಯುವ ಈ ವೇಗ 2015ರಲ್ಲಿ ಇಂಡೋನೇಷ್ಯಾದ ಬಾಲಿಯಲ್ಲಿ ಛೋಟಾ ರಾಜನ್ ಬಂಧನದೊಂದಿಗೆ ಚುರುಕುಗೊಂಡಿತು. ಒಂದು ಕಾಲದಲ್ಲಿ ದಾವೂದ್ ಆಪ್ತನಾಗಿದ್ದು ನಂತರ ವೈರಿಯಾದ ರಾಜನ್‌ನ ಹಸ್ತಾಂತರ ಸಿಂಡಿಕೇಟ್‌ನ ಒಳಗಿನ ರಹಸ್ಯಗಳನ್ನು ತಿಳಿಯಲು ಸಹಕಾರಿಯಾಯಿತು. ಇದರ ಬೆನ್ನಲ್ಲೇ ಗಲ್ಫ್ ರಾಷ್ಟ್ರಗಳ ಸಹಕಾರವೂ ಹೆಚ್ಚಾಯಿತು. 2018ರಲ್ಲಿ, 1993ರ ಮುಂಬೈ ಸ್ಫೋಟದ ಪ್ರಮುಖ ಆರೋಪಿ ಫಾರೂಕ್ ತಕ್ಲಾನನ್ನು ದುಬೈನಿಂದ ಗಡಿಪಾರು ಮಾಡಲಾಯಿತು. ಅದೇ ರೀತಿ, 2020ರಲ್ಲಿ ಐಜಾಜ್ ಲಕ್ಡಾವಾಲಾ ಬ್ಯಾಂಕಾಕ್‌ನಲ್ಲಿ ಸೆರೆಹಿಡಿದು ತರಲಾಯಿತು. ಈ ಮೂಲಕ ಥೈಲ್ಯಾಂಡ್ ಮತ್ತು ಕೆನಡಾದಲ್ಲಿ ಕುಳಿತು ಸುಲಿಗೆ ದಂಧೆ ನಡೆಸುತ್ತಿದ್ದ ಅವನ ಆಟಕ್ಕೆ ಅಂತ್ಯ ಹಾಡಲಾಯಿತು.

ಆರ್ಥಿಕ ಬೆನ್ನೆಲುಬಿಗೆ ಪೆಟ್ಟು



ಕೇವಲ ಪಾತಕಿಗಳನ್ನು ಮಾತ್ರವಲ್ಲದೆ, ಅವರ ವಿದೇಶಿ ಆಸ್ತಿಪಾಸ್ತಿಗಳನ್ನೂ ಭಾರತ ಗುರಿ ಮಾಡಿದೆ. 2020ರಲ್ಲಿ ಪಾಕಿಸ್ತಾನಿ ಪಾಸ್‌ಪೋರ್ಟ್ ಬಳಸಿ ಪ್ರಯಾಣಿಸುತ್ತಿದ್ದ ಮುನಾಫ್ ಹಲಾರಿಯನ್ನು ಕೀನ್ಯಾದಲ್ಲಿ ತಡೆಯಲಾಯಿತು. ಇದರೊಂದಿಗೆ ಎನ್‌ಐಎ, ಸಲೀಂ ಫ್ರೂಟ್ ಮತ್ತು ರಿಯಾಜ್ ಭಾಟಿಯಂತಹ ಸ್ಥಳೀಯ ಕೊಂಡಿಗಳನ್ನು ಬಂಧಿಸಿ, ಮುಂಬೈನಲ್ಲಿ ನಡೆಯುತ್ತಿದ್ದ ಬೇನಾಮಿ ಆಸ್ತಿ ವ್ಯವಹಾರಗಳನ್ನು ಬಯಲಿಗೆಳೆದಿದೆ. ಬ್ರಿಟನ್ ಮತ್ತು ಭಾರತದಲ್ಲಿ ಇಕ್ಬಾಲ್ ಮಿರ್ಚಿಗೆ ಸೇರಿದ ಆಸ್ತಿಗಳನ್ನು ಜಪ್ತಿ ಮಾಡುವ ಮೂಲಕ, ಸರ್ಕಾರ, ಸಿಂಡಿಕೇಟ್ ಅನ್ನು ಆರ್ಥಿಕವಾಗಿ ಹತ್ತಿಕ್ಕಿದೆ. 2016ರಿಂದ ಇಂದಿನವರೆಗೆ ಭಾರತ ಕೇವಲ ಪ್ರತಿಕ್ರಿಯಿಸುತ್ತಿಲ್ಲ, ಬದಲಾಗಿ ದಾವೂದ್ ಸಾಮ್ರಾಜ್ಯವನ್ನು ಸಂಪೂರ್ಣವಾಗಿ ಧ್ವಂಸ ಮಾಡುತ್ತಿದೆ.

ಕಿರುಸುದ್ದಿ

ಇಂದು ಪ. ಬಂಗಾಳದಲ್ಲಿ 2ನೇ ಹಂತದ ಮತದಾನ

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ದ್ವಿತೀಯ ಹಂತದ ಮತದಾನ ಬುಧವಾರ ನಡೆಯುವ ಹಿನ್ನೆಲೆ ಹೆಚ್ಚುವರಿ ಮತದಾರರ ಪಟ್ಟಿಯನ್ನು ಭಾರತೀಯ ಚುನಾವಣಾ ಆಯೋಗ ಬಿಡುಗಡೆಗೊಳಿಸಿದೆ. ಹೆಚ್ಚುವರಿ ಮತದಾರರ ಪಟ್ಟಿಯಲ್ಲಿ 1,468 ನೂತನ ಮತದಾರರ ಹೆಸರುಗಳು ಒಳಗೊಂಡಿವೆ. ಬುಧವಾರ ಬಂಗಾಳದ 7 ಜಿಲ್ಲೆಗಳಾದ್ಯಂತ ಒಟ್ಟು 142 ವಿಧಾನಸಭೆ ಕ್ಷೇತ್ರಗಳಲ್ಲಿ ದ್ವಿತೀಯ ಹಂತದ ಮತದಾನ ನಡೆಯಲಿದೆ. ಮೊದಲ ಹಂತದ ಮತದಾನದಲ್ಲಿ 152 ವಿಧಾನಸಭೆ ಕ್ಷೇತ್ರಗಳಿಗಾಗಿ ಮತದಾನ ನಡೆದಿದ್ದು, 139 ಮಂದಿ ಇದೇ ಮೊದಲ ಬಾರಿ ಮತ ಚಲಾಯಿಸಿದ್ದರು.

ಇಂಧನ ಬೆಲೆ ಪರಿಷ್ಕರಣೆಗೆ ಎಟಿಎಫ್ ಸರ್ಕಾರಕ್ಕೆ ಮನವಿ

ಹೊಸದಿಲ್ಲಿ: ಏರ್ ಇಂಡಿಯಾ, ಇಂಡಿಗೊ ಮತ್ತು ಸ್ಪೈಸ್ ಜೆಟ್ ವಿಮಾನಯಾನ ಟರ್ಬೈನ್ ಇಂಧನ (ಎಟಿಎಫ್) ಬೆಲೆ ಪರಿಷ್ಕರಿಸುವಂತೆ ಮತ್ತು ಆರ್ಥಿಕ ಬೆಂಬಲ ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸಿದೆ. ವಿಮಾನಯಾನ ಉದ್ಯಮವು ಆರ್ಥಿಕವಾಗಿ ತೀವ್ರ ಒತ್ತಡದಲ್ಲಿದೆ. ತನ್ನ ಕಾರ್ಯಾಚರಣೆಯನ್ನು ನಿಲ್ಲಿಸುವ ಪರಿಸ್ಥಿತಿಯಲ್ಲಿದೆ. ಮೂರು ವಿಮಾನಯಾನ ಸಂಸ್ಥೆಗಳನ್ನು ಪ್ರತಿನಿಧಿಸುವ ಫೆಡರೇಶನ್ ಆಫ್ ಇಂಡಿಯನ್ ಏರ್‌ಲೈನ್ಸ್ (ಎಫ್‌ಐಎ), ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ಬರೆದ ಪತ್ರದಲ್ಲಿ ಈ ಮನವಿಯನ್ನು ಸಲ್ಲಿಸಿದೆ. ಮಧ್ಯಪ್ರಾಚ್ಯದ ಉದ್ವಿಗ್ನತೆಗಳು ತೈಲ ಬೆಲೆಗಳನ್ನು ಹೆಚ್ಚಿಸಿರುವುದರ ಜತೆಗೆ ವಾಯುಪ್ರದೇಶದ ನಿರ್ಬಂಧಗಳು ಕಾರ್ಯಾಚರಣೆ ವೆಚ್ಚವನ್ನು ಹೆಚ್ಚಿಸಿವೆ. ವಿಮಾನಯಾನ ಸಂಸ್ಥೆಯ ಕಾರ್ಯಾಚರಣೆಯ ವೆಚ್ಚದಲ್ಲಿ ಎಟಿಎಫ್ ಪಾಲು ಸುಮಾರು ಶೇ.40ರಷ್ಟಿದೆ.

80 ನೀರಾನೆಗಳ ರಕ್ಷಣೆಗೆ ವನತಾರಾದಿಂದ ನೆರವು

ಜಾಮ್ ನಗರ್ (ಗುಜರಾತ್): ರಿಲಯನ್ಸ್ ಇಂಡಸ್ಟ್ರೀಸ್ ಕಾರ್ಯನಿರ್ವಾಹಕ ನಿರ್ದೇಶಕ ಹಾಗೂ ವನ್ಯಜೀವಿ ರಕ್ಷಣೆ, ಸಂರಕ್ಷಣೆ ಎಂಬ ಅತ್ಯುತ್ತಮ ಉದ್ದೇಶ ಇರಿಸಿಕೊಂಡು ವನತಾರಾ ಆರಂಭಿಸಿದ ಅನಂತ್ ಅಂಬಾನಿ ಅವರು ಅಧಿಕೃತವಾಗಿ ಕೊಲಂಬಿಯಾ ಸರ್ಕಾರಕ್ಕೆ ಮನವಿ ನೀಡಿದ್ದಾರೆ. ಅಲ್ಲಿ ಸಂಕಷ್ಟದಲ್ಲಿ ಇರುವ 80 ನೀರಾನೆಗಳನ್ನು ಸುರಕ್ಷಿತವಾಗಿ ಹಿಡಿದು, ಅವುಗಳನ್ನು ಜೋಪಾನವಾಗಿ ಸ್ಥಳಾಂತರಿಸಿ, ಅವುಗಳ ಆಜೀವ ಪರ್ಯಂತ ಕಾಳಜಿ ಮಾಡುವುದಾಗಿ ಹೇಳಿದ್ದಾರೆ.

ಯುದ್ಧವಿನ್ನೂ ಮುಗಿದಿಲ್ಲ ಇರಾನ್ ಸೇನಾ ವಕ್ತಾರ!

ಟೆಹ್ರಾನ್: ಅಮೆರಿಕ-ಇರಾನ್ ನಡುವಿನ ತಾತ್ಕಾಲಿಕ ಕದನ ವಿರಾಮ ಪರಿಸ್ಥಿತಿಯ ಬಗ್ಗೆ ಪ್ರತಿಕ್ರಿಯಿಸಿದ ಇರಾನ್ ಸೇನಾ ವಕ್ತಾರ ಮೊಹಮ್ಮದ್ ಅಕ್ರಮಿನಿಯಾ, ನಮಗೆ ಇದಿನ್ನೂ ಯುದ್ಧಪರಿಸ್ಥಿತಿಯೇ ಆಗಿದೆ. ನಾವು ಶತ್ರುಗಳ ಮೇಲೆ ಕಣ್ಗಾವಲು ನಡೆಸುತ್ತಿದ್ದೇವೆ. ನಮ್ಮ ನೇತೃತ್ವವು ಯುದ್ಧ ಅವಶ್ಯಕತೆಯೆಂದು ಪರಿಗಣಿಸುವವರೆಗೆ ಯುದ್ಧ ಮುಂದುವರಿಸುತ್ತೇವೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇರಾನ್ ಸೇನಾ ವಕ್ತಾರರ ಹೇಳಿಕೆಯನ್ನು ಇರಾನ್ ಸರ್ಕಾರಿ ಸುದ್ದಿ ಸಂಸ್ಥೆ ಪ್ರಸರಿಸಿದೆ.

ಈ ಮೂಲಕ ಯುದ್ಧ ಮುಗಿದಿದೆ ಎಂದು ನಾವು ಪರಿಗಣಿಸುವುದಿಲ್ಲ ಎಂದು ಅವರು ಸ್ಪಷ್ಟನೆ ನೀಡಿದ್ದಾರೆ.

ಆರ್ಥಿಕ ಕುಸಿತದಲ್ಲಿ ಇರಾನ್: ಭಾರೀ ಆರ್ಥಿಕ ಕುಸಿತದಲ್ಲಿ ಇರಾನ್ ಸಿಲುಕಿದ್ದು, ಬೇಗನೆ ಹಾರ್ಮುಜ್ ಜಲಸಂಧಿಯನ್ನು ತೆರೆಯಲು ಮನವಿ ಮಾಡಿಕೊಂಡಿದ್ದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿಕೊಂಡಿದ್ದಾರೆ. ಅಮೆರಿಕ ಜಲ ದಿಗ್ಬಂಧನದಿಂದ ಮುಕ್ತಗೊಳಿಸುವುದು ನಿರ್ಣಾಯಕವೆಂದೂ, ದಯವಿಟ್ಟು ಜಲಸಂಧಿ ಮೇಲಿನ ಅಮೆರಿಕ ದಿಗ್ಬಂಧನವನ್ನು ಹಿಂಪಡೆಯಬೇಕೆಂದು ಇರಾನ್ ಮನವಿ ಮಾಡಿಕೊಂಡಿದೆ ಎಂದು ಅಧ್ಯಕ್ಷ ಟ್ರಂಪ್ ಟ್ರುಥ್‌ನಲ್ಲಿ ಹೇಳಿಕೊಂಡಿದ್ದಾರೆ. ಆದರೆ ಈ ಬಗ್ಗೆ ಇರಾನ್ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ.

ಷರತ್ತುಗಳ ಪರಿಶೀಲನೆ: ಅಮೆರಿಕ ದಿಗ್ಬಂಧನ ಹಿಂಪಡೆದರೆ ತಾನು ಹಾರ್ಮುಜ್ ಮುಕ್ತಗೊಳಿಸುವುದಾಗಿ ಹೇಳಿದ ಇರಾನ್ ವಿಧಿಸಿದ 3 ಷರತ್ತುಗಳನ್ನು ಟ್ರಂಪ್ ಒಪ್ಪಿಕೊಳ್ಳುವ ಸಾಧ್ಯತೆ ಇಲ್ಲದಿದ್ದರೂ, ಪರಿಶೀಲನೆ ಮಾಡುವುದಾಗಿ ಅಮೆರಿಕ ತಿಳಿಸಿದೆ.

ಸಹೋದರಿ ಅಸ್ಥಿಪಂಜರ ಹೊತ್ತು ತಂದ ಸಹೋದರ

ಕಿಯೋಂಜರ್: ಖಾತೆದಾರರು ಖುದ್ದಾಗಿ ಬರಬೇಕು ಎಂಬ ಬ್ಯಾಂಕ್ ಅಧಿಕಾರಿಗಳ ಮೊಂಡುತನಕ್ಕೆ ಒಡಿಶಾದ ಕಿಯೋಂಜರ್ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬ ತನ್ನ ಮೃತ ತಂಗಿಯ ಅಸ್ಥಿಪಂಜರವನ್ನೇ ಹೆಗಲ ಮೇಲೆ ಹೊತ್ತು ಮೂರು ಕಿಲೋಮೀಟರ್ ನಡೆದು ಬ್ಯಾಂಕಿಗೆ ಹಾಜರುಪಡಿಸಿದ್ದಾರೆ.

ದಿಯಾನಾಲಿ ಗ್ರಾಮದ ನಿವಾಸಿಯಾದ ಜಿತು, ಬ್ಯಾಂಕಿಗೆ ಅಲೆದು ಸುಸ್ತಾಗಿದ್ದರು. ತಂಗಿ ಜನವರಿ 26ರಂದೇ ಮೃತಪಟ್ಟಿದ್ದಾರೆ ಎಂದು ಹೇಳಿದರೂ, ಬ್ಯಾಂಕ್ ಅಧಿಕಾರಿಗಳ ಒಪ್ಪಲಿಲ್ಲ. ಹತಾಶೆಯಿಂದ ಜಿತು ನೇರವಾಗಿ ಸ್ಮಶಾನಕ್ಕೆ ಹೋಗಿ ತಂಗಿಯ ಅಸ್ಥಿಪಂಜರ ಹೊರತೆಗೆದು ಬ್ಯಾಂಕಿನ ವರಾಂಡದಲ್ಲಿ ತಂದಿಟ್ಟಿದ್ದಾರೆ.



ಇದರಿಂದ ಸಿಬ್ಬಂದಿಗೆ ಮೈ ಜುಂ ಎಂದಿದೆ. ಪೊಲೀಸ್ ತನಿಖೆಯಲ್ಲಿ ತಿಳಿದುಬಂದ ವಿಷಯವೇನೆಂದರೆ, ಜಿತು ಅಪ್ಪಟ ನಿರಕ್ಷರಸ್ಥ. ಅವರಿಗೆ ಈ 'ನಾಮಿನಿ', 'ವಾರಸುದಾರ' ಎಂಬ ಇಂಗ್ಲಿಷ್ ಪದಗಳಿಗಿಂತ ಹೊಟ್ಟೆ ಹಸಿವೇ ದೊಡ್ಡದಾಗಿತ್ತು. ತಂಗಿಯ ಗಂಡ ಮತ್ತು ಮಗ ಇಬ್ಬರೂ ಮೃತಪಟ್ಟಿದ್ದರಿಂದ ಜಿತು ಅವರೇ 20,000 ರೂ. ಹಣಕ್ಕೆ ವಾರಸುದಾರರಾಗಿದ್ದರು. ಆದರೆ ಖಾತೆದಾರರು ಬರಲಿ ಎಂದವರಿಗೆ ಮುಗ್ಧ ಜಿತು ಕೊಟ್ಟ ಉತ್ತರ ವ್ಯವಸ್ಥೆಗೆ ದೊಡ್ಡ ಕನ್ನಡಿ ಹಿಡಿದಿದೆ. ಈ ವಿಚಾರ ತಿಳಿಯುತ್ತಿದ್ದಂತೆ ಒಡಿಶಾದ ಸಚಿವ ಸುರೇಶ್ ಪೂಜಾರಿ ಅತೀವ ವಿಷಾದ ವ್ಯಕ್ತಪಡಿಸಿದ್ದಾರೆ. ತಕ್ಷಣ ಜಿಲ್ಲಾಧಿಕಾರಿಗಳ ಮೂಲಕ ಜಿತು ಅವರಿಗೆ ಬರಬೇಕಾದ ಹಣವನ್ನು ಪಾವತಿಸಲಾಗಿದೆ.

ರೈಲ್ವೆ ಹಳಿ ಮೇಲೆ ಸ್ಫೋಟ: ನಾಲ್ವರು ಉಗ್ರರ ಬಂಧನ

ಚಂಡೀಗಢ: ಪಟಿಯಾಲದ ಶಂಭು-ಅಂಬಾಲಾ ಸರಕು ಸಾಗಣೆ ರೈಲ್ವೆ ಹಳಿ ಮೇಲೆ ಸೋಮವಾರ ತಡರಾತ್ರಿ ಖಲಿಸ್ತಾನಿ ಪರ ಭಯೋತ್ಪಾದನಾ ಗುಂಪು ಸ್ಫೋಟ ನಡೆಸಿದ್ದು, ಈ ಸಂಬಂಧ ನಾಲ್ವರನ್ನು ಬಂಧಿಸಲಾಗಿದೆ. ಸ್ಫೋಟಕಗಳನ್ನು ಇರಿಸಲು ಯತ್ನಿಸುತ್ತಿದ್ದ ಗುಂಪಿನ ಓರ್ವ ಸದಸ್ಯ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಮೃತಪಟ್ಟ ಶಂಕಿತನನ್ನು ತಾರ್ನ್ ತರನ್ ಜಿಲ್ಲೆಯ ಜಗ್ರೂಪ್ ಸಿಂಗ್ ಎಂದು ಗುರುತಿಸಲಾಗಿದೆ. ಈ ಘಟನೆಗೆ ಸಂಬಂಧಿಸಿದಂತೆ ಪ್ರದೀಪ್ ಸಿಂಗ್ ಖಾಲ್ಸಾ, ಕುಲ್ವಿಂದರ್ ಸಿಂಗ್, ಸತ್ನಮ್ ಸಿಂಗ್ ಮತ್ತು ಗುರುಪ್ರೀತ್ ಸಿಂಗ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಮಲೇಷ್ಯಾ ಮೂಲದ ಹ್ಯಾಂಡ್ಲರ್‌ಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಪ್ರದೀಪ್ ಖಾಲ್ಸಾ ಈ ಕೃತ್ಯದ ಮಾಸ್ಟರ್ ಮೈಂಡ್ ಎನ್ನಲಾಗಿದೆ. ಬಂಧಿತರಿಂದ ಕೈಬಾಂಬ್, ಎರಡು ಪಿಸ್ತೂಲ್ ಮತ್ತು ಸಂವಹನ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿದೆ.



ಘಟನೆ ಮತ್ತು ಹಾನಿ: ಬೋಥೋನಿಯಾ ಗ್ರಾಮದ ಸಮೀಪ ಸರಕು ರೈಲು ಹಾದು ಹೋಗುತ್ತಿದ್ದಾಗ ಈ ಸ್ಫೋಟ ಸಂಭವಿಸಿದ್ದು, ಹಳಿಯ ಕೆಳಗೆ ಸಣ್ಣ ಹೊಂಡ ನಿರ್ಮಾಣವಾಗಿತ್ತು. ಅದರ ದುರಸ್ತಿ ಪೂರ್ಣಗೊಂಡಿದ್ದು, ರೈಲು ಸಂಚಾರ ಪುನಾರಂಭವಾಗಿದೆ. ಕಳೆದ ಮೂರು ತಿಂಗಳಲ್ಲಿ ಸರಕು ಸಾಗಣೆ ಹಳಿ ಮೇಲೆ ನಡೆದ ಎರಡನೇ ಸ್ಫೋಟ ಇದಾಗಿದ್ದು, ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಸರಣಿ ಸ್ಫೋಟಗಳ ತನಿಖೆ ಕೈಗೆತ್ತಿಕೊಳ್ಳುವ ಸಾಧ್ಯತೆಯಿದೆ.

ಅನಿಲ್ ಅಂಬಾನಿ 3034 ಕೋಟಿ ರೂ. ಆಸ್ತಿ ಜಪ್ತಿ

ಹೊಸದಿಲ್ಲಿ: ರಿಲಯನ್ಸ್ ಅನಿಲ್ ಅಂಬಾನಿ ಗ್ರೂಪ್(ಆರ್‌ಎಜಿ) ಕಂಪನಿಗಳ ವಿರುದ್ಧ ಅಕ್ರಮ ಹಣಕಾಸಿನ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ(ಇಡಿ) 3,034 ಕೋಟಿ ರೂ. ಮೌಲ್ಯದ ಹೊಸ ಆಸ್ತಿ ಮುಟ್ಟುಗೋಲು ಮಾಡಿದೆಯೆಂದು ಇಡಿ ಮೂಲಗಳು ತಿಳಿಸಿವೆ. ಅನಿಲ್ ಅಂಬಾನಿ ಗ್ರೂಪ್‌ಗೆ ಸೇರಿದ ರಿಲಯನ್ಸ್ ಕಮ್ಯುನಿಕೇಶನ್ಸ್ (ಆರ್‌ಕಾಮ್) ಮತ್ತು ರಿಲಯನ್ಸ್ ಇನ್ಫ್ರಾಸ್ಟ್ರಕ್ಚರ್ ಲಿ. (ಆರ್-ಇನ್ಫ್ರಾ) ಕಂಪನಿಗಳಿಗೆ ಸೇರಿದ ಕೋಟ್ಯಂತರ ರೂ. ಮೌಲ್ಯದ ಆಸ್ತಿಗಳನ್ನು ಇಡಿ ಜಪ್ತಿ ಮಾಡಿದೆ. ಮುಂಬೈನಲ್ಲಿ ಇರುವ ಐಷಾರಾಮಿ ಫ್ಲ್ಯಾಟ್, ಖಂಡಾಲಾದಲ್ಲಿರುವ ಫಾರ್ಮ್‌ಹೌಸ್, ಅಹಮದಾಬಾದ್‌ನ ಸನಂದ್‌ನಲ್ಲಿನ ಆಸ್ತಿ ಮತ್ತು ಆರ್-ಇನ್‌ಫ್ರಾಗೆ ಸೇರಿದ 7.71 ಕೋಟಿ ಷೇರುಗಳನ್ನು ಇಡಿ ಮುಟ್ಟುಗೋಲು ಹಾಕಿಕೊಂಡಿದೆ.

ಮಸೂದೆ ಮಂಡಿಸಿದ ರಿಪಬ್ಲಿಕನ್ ಸಂಸದ | ಭಾರತೀಯರೇ ಟಾರ್ಗೆಟ್

ಎಚ್-1ಬಿ ವಿತರಣೆ 3 ವರ್ಷ ಸ್ಥಗಿತ?

ನ್ಯೂಯಾರ್ಕ್: ಎಚ್-1ಬಿ ವೀಸಾ ವಿತರಣೆಯನ್ನು ಮೂರು ವರ್ಷಗಳವರೆಗೆ ಸ್ಥಗಿತಗೊಳಿಸುವುದು ಸೇರಿದಂತೆ ಪ್ರಮುಖ ಬದಲಾವಣೆಗಳನ್ನು ತರಬೇಕೆಂದು ಕೋರಿ ರಿಪಬ್ಲಿಕನ್ ಸಂಸದರು ಅಮೆರಿಕದ ಸಂಸತ್ತಿನಲ್ಲಿ ಮಸೂದೆಯೊಂದನ್ನು ಮಂಡಿಸಿದ್ದಾರೆ. ಅಮೆರಿಕದ ಟೆಕ್ ಕಂಪನಿಗಳಲ್ಲಿ ಉದ್ಯೋಗ ಮಾಡುತ್ತಿರುವ ಅಥವಾ ಅಮೆರಿಕದಲ್ಲಿ ನೆಲೆಸಲು ತಯಾರಿ ನಡೆಸುತ್ತಿರುವ ಭಾರತೀಯರ ಮೇಲೆ ಇದು ಭಾರೀ ಪರಿಣಾಮ ಬೀರಲಿದೆ.

ಅಮೆರಿಕ ನಾಗರಿಕರಿಗೆ ಸಿಗಬೇಕಾದ ಉದ್ಯೋಗಗಳನ್ನೆಲ್ಲಾ ವಿದೇಶಿಗರೇ ಪಡೆಯುತ್ತಿದ್ದು, ವಿದೇಶಿಗರು ಸ್ಥಳೀಯರ ಉದ್ಯೋಗಾವಕಾಶವನ್ನು ಹೈಜಾಕ್ ಮಾಡುತ್ತಿದ್ದಾರೆ ಎಂಬ ಕಾರಣವನ್ನು ನೀಡಿ ರಿಪಬ್ಲಿಕನ್ ಪಕ್ಷದ ಸಂಸದರು ಎಚ್-1ಬಿ ವೀಸಾ ದುರುಪಯೋಗ ಕಾಯ್ದೆ 2026 ಮಸೂದೆಯನ್ನು ಮಂಡಿಸಿದ್ದರು. ಟ್ರಂಪ್ ಸರ್ಕಾರ ಭಾರತೀಯರ ಮೇಲೆ ಗುರಿಯಾಗಿಸಿದಂತೆ ಕಾಣುತ್ತದೆ.

ದೊಡ್ಡ ಹುದ್ದೆಗಳಿಗಷ್ಟೇ ವಿದೇಶಿಯರು: ಎಚ್-1ಬಿ ವೀಸಾಗೆ ಅರ್ಜಿ ಸಲ್ಲಿಸಬೇಕಿದ್ದರೆ ಕನಿಷ್ಠ 2 ಲಕ್ಷ ಡಾಲರ್ ವೇತನ ಇರಬೇಕು ಎಂಬ ನಿಯಮ ಜಾರಿಗೊಳಿಸಿದ ಅಧಿಕ ವೇತನದ ಉದ್ಯೋಗಗಳಲ್ಲಿ ಮಾತ್ರವೇ ವಿದೇಶಿಯರಿಗೆ ಅವಕಾಶ ಕಲ್ಪಿಸಲು ಅಧ್ಯಕ್ಷ ಟ್ರಂಪ್ ಆಡಳಿತ ಯತ್ನಿಸುತ್ತಿದೆ.

ವಿದೇಶಿಯರಿಗೆ ವೀಸಾ ನಿರ್ಬಂಧ ಹೇರುವ ಯತ್ನ: ಎಚ್-1ಬಿ ವೀಸಾ ವಿತರಣೆಯ ಮೇಲೆ ಸಂಪೂರ್ಣ ನಿರ್ಬಂಧ ಹೇರುವ ಪ್ರಯತ್ನಗಳಲ್ಲೊಂದು, ದಿ ಎಂಡ್ ಎಚ್-1ಬಿ ವೀಸಾ ದುರುಪಯೋಗ ಕಾಯ್ದೆ 2026 ಹೆಸರಿನ ಮಸೂದೆಯನ್ನು ರಿಪಬ್ಲಿಕನ್ ಸಂಸದ ಎಲಿ ಕ್ರೇನ್ ಅಮೆರಿಕದ ಸಂಸತ್ತಿನಲ್ಲಿ ಮಂಡಿಸಿದ್ದಾರೆ.

ಈ ಮಸೂದೆ ಪ್ರಕಾರ, ಮೂರು ವರ್ಷಗಳವರೆಗೆ ಎಚ್-1ಬಿ ವೀಸಾ ವಿತರಣೆ ಸ್ಥಗಿತಗೊಳಿಸುವುದು. ಅಲ್ಲದೆ, ಅಮೆರಿಕ ಟೆಕ್ಕಿಗಳಿಗೆ ಹೆಚ್ಚು ಉದ್ಯೋಗಾವಕಾಶ ನೀಡುವ ಸಲುವಾಗಿ ವಿದೇಶಿಯರಿಗೆ ನೀಡುವ ಎಚ್-1ಬಿ ವೀಸಾಗಳನ್ನು 65 ಸಾವಿರದಿಂದ 25 ಸಾವಿರಕ್ಕೆ ಇಳಿಸುವುದು ಮತ್ತು ಎಚ್-1ಬಿ ವೀಸಾಗೆ ಅರ್ಜಿ ಸಲ್ಲಿಸಬೇಕಿದ್ದರೆ ಕನಿಷ್ಠ 2 ಲಕ್ಷ ಡಾಲರ್ ವೇತನ ಇರಬೇಕು ಇತ್ಯಾದಿ ಕಠಿಣ ನಿಯಮಗಳನ್ನು ಜಾರಿಗೆ ತರಲಾಗುವುದು.

ರಾಜಕೀಯ ಬೆಂಬಲ: ಬ್ರಿಯಾನ್ ಬಾಬಿನ್, ಬ್ರೆಂಡನ್ ಜಿಲ್, ವೆಸ್ಲಿ ಹಂಟ್, ಕೀತ್ ಸೆಲ್ಫ್, ಆ್ಯಂಡಿ ಓಗ್ಲೆಸ್, ಪಾಲ್ ಗೋಸ್ಸರ್ ಮತ್ತು ಟಾಮ್ ಮೆಕ್‌ಕ್ಲಿಂಟಾಕ್ ಸೇರಿ ಹಲವು ರಿಪಬ್ಲಿಕನ್ ಸಂಸದರು ಮಸೂದೆಗೆ ಬೆಂಬಲ ಸೂಚಿಸಿದ್ದಾರೆ.

- ವಿದೇಶಿಯರಿಗೆ ವೀಸಾ 65,000ದಿಂದ 25,000ಕ್ಕೆ ಇಳಿಸುವ ಸಾಧ್ಯತೆ
- ಎಚ್-1ಬಿ ವೀಸಾ ಅರ್ಜಿ ಸಲ್ಲಿಸಲು ಕನಿಷ್ಠ ವೇತನ 2 ಲಕ್ಷ ಡಾಲರ್

ಆರು ದಶಕಗಳ ಸದಸ್ಯತ್ವ ಅಂತ್ಯ | ಮೇ 1ರಿಂದ ಜಾರಿ

ಒಪೆಕ್‌ಗೆ ಯುಎಇ ಗುಡ್‌ಬೈ

ದುಬೈ: ಜಾಗತಿಕ ಇಂಧನ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗುವಂಥ ಬೆಳವಣಿಗೆ ಸಂಭವಿಸಿದ್ದು, ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ತೈಲ ರಫ್ತುಗಾರ ರಾಷ್ಟ್ರಗಳ ಸಂಘಟನೆ (ಒಪೆಕ್) ಹಾಗೂ ಒಪೆಕ್+ ಮೈತ್ರಿಯಿಂದ ಹೊರಬರುತ್ತಿರುವುದಾಗಿ ಘೋಷಿಸಿದೆ. ಈ ನಿರ್ಧಾರ ಮೇ 1, 2026ರಿಂದ ಜಾರಿಗೆ ಬರಲಿದ್ದು, ಸುಮಾರು ಆರು ದಶಕಗಳ ಸದಸ್ಯತ್ವ ಅಂತ್ಯವಾಗಲಿದೆ.

ಯುಎಇ ಇಂಧನ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿರುವಂತೆ, ಉತ್ಪಾದನಾ ನೀತಿಗಳ ಸಮಗ್ರ ಪರಿಶೀಲನೆಯನಂತರಈತೀರ್ಮಾನಕೈಗೊಳ್ಳಲಾಗಿದೆ. 2027ರೊಳಗೆ ದಿನಕ್ಕೆ 50 ಲಕ್ಷ ಬ್ಯಾರೆಲ್ ಉತ್ಪಾದನಾ ಸಾಮರ್ಥ್ಯವನ್ನು ಸಾಧಿಸುವ ಗುರಿ ಹೊಂದಿರುವ ಯುಎಇಗೆ, ಒಪೆಕ್+ ನಿಗದಿಪಡಿಸಿದ್ದ ಕಟ್ಟುನಿಟ್ಟಿನ ಕೋಟಾಗಳು ಅಡ್ಡಿಯಾಗುತ್ತಿವೆ ಎಂಬ ಅಂಶ ಮುಖ್ಯ ಕಾರಣವಾಗಿದೆ.ಒಪೆಕ್‌ನಿಂದ ಹೊರಬರುವ ಮೂಲಕ ಯುಎಇ ತನ್ನ ಉತ್ಪಾದನಾ ಮಟ್ಟವನ್ನು ಸ್ವತಂತ್ರವಾಗಿ ನಿಗದಿಪಡಿಸಿಕೊಳ್ಳುವ ಅವಕಾಶ ಪಡೆಯಲಿದೆ. ರಾಷ್ಟ್ರೀಯ ಹಿತಾಸಕ್ತಿಯ ಜೊತೆಗೆ ಜಾಗತಿಕ ಮಾರುಕಟ್ಟೆಯ ಬೇಡಿಕೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಪೂರೈಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ. ಇದರಿಂದ ಯುಎಇ ತನ್ನ ತೈಲ ಸಂಪತ್ತನ್ನು ಹೆಚ್ಚಿನ ಪ್ರಮಾಣದಲ್ಲಿ ಹಣಕಾಸಿನ ರೂಪಕ್ಕೆ ತರಲು ಸಾಧ್ಯವಾಗಲಿದೆ.

ಈ ನಿರ್ಧಾರವು ಪ್ರಾದೇಶಿಕ ಅಸ್ಥಿರತೆ ಮತ್ತು ಇರಾನ್‌ನೊಂದಿಗೆ ಉದ್ವಿಗ್ನತೆಯ ನಡುವೆಯೇ ಪ್ರಕಟವಾಗಿರುವುದು ಗಮನಾರ್ಹವಾಗಿದೆ. ಹಾರ್ಮುಜ್ ಜಲಸಂಧಿಯಲ್ಲಿ ಸಾಗಾಣಿಕೆ ಮೇಲೆ ನಡೆದ ದಾಳಿಗಳ ಹಿನ್ನೆಲೆ, ಭದ್ರತಾ ವಿಚಾರದಲ್ಲಿ ಇತರ ಅರಬ್ ರಾಷ್ಟ್ರಗಳಿಂದ ಸಮರ್ಪಕ ಬೆಂಬಲ ಸಿಗಲಿಲ್ಲ ಎಂಬ ಅಸಮಾಧಾನವೂ ಯುಎಇಯಲ್ಲಿ ವ್ಯಕ್ತವಾಗಿದ್ದಂತೆ ವರದಿಗಳು ಸೂಚಿಸುತ್ತವೆ. ಒಪೆಕ್‌ನ ಪ್ರಮುಖ ರಾಷ್ಟ್ರವಾದ ಸೌದಿ ಅರೇಬಿಯಾದೊಂದಿಗೆ ಯುಎಇಯಸಂಬಂಧದಲ್ಲಿಯೂಇತ್ತೀಚೆಗೆಉದ್ವಿಗ್ನತೆ ಹೆಚ್ಚಾಗಿದೆ ಎಂದು ತಿಳಿದುಬಂದಿದೆ. ಈ ಬೆಳವಣಿಗೆ ಅಮೆರಿಕ ಅಧ್ಯಕ್ಷ ಟ್ರಂಪ್‌ಗೆ ರಾಜತಾಂತ್ರಿಕವಾಗಿ ಲಾಭಕರವೆಂದು ವಿಶ್ಲೇಷಿಸಲಾಗಿದೆ.

ಬಸವಣ್ಣ ಜೈವಿಕ ಉದ್ಯಾನ ನಿರ್ಮಾಣಕ್ಕೆ ಅನುಮೋದನೆ

ಬೆಂಗಳೂರು: ಮಾದಪ್ಪನಹಳ್ಳಿಯಲ್ಲಿ 153 ಎಕರೆ ಪ್ರದೇಶದಲ್ಲಿ ವಿಶ್ವಗುರು ಬಸವಣ್ಣ ಬೃಹತ್ ಜೈವಿಕ ಉದ್ಯಾನ ನಿರ್ಮಾಣ ಮಾಡಲು ಸಚಿವ ಸಂಪುಟದ ಅನುಮೋದನೆಯೂ ಆಗಿದ್ದು, ಮುಂದಿನ ತಿಂಗಳು ಮುಖ್ಯಮಂತ್ರಿಗಳಿಂದ ಶಂಕುಸ್ಥಾಪನೆ ಮಾಡಿಸಲಾಗುವುದು ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.



ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, ವಿಶ್ವಗುರು ಬಸವಣ್ಣ ಬೃಹತ್ ಜೈವಿಕ ಉದ್ಯಾನವನ ಲಾಲ್‌ಬಾಗ್, ಕಬ್ಬನ್‌ಪಾರ್ಕ್ ನಂತರದ ಅತಿ ದೊಡ್ಡ ಉದ್ಯಾನವಾಗಲಿದೆ. ಇದು ಶತಮಾನದ ಸಾಧನೆ ಎಂದರೂ ತಪ್ಪಾಗಲಾರದು. ಹಸಿರೇ ಉಸಿರು ಎಂಬುದನ್ನು ಎಲ್ಲರೂ ಮನಗಾಣಬೇಕು. ಬೆಂಗಳೂರಿಗರಲ್ಲಿ ಹಸಿರು ಕಲ್ಪನೆ ಹೆಚ್ಚಬೇಕು. ಇಲ್ಲವಾದರೆ ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ ಎಂದರು. ಹಿಂದೆ ಧರ್ಮೋ ರಕ್ಷತಿ ರಕ್ಷಿತಃ ಎಂದು ಹೇಳುತ್ತಿದ್ದರು. ಇಂದು ನಾವು ವೃಕ್ಷೋ ರಕ್ಷತಿ ರಕ್ಷಿತಃ ಎಂದು ಹೇಳಬೇಕು. ಕಾರಣ ಮರಗಳಿದ್ದರೆ ನಮ್ಮ ಬದುಕು ಎಂದು ಎಚ್ಚರಿಸಿದರು.

ಏರ್ ಶೋ ನಡೆಯುವ ಭೂಮಿಯೂ ಅರಣ್ಯ ಇಲಾಖೆಯದ್ದು: ಬೆಂಗಳೂರಿನಲ್ಲಿ ಪ್ರತಿ 2 ವರ್ಷಗಳಿಗೊಮ್ಮೆ ಅಂತಾರಾಷ್ಟ್ರೀಯ ವೈಮಾನಿಕ ಪ್ರದರ್ಶನ ಏರ್ ಶೋ ನಡೆಯುವ ಗಂಟಿಗಾನಹಳ್ಳಿಯಲ್ಲಿರುವ ಯಲಹಂಕ ವಾಯುನೆಲೆ ಕೂಡ ಅರಣ್ಯ ಭೂಮಿಯಾಗಿದೆ. ಗಂಟಿಗಾನಹಳ್ಳಿ ಗ್ರಾಮದ 159 ಎಕರೆ ಪ್ರದೇಶ ಸರ್ಕಾರಿ ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿದ್ದು, ವಾಯುಪಡೆ ತೀರುವಳಿ ಪ್ರಸ್ತಾವನೆ ಸಲ್ಲಿಸಿ, ಪರ್ಯಾಯ ಭೂಮಿ ನೀಡಿದರೆ ಈ ಪ್ರದೇಶವನ್ನು ಪಡೆಯದಿದ್ದರೆ, ಅದನ್ನು ಅರಣ್ಯ ಇಲಾಖೆಗೆ ಹಿಂಪಡೆಯಲು ಕ್ರಮ ವಹಿಸಲಾಗುವುದು ಎಂದು ಮಾಹಿತಿ ನೀಡಿದರು. ಭಾರತೀಯ ವಾಯುಪಡೆ ಈ ಪ್ರದೇಶವನ್ನು ಪ್ರಸ್ತುತ ರನ್ ವೇ ಆಗಿ ಉಪಯೋಗಿಸುತ್ತಿದೆ ಎಂದರು.

ಬಿಜೆಪಿ ಪ್ರತಿಭಟನೆ



ಬೆಂಗಳೂರಿನ ದೊಮ್ಮಲೂರು ಸಮೀಪದ ಬೆಂಗಳೂರು ಅಂತಾರಾಷ್ಟ್ರೀಯ ಕೇಂದ್ರದಲ್ಲಿ ನಡೆದ (ಬಿಐಸಿ) ದೆಹಲಿ ಗಲಭೆ ಪ್ರಕರಣದ ಆರೋಪಿ ಉಮರ್ ಖಾಲಿದ್ ಕುರಿತ ಪುಸ್ತಕ ಬಿಡುಗಡೆ ಕಾರ್ಯಕ್ರಮ ವಿರೋಧಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪರೀಕ್ಷೆ 2ಗೆ ನೋಂದಾಯಿಸಿ

ಬೆಂಗಳೂರು: 2026ನೇ ಸಾಲಿನ ರಾಜ್ಯದ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಫಲಿತಾಂಶ ಈಗಾಗಲೇ ಪ್ರಕಟಗೊಂಡಿದ್ದು, ಶೇ.94.18 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ರಾಜ್ಯದ ಶೈಕ್ಷಣಿಕ ಇತಿಹಾಸದಲ್ಲೇ ದಾಖಲೆ ನಿರ್ಮಾಣವಾಗಿದ್ದು, ಈ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ಎಲ್ಲ ವಿದ್ಯಾರ್ಥಿಗಳನ್ನು ಮುಂಬರುವ ಪರೀಕ್ಷೆ 2ಕ್ಕೆ ನೋಂದಾಯಿಸಲು ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧುಬಂಗಾರಪ್ಪ ಮನವಿ ಮಾಡಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಲ್ಲ ವಿಷಯಗಳಲ್ಲಿ 1,716 ಜನ ವಿದ್ಯಾರ್ಥಿಗಳು ಸೇರಿದಂತೆ ಅಂದಾಜು 45,415 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಪ್ರತಿಯೊಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಭವಿಷ್ಯ ಉಜ್ವಲಗೊಳಿಸುವುದು ಸರ್ಕಾರ, ಶಿಕ್ಷಣ ಇಲಾಖೆ ಹಾಗೂ ನಮ್ಮೆಲ್ಲರ ಹೊಣೆ. ಹಾಗಾಗಿ ಪರೀಕ್ಷೆಯ ಫಲಿತಾಂಶದಿಂದಾಗಿ ಯಾವುದೇ ವಿದ್ಯಾರ್ಥಿಯು ನಿರಾಸೆಗೊಂಡು ತನ್ನ ಶಿಕ್ಷಣ ವನ್ನು ಮೊಟಕುಗೊಳಿಸಬಾರದು ಎಂಬುದು ಸರ್ಕಾರದ ದೃಢವಾದ ಆಶಯವಾಗಿದೆ ಎಂದು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಅನುತ್ತೀರ್ಣರಾಗಿರುವ ಎಲ್ಲ ವಿದ್ಯಾರ್ಥಿಗಳು ಮುಂಬರುವ ಪರೀಕ್ಷೆ-2ಕ್ಕೆ ಕಡ್ಡಾಯವಾಗಿ ನೋಂದಾಯಿಸಿ, ಅವರನ್ನು ಶೈಕ್ಷಣಿಕವಾಗಿ ಸಜ್ಜುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಲಾ ಇಲಾಖೆಯ ಉಪನಿರ್ದೇಶಕರಿಗೆ ಈಗಾಗಲೇ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಹೇಳಿದ್ದಾರೆ.

ಮೇ18ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ-2

ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರಲ್ಲಿ ಅನುತ್ತೀರ್ಣರಾದ ಅಥವಾ ಅಂಕಗಳನ್ನು ಸುಧಾರಿಸಿಕೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳಿಗಾಗಿ ಮೇ 18 ರಿಂದ 25ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ -2 ನಡೆಯಲಿದೆ. ಈ ಬಾರಿ ಮೂರನೇ ಪರೀಕ್ಷೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ವಿದ್ಯಾರ್ಥಿಗಳಿಗೆ ಕೇವಲ ಎರಡು ಪರೀಕ್ಷೆಗಳ ಅವಕಾಶ ಮಾತ್ರ ಲಭ್ಯವಿರಲಿದೆ.

ಕಿರುಸುದ್ದಿ

ಮೇ 15ಕ್ಕೆ ಡಿಕೆಶಿಗೆ ಸಿಎಂ ಸ್ಥಾನ: ಇಕ್ಬಾಲ್ ಹುಸೇನ್

ರಾಮನಗರ: ಮೇ 15ಕ್ಕೆ ಡಿ.ಕೆ. ಶಿವಕುಮಾರ್ ಸಿಎಂ ಆಗೋದು ಫಿಕ್ಸ್, ಇದೇ ನನ್ನ ಅಂತಿಮ ದಿನಾಂಕ ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ತಿಳಿಸಿದರು. ಡಿ.ಕೆ. ಶಿವಕುಮಾರ್ ಸಿಎಂ ಆಗಲು ಈ ಹಿಂದೆ ಎರಡ್ಮೂರು ದಿನಾಂಕ ನೀಡಿದ್ದ ಇಕ್ಬಾಲ್ ಹುಸೇನ್, ಇದೀಗ ಮೇ 15ಕ್ಕೆ ಅಂತಿಮ ದಿನ ಎಂದು ನಗರದಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಈ ಅವಧಿಯಲ್ಲೇ ಡಿಕೆಶಿ ಸಿಎಂ ಆಗೇ ಆಗುತ್ತಾರೆ. ಅವರಿಗೆ ಅವಕಾಶ ಸಿಗಬೇಕು ಅನ್ನೋದು ಎಲ್ಲರ ಬಯಕೆ. ಅವರಿಗೆ ಸಿಎಂ ಸ್ಥಾನ ಸಿಗಬೇಕು ಎಂಬುದು ನಮ್ಮೆಲ್ಲರ ಆಸೆ. ಅವರ ಮಾರ್ಗದರ್ಶನದಲ್ಲಿ ನಾವು ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು. ಅವರ ನೇತೃತ್ವದಲ್ಲಿ ಈ ರಾಜ್ಯದ ಅಭಿವೃದ್ಧಿ ನೋಡಬೇಕು ಅಂತ ಆಸೆ ಇದೆ. ಮೇ 15ರ ಒಳಗಡೆ ಅವರಿಗೆ ಅಧಿಕಾರ ಸಿಗುತ್ತೆ ಎನ್ನುವ ಅಭಿಲಾಷೆ ಇದೆ ಎಂದರು. ಸತೀಶ್ ಜಾರಕಿಹೊಳಿ ಹಾಗೂ ಎಚ್‌ಸಿ.ಮಹಾದೇವಪ್ಪ ದೆಹಲಿಗೆ ಹೋಗಿ ಹೈಕಮಾಂಡ್ ನಾಯಕರನ್ನ ಭೇಟಿ ಮಾಡಿರುವ ಬಗ್ಗೆ ಮಾತನಾಡಿದ ಅವರು, ನಮ್ಮ ಹಿರಿಯ ನಾಯಕರುಗಳು. ಪಕ್ಷದ ವರಿಷ್ಠರನ್ನು ಭೇಟಿ ಮಾಡುವುದರಲ್ಲಿ ತಪ್ಪೇನಿದೆ? ತಮ್ಮ ಕಷ್ಟ- ಸುಖ ಮಾತಾಡಲು ಹೋಗಿರುತ್ತಾರೆ ಎಂದರು.



ಮೇ 6ರಿಂದ ವ್ಯಕ್ತಿತ್ವ ಪರೀಕ್ಷೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗವು 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಒಟ್ಟು 384 ಹುದ್ದೆಗಳ ವ್ಯಕ್ತಿತ್ವ ಪರೀಕ್ಷೆಯ ವೇಳಾಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದೆ. 310 ಉಳಿಕೆ ಮೂಲಕ ವೃಂದ ಮತ್ತು 74 ಹೈದರಾಬಾದ್ ಕರ್ನಾಟಕ (ಎಚ್‌ಕೆ) ವೃಂದದ ಹುದ್ದೆಗಳು ಸೇರಿದಂತೆ ಒಟ್ಟು 384 ಹುದ್ದೆಗಳು. ಅರ್ಹ ಅಭ್ಯರ್ಥಿಗಳಿಗೆ ವ್ಯಕ್ತಿತ್ವ ಪರೀಕ್ಷೆ ಮತ್ತು ಮೂಲ ದಾಖಲೆಗಳ ಪರಿಶೀಲನೆಯು 2026 ರ ಮೇ 6 ರಿಂದ 10 ರವರೆಗೆ ವಿವಿಧ ದಿನಾಂಕಗಳಲ್ಲಿ ನಡೆಯಲಿದೆ. ಮುಖ್ಯ ಪರೀಕ್ಷೆಯಿಂದ 1:3ರ ಅನುಪಾತದಲ್ಲಿ ಅರ್ಹತೆ ಪಡೆದ ಒಟ್ಟು 1,158 ಅಭ್ಯರ್ಥಿಗಳು ಈ ಹಂತಕ್ಕೆ ಆಯ್ಕೆಯಾಗಿದ್ದಾರೆ. ಆಯೋಗದ ಸಭೆಯ ತೀರ್ಮಾನದಂತೆ ವ್ಯಕ್ತಿತ್ವ ಪರೀಕ್ಷೆಯ ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಅಭ್ಯರ್ಥಿಗಳ ನೋಂದಣಿ ಸಂಖ್ಯೆ, ಹೆಸರು, ಪರೀಕ್ಷೆಯ ದಿನಾಂಕ, ಸಮಯ ವಿವರಗಳನ್ನು ಒಳಗೊಂಡ ಪಟ್ಟಿಯನ್ನು ಆಯೋಗದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅರ್ಹ ಅಭ್ಯರ್ಥಿಗಳಿಗೆ ಈಗಾಗಲೇ ಸೂಚನಾ ಪತ್ರಗಳನ್ನು ರವಾನಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಆಯೋಗದ ಅಧಿಕೃತ ವೆಬ್‌ಸೈಟ್ http://kpsc.kar.nic.inಗೆ ಭೇಟಿ ನೀಡಬಹುದಾಗಿದೆ ಎಂದು ಆಯೋಗದ ಕಾರ್ಯದರ್ಶಿ ಜ್ಯೋತಿ ಕೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪತ್ನಿ ಹತ್ಯೆಗೈದು ಪತಿ ಆತ್ಮಹತ್ಯೆ

ಕಲಬುರಗಿ: ಜಿಲ್ಲೆಯ ಅಫಜಲಪುರ ತಾಲೂಕಿನ ಮದರಾ ಕೆ ಗ್ರಾಮದಲ್ಲಿ ಹೃದಯವಿದ್ರಾವಕ ಘಟನೆ ನಡೆದಿದ್ದು, ಗಂಡನೊಬ್ಬ ತನ್ನ ಹೆಂಡತಿಯನ್ನು ಬರ್ಬರವಾಗಿ ಹತ್ಯೆಗೈದು ಬಳಿಕ ತಾನು ಆತ್ಮಹತ್ಯೆಗೆ ಶರಣಾದ ಘಟನೆ ಬೆಳಕಿಗೆ ಬಂದಿದೆ. ಅಂಜಲಿ (23) ಮೃತಪಟ್ಟ ದುರ್ದೈವಿ ಎಂದು ಗುರುತಿಸಲಾಗಿದೆ. ಆರೋಪಿಯಾಗಿರುವ ಗಂಡ ಲಕ್ಷ್ಮೀಪುತ್ರ, ಕುಡುಗೋಲಿನಿಂದ ಹೆಂಡತಿಯನ್ನು ಕೊಚ್ಚಿ ಕೊಲೆ ಮಾಡಿದ ಬಳಿಕ, ತನ್ನ ಮಗುವಿನೊಂದಿಗೆ ಗ್ರಾಮದ ಹೊರವಲಯದಲ್ಲಿರುವ ಬಾವಿಗೆ ಹಾರಿದ್ದಾನೆ ಎಂದು ತಿಳಿದುಬಂದಿದೆ. ಬಾವಿಗೆ ಹಾರುವ ವೇಳೆ ಸ್ಥಳೀಯರು ಮಗುವನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಲಕ್ಷ್ಮೀಪುತ್ರ ಮೃತಪಟ್ಟಿದ್ದಾನೆ ಎಂದು ಮೂಲಗಳು ತಿಳಿಸಿವೆ. ಘಟನೆಯ ಮಾಹಿತಿ ತಿಳಿದು ಸ್ಥಳಕ್ಕೆ ರೇವೂರು ಪೊಲೀಸರು ಹಾಗೂ ಸುಕೋ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹ

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ ₹10 ಕೋಟಿ ನೀಡಿ

ಬೆಂಗಳೂರು: ರಾಜ್ಯದಲ್ಲಿ ಬರಗಾಲದ ಸ್ಥಿತಿ ಕಂಡುಬರುತ್ತಿದ್ದರೆ, ಸಚಿವರು ಅಧಿಕಾರಕ್ಕಾಗಿ ದಿಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಕುಡಿಯುವ ನೀರಿಗಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ 10 ಕೋಟಿ ರೂ. ಅನುದಾನ ಬಿಡುಗಡೆ ಮಾಡಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್‌ನ ನಾಯಕತ್ವವನ್ನು ಧಿಕ್ಕರಿಸಿ ಶಾಸಕರು ದಿಲ್ಲಿಗೆ ಹೋಗುತ್ತಿದ್ದಾರೆ. ಸಿದ್ದರಾಮಯ್ಯ ಅವರ ನಾಯಕತ್ವಕ್ಕೆ ಮೂರು ಕಾಸಿನ ಬೆಲೆಯಿಲ್ಲ ಎಂಬುದು ಸಾಬೀತಾಗಿದೆ. ಒಳಮೀಸಲಾತಿಗೆಸಂಬಂಧಿಸಿದಂತೆತೀರ್ಮಾನ ಕೈಗೊಳ್ಳಲುನಡೆಸಿದಸಚಿವಸಂಪುಟಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಇರಲಿಲ್ಲ. ಅವರು ದಿಲ್ಲಿಯಲ್ಲಿದ್ದಾಗ ಸಭೆ ಮಾಡಿದ್ದಾರೆ ಎಂದರೆ ಕಾಂಗ್ರೆಸ್‌ನಲ್ಲಿ 2ಬಣ ಸೃಷ್ಟಿಯಾಗಿದೆ ಎಂದೇ ಅರ್ಥ ಎಂದು ಟೀಕಿಸಿದರು.

ಎಲ್ಲ ಕಡೆ ಬರಗಾಲ ಕಂಡುಬಂದಿದ್ದು, ನೀರಿಗಾಗಿ ಹಾಹಾಕಾರ ಹೆಚ್ಚಿದೆ. ಜಾನುವಾರುಗಳಿಗೆ ನೀರು ಸಿಗುತ್ತಿಲ್ಲ, ಜನರಿಗೆ ಕುಡಿಯಲು ನೀರು ದೊರೆಯುತ್ತಿಲ್ಲ. ಇಂತಹ ಸಮಯದಲ್ಲಿ ಸಚಿವರು ದಿಲ್ಲಿ ಯಾತ್ರೆ ಮಾಡಿದರೆ, ಇದು ಜನರ ಪಾಲಿಗೆ ಸತ್ತ ಸರ್ಕಾರ ಎಂದೇ ಹೇಳಬೇಕು. ಕುಡಿಯುವ ನೀರಿಗಾಗಿ ಸರ್ಕಾರದಿಂದ ನಯಾಪೈಸೆ ಬಿಡುಗಡೆ ಮಾಡಿಲ್ಲ. ತೆಲಂಗಾಣ ಹಾಗೂ ಹಿಮಾಚಲ ಪ್ರದೇಶದಲ್ಲಿ ನೌಕರರ ಸಂಬಳ ಕಡಿತ ಮಾಡಲಾಗಿದೆ.

ಜನಿವಾರ ಪ್ರಕರಣ: ಬಿಜೆಪಿ ಅಧಿಕಾರಕ್ಕೆ ಬಂದಾಗ ಕ್ರಮ



ಕೃಪಾನಿಧಿ ಕಾಲೇಜಿನಲ್ಲಿ ಜನಿವಾರ ಕಿತ್ತುಹಾಕುವ ಪ್ರಕರಣ ನಡೆದಿದೆ. ಮೊದಲು ಈ ಘಟನೆ ಆದಾಗಲೇ ಸರ್ಕಾರದಿಂದ ಕಟ್ಟುನಿಟ್ಟಿನ ಆದೇಶ ಮಾಡಬೇಕಿತ್ತು. ಆಗದೇ ಇದ್ದುದರಿಂದ ಪದೇ ಪದೇ ಘಟನೆ ನಡೆದಿದೆ. ಕಾಂಗ್ರೆಸ್ ಪಕ್ಷದಲ್ಲಿರುವವರೇ ಜನಿವಾರ ತೆಗೆಸಿರುವುದರ ವಿರುದ್ಧ ಮಾತಾಡಿದ್ದಾರೆ. ಇಷ್ಟಾದರೂ ಸರ್ಕಾರ ಹೆಚ್ಚು ತಲೆ ಕೆಡಿಸಿಕೊಂಡಿಲ್ಲ. ಕಾಂಗ್ರೆಸ್ ಪಕ್ಷ ಪರೋಕ್ಷವಾಗಿ ಇಂತಹ ಘಟನೆಗಳಿಗೆ ಬೆಂಬಲ ನೀಡುತ್ತಿದೆ. ಬಿಜೆಪಿ ಸರ್ಕಾರ ಬಂದ ಬಳಿಕ ಸೂಕ್ತ ನೀತಿ, ನಿಯಮ ರೂಪಿಸಿ ಶಿಕ್ಷೆ ನೀಡುವ ಕೆಲಸ ಮಾಡುತ್ತೇವೆ. ಕುಮ್ಮಕ್ಕು ನೀಡಿದ ಅಧಿಕಾರಿಗಳ ವಿರುದ್ಧವೂ ಕ್ರಮ ವಹಿಸುತ್ತೇವೆ ಎಂದು ಆರ್. ಅಶೋಕ ಹೇಳಿದರು.

> **ಕುಕ್ಕರ್ ಬಾಂಬ್ ಸ್ಫೋಟ ಮಾಡಿದ ಭಯೋತ್ಪಾದಕನಿಗೆ ಗಲ್ಲು ಶಿಕ್ಷೆ ವಿಧಿಸಬೇಕಿತ್ತು. ಆತ ಜೈಲಿನಿಂದ ಹೊರಗೆ ಬಂದರೆ ಮತ್ತೆ ಅದೇ ಕೆಲಸ ಮುಂದುವರಿಸುತ್ತಾನೆ. ಸರ್ಕಾರ ಹೈಕೋರ್ಟ್‌ಗೆ ಅಪೀಲು ಮಾಡಿ ಹೆಚ್ಚು ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಕಾಂಗ್ರೆಸ್ ಅವನೊಂದಿಗೆ ಶಾಮೀಲಾಗಿದೆ ಎಂದು ಭಾವಿಸಬೇಕಾಗುತ್ತದೆ. ನಾವು ಕೂಡ ಅಪೀಲು ಮಾಡುತ್ತೇವೆ.**
> ■ **ಆರ್. ಅಶೋಕ್,** ಪ್ರತಿಪಕ್ಷ ನಾಯಕ

ಕರ್ನಾಟಕಕ್ಕೂ ಅದೇ ಸ್ಥಿತಿ ಬರುವ ಲಕ್ಷಣ ಕಾಣುತ್ತಿದೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕುಡಿಯುವ ನೀರಿಗಾಗಿ 10 ಕೋಟಿ ರೂ. ಬಿಡುಗಡೆ ಮಾಡಬೇಕು. ಇದನ್ನು ಬೋರ್‌ವೆಲ್ ಪುನಶ್ಚೇತನ, ಟ್ಯಾಂಕರ್ ನೀರು ಪೂರೈಕೆಗೆ ಬಳಸಬೇಕು ಎಂದು ಒತ್ತಾಯಿಸಿದರು.

ಕೂಡಲೇ ಗೋಶಾಲೆಗಳನ್ನು ನಿರ್ಮಿಸಿ, ಜಾನುವಾರುಗಳಿಗೆ ಮೇವು ಪೂರೈಸಬೇಕು. ಹವಾಮಾನ ಇಲಾಖೆಯ ವರದಿ ಪ್ರಕಾರ, ಈ ಬಾರಿ ಮಳೆ ಕಡಿಮೆ ಇರಲಿದೆ. ಇದನ್ನು ಮಾಡಲು ಆಗದಿದ್ದರೆ ಸಚಿವರು ದಿಲ್ಲಿಯಲ್ಲೇ ಕೂರಲಿ. ಉಳಿದ 2 ವರ್ಷವನ್ನು ದಿಲ್ಲಿಯಲ್ಲಿ ಕಳೆದರೆ ರಾಜ್ಯದ ಅಭಿವೃದ್ಧಿ ನಡೆಯಲು ಸಾಧ್ಯವಿಲ್ಲ. ಮುಖ್ಯಮಂತ್ರಿ ಹಾಗೂ ಸಚಿವರು ಹೇಳಿಕೆ ನೀಡುವುದರಿಂದ ಪ್ರಯೋಜನವಿಲ್ಲ. ಯಾವುದೇ ವಿಧಾನಸಭಾಕ್ಷೇತ್ರಕ್ಕೆಈವರೆಗೆಹಣ ಬಿಡುಗಡೆ ಮಾಡಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಆರ್ಥಿಕ ಇಲಾಖೆಗೆ ಆದೇಶವನ್ನೂ ನೀಡಿಲ್ಲ. ಅಧಿಕಾರಿಗಳನ್ನು ಕೇಳಿದರೆ ಆದೇಶ ಬಂದಿಲ್ಲ ಎನ್ನುತ್ತಾರೆ ಎಂದು ದೂರಿದರು.

ಶಾಲೆಗಳಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮ ಮೇಲೆ ನಿಗಾ

ಅಶ್ಲೀಲ ಹಾಡಿಗೆ ಕಡಿವಾಣ

ಬೆಂಗಳೂರು: ಇತ್ತೀಚಿನ ದಿನಗಳಲ್ಲಿ ಶಾಲಾ ಕಾರ್ಯಕ್ರಮಗಳಲ್ಲಿ ಮಕ್ಕಳು ಅಶ್ಲೀಲ ಹಾಡುಗಳಿಗೆ ಮತ್ತು ಸಂಸ್ಕೃತಿಗೆ ಹೊಂದಿಕೆಯಾಗದ ರೀತಿಯಲ್ಲಿ ನೃತ್ಯ ಮಾಡುವುದು ಹೆಚ್ಚುತ್ತಿರುವುದನ್ನು ಗಮನಿಸಿದ ಮೇರೆಗೆ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳ ಮೇಲೆ ನಿಗಾ ಇಡಲು ಶಿಕ್ಷಣ ಇಲಾಖೆಗೆ ಸರ್ಕಾರ ಆದೇಶ ಹೊರಡಿಸಿದೆ.



ಶಾಲೆ ಎಂಬುದು ಕೇವಲ ಪಠ್ಯಪುಸ್ತಕದ ಜ್ಞಾನ ನೀಡುವ ಸ್ಥಳವಲ್ಲ, ಬದಲಾಗಿ ಅದು ಮಗುವಿನ ವ್ಯಕ್ತಿತ್ವ ರೂಪಿಸುವ ತಾಣ. ಮಗುವಿನ ಬೆಳವಣಿಗೆಯಲ್ಲಿ ಸಂಸ್ಕಾರ, ವಿನಯತೆ, ಉತ್ತಮ ನಡತೆ, ಮಾನಸಿಕ ಸ್ಥಿತಿ ಮತ್ತು ನೈತಿಕ ಮೌಲ್ಯಗಳು ಅತ್ಯಗತ್ಯ. ಈ ಎಲ್ಲಾ ಗುಣಗಳು ಮಗುವಿನಲ್ಲಿ ಶಾಲಾ ಪರಿಸರದಲ್ಲಿ ಮೊಳಕೆಯೊಡೆಯುತ್ತದೆ.

ಶಾಲೆಯು ಮಗುವಿನ ಭವಿಷ್ಯಕ್ಕೆ ಅಡಿಪಾಯ ಹಾಕುವ ಕೇಂದ್ರವಾಗಿರುವುದರಿಂದ, ಅಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಯೂ ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಉನ್ನತ ಮಟ್ಟದಲ್ಲಿರಬೇಕು ಎಂದು ಸರ್ಕಾರ ಹೇಳಿದೆ.

ಇತ್ತೀಚಿನ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅಶ್ಲೀಲ ಭಾವನೆಗಳನ್ನು ಕೆರಳಿಸುವ ಸಿನಿಮಾ ಹಾಡುಗಳಿಗೆ ಮಕ್ಕಳನ್ನು ಕುಣಿಸುವುದು ಕಂಡುಬರುತ್ತಿದೆ. ಇದರಿಂದ ಉಂಟಾಗುವ ದುಷ್ಪರಿಣಾಮಗಳು ಉಂಟಾಗುತ್ತಿವೆ. ಚಿಕ್ಕವಯಸ್ಸಿನ ಮಕ್ಕಳು ಅಶ್ಲೀಲ ಪದಗಳ ಅರ್ಥ ತಿಳಿಯದಿದ್ದರೂ, ಆ ಹಾಡುಗಳಿಗೆ ನರ್ತಿಸುವುದರಿಂದ ಅವರ ಮುಗ್ಧತೆ ನಾಶವಾಗುತ್ತದೆ. ಶಾಲೆಯಲ್ಲಿ ಸಿಗಬೇಕಾದ ಶಿಸ್ತು, ಸಂಸ್ಕೃತಿಯ ಬದಲಿಗೆ ಅನಗತ್ಯ ಚಟುವಟಿಕೆಗಳು ಮಕ್ಕಳ ನಡವಳಿಕೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಜ್ಞಾನಾರ್ಜನೆಯ ಕೇಂದ್ರಗಳು ಕೇವಲ ಮನರಂಜನೆಯ ಕೇಂದ್ರಗಳಾಗಿ ಬದಲಾಗುವುದು ಶಿಕ್ಷಣದ ಮೂಲ ಉದ್ದೇಶಕ್ಕೆ ಮಾರಕವಾಗಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಸರ್ಕಾರದ ಪ್ರಮುಖ ನಿರ್ದೇಶನಗಳು

- ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಮಾರಂಭಗಳಲ್ಲಿ ಅಶ್ಲೀಲ ಅಥವಾ ದ್ವಂದ್ವಾರ್ಥವಿರುವ ಹಾಡುಗಳಿಗೆ ಮಕ್ಕಳಿಂದ ನೃತ್ಯ ಮಾಡಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.
- ಮಕ್ಕಳಲ್ಲಿ ರಾಷ್ಟ್ರಾಭಿಮಾನ, ನಾಡಪ್ರೇಮ ಮತ್ತು ಸಕಾರಾತ್ಮಕತೆಯನ್ನು ಮೂಡಿಸುವ ಹಾಡುಗಳನ್ನು ಆರಿಸಿಕೊಳ್ಳಬೇಕು. ಕನ್ನಡ ನಾಡಿನ ಹಿರಿಮೆ, ಗರಿಮೆ ಮತ್ತು ಮೌಲ್ಯಾಧಾರಿತ ಹಾಡುಗಳಿಗೆ ಆದ್ಯತೆ ನೀಡಬೇಕು.
- ಮಕ್ಕಳಲ್ಲಿ ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸುವಂತಹ ಸಾಹಿತ್ಯದ ಹಾಡುಗಳನ್ನೇ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಬೇಕು. ಹಾಡುಗಳು ಮತ್ತು ನೃತ್ಯಗಳ ಆಯ್ಕೆಯಲ್ಲಿ ಶಾಲೆಯ ಮುಖ್ಯ ಶಿಕ್ಷಕರು, ಶಾಲಾ ಆಡಳಿತ ಮಂಡಳಿಯೇ ನೇರ ಜವಾಬ್ದಾರರಾಗಿರುತ್ತಾರೆ.
- ಯಾವುದೇ ತಪ್ಪುಗಳಾದಲ್ಲಿ ಇವರನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ನೃತ್ಯ ಅಥವಾ ಯಾವುದೇ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಭಾಗವಹಿಸುವ ಮಕ್ಕಳು ಸಭ್ಯವಾದ ಮತ್ತು ಸಂಸ್ಕೃತಿಗೆ ಪೂರಕವಾದ ಉಡುಪುಗಳನ್ನು ಧರಿಸುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ಒಳಮೀಸಲು ವರ್ಗೀಕರಣಕ್ಕೆ ವಿರೋಧ

ಬೆಂಗಳೂರು: ಪರಿಶಿಷ್ಟ ಜಾತಿಗಳಿಗೆ ಮೀಸಲಾತಿ ವರ್ಗೀಕರಣವನ್ನು ಬಂಜಾರ, ಭೋವಿ, ಕೊರಮ, ಕೊರಚ ಸಮುದಾಯಗಳು ವಿರೋಧಿಸಿವೆ.



ಮಂಗಳವಾರ ನಗರದ ಗಾಂಧಿ ಭವನದಲ್ಲಿ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಸರ್ದಾರ್ ಸೇವಾಲಾಲ್ ಸ್ವಾಮೀಜಿನೇತೃತ್ವದಲ್ಲಿಕರ್ನಾಟಕಮೀಸಲಾತಿ ಸಂರಕ್ಷಣಾ ಒಕ್ಕೂಟದ ಬಂಜಾರ, ಭೋವಿ, ಕೊರಚ, ಕೊರಮ, ಸೂಕ್ಷ್ಮ ಸಮುದಾಯಗಳ ಮುಖಂಡರ ಸಭೆ ನಡೆಸಲಾಯಿತು.

ಪ್ರವರ್ಗ ಸಿ ಗುಂಪಿನಲ್ಲಿ ಬಲಗೈ ಸಂಬಂಧಿತ 16 ಜಾತಿಗಳು ಮತ್ತು ಎಡಗೈ ಸಂಬಂಧಿತ 9 ಜಾತಿಗಳು ಮಿಶ್ರಣಗೊಂಡಿವೆ. ಇವುಗಳನ್ನು ಬೇರ್ಪಡಿಸಬೇಕು. ನೇಮಕಾತಿ ರೋಸ್ಟರ್ ಬಿಂದು ನಿಗದಿ ನಿಯಮದಲ್ಲಿ ಅನ್ಯಾಯ ಮಾಡಬಾರದು. ತಕ್ಷಣ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಮತ್ತು ಸಚಿವ ಸಂಪುಟದ ಸದಸ್ಯರನ್ನು ಭೇಟಿ ಮಾಡಿ ಮನವರಿಕೆ ಮಾಡಿಕೊಡಲಾಗುವುದು. ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಹೋರಾಟ ರೂಪಿಸಲಾಗುವುದು. ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗುವುದು ಎಂದು ನಿರ್ಧರಿಸಲಾಯಿತು.

ಮತ್ತೊಂದು ಒಳಮೀಸಲಾತಿ ಬೇಡ

ನ್ಯಾ. ನಾಗಮೋಹನ್ ದಾಸ್ ಆಯೋಗದ ವರದಿಯ ಪ್ರಕಾರ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅತೀ ಹಿಂದುಳಿದಿರುವ ಪ್ರವರ್ಗ ಸಿ ಗುಂಪಿಗೆ ಶೇ.5 ಕ್ಕೂ ಹೆಚ್ಚು ಮೀಸಲಾತಿಯನ್ನು ಹಂಚಿಕೆ ಮಾಡಬೇಕು. ಅತಿ ಹಿಂದುಳಿದಿರುವ 64 ಜಾತಿಗಳನ್ನು ಒಳಗೊಂಡ ಈ ಗುಂಪನ್ನು ನ್ಯಾಯ ಬದ್ಧವಾಗಿ ಮೊದಲನೆಯ ಗುಂಪು ಎಂದು ನಮೂದಿಸಬೇಕು. ಪ್ರವರ್ಗ ಸಿ ನಲ್ಲಿ ಒಳಮೀಸಲಾತಿ ಒಳಗೆ ಮತ್ತೊಂದು ಒಳಮೀಸಲಾತಿ ಮಾಡಬಾರದು ಎಂದು ಒತ್ತಾಯಿಸಲಾಯಿತು.

ಮೇ 1ಕ್ಕೆ ಕರುಣಾಶರಧಿ ಪುಸ್ತಕ ಸಮರ್ಪಣೆ

ಕುಮಟಾ: ದೀವಗಿಯ ಶ್ರೀ ರಾಮಾನಂದ ಅವಧೂತ ಸ್ವಾಮೀಜಿ ಮಠದಲ್ಲಿ ವೈಶಾಖ ಪೂರ್ಣಿಮೆಯ ದಿನ ಮೇ 1ರಂದು ಶ್ರೀ ಗುರು ಹಾಗೂ ಶ್ರೀದೇವರ ವಿಶೇಷ ಪೂಜೆ, ಹವನಾದಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.



ಈ ಪುಣ್ಯಪ್ರದ ಪೂರ್ಣಿಮೆಯ ದಿನದಂದು ಮಧ್ಯಾಹ್ನ ಶ್ರೀಗುರುಗಳ ಅನುಗ್ರಹದಿಂದ ಶ್ರೀ ವಿನಾಯಕ ವಂ ಭಟ್, ಅಂಬ್ಲಿಹೊಂಡ ಇವರು ಕೈಂಕರ್ಯ ಭಾವದಿಂದ ರಚಿಸಿದ 'ಕರುಣಾಶರಧಿ-ಭಗವಾನ್ ಸದ್ಗುರು ಶ್ರೀ ರಾಮಾನಂದ ಅವಧೂತ ಮಹಾಸ್ವಾಮಿಗಳು' ಎನ್ನುವ ಪುಸ್ತಕದ ಸಮರ್ಪಣೆ ಹಾಗೂ ಲೋಕಾರ್ಪಣೆಯ ಕಾರ್ಯವೂ ಶ್ರೀ ಗುರುಗಳ ದಿವ್ಯ ಪಾದ ಸಾನ್ನಿಧ್ಯದಲ್ಲಿ ನಡೆಯಲಿದೆ.

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟ, ಯಕ್ಷಗಾನ ಕಲಾವಿದ ಹಾಗೂ ಲೇಖಕ, ದಿವಾಕರ ಹೆಗಡೆ, ನಿವೃತ್ತ ಪ್ರಾಂಶುಪಾಲ ಹಾಗೂ ಕ್ರೀಡಾ ಪತ್ರಕರ್ತ ವಸಂತ ಮುರ್ಡೇಶ್ವರ, ದೀವಗಿಯ ಶ್ರೀ ರಾಮಾನಂದ ಅವಧೂತ ಸ್ವಾಮೀಜಿ ಮಠ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ.ಪ್ರಕಾಶ ಪಂಡಿತ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಪ್ರಸಾದ ಭೋಜನ ನಂತರ, ಅತ್ಯಂತ ಅನನ್ಯವಾದ 'ಕನಕ ಜಾನಕಿ' ಎಂಬ ಏಕವ್ಯಕ್ತಿ ತಾಳಮದ್ದಲೆಯ ಕಾರ್ಯಕ್ರಮವಿದ್ದು, ದಿವಾಕರ ಹೆಗಡೆಯವರು ಪ್ರಸ್ತುತ ಪಡಿಸಲಿದ್ದಾರೆ.

12 ಪೊಲೀಸ್ ಠಾಣೆಗಳ ಸ್ಥಾಪನೆಗೆ ಅನುಮೋದನೆ

ಕಲಬುರಗಿ: ಈ ಸಲದ ಬಜೆಟ್‌ನಲ್ಲಿ 12 ಪೊಲೀಸ್ ಠಾಣೆಗಳ ಸ್ಥಾಪನೆಗೆ ಅನುಮೋದನೆ ಕೊಡಲಾಗಿದೆ. ಇಲಾಖೆಯೇ ಬಂದಿರುವ ಅನುದಾನವೆಲ್ಲವೂ ಶೀಘ್ರದಲ್ಲಿ ಇಲಾಖೆಗೆ ಕೈ ಸೇರಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.



ನಗರದ ಪೊಲೀಸ್ ಆಯುಕ್ತಾಲಯದ ಕಚೇರಿಯಲ್ಲಿ ಕೆಕೆಆರ್‌ಡಿಬಿ ಅನುದಾನದಡಿಯಲ್ಲಿ ಖರೀದಿಸಲಾದ ನೂತನ ವಾಹನಗಳ ಹಸ್ತಾಂತರ ಕಾರ್ಯಕ್ರಮ ಹಾಗೂ ಇಂಟಲಿಜೆಂಟ್ ಟ್ರಾಫಿಕ್ ಮ್ಯಾನೇಜ್ಮೆಂಟ್ ಸೆಂಟರ್ ಉದ್ಘಾಟನೆ ನೆರವೇರಿಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಇನ್ನು ಸೈಬರ್ ಕ್ರೈಂ ಪ್ರಕರಣಗಳನ್ನು ನಿರ್ವಹಿಸಲು ಪ್ರತ್ಯೇಕ ಡಿಜಿಪಿ ನೇಮಕ ಮಾಡಲಾಗಿದ್ದು, ಅದರಂತೆಯೇ 2024ರಲ್ಲಿ 24 ಸಾವಿರ ಪ್ರಕರಣಗಳು ಬೆಳಕಿಗೆ ಬಂದಿದ್ದವು. 2025ರ ವೇಳೆಗೆ ಅದರ ಪ್ರಮಾಣ 14 ಸಾವಿರಕ್ಕೆ ಇಳಿದಿವೆ ಎಂದರು.

56 ಸಾವಿರ ಹುದ್ದೆಗಳಲ್ಲಿ 8 ಸಾವಿರ ಪೊಲೀಸ್ ಕಾನ್‌ಸ್ಟೇಬಲ್ ಹಾಗೂ 600 ನೂತನ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. 545 ಪಿಎಸ್‌ಐ ನೇಮಕಾತಿ ಪ್ರಕರಣ ಬಳಿಕ ಅವುಗಳನ್ನು ಸ್ಥಗಿತಗೊಳಿಸಿ ಮತ್ತೊಮ್ಮೆ ನೇಮಕಾತಿ ಮಾಡಿಕೊಂಡಿದ್ದೇವೆ. ಅದರ ಜತೆಗೆ 402 ಪಿಎಸ್‌ಐ ಗಳ ನೇಮಕ ಮಾಡಿಕೊಂಡು ತರಬೇತಿಗೆ ಕಳುಹಿಸಿದ್ದೇವೆ ಎಂದರು.

> **ಪರಿಶಿಷ್ಟ ಜಾತಿಯಲ್ಲಿನ ಒಳ ಮೀಸಲಾತಿ ಹಂಚಿಕೆ ಪ್ರಮಾಣ ಸಮಸ್ಯೆ ನಿವಾರಣೆಯಾಗಿದ್ದು, ಮೀಸಲಾತಿ ಹಂಚಿಕೆ ಕಾರಣದಿಂದ ನೇಮಕಾತಿಗೆ ತಡೆ ಹಿಡಿಯಲಾಗಿದ್ದ 8,000 ಪೊಲೀಸ್ ಅಧಿಕಾರಿ-ಸಿಬ್ಬಂದಿಗಳ ನೇಮಕಾತಿಗೆ ಶೀಘ್ರವೇ ಚಾಲನೆ ನೀಡಲಾಗುವುದು.**
> ■ **ಡಾ.ಜಿ.ಪರಮೇಶ್ವರ,** ಗೃಹ ಸಚಿವ

ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪ್ರಕಟ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು 2023-24, 2024-25 ಹಾಗೂ 2025-26ನೇ ಸಾಲಿನ ವಿವಿಧ ಪ್ರಶಸ್ತಿಗಳಿಗೆ 36 ಕಲಾವಿದರನ್ನು ಪ್ರಶಸ್ತಿಗಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ತಿಳಿಸಿದರು.

ಚಿತ್ರಕಲಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಆರು ಹಿರಿಯ ಕಲಾವಿದರಿಗೆ ತಲಾ 50 ಸಾವಿರ ರೂ. ನಗದು ಪುರಸ್ಕಾರದ ಗೌರವ ಪ್ರಶಸ್ತಿಯನ್ನು, ವರ್ಣಶ್ರೀ ಪ್ರಶಸ್ತಿಗೆ ನಿರಂತರವಾಗಿ ಕಲಾ ಸೇವೆಯಲ್ಲಿರುವ 20 ಕಲಾವಿದರಿಗೆ ತಲಾ 25 ಸಾವಿರ ರೂ. ನಗದು ಪುರಸ್ಕಾರವನ್ನು ಹಾಗೂ ವಾರ್ಷಿಕ ಕಲಾ ಬಹುಮಾನಕ್ಕಾಗಿ 53ನೇ ವಾರ್ಷಿಕ ಕಲಾ ಪ್ರದರ್ಶನದ 10 ಉತ್ತಮ ಕಲಾಕೃತಿಗಳಿಗೆ ತಲಾ 25 ಸಾವಿರ ರೂ.ನಗದು ಬಹುಮಾನ ಘೋಷಿಸಲಾಗಿದೆ ಎಂದು ಅವರು ತಿಳಿಸಿದರು.

ಪ್ರಮುಖ ಪ್ರಶಸ್ತಿ ಪುರಸ್ಕೃತರು: 2024-25ನೇ ಸಾಲಿನ ಗೌರವ ಪ್ರಶಸ್ತಿಗೆ ಬಾಗಲಕೋಟೆಯ ಬಾಬು ಜತ್ತಕರ್, ಕಲಬುರಗಿಯ ಎಂ.ಜಿ. ದೊಡ್ಡಮನಿ, ತುಮಕೂರಿನ ಕೆ.ಸಿ.ಎಸ್. ಪ್ರಸನ್ನ ಅವರನ್ನು ಆಯ್ಕೆ ಮಾಡಲಾಗಿದೆ. 2025-26ನೇ ಸಾಲಿನ ಗೌರವ ಪ್ರಶಸ್ತಿಗೆ ಹಾಸನದ ಬಿ.ಎಸ್. ದೇಸಾಯಿ, ವಿಜಯಪುರದ ಡಾ.ಶಶಿಕಲಾ ಹೂಗಾರ್ ಹಾಗೂ ಮೈಸೂರಿನ ಸಿ. ಚಿಕ್ಕಣ್ಣ ಆಯ್ಕೆಯಾಗಿದ್ದಾರೆ.

ವಾರ್ಷಿಕ ಕಲಾ ಬಹುಮಾನ: 53ನೇ ವಾರ್ಷಿಕ ಕಲಾ ಬಹುಮಾನಕ್ಕೆ ಧಾರವಾಡದ ಅಶೋಕ ಬಿ ಮನಸೂರ, ಬೀದರ್‌ನ ಸಂದೀಪ ಸಜ್ಜನ ಶೆಟ್ಟಿ, ಉಡುಪಿಯ ಹರೀಶ್ ನಾಯ್ಕ, ಬೆಂಗಳೂರಿನ ಅಕ್ಷಯ ಭಟ್, ಬೆಂಗಳೂರಿನ ಲೋಹಿತ್ ಪತ್ತಾರ, ಬಾಗಲಕೋಟೆಯ ನೂರ್ಜಾನ ಎಮ್. ದಫೇದಾರ, ದ.ಕನ್ನಡದ ಜೀವನ್ ಸಾಲಿಯಾನ್ ಅವರನ್ನು ಆಯ್ಕೆ ಮಾಡಲಾಗಿದೆ.

ವರ್ಣಶ್ರೀ ಪ್ರಶಸ್ತಿ ಪುರಸ್ಕೃರು

ವರ್ಣಶ್ರೀ ಪ್ರಶಸ್ತಿಗೆ, ಗದಗದ ವಿಜಯ ಕಿರಸೂರ, ಶಿರಸಿಯ ರವಿ ಗುಣಗ, ಹಾವೇರಿಯ ಕುಮಾರ ಕಾಟೇನಹಳ್ಳಿ, ಧಾರವಾಡದ ದಯಾನಂದ. ಕೆ. ಕಾಮಕರ್, ವಿಜಯಪುರದ ಸರೋಜ ಮುಂಡೇವಾಡಿ, ಕೊಡಗಿನ ಜಿ.ಎಸ್.ಭವಾನಿ, ಉಡುಪಿಯ ರಾಘವೇಂದ್ರ ನಾಯ್ಕ, ಮಂಡ್ಯದ ಶಿವಕುಮಾರ್ ಎಚ್, ಮಂಗಳೂರಿನ ಮೋಹನ್ ಕುಮಾರ್ ಬಿ.ಪಿ., ಚಾಮರಾಜನಗರದ ಮಹದೇವ ಎಚ್, ಯಾದಗಿರಿಯ ಮೇಘನಾಥ ಅಬ್ರಹಂ ಬೆಳ್ಳಿ, ರಾಯಚೂರಿನ ಹೇಮರೆಡ್ಡಿ ಎನ್, ಬೀದರ್‌ನ ಡಾ.ವೈಶಾಲಿ ಬಾಯಿ ಕಾಂಬಳೆ, ಕೊಪ್ಪಳದ ತಿರುಪತಿ ಶಿವನಗುತ್ತಿ, ಬಳ್ಳಾರಿಯ ಎ. ಮಹಮದ್ ರಫಿ, ದಾವಣಗೆರೆಯ ಉದಯ್ ಕುಮಾರ್ ಡಿ.ಜೈನ್ ಹಾಗೂ ಬೆಂಗಳೂರಿನ ಪೂರ್ಣಿಮಾ ಯಲ್ಲಾಪುರಕರ್ ಅವರಿಗೆ ನೀಡಲಾಗಿದೆ.

ಹುಲಿಕಲ್ ಘಾಟ್ ರಸ್ತೆ ತಡೆಗೋಡೆ ಕಾಮಗಾರಿ ಪರಿಶೀಲಿಸಿದ ಸಚಿವ ಮಧು ಬಂಗಾರಪ್ಪ

ಮಣ್ಣು ಕುಸಿತ ಅವಘಡ ತಪ್ಪಿಸಲು ಕ್ರಮ

ಶಿವಮೊಗ್ಗ: ಹೊಸನಗರ ತಾಲೂಕಿನ ವ್ಯಾಪ್ತಿಯ ಹುಲಿಕಲ್ ಘಾಟ್ ರಸ್ತೆ ಕಾಮಗಾರಿ ವೇಳೆ ಸಂಭವಿಸಿದ ಮಣ್ಣು ಕುಸಿತ ಅವಘಡದ ಕುರಿತು ಸಮಗ್ರ ವಿವರ ಪಡೆದು, ತಪ್ಪಿತಸ್ಥರ ವಿರುದ್ಧ ಕಾನೂನಾತ್ಮಕ ಕ್ರಮ ವಹಿಸಲಾಗುವುದು ಎಂದು ಸಚಿವ ಎಸ್.ಮಧು ಬಂಗಾರಪ್ಪ ತಿಳಿಸಿದರು.

ಹೊಸನಗರ ತಾಲ್ಲೂಕು ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಹುಲಿಕಲ್ ಘಾಟ್ ರಸ್ತೆ ತಡೆಗೋಡೆ ನಿರ್ಮಾಣ ಕಾಮಗಾರಿ ಪ್ರದೇಶಕ್ಕೆ ಮಂಗಳವಾರ ಭೇಟಿ ನೀಡಿ, ಕಾಮಗಾರಿ ಮತ್ತು ಮಣ್ಣು ಕುಸಿತದ ಪ್ರದೇಶವನ್ನು ಅಧಿಕಾರಿಗಳೊಂದಿಗೆ ಪರಿಶೀಲಿಸಿದ ನಂತರ ಮಾತನಾಡಿದರು.

ಹುಲಿಕಲ್ ರಸ್ತೆ ತಡೆಗೋಡೆ ನಿರ್ಮಾಣ ವೇಳೆ ಮಣ್ಣು ಕುಸಿತ ಅವಘಡ ಸಂಭವಿಸಿ ಮೂವರು ಕಾರ್ಮಿಕರು ಮೃತಪಟ್ಟಿದ್ದಾರೆ. ಸೂಕ್ತ ರೀತಿಯ ಮುನ್ನೆಚ್ಚರಿಕೆ ವಹಿಸದೆ ಕಾಮಗಾರಿ ನಡೆಸಿದ ತಪ್ಪಿತಸ್ಥ ಅಧಿಕಾರಿ, ಗುತ್ತಿಗೆದಾರರ ವಿರುದ್ಧ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ನ್ಯಾಯ ಒದಗಿಸಲಾಗುವುದು ಎಂದು ತಿಳಿಸಿದರು. ಲೋಕೋಪಯೋಗಿ ಸಚಿವರೊಂದಿಗೆ, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ತುರ್ತಾಗಿ ವ್ಯವಸ್ಥಿತ ರೀತಿಯ ಕಾಮಗಾರಿ ನಡೆಸಲು ಕ್ರಮ ವಹಿಸಲಾಗುವುದು. ಈ ಭಾಗದ ಜನಸಾಮಾನ್ಯರ ಅಹವಾಲುಗಳಿಗೆ ಪರಿಹಾರ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಭರವಸೆ ನೀಡಿದರು.



ಹೇರ್ ಪಿನ್ ತಿರುವುಗಳ ಸುಧಾರಣೆ: ರಸ್ತೆಯ ಸರಪಳಿ 42.05 ಕಿ.ಮೀ ನಿಂದ 42.25 ಕಿ.ಮೀ ವರೆಗಿನ ಭಾಗವು ಪ್ರಸ್ತುತ ಅತ್ಯಂತ ಕಿರಿದಾದ ಹೇರ್ ಪಿನ್ ತಿರುವುಗಳಿಂದ ಕೂಡಿದೆ. ಈ ಭಾಗದ ಸುಧಾರಣೆಗೂ ಆದ್ಯತೆ ನೀಡಲಾಗಿದೆ ಎಂದರು.ಇದೇ ವೇಳೆ ಸಾರ್ವಜನಿಕರು ಮಾತನಾಡಿ, ಹುಲಿಕಲ್ ಘಾಟ್ ರಸ್ತೆ ಮೂಲಕ ಸುಗಮ ಸಂಚಾರಕ್ಕೆ ವ್ಯವಸ್ಥಿತ ಯೋಜನೆ ರೂಪಿಸಿ, ಅನುದಾನ ನಿಗದಿಗೊಳಿಸಿ ಶಾಶ್ವತ ಪರಿಹಾರ ಒದಗಿಸುವಂತೆ ಮನವಿ ಮಾಡಿದರು. ಎಂಎಡಿಬಿ ಅಧ್ಯಕ್ಷ ಆರ್.ಎಂ.ಮಂಜುನಾಥ ಗೌಡ, ಪಿಡಬ್ಲ್ಯುಡಿ ಅಧೀಕ್ಷಕ ಅಭಿಯಂತರ ಗಣೇಶ್, ಇತರೆ ಅಧಿಕಾರಿಗಳು ಹಾಜರಿದ್ದರು.

ಶಾಶ್ವತ ಪರಿಹಾರಕ್ಕಾಗಿ 435 ಲಕ್ಷ ರೂ. ಅನುದಾನ

ಮಳೆಯಿಂದ ಭೂಕುಸಿತ ಉಂಟಾಗಿದ್ದ ಹುಲಿಕಲ್ ಘಾಟ್ ಸ್ಥಳದಲ್ಲಿ ಶಾಶ್ವತ ಪರಿಹಾರಕ್ಕಾಗಿ ಲೋಕೋಪಯೋಗಿ ಇಲಾಖೆ ವತಿಯಿಂದ ತಡೆಗೋಡೆ ನಿರ್ಮಾಣ ಕಾರ್ಯ ನಡೆಯುತ್ತಿದೆ. ಮೊದಲ ಹಂತದಲ್ಲಿ 435 ಲಕ್ಷ ರೂ. ಅನುದಾನದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಸುಮಾರು 80 ಮೀಟರ್ ಉದ್ದದ ಆರ್.ಸಿ.ಸಿ. ತಡೆಗೋಡೆಯನ್ನು ಇಲಾಖೆಯ ತಾಂತ್ರಿಕ ವಿನ್ಯಾಸದಂತೆ ನಿರ್ಮಿಸಲಾಗುತ್ತಿದೆ. ಡಿಸೆಂಬರ್ ಮಾಹೆಯಲ್ಲಿ ಕಾಮಗಾರಿ ಆರಂಭವಾಗಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ, ಭಾರತ

ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./2026–27/ಐ.ಎಫ್.ಟಿ. ನಂ.12/343 ದಿನಾಂಕ: 23–04–2026

ಟೆಂಡರ್ ಪ್ರಕಟಣೆ (2ನೇ ಕರೆ) (ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ. ರ ಪ್ರಕಾರ ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: **ವಿತಾವಿಯ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿಯ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಕಟ್ಟಡದ ನವೀಕರಣ ಮಾಡುವ ಕಾಮಗಾರಿ ಮೊತ್ತ ರೂ. 1,40,17,570/– (ತೆರಿಗೆ ರಹಿತ).** ಇದೇ ತೆರನಾದ ಕಾಮಗಾರಿಯನ್ನು ನಿರ್ವಹಿಸಿದ ಕುರಿತು ಪ್ರಮಾಣ ಪತ್ರವನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: **24–04–2026** ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ವಾಸಾಸಂಇ/ಬೆಳಗಾವಿ/165/ಅಡ್ವರ್ಟೈಸ್/2026–27

ಕರ್ನಾಟಕ ಸರ್ಕಾರ

ಕುಂದೂರು ಗ್ರಾಮ ಪಂಚಾಯಿತಿ ಕಾರ್ಯಾಲಯ, ಚನ್ನರಾಯಪಟ್ಟಣ ತಾ॥ ಹಾಸನ ಜಿಲ್ಲೆ.

ಸಂ : ಕುಂ.ಗ್ರಾ.ಪಂ/ / 2025–26 ದಿನಾಂಕ:22.04.2026

ಇ–ಟೆಂಡರ್ ಪ್ರಕಟಣೆ

ಆಡಳಿತ ಅಧಿಕಾರಿ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಕುಂದೂರು ಗ್ರಾಮ ಪಂಚಾಯತಿಯಲ್ಲಿ 2026–27 ನೇ ಸಾಲಿನ ವರ್ಗ–1/15ನೇ ಹಣಕಾಸಯ ಯೋಜನೆ/ವಿವಿಧ ಯೋಜನೆಯಾಡಿ ವಿವಿಧ ಸಾಮಾಗ್ರಿ ಖರೀದಿ/ಸೇವೆ ಪಡೆಯಲು ಇ–ಟೆಂಡರ್ ಆಹ್ವಾನಿಸಲಾಗಿದೆ ವಿವರ ಕೆಳಗಿನಂತಿದೆ. ಕ್ರ.ಸಂ.01)ವಿವರ PROCUREMENT OF WATER SUPPLY PVC,UPVC,CPVC MATERIALS AND PUMP MOTOR MATERIALS. Tender No: RDPR/2026-27/IND14076 02)Procuremnt of Electrical Items,Highmast items and other required materials. Tender No:RDPR/2026-27/IND14077 03)Annual Pump and Motor Maintainance Work. Tender No: RDPR/2026-27/SE3788 1)ಟೆಂಡರ್ ದಾಖಲಾತಿಗಳನ್ನು ಇ–ಪ್ರಕ್ಯೂರ್‌ಮೆಂಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 22–04–2026 ರಿಂದ 06–05– 2026 ಸಂಜೆ 16–00 ಗಂಟೆಯ ವರೆಗೆ ಸಲ್ಲಿಸಬಹುದು. ಕೆಲಸದ ಹೆಸರು/ಪೂರೈಕೆದಾರರ ಅರ್ಹತೆ/ಟೆಂಡರ್ ನಿಯಮಗಳು/ಟೆಂಡರ್ ಪ್ರೋಸೆಸ್ಸಿಂಗ್ ಫೀ ಇತ್ಯಾದಿ ವಿವರಗಳಿಗೆ www.KPPP.karnataka.gov.in ಮೂಲಕ ಪಡೆಯಬಹುದು.

ಸಹಿ/–ಆಡಳಿತ ಅಧಿಕಾರಿ, ಕುಂದೂರು ಗ್ರಾಮ ಪಂಚಾಯತ್

ಸಹಿ/–ಪಂಚಾಯತ್ ಅಭಿವೃದ್ಧಿ ಅಧಿಕಾರಿ ಕುಂದೂರು ಗ್ರಾಮ ಪಂಚಾಯತ್.

ವಾಸಾಸಂಇ/ಹಿಸನಿ/ಹಾಸನ/72/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಬಳ್ಳಾರಿ. ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ಲೆ.ಶೀ /ಟೆಂಡರು /2026–27/
ದಿನಾಂಕ 23–04–2026

ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025–26 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆ ಒಟ್ಟು 09 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಆಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ–

1.RDPR/2026-27/BD/WORK_INDENT26294
2.RDPR/2026-27/BD/WORK_INDENT26341
3.RDPR/2026-27/BD/WORK_INDENT26340
4.RDPR/2026-27/BD/WORK_INDENT26290
5.RDPR/2026-27/BD/WORK_INDENT26295
6.RDPR/2026-27/BD/WORK_INDENT26292
7.RDPR/2026-27/BD/WORK_INDENT26297
8.RDPR/2026-27/BD/WORK_INDENT26296
9.RDPR/2026-27/BD/WORK_INDENT26325

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ ದಿನಾಂಕ **23–04–2026** ರಿಂದ ದಿನಾಂಕ **30–04–2026** ರಂದು **ಸಂಜೆ 5.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 30–04–2026 ರ 17.30** ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 02–05–2026 ರಂದು ಬೆಳ್ಳಗೆ 10.30 ಗಂಟೆಗೆ** ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/97

ಪುರಸಭಾ ಕಾರ್ಯಾಲಯ, ಜಿಗಣಿ

ಸ್ವಚ್ಛ ಭಾರತ

ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು–560105.

ದೂ: 080–29760400, E-Mail: itstaff_ulb_jigani@yahoo.com, jiganideo@gmail.com

ಸಂ:ಜಿ.ಪು.ಕಾ/ತಾಂ.ಶಾ/ಟೆಂ.ಪ್ರ/09/2026–27 ದಿನಾಂಕ: 29.04.2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ಪುರಸಭಾ ನಿಧಿಯಡಿ ಕೊಳವೆ ಬಾವಿಗಳು ಕೊರೆಯುವ ಕಾಮಗಾರಿಗಳು, ವಿದ್ಯುತ್ ಮಾರ್ಗ ನಿರ್ಮಾಣ ಕಾಮಗಾರಿ, ಕುಡಿಯುವ ನೀರಿನ ಪೈಪ್‌ಲೈನ್ ದುರಸ್ಥಿ ಮತ್ತು ಒಳಚರಂಡಿ ದುರಸ್ಥಿಪಡಿಸುವ ವಾರ್ಷಿಕ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ / ಬೆಸ್ಕಾಂ ಇಲಾಖೆಯ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ಕೆಪಿಪಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಪಡೆದು ಭಾಗವಹಿಸ ಬಹುದಾಗಿರುತ್ತದೆ.

ಕ್ರ.ಸಂ.	ಇಂಡೆಂಟ್ ಸಂಖ್ಯೆ
1	DMA/2026-27/ WS/WORK_INDENT56994
2	DMA/2026-27/OW/WORK_INDENT57073
3	DMA/2026-27/WS/WORK_INDENT56997
4	DMA/2026-27/EL/WORK_INDENT57013
5	DMA/2026-27/ WS/WORK_INDENT57008
6	DMA/2026-27/EL/WORK_INDENT57017

1. ಕಾಮಗಾರಿಗಳ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 08.05.2026ರ ಸಂಜೆ 4.00 ಗಂಟೆಯವರೆಗೆ (ಅಲ್ಪಾವಧಿ ಟೆಂಡರ್). 15.05.2026ರ ಸಂಜೆ 4.00 ಗಂಟೆಯವರೆಗೆ (ಪೂರ್ಣಾವಧಿ ಟೆಂಡರ್).** 2. ಟೆಂಡರ್‌ನ್ನು ತೆರೆಯುವ **ದಿನಾಂಕ: 11.05.2026ರ ಸಂಜೆ 4.30 ಗಂಟೆಯ ನಂತರ (ಅಲ್ಪಾವಧಿ ಟೆಂಡರ್). ದಿನಾಂಕ: 16.05.2026ರ ಸಂಜೆ 4.30 ಗಂಟೆಯ ನಂತರ (ಪೂರ್ಣಾವಧಿ ಟೆಂಡರ್).** 3. ಆರ್ಥಿಕ ಬಿಡ್ ತೆರೆಯುವ **ದಿನಾಂಕ: 22.05.2026ರ ಸಂಜೆ 4:000 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸ ಬಹುದಾಗಿರುತ್ತದೆ. 4. ದೂರವಾಣಿ ಸಂಖ್ಯೆ: 080–29760400 ಇಮೇಲ್:itstaff_ulb_jigani@yahoo.com. 5. ಪುರಸಭೆಯ ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಗಳ ಬಿಲ್ಲನ್ನು ಪಾವತಿಸಲಾಗುವುದು. 5. **ಕ್ರಮ ಸಂಖ್ಯೆ: 01,02,03,05 ರ ಕಾಮಗಾರಿಗಳು ಅಲ್ಪಾವಧಿ ಟೆಂಡರ್ ಮತ್ತು ಕ್ರಮ ಸಂಖ್ಯೆ: 04 ಮತ್ತು 06 ಪೂರ್ಣಾವಧಿ ಟೆಂಡರ್.**

ಸಹಿ/– ಅಧ್ಯಕ್ಷರು, ಪುರಸಭೆ, ಜಿಗಣಿ

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಜಿಗಣಿ

ವಾಸಾಸಂಇ/ವಾಪ್ರ/ಜಿಎ/391/2026–27

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

(www.kpwd.gov.in)

ಕಾರ್ಯಪಾಲಕ ಅಭಿಯಂತರರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182–222943 Email ID: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ–ಪೋರ್ಟಲ್ ಮೂಲಕ)–2ನೇ ಕರೆ

ಐಎಫ್‌ಟಿ ಸಂಖ್ಯೆ. 09/2026–27 ದಿನಾಂಕ : 24.04.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 1ನೇ ದರ್ಜೆ ಗುತ್ತಿಗೆದಾರರಿಗೆ ಭದ್ರಾವತಿ ತಾಲ್ಲೂಕಿನಲ್ಲಿ **4059–80–051–0–60–132 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು** ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ (ಇಂಡೆಂಟ್ ನಂ.33342 & 33363) ಕಾಮಗಾರಿಗಳಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. **ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.730.89 ಲಕ್ಷ ಮತ್ತು ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.438.14 ಲಕ್ಷ ಹಾಗೂ ಇ.ಎಂ.ಡಿ. ಗರಿಷ್ಟ ಮೊತ್ತ ರೂ.10.965 ಲಕ್ಷ ಮತ್ತು ಇ.ಎಂ.ಡಿ. ಕನಿಷ್ಠ ಮೊತ್ತ ರೂ.6.44 ಲಕ್ಷ. ಕಾಲಾವಧಿ ಕೆ.ಪಿ.ಪಿ. ಪೋರ್ಟ್‌ಲ್‌ನಲ್ಲಿ ನಮೂದಿಸಿದಂತೆ.** ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್–2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–4ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: **24.04.2026 ರಿಂದ 09.05.2026ರ 17.00 ಗಂಟೆವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: **09.05.2026ರ ಸಂಜೆ 5:00 ಗಂಟೆಯೊಳಗೆ** ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ: **10.05.2026 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು** ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: **11.05.2026 ರ ನಂತರ ತೆರೆಯಲಾಗುವುದು.** ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/–
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ನಂ.128–04/ಝೇಂಕಾರ್/2026–27

ಕರ್ನಾಟಕ ಸರ್ಕಾರ

(ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ) ತಾಲೂಕ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಕುಷ್ಟಗಿ

ಬುತ್ತಿ ಬಸವೇಶ್ವರ ನಗರ ಹಳೇ ಮೀನುಗಾರಿಕೆ ಆಫೀಸ್, ಕುಷ್ಟಗಿ
ದೂರವಾಣಿ ಸಂಖ್ಯೆ:–08536–200038 Email ID:- ttwokst2@yahoo.com

ನಂ:ತಾಪವಕಅಕು/ಕಾರ ಟೆಂಡರ್/ಸಿಆರ್–03/2026–27 ದಿನಾಂಕ:–27/04/2026

ಅಲ್ಪಾವಧಿ ದರಪಟ್ಟಿ ಪ್ರಕಟಣೆ

2026–27ನೇ ಸಾಲಿಗೆ ತಾಲ್ಲೂಕ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕುಷ್ಟಗಿ ಕಚೇರಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಹತ್ತು ತಿಂಗಳ ಅವಧಿಗೆ (ಜೂನ್–2026 ರಿಂದ ಮಾರ್ಚ–2027 ರವರೆಗೆ) ಮಾರುತಿ ಸ್ವಿಫ್ಟ್, ಬುಲೆರೋ, ಟಯೋಟಾ ಇಟಿಎಸ್ ಇವುಗಳಲ್ಲಿ ಯಾವುದಾದರೂ ಒಂದು ವಾಹನವನ್ನು ಪಡೆಯುವ ಸಂಬಂಧ ಅರ್ಹ ವ್ಯಕ್ತಿ/ಸಂಸ್ಥೆ/ಟ್ರಾವೆಲ್ ಏಜೆನ್ಸಿಗಳಿಂದ ದ್ವಿ–ಲಕೋಟೆ ಪದ್ದತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

(1) ಟೆಂಡರ್ ವಾರ್ಷಿಕ ಅಂದಾಜು ಮೊತ್ತ **ರೂ. 3,50,000–00** (2) ಇ.ಎಂ.ಡಿ ಮೊತ್ತ **ರೂ. 20,000–00** (3) ಟೆಂಡರ್ ಅರ್ಜಿ ನಮೂನೆ ಪಡೆಯಲು ಪ್ರಾರಂಭ **ದಿನಾಂಕ 29–04–2026** (4) ಟೆಂಡರ್ ಅರ್ಜಿ ನಮೂನೆ ಪಡೆಯಲು ಕೊನೆಯ **ದಿನಾಂಕ ಮತ್ತು ಸಮಯ 08–05–2026 ಮದ್ಯಾಹ್ನ 01.30 ಗಂಟೆಗೆ** (5) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ 19–05–2026 ಬೆಳಿಗ್ಗೆ 10.00 ಗಂಟೆಗೆ** (6) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ **19–05–2026 ಬೆಳಿಗ್ಗೆ 11.00 ಗಂಟೆಗೆ ಸ್ಥಳ:** ತಾಲ್ಲೂಕ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಕುಷ್ಟಗಿ ಕಾರ್ಯಾಲಯದಲ್ಲಿ ತೆರೆಯಲಾಗುವುದು.

ಟೆಂಡರ್ ಸಲ್ಲಿಸಲು ನಿಗದಿಪಡಿಸಿದ ದಿನಾಂಕ ಮತ್ತು ಸಮಯದ ನಂತರ ಬರುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಳೇ ಕುರಬನಾಳ ರಸ್ತೆ, ಬುತ್ತಿ ಬಸವೇಶ್ವರ ನಗರ ಕುಷ್ಟಗಿ, ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ತಾಲ್ಲೂಕ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಕುಷ್ಟಗಿ

ವಾ.ಸಾ.ಸಂ.ಇ/ಕೊಪ್ಪಳ/54/ದೇಶಪಾಂಡೆಪಬ್ಲಿಸಿಟಿ/2026–27

ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಯಡಿಯೂರು ವಿಭಾಗ,
4ನೇ ಅಡ್ಡರಸ್ತೆ, ಜಯನಗರ 7ನೇ ಬ್ಲಾಕ್, ಬೆಂಗಳೂರು – 560070.

ಸಂಖ್ಯೆ: ಕಾಅ(ವೈಡಿಆರ್)/ಟೆಂಡರ್/02/2026–27 ದಿನಾಂಕ: 27–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಏಕ ಲಕೋಟೆ ಮತ್ತು ದ್ವಿ–ಲಕೋಟೆ ಟೆಂಡರ್ ಡಾಕ್ಯುಮೆಂಟ್ ಪದ್ಧತಿ)
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯಡಿಯೂರು ವಿಭಾಗ, ಬೆಂಪನಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬಿಬಿಎಂಪಿಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ದರ್ಜೆಯಲ್ಲಿ ನೋಂದಾಯಿಸಿರುವ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ – ಕೆಡಬ್ಲ್ಯೂ–1)**

ಕ್ರ.ಸಂ.	ಕಾಮಗಾರಿಯ ಹೆಸರು/ಪ್ರವರ್ಗ
1	ಗಣೇಶ ಮಂದಿರ ಉಪ ವಿಭಾಗದ (ಹೊಸ ವಾರ್ಡ್ ಸಂಖ್ಯೆ 107, 108, ಮತ್ತು 109) (ಹಳೇ ವಾರ್ಡ್ ಸಂಖ್ಯೆ 189, 194 ಮತ್ತು 195) ರ ರಸ್ತೆಗಳಲ್ಲಿ 2025–26 ನೇ ಸಾಲಿಗೆ ಗುಂಡಿಗಳನ್ನು ಮುಚ್ಚುವ ಕಾಮಗಾರಿ. **(2ನೇ ಕರೆ) – (ಎಸ್.ಟಿ) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 50.83, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,850/–**
2	ವಾರ್ಡ್ ಸಂಖ್ಯೆ 109 (ಹಳೇ ವಾರ್ಡ್ ಸಂಖ್ಯೆ 195) ರ ವಾರ್ಡ್ ವ್ಯಾಪ್ತಿಯ ಪ್ರದೇಶದಲ್ಲಿನ ರಸ್ತೆಗಳು ಮತ್ತು ಪಾದಚಾರಿಮಾರ್ಗಗಳ ವಾರ್ಷಿಕ ನಿರ್ವಹಣೆ ಕಾಮಗಾರಿ. **(2ನೇ ಕರೆ) – (ಎಸ್.ಸಿ) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 25.37, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,400/–**
3	ಯಡಿಯೂರು ಉಪ ವಿಭಾಗದ (ವಾರ್ಡ್ ಸಂಖ್ಯೆ 105 ಮತ್ತು 106) ರಲ್ಲಿ 2026–27 ನೇ ಸಾಲಿನ ಮಳೆಗಾಲ ಅವಧಿಗೆ ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪನೆ. **(ಇತರೆ) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 4.21, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 10,525/–**
4	ಗಣೇಶ ಮಂದಿರ ಉಪ ವಿಭಾಗದ (ವಾರ್ಡ್ ಸಂಖ್ಯೆ 107, 108 ಮತ್ತು 109) ರಲ್ಲಿ 2026–27 ನೇ ಸಾಲಿನ ಮಳೆಗಾಲ ಅವಧಿಗೆ ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪನೆ. **(ಇತರೆ) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 6.31, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 15,775/–**
5	ಹೊಸಕೆರೆಹಳ್ಳಿ ಉಪ ವಿಭಾಗದ (ವಾರ್ಡ್ ಸಂಖ್ಯೆ 110, 111 ಮತ್ತು 112) ರಲ್ಲಿ 2026–27 ನೇ ಸಾಲಿನ ಮಳೆಗಾಲ ಅವಧಿಗೆ ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪನೆ. **(ಇತರೆ) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 6.31, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 15,775/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **30–04–2026 ರಂದು 16.30 ಗಂಟೆಯ** ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) **ಕ್ರಮ ಸಂಖ್ಯೆ 1ಕ್ಕೆ** ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **02–05–2026 ರಂದು 16.00 ಗಂಟೆಗೆ.** 3) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: **10–05–2026 ರಂದು 16.00 ಗಂಟೆವರೆಗೆ.** 4) ಟೆಂಡರ್‌ನ್ನು ತೆರೆಯುವ ದಿನಾಂಕ: **11–05–2026 ರಂದು 16.30 ಗಂಟೆಗೆ.** 5) **ಕ್ರಮ ಸಂಖ್ಯೆ 1ಕ್ಕೆ** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **11–05–2026 ರಂದು 16.30 ಗಂಟೆಗೆ.** 6) **ಕ್ರಮ ಸಂಖ್ಯೆ 1ಕ್ಕೆ** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ಕೆ.ಪಿ.ಪಿ. ಪೋರ್ಟಲ್ ಮೂಲಕ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು, ಯಡಿಯೂರು ವಿಭಾಗ, ಬೆಂಪನಪಾ.

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)

ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಪಿಜಿ.3/ಟೆಂಡರ/2026–27/170
ದಿನಾಂಕ : 27–04–2026

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KW-1, KW-2,

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ **Standard Bid Document KW-1, KW-2,** ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 11 ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2025–26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ, ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, **(https://kppp.karnataka.gov.in)** ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

WORKINDENT : 25910, 26035, 26034, 26024, 26023, 26022, 26021, 26020, 26019, 25936, 25935

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **16.77** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **40.22** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ. ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **28–04–2026** ರಿಂದ **13–05–2026** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **14–05–2026** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/44/2026–27

IN THE COURT OF THE V ADDITIONAL CIVIL JUDGE & JMFC AT BALLARI

Crl. M.C. No. 123 OF 2026

Between :-
Channa Basava And another .....Petitioner
AND
The Chief Officer cum Town Registrar of Birth's & and Death's Town Municipal Council Kurugodu .....Respondent

NOTICE

To The Chief Officer cum Tow Registrar of Birth's & and Death's Town Municipal Council Kurugodu Ballari District

Whereas the above named petitioners have filed Application against the respondent seeking death certificate of Petitioners FATHER By name NAGADEVAPPA, S/O KARIBASAPPA, WHO DIED ON 30-11-1885 AT RESIDENCE AT KURUGODU TOWN, BALLARI DISTRICT

You are hereby summoned to appear in this court in person or by an Advocate duly instructed and able to answer all material questions relating to the claim or who shall be accompanied by some person able to answer all such 30-04-2026 at 11-00 'O' Clock in questions, on the day the forenoon, to answer the claim And further you are hereby directed to file on that day a Counter of your defense and to produce on the said day all documents in your possession or Power upon which you base. Your defense, where you rely on any other document whether in your possession or power or not, as evidence in support of your defense you shall enter such documents in a list to be annexed to the counter.

Take notice that, in default of your appearance on the day before mentioned, the suit will be heard and determined in your absence.

Given under my hand and seal of the court on this 25th day of March- 2026.

By Order of the court.
Sd/- Shirestedar,
V Addl Civil Judge and JMFC Ballari
Sd/- Shivanna S.
Advocate for the petitioner

IN THE COURT OF THE V ADDITIONAL CIVIL JUDGE & JMFC AT BALLARI

Crl. M.C. No. 124 OF 2026

Between :-
Channa Basava And another .....Petitioner
AND
The Chief Officer cum Town Registrar of Birth's & and Death's Town Municipal Council Kurugodu .....Respondent

NOTICE

To The Chief Officer cum Tow Registrar of Birth's & and Death's Town Municipal Council Kurugodu Ballari District

Whereas the above named petitioners have filed Application against the respondent seeking death certificate of Petitioners SISTER By name HUVAMMA W/O CHANNAPPA, WHO DIED ON 18-03-2014 AT RESIDENCE AT KURUGODU TOWN, BALLARI DISTRICT.

You are hereby summoned to appear in this court in person or by an Advocate duly instructed and able to answer all material questions relating to the claim or who shall be accompanied by some person able to answer all such 30-04-2026 at 11-00 'O' Clock in questions, on the day the forenoon, to answer the claim And further you are hereby directed to file on that day a Counter of your defense and to produce on the said day all documents in your possession or Power upon which you base. Your defense, where you rely on any other document whether in your possession or power or not, as evidence in support of your defense you shall enter such documents in a list to be annexed to the counter.

Take notice that, in default of your appearance on the day before mentioned, the suit will be heard and determined in your absence.

Given under my hand and seal of the court on this 25th day of March- 2026.

By Order of the court.
Sd/- Shirestedar,
V Addl Civil Judge and JMFC Ballari
Sd/- Shivanna S.
Advocate for the petitioner

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರ ರವರ ಕಛೇರಿ

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು–570023

ಸಂ./ಕಾಅ/ಪಂ.ರಾ.ಇಂ.ವಿ/ಮೈ/ಇ–ಪ್ರಕ್ಯೂರ್‌ಮೆಂಟ್/ಸ.ಇಂ/ಕಿ.ಇಂ.
ಪ್ರಕಟಣೆ ಸಂಖ್ಯೆ: 01/2026–27 ದಿನಾಂಕ: 16.04.2026

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್‌ಪ್ರಕಟಣೆ

ಈ ಕಛೇರಿಯಿಂದ ಉಲ್ಲೇಖ ರೀತ್ಯಾ ಅಧಿಸೂಚನೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ ತಿ.ನರಸೀಪುರ ತಾಲ್ಲೂಕಿನ 2025–26ನೇ ಸಾಲಿನ ಲೆಕ್ಕಶೀರ್ಷಿಕೆ:– ಮುಖ್ಯ ಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆಯಡಿ ಹಾಗೂ 2024–25ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮದ ಲೆಕ್ಕಶೀರ್ಷಿಕೆ: 5054 ಯೋಜನೆ ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ KW-4 ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ದಿ: 27.04.2026 ರಿಂದ ದಿ: 19.05.2026 ರವರೆಗೆ ಸಂಜೆ 16.30 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿ: 18.05.2026 ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್ ತೆರೆಯುವ ದಿ: 20.05.2026ರ ಸಂಜೆ 17.00 ಘಂಟೆಯ ನಂತರ ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಸದರಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ. 01. **ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ:** ತಿ.ನರಸೀಪುರ ತಾಲ್ಲೂಕು ಅಂಕನಹಳ್ಳಿ, ಕೋಣಗಹಳ್ಳಿ, ಕಳ್ಳೀಪುರ, ಕೇತುಪುರ, ಗಾಣಿಗನಕೊಪ್ಪಲು, ಗುಡ್ಡದಕೊಪ್ಪಲು, ಕರಿಹುರಳಿಕೊಪ್ಪಲು, ಮೆಣಸಿಕ್ಯಾತನಹಳ್ಳಿ, ದೊಡ್ಡಮುಲಗೂಡು, ಕಾಡುಕೊತ್ತನಹಳ್ಳಿ ಮತ್ತು ಹನುಮನಾಳು ಗ್ರಾಮಗಳ ಸಾಮಾನ್ಯ ಬೀದಿಗಳಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (Indent No.RDPR/2025-26/RD/WORK_INDENT25492) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 205.00 **ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 170.90 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 2,56,500.00 **ಗುತ್ತಿಗೆದಾರರ ಅರ್ಹತೆ:** 3ನೇ ದರ್ಜೆ ಮತ್ತು ಮೇಲ್ಪಟ್ಟು.

ಕ್ರ.ಸಂ.02. **ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ:** ತಿ.ನರಸೀಪುರ ತಾಲ್ಲೂಕು ಚಿಕ್ಕಬೂಹಳ್ಳಿ, ಎಂ.ಕೆಬ್ಬೆಹುಂಡಿ, ಮುಸುವಿನಕೊಪ್ಪಲು, ಕೈಯಂಬಳ್ಳಿ, ಬೊಮ್ಮನಹಳ್ಳಿ, ಸೋಸಲೆ, ದೊಡ್ಡಬಾಗಿಲು, ಹೊರಳಹಳ್ಳಿ, ಎಸ್.ದೊಡ್ಡಪುರ, ಕೆಂಪನಪುರ, ಎಸ್.ಕೆಬ್ಬೆಹುಂಡಿ, ಕೊಳತ್ತೂರು ಮತ್ತು ಚಿದರಹಳ್ಳಿ ಗ್ರಾಮಗಳ ಸಾಮನ್ಯ ಬೀದಿಗಳಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (Indent No.RDPR/2025-26/RD/WORK_INDENT25489) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 230.00 **ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 193.28 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 2,90,000.00 **ಗುತ್ತಿಗೆದಾರರ ಅರ್ಹತೆ:** 3ನೇ ದರ್ಜೆ ಮತ್ತು ಮೇಲ್ಪಟ್ಟು.

ಕ್ರ.ಸಂ.03. **ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ:** ತಿ.ನರಸೀಪುರ ತಾಲ್ಲೂಕು ಕರೋಹಟ್ಟಿ, ವಾಟಾಳು, ವಾಟಾಳುಪುರ, ಸುಜ್ಜಲೂರು, ಆದಿಬೆಟ್ಟಹಳ್ಳಿ, ಮೂಗೂರು, ಮಾಡ್ರಹಳ್ಳಿ, ಮಾವಿನಹಳ್ಳಿ, ಮಾದಾಪುರ, ಜಾಲಹಳ್ಳಿ, ಹೆಮ್ಮಿಗೆ, ಟಿ.ಮೇಗಡಹಳ್ಳಿ, ಹೊಸಹಳ್ಳಿ ಮತ್ತು ಚೌಹಳ್ಳಿ ಗ್ರಾಮಗಳ ಸಾಮಾನ್ಯ ಬೀದಿಗಳಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (Indent No.RDPR/2025-26/RD/WORK_INDENT25490) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 250.00 **ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 210.38 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 3,16,000.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು.

ಕ್ರ.ಸಂ.04. **ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ:** ತಿ.ನರಸೀಪುರ ತಾಲ್ಲೂಕು ಮಾದೇಗೌಡನಹುಂಡಿ ಗ್ರಾಮದಿಂದ ಗರ್ಗೇಶ್ವರಿ ಗ್ರಾಮದವರೆಗೆ ಮಾರ್ಗ ಮಧ್ಯೆ ಬರುವ ಮಾದೇಗೌಡನಹುಂಡಿ, ಪಟ್ಟೆಹುಂಡಿ, ರಂಗಸಮುದ್ರ, ಕುಪ್ಯ, ತುಂಬಲ, ನಿಂಗೇಗೌಡನಹುಂಡಿ, ಹಳೆಕೆಂಪಯ್ಯನಹೊಂಡಿ, ಗರ್ಗೇಶ್ವರಿ ಗ್ರಾಮ ಪರಿಮಿತಿಯಲ್ಲಿ ಮತ್ತು ಬಿಲಿಗೆರೆಹುಂಡಿ ಗ್ರಾಮದಿಂದ ಆಲಸ್ಮಿಕಟ್ಟೆಹುಂಡಿ ಗ್ರಾಮ ಪರಿಮಿತಿಯಲ್ಲಿ ಸಿಸಿ ಚರಂಡಿ ಮತ್ತು ಸಿಸಿ ರಸ್ತೆ ನಿರ್ಮಾಣ ಕಾಮಗಾರಿ. (RDPR/2025-26/RD/WORK_INDENT25617) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 250.00 **ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 209.11 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 3,14,000.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು https://kppp.kamataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಫೋನ್ ನಂ.0821–2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಮೊಬೈಲ್ ಸಂಖ್ಯೆ: ಕಿ.ಇಂ. 8971599285

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮೈಸೂರು

DIPR/DDMYS/118/KSMCA/102/2026-27

ತಾಲೂಕ ಪಂಚಾಯತ, ಶಿಗ್ಗಾಂವ ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ, ಹಾವೇರಿ

ಗ್ರಾಮ ಪಂಚಾಯತ ಕಾರ್ಯಾಲಯ, ತಡಸ

ನಂ: ಗ್ರಾಪಂತ/ಆಡಳಿತ/2026–27 ದಿನಾಂಕ: 23–04–2026


–: ಇ–ಪ್ರೋಕ್ಯೂಮೆಂಟ್ ಟೆಂಡರ್ ಪ್ರಕಟಣೆ :–

ಈ ಕಛೇರಿಯಿಂದ 15ನೇ ಹಣಕಾಸು ಅನುದಾನದ ಅನುಮೋದಿತ ಕ್ರಿಯಾ ಯೋಜನೆಯಡಿಯಲ್ಲಿ ಅನುಮೋದನೆಯಾದ ಕಾಮಗಾರಿನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ, ಲೋಕೋಪಯೋಗಿ ಇಲಾಖೆ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ–ಟೆಂಡರ್‌ಗಾಗಿ ಇ–ಪ್ರಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Tender Documents for E-procurement of Works K/W-1 ನಮೂನೆಯಲ್ಲಿ ಆಹ್ವಾನಿಸಲಾಗಿದೆ.

ಇ–ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಕ್ರ. ಸಂ	ಇ–ಪ್ರಕ್ಯೂರಮೆಂಟ್ ಇಂಡೆಂಟ್ ಸಂಖ್ಯೆ	ಕಾಮಗಾರಿ ಹೆಸರು	ಟೆಂಡರ್‌ಗೆ ಇಡಲಾದ ಒಟ್ಟು ಮೊತ್ತ	ಇ.ಎಂ.ಡಿ ಮೊತ್ತ	ಕೊನೆಯ ದಿನಾಂಕ ಮತ್ತು ಸಮಯ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ಆರ್ಥಿಕ ಬಿಡ್ ತೆರೆಯುವ ದಿನಾಂಕ
1	2	3	4	5	6	7	8
1	RDPR/2026-27/ BD/ WORK_IN-DENT26347	Installation of incomplete school compound & gate of Government Urdu School Primary and High School in Tadasa village under Tadasa Gram Panchayat of Shiggaon Taluka	ರೂ. 2,00,000/–	ರೂ. 5,000/–	ದಿ: 07–05–2026 ಸ: 2.30PM	ದಿ: 08–05–2026 ಸ: 3.30PM	ದಿ: 08–05–2026 ಸ: 4.00PM
2	RDPR/2026-27/ BD/ WORK_IN-DENT26346	Completion of the unfinished building of the Gram Panchayat Office in Tadasa village, Shiggaon taluka	ರೂ. 3,78,996/–	ರೂ. 9,500/–	ದಿ: 07–05–2026 ಸ: 2.30PM	ದಿ: 08–05–2026 ಸ: 3.30PM	ದಿ: 08–05–2026 ಸ: 4.00PM
3	RDPR/2026-27/ BD/ WORK_IN-DENT26344	Completion of the incomplete Rajiv Gandhi Seva Kendra located in the Panchayat premises of Tadasa village under Tadasa Gram Panchayat of Shiggaon Taluka.	ರೂ. 4,94,900/–	ರೂ. 12,400/–	ದಿ: 07–05–2026 ಸ: 2.30PM	ದಿ: 08–05–2026 ಸ: 3.30PM	ದಿ: 08–05–2026 ಸ: 4.00PM
4	RDPR/2026-27/ BD/ WORK_IN-DENT26362	V.R.W of Tadasa village under Tadasa Gram Panchayat of Shiggaon Taluka. Repairing the building so that stagnant water does not stagnate in the building	ರೂ. 99,000/–	ರೂ. 2,500/–	ದಿ: 08–05–2026 ಸ: 2.30PM	ದಿ: 11–05–2026 ಸ: 11.30AM	ದಿ: 11–05–2026 ಸ: 12.00PM
5	RDPR/2026-27/ BD/ WORK_IN-DENT26361	Repairing the Anganwadi in S.C. Colony, Tadasa village, Tadasa Gram Panchayat, Shiggaon Taluka	ರೂ. 80,000/–	ರೂ. 2,000/–	ದಿ: 08–05–2026 ಸ: 2.30PM	ದಿ: 11–05–2026 ಸ: 11.30AM	ದಿ: 11–05–2026 ಸ: 12.00PM
6	RDPR/2026-27/ BD/ WORK_IN-DENT26360	Repair of office of VRW of Tadasa Village under Tadasa Gram Panchayat of Shigggaon Taluk	ರೂ. 99,000/–	ರೂ. 2,500/–	ದಿ: 08–05–2026 ಸ: 2.30PM	ದಿ: 11–05–2026 ಸ: 11.30AM	ದಿ: 11–05–2026 ಸ: 12.00PM

ಸಹಿ/– ಪಂಚಾಯತ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯತ, ತಡಸ



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	8	6	1	1	13	+1.043
ಆರ್‌ಸಿಬಿ	8	6	2	0	12	+1.919
ರಾಜಸ್ಥಾನ	9	6	3	0	12	+0.617
ಹೈದರಾಬಾದ್	8	5	3	0	10	+0.815
ಗುಜರಾತ್	8	4	4	0	8	-0.475
ಚೆನ್ನೈ	8	3	5	0	6	-0.121
ದಿಲ್ಲಿ	8	3	5	0	6	-1.060
ಕೆಕೆಆರ್	8	2	5	1	5	-0.751
ಮುಂಬೈ	7	2	5	0	4	-0.736
ಲಖನೌ	8	2	6	0	4	-1.106

ಕಿರುಸುದ್ದಿ

ಸ್ವಿಂಗ್ ಸಿಕ್ಕಿರುವುದೇ ದೊಡ್ಡ ಬಲ: ಭುವನೇಶ್ವರ ಕುಮಾರ್

ಹೊಸದಿಲ್ಲಿ: ದಿಲ್ಲಿ ವಿರುದ್ಧದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಗೆಲುವಿಗೆ ಪ್ರಮುಖ ಕಾರಣವಾದ ಭುವನೇಶ್ವರ ಕುಮಾರ್ ತಮ್ಮ ಬೌಲಿಂಗ್ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ್ದಾರೆ. ಸೋಮವಾರದ ಪಂದ್ಯದಲ್ಲಿ ನಡೆದ ಪಂದ್ಯದಲ್ಲಿ ಕೇವಲ 5 ರನ್ ನೀಡಿ 3 ವಿಕೆಟ್ ಪಡೆದ ಭುವನೇಶ್ವರ, ಆರಂಭದಲ್ಲೇ ಸ್ವಿಂಗ್ ಬಳಸಿಕೊಂಡು ಎದುರಾಳಿಯನ್ನು ಒತ್ತಡಕ್ಕೆ ಒಳಪಡಿಸಿದರು. ಪಂದ್ಯದ ಬಳಿಕ ಮಾತನಾಡಿದ ಅವರು, ಈ ಸೀಸನ್‌ನಲ್ಲಿ ಸ್ವಿಂಗ್ ಸ್ವಲ್ಪ ಹೆಚ್ಚಾಗಿದೆ. ಬಾಲ್ ಸ್ವಿಂಗ್ ಆದಾಗ ಮತ್ತು ಆರಂಭದಲ್ಲೇ ವಿಕೆಟ್ ಸಿಕ್ಕಾಗ, ಮುಂದೆ ಕೆಲಸ ಸುಲಭವಾಗುತ್ತದೆ. ಇಂದು ಅಂತಹ ದಿನಗಳಲ್ಲಿ ಒಂದಾಗಿತ್ತು. ಎಡ್ಜ್ ಅಥವಾ ಬೌಲ್ಡ್ ಆಗಿ ಫಲ ಸಿಕ್ಕಿತು, ಎಂದು ಹೇಳಿದರು. ಹಿಂದಿನ ಪಂದ್ಯದಲ್ಲಿ 250ಕ್ಕೂ ಹೆಚ್ಚು ರನ್ ಆಗಿದ್ದರಿಂದ, ಇಂತಹ ಪಿಚ್ ಸ್ವಲ್ಪ ಅಚ್ಚರಿಯಾಯಿತು. ಆದರೆ ಬಾಲ್ ಸ್ವಿಂಗ್ ಆಗುವುದು ಎಂದು ಗಮನಿಸಿದ ಮೇಲೆ ಅದನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಪ್ರಯತ್ನಿಸಿದೆವು, ಎಂದರು. ಭುವನೇಶ್ವರನ ಈ ಪರಿಣಾಮಕಾರಿ ಬೌಲಿಂಗ್‌ನಿಂದ ದಿಲ್ಲಿ ಕ್ಯಾಪಿಟಲ್ಸ್ ತಂಡ ಕೇವಲ 75 ರನ್‌ಗೆ ಸೀಮಿತವಾಯಿತು. ಈ ಆರಂಭಿಕ ದಾಳಿಯೇ ಪಂದ್ಯವನ್ನು ಸಂಪೂರ್ಣವಾಗಿ ಆರ್‌ಸಿಬಿ ಪರ ತಳ್ಳಿತು.

6 ಬಿಸಿಸಿಐ ಅಕಾಡೆಮಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ

ಗ್ಯಾಂಗ್ಟಾಕ್(ಸಿಕ್ಕಿಂ): ಈಶಾನ್ಯ ರಾಜ್ಯಗಳಲ್ಲಿ ಆರು ಕಡೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ನಿರ್ಮಿಸಿರುವ ಒಳಾಂಗಣ ಕ್ರಿಕೆಟ್ ಅಕಾಡೆಮಿಗಳನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಉದ್ಘಾಟಿಸಿದರು. ಸಿಕ್ಕಿಂ ಪ್ರವಾಸದಲ್ಲಿರುವ ಪ್ರಧಾನಿ ಮೋದಿ, 6 ಹೈಪರ್ಫಾರ್ಮನ್ಸ್ ಕ್ರಿಕೆಟ್ ಕ್ಲಬ್‌ಗಳನ್ನು ವರ್ಚುವಲ್ ಚಾಲನೆ ನೀಡಿದರು. ಈಶಾನ್ಯದಲ್ಲಿ ಕ್ರಿಕೆಟ್ ಕಹಳೆ ಮೊಳಗಿಸಲು ಮತ್ತು ಯುವಕರಿಗೆ ಅವಕಾಶ ಕಲ್ಪಿಸುವ ಯೋಜನೆಯಲ್ಲಿ ಕ್ರಮವನ್ನು ಕೈಗೊಂಡ ಬಿಸಿಸಿಐ ಸಿಕ್ಕಿಂನ ರಾಂಗ್ಪೊ, ಅರುಣಾಚಲ ಪ್ರದೇಶದ ದೊಯಿಮುಖ್, ಮಣಿಪುರದ ಇಂಫಾಲ್, ಮೇಘಾಲಯದ ಮದನ್ ಕುರ್ಕಲಾಂಗ್, ಮಿಜೋರಾಂನ ಐಝ್ವಾಲ್, ನಾಗಾಲ್ಯಾಂಡ್‌ನ ದಿಮಾಪುರದಲ್ಲಿ ಕ್ಲಬ್‌ಗಳನ್ನು ಅಭಿವೃದ್ಧಿ ಪಡಿಸಿದೆ. ಉದ್ಘಾಟನಾ ಸಮಾರಂಭದಲ್ಲಿ ಎಲ್ಲಾ ಬಿಸಿಸಿಐ ಸದಸ್ಯರು ಮತ್ತು ಐಸಿಸಿ ಅಧ್ಯಕ್ಷ ಜಯ್ ಶಾ ಕೂಡ ಇದ್ದರು. ಅಕಾಡೆಮಿಗಳು ಒಳಾಂಗಣ ಕ್ರೀಡಾಂಗಣಗಳಲ್ಲಿ ನಿರ್ಮಿಸಲಾಗಿದೆ. ಇವುಗಳು ಹೈಪರ್ಫಾರ್ಮನ್ಸ್ ಸೆಂಟರ್, ಒಳಾಂಗಣ ಅಭ್ಯಾಸ ಪಿಚ್, ಹೈ-ಟೆಕ್ ಜಿಮ್, ಈಜುಕೋಳ ಮತ್ತು ಟ್ರೇನಿಂಗ್ ಬ್ಲಾಕ್‌ಗಳನ್ನುಯ ಹೊಂದಿರಲಿವೆ.

ಜೂನಿಯರ್ ವೇಟ್‌ಲಿಫ್ಟಿಂಗ್: ಭಾರತಕ್ಕೆ ವಿವಿಧ ಪದಕ

ಹೊಸದಿಲ್ಲಿ: ಸಮೋವಾದ ಅಪಿಯಾದಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಯೂತ್ ಮತ್ತು ಜೂನಿಯರ್ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್ ಮತ್ತು ಅದಕ್ಕೆ ಅನುಗುಣವಾದ ಯೂನಿವರ್ಸಲ್ ಕಪ್ (ಸೀನಿಯರ್) ಸ್ಪರ್ಧೆಯ ಎರಡನೇ ದಿನದಂದು ಭಾರತೀಯರು ನಾಲ್ಕು ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. 65 ಕೆಜಿ ಪುರುಷರ ವಿಭಾಗದಲ್ಲಿ ಸುನಿಲ್ ಸಿಂಗ್ ಒಟ್ಟು 271 ಕೆಜಿ (ಸ್ನ್ಯಾಚ್‌ನಲ್ಲಿ 126 ಕೆಜಿ ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ 145 ಕೆಜಿ) ಭಾರ ಎತ್ತಿ ಚಿನ್ನ ಗೆದ್ದರು, ಮಹಿಳೆಯರ 58 ಕೆಜಿ ವಿಭಾಗದಲ್ಲಿ ಐಸಾಂಗ್ಬಾ ಗೊಗೊಯ್ ಅಗ್ರ ಬಹುಮಾನ ಗೆದ್ದರು ಮತ್ತು ಪುರುಷರ 71 ಕೆಜಿ ವಿಭಾಗದಲ್ಲಿ ಅಭಿನೋಬ್ ಗೊಗೊಯ್ ಚಿನ್ನದ ಪದಕ ಗೆದ್ದರು. 58 ಕೆಜಿ ಮಹಿಳೆಯರ ವಿಭಾಗದಲ್ಲಿ ಐಸಾಂಗ್ಬಾ ಒಟ್ಟು 185 ಕೆಜಿ (ಸ್ನ್ಯಾಚ್‌ನಲ್ಲಿ 79 ಕೆಜಿ ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ 106 ಕೆಜಿ) ಭಾರ ಎತ್ತಿ ಚಿನ್ನ ಗೆದ್ದರು, ಆದರೆ ಅಭಿನೋಬ್ ಒಟ್ಟು 284 ಕೆಜಿ (ಸ್ನ್ಯಾಚ್‌ನಲ್ಲಿ 129 ಕೆಜಿ ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ 155 ಕೆಜಿ) ಭಾರ ಎತ್ತಿ 71 ಕೆಜಿ ಪುರುಷರ ವಿಭಾಗದಲ್ಲಿ ಅಗ್ರ ಸ್ಥಾನ ಪಡೆದರು.

ಕಿಂಗ್ ಕೊಹ್ಲಿ ಹೆಸರಿಗೆ ಯಾರೂ ಮಾಡದ ದಾಖಲೆ ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಪಂದ್ಯದ ವೇಳೆ ದಾಖಲೆ

9000 ಐಪಿಎಲ್‌ನಲ್ಲಿ ಕೊಹ್ಲಿ ಬಾರಿಸಿದ ರನ್

ವಿರಾಟ ರನ್ ಪರ್ವತ!

ಕ್ರಿಕೆಟ್ ಲೋಕದ ಬೆಸ್ಟ್ ಬ್ಯಾಟರ್‌ಗಳಲ್ಲಿ ಒಬ್ಬ, ಅಭಿಮಾನಿಗಳ ಪಾಲಿನ ಕಿಂಗ್, ಬೆಂಗಳೂರು ತಂಡದ ಪ್ರಮುಖ ಮತ್ತು ಪ್ರಬಲ ಆಟಗಾರ. ಚೇಸ್ ಮಾಸ್ಟರ್, ರನ್ ಮಶೀನ್ ಹೀಗೆ ಹತ್ತಾರು ಬಿರುದು ಪಡೆದಿರುವ ವಿರಾಟ್ ಕೊಹ್ಲಿ ಭಾರತೀಯ ಕ್ರಿಕೆಟ್ ಕ್ಷೇತ್ರದಲ್ಲಿ ಮತ್ತೊಮ್ಮೆ ಅಚ್ಚಳಿಯದ ದಾಖಲೆ ಮಾಡಿದರು.

ಸೋಮವಾರದಂದು ಐಪಿಎಲ್‌ನಲ್ಲಿ ಬೆಂಗಳೂರು ಮತ್ತು ದಿಲ್ಲಿ ತಂಡಗಳು ಎದುರಾಗಿದ್ದವು. ಇದರಲ್ಲಿ ಆರ್‌ಸಿಬಿ ಏಕಪಕ್ಷೀಯ ಗೆಲುವು ಸಾಧಿಸಿತು. ಇದೇ ಪಂದ್ಯದಲ್ಲಿ ಜಗತ್ತಿನಲ್ಲಿ ಯಾರೂ ಮಾಡದ, ಯಾರಿಂದಲೂ ಸರಳವಾಗಿ ಮಾಡಲಾಗದ ದಾಖಲೆಯೊಂದನ್ನು ಬರೆದು ಮೆರೆದಾಡಿದರು ವಿರಾಟ್ ಕೊಹ್ಲಿ.

ದಿಲ್ಲಿ ಕ್ಯಾಪಿಟಲ್ಸ್ ಮೊದಲು ಬ್ಯಾಟಿಂಗ್ ಮಾಡಿ 75ಕ್ಕೆ ಪತನಗೊಂಡಿತ್ತು. ಆರ್‌ಸಿಬಿ ತಡ ಮಾಡದೆ ದಂಡಿಸಿ 6.3 ಓವರ್‌ಗಳಲ್ಲಿ ಪಂದ್ಯ ಮುಗಿಸಿತು. ಈ ಚಿಕ್ಕ ಇನ್ನಿಂಗ್ಸ್‌ನಲ್ಲಿ ಕೊಹ್ಲಿ 23 ರನ್ ಬಾರಿಸಿದರು. ಇದೇ ವೇಳೆ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ 9 ಸಾವಿರ ರನ್ ಪೂರೈಸಿದರು. ಇದೇ ಯಾರೂ ಮಾಡದ ಸಾಧನೆ! ಇದೇ ಇತಿಹಾಸದಲ್ಲಿ ಏಕೈಕ ಆಟಗಾರ ಮಾಡಿದ ದಾಖಲೆ. ಇದೇ ಐಪಿಎಲ್‌ನಲ್ಲಿ ಬ್ಯಾಟರ್ ಒಬ್ಬ ಮಾಡಬಹುದಾದ ದೊಡ್ಡ ಸಾಧನೆಯಾಗಿದೆ.ಅಗ 2008. ಐಪಿಎಲ್‌ನ ಮೊದಲನೇ ಆವೃತ್ತಿಗೆ ಸಿದ್ಧತೆ ನಡೆಯುತ್ತಿತ್ತು. ಹರಾಜಿನಲ್ಲಿ ನೂರಾರು ಹೆಸರು. ಆದರೆ ಆಗಷ್ಟೇ ಅಂಡರ್-19 ವಿಶ್ವಕಪ್ ತಂದುಕೊಟ್ಟಿದ್ದ ವಿರಾಟ್ ಕೊಹ್ಲಿ ಹೆಸರು ಹರಾಜಿನಲ್ಲಿರಲಿಲ್ಲ. ಆದರೆ ಐಪಿಎಲ್‌ನ ಆಗಿನ ಮಾನದಂಡ ಪ್ರಕಾರ ಭಾರತದ ಅಂಡರ್-19 ಆಟಗಾರರನ್ನು ಸೇರಿಸಿಕೊಳ್ಳಲು ವಿಶೇಷ ಅವಕಾಶ ನೀಡಲಾಗಿತ್ತು. ಅಲ್ಲೇ ಆರ್‌ಸಿಬಿ ವಿಶ್ವಕಪ್ ಗೆಲ್ಲಿಸಿದ್ದ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಅವರನ್ನು ಸೇರಿಸಿಕೊಂಡಿತು. ಆಗಿನಿಂದಲೇ ಶುರುವಾಯಿತು ಕೊಹ್ಲಿ ರನ್ ಪರ್ವತ.

ಐಪಿಎಲ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ 5 ಬ್ಯಾಟರ್ಸ್

ಆಟಗಾರ	ತಂಡ	ರನ್
ವಿರಾಟ್ ಕೊಹ್ಲಿ	ಆರ್‌ಸಿಬಿ	9012
ರೋಹಿತ್ ಶರ್ಮಾ	ಮುಂಬೈ	7183
ಶಿಖರ್ ಧವನ್	ಪಂಜಾಬ್	6769
ವಾರ್ನರ್	ದಿಲ್ಲಿ	6565
ರಾಹುಲ್	ದಿಲ್ಲಿ	5580



ಪ್ರತಿ ಆವೃತ್ತಿಯಲ್ಲೂ ಕೊಹ್ಲಿ ರನ್

ವರ್ಷ	ಪಂದ್ಯ	ರನ್
2008	13	165
2009	16	246
2010	16	307
2011	16	557
2012	16	364
2013	16	634
2014	14	359
2015	16	505
2016	16	973
2017	10	308
2018	14	530
2019	14	464
2020	15	466
2021	15	405
2022	16	341
2023	14	639
2024	15	741
2025	15	657
2026	8*	351*

ದಾಖಲೆಯ ಸರದಾರ

ಪ್ರತಿ ಪಂದ್ಯದಲ್ಲೂ ವಿರಾಟ್ ಕೊಹ್ಲಿ ಹೊಸ ದಾಖಲೆ ಮಾಡುತ್ತಾರೆ. ಐಪಿಎಲ್ ಇತಿಹಾಸದಲ್ಲಿ ಕೊಹ್ಲಿ ಪ್ರಭಾವ ಯಾವ ಮಟ್ಟದಲ್ಲಿದೆ ಎಂದರೆ, ಪಂದ್ಯವೊಂದರಲ್ಲಿ ಕೊಹ್ಲಿ ಮೈದಾನಕ್ಕಿಳಿದರೆ ಸಾಕು, ದಾಖಲೆಯ ಪುಸ್ತಕದಲ್ಲಿ ಇತಿಹಾಸವೊಂದು ಮೂಡುತ್ತದೆ. ಪ್ರತಿ ಆವೃತ್ತಿಯಲ್ಲೂ ದಾಖಲೆಗಳ ಶಿಖರ ಕಟ್ಟಿರುವ ಕೊಹ್ಲಿ ಇದೀಗ 9 ಸಾವಿರ ರನ್ ಬಾರಿಸಿದ್ದಾರೆ. ಇದು ಐಪಿಎಲ್‌ನಲ್ಲಿ ಯಾವುದೇ ಬ್ಯಾಟರ್ ಗಳಿಸಿದ್ದಕ್ಕಿಂತ ಹೆಚ್ಚು.

ಒಂದು ತಂಡ; 9 ಸಾವಿರ ರನ್‌ಗಳ ಇತಿಹಾಸ

ಐಪಿಎಲ್‌ನಂತೆ ಜಗತ್ತಿನಲ್ಲಿ ಹತ್ತಾರು ರಾಷ್ಟ್ರ ಮಟ್ಟದ, ಫ್ರಾಂಚೈಸಿ ಮಾದರಿಯ ಕೂಟಗಳು ನಡೆಯುತ್ತವೆ.



ಅಂತಹ ಟೂರ್ನಿಗಳಲ್ಲಿ ವಿವಿಧ ಬ್ಯಾಟರ್‌ಗಳು ಸಾವಿರಾರು ರನ್‌ಗಳು ಮಾಡಿದ್ದಾರೆ. ಆದರೆ ಯಾವುದೇ ಬ್ಯಾಟರ್ ಕೂಡ ಒಂದೇ ತಂಡದ ಪರ 9 ಸಾವಿರ ರನ್ ಇದುವರೆಗೂ ಟಿ20ಯಲ್ಲಿ ಮಾಡೇ ಇಲ್ಲ, ಮಾಡಿದ್ದಾರೆ ಎನ್ನುವುದಾದರೆ ಅದು ವಿರಾಟ್ ಕೊಹ್ಲಿ ಮಾತ್ರ. 19 ಆವೃತ್ತಿ ಆರ್‌ಸಿಬಿ ಪರವೇ ಆಡಿರುವ ಕೊಹ್ಲಿ 9 ಸಾವಿರ ರನ್ ಮಾಡಿದ್ದಾರೆ. ಇದರೊಂದಿಗೆ ಒಂದೇ ತಂಡದ ಪರ ಇಷ್ಟೊಂದು ರನ್ ಮಾಡಿದ ಏಕೈಕ ಆಟಗಾರ ಅನಿಸಿಕೊಂಡರು.

ಚೇಸಿಂಗ್ ವೇಳೆ ಮೂಡಿಬಂದವು 4 ಸಾವಿರಕ್ಕೂ ಹೆಚ್ಚು ರನ್

ವಿಶೇಷವಾಗಿ ವಿರಾಟ್ ಕೊಹ್ಲಿ 9 ಸಾವಿರ ರನ್‌ಗಳಲ್ಲಿ 4 ಸಾವಿರಕ್ಕೂ ಹೆಚ್ಚು ರನ್‌ಗಳನ್ನು ಚೇಸಿಂಗ್ ವೇಳೆ ಮಾಡಿದ್ದಾರೆ. ಚೇಸ್ ಮಾಸ್ಟರ್ ಎಂಬ ಹೆಸರನ್ನು ಹೊತ್ತಿರುವ ವಿರಾಟ್ ಕೊಹ್ಲಿ ಗುರಿ ಬೆನ್ನತ್ತುವಾಗ ಯಾವುದೇ ಬ್ಯಾಟರ್ ಗಳಿಸದಷ್ಟು ರನ್ ಮಾಡಿದ್ದಾರೆ. 2023ರಿಂದ ಇಲ್ಲಿಯವರೆಗೂ ಕೊಹ್ಲಿ 72 ಅವರೇಜ್ ಅನ್ನು ಹೊಂದಿದ್ದಾರೆ. ಈ ಬಾರಿಯೂ ವಿರಾಟ್ ಹೆಚ್ಚಿನ ರನ್‌ಗಳನ್ನು ಚೇಸ್ ಮಾಡುವ ವೇಳೆ ಬಾರಿಸಿದ್ದಾರೆ.





ರನ್‌ಗಳು	ಪಂದ್ಯ	ಇನ್ನಿಂಗ್ಸ್	ಗರಿಷ್ಠ ರನ್	ಶತಕ	ಅರ್ಧಶತಕ
9,012	275	267	113	8	66

ಆಡಿರುವ ಬಾಲ್	ಅವರೇಜ್	ಸ್ಟ್ರೈಕ್‌ರೇಟ್
6735	40+	133.81

ಪಂಜಾಬ್ ಓಟಕ್ಕೆ ಬ್ರೇಕ್

ಚಂಡೀಗಢ: ಪಂಜಾಬ್ ತಂಡದ 7 ಪಂದ್ಯಗಳ ಗೆಲುವಿನೋಟಕ್ಕೆ ರಾಜಸ್ಥಾನ ರಾಯಲ್ಸ್ ಬ್ರೇಕ್ ಹಾಕಿದೆ. ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಅವರ ಬ್ಯಾಟಿಂಗ್ ನಂತರ ಫೆರಾರಿಯಾ ಮಿಂಚಿದ ನಂತರ ಆರ್‌ಆರ್ 6 ವಿಕೆಟ್‌ಗಳಿಂದ ಗೆದ್ದಿದೆ. ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ 20 ಓವರ್‌ಗಳಲ್ಲಿ 222 ರನ್ ಗಳಿಸಿತು. ಗುರಿ ಬೆನ್ನತ್ತಿದ ರಾಜಸ್ಥಾನ 19.2 ಬಾಲ್‌ಗಳಲ್ಲಿ 228/4 ಗಳಿಸಿತು.

ರಾಜಸ್ಥಾನ ಮಿಂಚಿನಾಟ: ಗುರಿ ಬೆನ್ನತ್ತಿದ ರಾಜಸ್ಥಾನ ಅಬ್ಬರದ ಆರಂಭ ಪಡೆಯಿತು. ಎಂದಿನಂತೆ ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮೊದಲಿನ ಮೂರು ಓವರ್‌ಗಳಲ್ಲಿ ಪಂಜಾಬ್ ಭಾರೀ ಹಿನ್ನಡೆ ಅನುಭವಿಸಿತು. ಫರ್ಗುಸನ್, ಅರ್ಶದೀಪ್ ಅಂಥ ಬೌಲರ್‌ಗಳನ್ನು ದಂಡಿಸಿದ ಅವರು, 16 ಬಾಲ್‌ಗಳಲ್ಲೇ 43 ರನ್ ಗಳಿಸಿ ಕ್ಯಾಚ್ ಆದರು. ವೈಭವ್ ವಿಕೆಟ್ ಬಿದ್ದಂತೆ ಜೈಸ್ವಾಲ್ ವೈಭವ ಶುರುವಾಯಿತು. ಒಂದು ಹಂತದಲ್ಲಿ ಸಿಂಗಲ್‌ಗಳ ಮೂಲಕ ಬ್ಯಾಟಿಂಗ್ ಮಾಡುತ್ತಿದ್ದ ಜೈಸ್ವಾಲ್ ಇತ್ತ ಸ್ಫೋಟಕ ಸಿಕ್ಸರ್ ಬಾರಿಸಲಾರಂಭಿಸಿದರು. ಪವರ್‌ಪ್ಲೇನಲ್ಲಿ ರಾಜಸ್ಥಾನ 84 ರನ್ ಬಾರಿಸಿ ಮುನ್ನಡೆ ಸಾಧಿಸಿತು. ಮೂರನೇ ಕ್ರಮಾಂಕದಲ್ಲಿ ಬಂದ ಧ್ರುವ್ ಜುರೇಲ್ ನಿಧಾನ ಬ್ಯಾಟಿಂಗ್ ಮಾಡಿದರು. ಇತ್ತ ಜೈಸ್ವಾಲ್ ಅರ್ಧಶತಕ ಪೂರೈಸಿಕೊಂಡರು. ಆದರೆ 51 ರನ್ ಬಾರಿಸುತ್ತಿದ್ದಂತೆ ಕ್ಯಾಚಿತ್ತರು. ಧ್ರುವ್ 16ಕ್ಕೆ ಔಟಾದರು. ಪರಾಗ್ ಫೆರಾರಿಯಾ ಒಂದಾದರು. ಮಧ್ಯಮ ಕ್ರಮಾಂಕದಲ್ಲಿ ಮಿಂಚಿನಾಟ. ಇದೇ ಮೊದಲ ಬಾರಿಗೆ ಮಿಂಚಲಾರಂಭಿಸಿದ್ದರು ಪರಾಗ್. ಆದರೆ 16 ಬಾಲ್‌ಗಳಲ್ಲಿ 29 ರನ್ ಗಳಿಸಿದಾಗ ಔಟಾದರು. ಇಂಪ್ಯಾಕ್ಟ್ ಆಟಗಾರನಾಗಿ ಬಂದ ಶುಭಂ ದುಬೆ ಉತ್ತಮ ಬ್ಯಾಟಿಂಗ್ ಮಾಡಿದ್ದಲ್ಲದೆ ಹೋಪ್ ಉಳಿಸಿದವರಾದರು. ಮಧ್ಯಮ ಓವರ್‌ಗಳಲ್ಲಿ ರಾಜಸ್ಥಾನ 84 ರನ್ ಮಾಡಿತು. ಡೆತ್ ಓವರ್‌ನಲ್ಲಿ ರಾಜಸ್ಥಾನಕ್ಕೆ 43 ರನ್ ಬೇಕಿತ್ತು. 17ನೇ ಓವರ್‌ನಲ್ಲಿ ಉತ್ತಮ ಬೌಲಿಂಗ್ ಸಂಘಟಿಸಿದ ಫರ್ಗುಸನ್ 8 ರನ್ ಬಿಟ್ಟುಕೊಟ್ಟರು. 18ನೇ ಓವರ್‌ನಲ್ಲಿ ಶುಭಂ ಬೌಂಡರಿಗಳೊಂದಿಗೆ ಮಿಂಚಿದರು. ಫೆರಾರಿಯಾ ಅರ್ಶದೀಪ್ ಸಿಂಗ್‌ಗೆ ದಂಡಿಸಿದರು. ಕೊನೆಯ ಎರಡು ಓವರ್‌ಗಳಲ್ಲಿ 18 ರನ್ ಬೇಕಿತ್ತು. 19ನೇ ಓವರ್‌ನ ಮೊದಲೆರಡು ಬಾಲ್‌ಗಳಲ್ಲಿ 10 ರನ್ ಬಂದವು. ಮಿಕ್ಕಿರುವ 8 ರನ್ ಅನ್ನು ಸಲೀಸಾಗಿ ಗಳಿಸಿ ರಾಜಸ್ಥಾನ ಪಂದ್ಯವನ್ನು ಗೆದ್ದಿತು. ಅಂತಿಮದಲ್ಲಿ ಫೆರಾರಿಯಾ 52, ಶುಭಂ 31 ರನ್ ಗಳಿಸಿದರು.

ಸ್ಟೋಯಿನಿಸ್ ಅಬ್ಬರ

ಪ್ರಭಸಿಮ್ರನ್ (59) ಪ್ರಿಯಾಂಶ್(29) ಬ್ಯಾಟಿಂಗ್‌ನೊಂದಿಗೆ ಪಂಜಾಬ್ ಮಿಂಚಿತು. ನಂತರ ಡೆತ್ ಓವರ್‌ಗಳಲ್ಲಿ ಮಾರ್ಕಸ್ ಸ್ಟೋಯಿನಿಸ್ ಅವರದ್ದೇ ಅಬ್ಬರ. ಶ್ರೇಯಸ್ ಅಯ್ಯರ್ 30 ರನ್ ಗಳಿಸಿದಾಗ ಕ್ಯಾಚಿತ್ತರು. ಇದಕ್ಕೂ ಮುನ್ನ ಬಡ್ತಿ ಪಡೆದು ಬ್ಯಾಟಿಂಗ್ ಗಿಳಿದಿದ್ದ ಸ್ಟೋಯಿನಿಸ್ ಅಬ್ಬರದ ಬ್ಯಾಟಿಂಗ್ ಶುರು ಮಾಡಿದರು. ಮೊದಲನೇ ಬಾಲ್‌ನಿಂದಲೂ ಬಿರುಸಿನ ಬ್ಯಾಟಿಂಗ್ ಮಾಡಿ ಸ್ಟ್ರೈಕ್ ರೇಟ್ ಗಗನಕ್ಕೇರಿಸಿದರು. ಇತ್ತ ರಾಜಸ್ಥಾನ ಹಾಕಿದ್ದ ಕಡಿವಾಣವೆಲ್ಲಾ ವ್ಯರ್ಥವಾಯಿತು. ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಲು ಶುರು ಮಾಡಿದರು. ಡೆತ್ ಓವರ್ ಬೌಲಿಂಗ್ ಮಾಡಲು ಬಂದ ಪ್ರತಿಯೊಬ್ಬ ಬೌಲರ್ ಅನ್ನೂ ಮನಬಂದಂತೆ ದಂಡಿಸಿದರು. ಬರೋಬ್ಬರಿ 280ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದ ಸ್ಟೋಯಿನಿಸ್ 6 ಸಿಕ್ಸರ್, 4 ಬೌಂಡರಿ ಬಾರಿಸಿದರು. 22 ಬಾಲ್‌ನಲ್ಲಿ 62 ರನ್ ಗಳಿಸಿದರು. ಪಂಜಾಬ್ ಒಟ್ಟು 222 ಗಳಿಸಿತು.

ಮುಂಬೈಗೆ ಹೈದರಾಬಾದ್ ಸವಾಲು

ಮುಂಬೈ: ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಮುಂಬೈ ಇಂಡಿಯನ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಬುಧವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಸೋಲು-ಗೆಲುವಿನ ಮಧ್ಯೆ ಮಿಶ್ರ ಫಲಿತಾಂಶ ಪಡೆದಿರುವ ಹೈದರಾಬಾದ್ ಗೆಲುವಿನ ಹಳಿಗೆ ಮರಳಿದ್ದು, ಅಗ್ರ ನಾಲ್ಕರಲ್ಲಿ ಭದ್ರವಾಗಿದೆ. ಇತ್ತ ಮುಂಬೈ ನಿರಂತರ ಸೋಲುಗಳಿಂದ ಕಂಗೆಟ್ಟಿದೆ.

ಭರವಸೆಯಲ್ಲಿ ಹೈದರಾಬಾದ್: ಟಿ20 ಮಾದರಿ ಕ್ರಿಕೆಟ್‌ನ ಭರವಸೆಯ ಬ್ಯಾಟರ್ ಅಭಿಷೇಕ್ ಶರ್ಮಾ ಲಯಕ್ಕೆ ಮರಳಿದ್ದಾರೆ. ಹಿಂದಿನ ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಅವರು, ಸದ್ಯ ಆರೆಂಜ್ ಕ್ಯಾಪ್ ಪಡೆದಿದ್ದಾರೆ. ಕಳೆದ ಪಂದ್ಯಗಳಲ್ಲಿ ಹೆಡ್ ಕೂಡ ನಿರ್ಣಾಯಕ ಕೊಡುಗೆಗಳನ್ನು ಕೊಟ್ಟಿರುವುದು ತಂಡದ ಉತ್ಸಾಹ ಹೆಚ್ಚಿಸಿದೆ. ಇಶಾನ್ ಕಿಶನ್ ಲಯದ ಹುಡುಕಾಟದಲ್ಲಿದ್ದಾರೆ. ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸುವ ಹೆನ್ರಿಕ್ ಕ್ಲಾಸೆನ್ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದು, ತಂಡದ ಬಲ. ಇತ್ತ ಮಧ್ಯಮ ಕ್ರಮಾಂಕದಲ್ಲಿ ನಿತೀಶ್ ರೆಡ್ಡಿ, ಅಭಿನವ್ ಕೂಡ ಉತ್ತಮ ಬ್ಯಾಟಿಂಗ್ ಮಾಡಬಲ್ಲರು. ಬೌಲಿಂಗ್ ವಿಚಾರದಲ್ಲಿ ತಂಡಕ್ಕೆ ಆನೆ ಬಲ ತಂದಿರುವ ಪ್ಯಾಟ್ ಕಮ್ಮಿನ್ಸ್ ವಿಶ್ವಾಸ ಹೆಚ್ಚಿಸಿದ್ದಾರೆ. ಹರ್ಷ ದುಬೆ ಸ್ಪಿನ್ ಮೋಡಿ ಮಾಡಿದ್ದಾರೆ, ಇತ್ತ ಪ್ರಫುಲ್ ಹಿಂಗೆ, ಹುಸೈನ್ ಕೂಡ ಉತ್ತಮ ಪ್ರದರ್ಶನ ನೀಡಿದ್ದಾರೆ.

ಮುಂಬೈಗೆ ಗೆಲುವಿನ ತವಕ: ಮುಂಬೈ ಇಂಡಿಯನ್ಸ್ ಆಡಿರುವ ಹೆಚ್ಚಿನ ಪಂದ್ಯಗಳಲ್ಲಿಸ ಸೋಲೇ ಕಂಡಿದೆ. ಹಿಂದಿನ ಪಂದ್ಯದಲ್ಲಿ ಚೆನ್ನೈ ವಿರುದ್ಧ ಹೀನಾಯವಾಗಿ ಸೋತಿತ್ತು. ಅದಕ್ಕೂ ಮುಂಚೆ ಆಡಿದ್ದ ಗುಜರಾತ್ ವಿರುದ್ಧದ ಪಂದ್ಯದಲ್ಲಿ ಮಿಂಚಿತ್ತು. ಮುಖ್ಯವಾಗಿ ದೊಡ್ಡ ದೊಡ್ಡ ಬ್ಯಾಟರ್‌ಗಳು ತಂಡದಲ್ಲಿದ್ದರೂ ಲಯದಲ್ಲಿಲ್ಲ. ರೋಹಿತ್ ಶರ್ಮಾ ಅವರ ಗಾಯ ಭಾರೀ ಹಿನ್ನಡೆ ತಂದಿದೆ. ಬ್ಯಾಟರ್‌ಗಳಾದ ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ ಅಲ್ಪ ರನ್‌ಗಳನ್ನು ಮಾಡುತ್ತಿದ್ದಾರೆ. ಉಳಿದಂತೆ ಹಾರ್ದಿಕ್ ಪಾಂಡ್ಯ, ಕ್ವಿಂಟನ್ ಡಿಕಾಕ್ ಸೇರಿದಂತೆ ಬಹುತೇಕ ಎಲ್ಲರೂ ಲಯಕ್ಕಾಗಿ ಪರದಾಡುತ್ತಿದ್ದಾರೆ. ಬೌಲಿಂಗ್‌ನಲ್ಲಿ ಬೂಮ್ರಾ, ಬೋಲ್ಟ್ ಅಂಥವರು ದಂಡಿಸಿಕೊಂಡಿದ್ದಾರೆ. ವಿಕೆಟ್ ಕಿತ್ತುವ ಬೌಲರ್‌ಗಳೇ ದುಬಾರಿಯಾಗಿರುವುದು ಹಿನ್ನಡೆ.

ಪಿಚ್: ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಸಾಮಾನ್ಯವಾಗಿ ಬ್ಯಾಟರ್‌ಗಳಿಗೆ ಲಾಭ ಕೊಟ್ಟರೂ, ಕಳೆದ ಪಂದ್ಯದಲ್ಲಿ ಚೆನ್ನೈ ಬೌಲರ್‌ಗಳು ಮಿಂಚಿದ್ದಾರೆ. ಸ್ಪಿನ್ನರ್‌ಗಳಿಗೆ ಹೇಳಿ ಮಾಡಿಸಿದ ಪಿಚ್, ಹೆಚ್ಚಿನ ಬೌನ್ಸ್ ಇರುವುದರಿಂದ ಬ್ಯಾಟಿಂಗ್‌ಗೂ ಲಾಭ ಸಿಗಲಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಕೊಂಚ ಇಬ್ಬನಿ ಕಾಟ ಇರಲಿದ್ದು, ಟಾಸ್ ಗೆದ್ದ ತಂಡ ಬೌಲಿಂಗ್ ಮಾಡಲಿದೆ.

ಪಂದ್ಯದ ವಿವರ: ಯಾವಾಗ?: ಬುಧವಾರ, ಎಲ್ಲಿ: ವಾಂಖೆಡೆ, ಮುಂಬೈ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಟಿಟಿ ಆಡುತ್ತಿದ್ದ ವೇಳೆ ರಾಜ್ ಸಾವು

- ರಾಷ್ಟ್ರೀಯ ಕೂಟದ ವೇಳೆ ಘಟನೆ
- ಹೃದಯಾಘಾತದಿಂದ ಕುಸಿದು ಬಿದ್ದ ಪೆಡ್ಲರ್

ಪುಣೆ: ಇಲ್ಲಿ ನಡೆಯುತ್ತಿದ್ದ 32ನೇ ರಾಷ್ಟ್ರೀಯ ಮಾಸ್ಟರ್ಸ್ ಟೇಬಲ್ ಟೆನಿಸ್ ಪಂದ್ಯಾವಳಿ ನಡೆಯುತ್ತಿರುವ ವೇಳೆ ತಮಿಳು ನಾಡಿನ ಟಿಟಿ ಆಟಗಾರ ಐ.ಎಮ್. ಲೂಯಿಸ್ ರಾಜ್ ಮೃತಪಟ್ಟರು.

ರವಿವಾರ ನಡೆಯುತ್ತಿದ್ದ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಅವರು, ಪಂದ್ಯದ ನಡುವೆ ಕುಸಿದು ಬಿದ್ದರು. ತ್ವರಿತ ಚಿಕಿತ್ಸೆ ಫಲಿಸದ ನಂತರ ಅವರನ್ನು ಸ್ಥಳೀಯ ಆಸ್ಪತ್ರೆಗೆ ಸೇರಿಸಲಾಗಿತ್ತು. ತಕ್ಷಣಕ್ಕೆ ಚಿಕಿತ್ಸೆಕೊಟ್ಟರೂ ಅವರು ಹೃದಯಾಘಾತದಿಂದ ಮೃತಪಟ್ಟರು. ಪಂದ್ಯಾವಳಿಯಲ್ಲಿ ರಾಜ್ 65+ ವಿಭಾಗದಲ್ಲಿ ಭಾಗವಹಿಸುತ್ತಿದ್ದರು. ಮೂರನೇ ಸುತ್ತಿನ ಪಂದ್ಯದಲ್ಲಿ ಆಂಧ್ರಪ್ರದೇಶದ ವಿ.ವಿ. ರಾಮನ್ ಅವರನ್ನು ಎದುರಿಸಿದ್ದರು. 2-0 ಅಂತರದ ಮುನ್ನಡೆಯಲ್ಲಿದ್ದ ಅವರು, 12:15ಕ್ಕೆ ಕುಸಿದುಬಿದ್ದರು. ರಾಜ್ ಸಾವಿಗೆ ಭಾರತೀಯ ಟೇಬಲ್ ಟೆನಿಸ್ ಸಂಸ್ಥೆ, ಮಹಾರಾಷ್ಟ್ರ ಟಿಟಿ ಸಂಸ್ಥೆ ಸೇರಿದಂತೆ ಆಟಗಾರರು, ಕ್ರೀಡಾಭಿಮಾನಿಗಳು ಕಂಬನಿ ಮಿಡಿದಿದ್ದಾರೆ.

ಬ್ಯಾಡ್ಮಿಂಟನ್: ಚೀನಾ ವಿರುದ್ಧ ಸೋತ ಮಹಿಳಾ ತಂಡದ ಅಭಿಯಾನ ಅಂತ್ಯ

ಉಬರ್ ಕಪ್ ಫೈನಲ್ಸ್: ಭಾರತಕ್ಕೆ ಸೋಲು

ಹೊಸದಿಲ್ಲಿ: ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆದ ಉಬರ್ ಕಪ್ ಫೈನಲ್ಸ್‌ನಲ್ಲಿ ಭಾರತ ಮಹಿಳಾ ತಂಡದ ಪಯಣ ನಿರಾಶಾದಾಯಕವಾಗಿ ಅಂತ್ಯಗೊಂಡಿದೆ. ಭಾರತ ಮಹಿಳಾ ಬ್ಯಾಡ್ಮಿಂಟನ್ ತಂಡ ಚೀನಾ ವಿರುದ್ಧ 0-5 ಅಂತರದಲ್ಲಿ ಸೋತು ಟೂರ್ನಿಯಿಂದ ಹೊರಬಿದ್ದಿದೆ.

ಪಂದ್ಯದ ಆರಂಭದಲ್ಲೇ ಭಾರತದ ನಿರೀಕ್ಷೆಗಳನ್ನು ಹೆಚ್ಚಿಸಿದ್ದವರು ಪಿ.ವಿ. ಸಿಂಧು. ಮೊದಲ ಸಿಂಗಲ್ಸ್‌ನಲ್ಲಿ ಚೀನಾದ ವಿಶ್ವನಂ.2 ವಾಂಗ್ ಝಿಯಿ ವಿರುದ್ಧ ಸಿಂಧು ತೀವ್ರ ಪೈಪೋಟಿ ನೀಡಿದರು. ನಿರ್ಣಾಯಕ ಗೇಮ್‌ನಲ್ಲಿ 18-12 ಮುನ್ನಡೆ ಪಡೆದಿದ್ದರೂ, ಆ ಮುನ್ನಡೆಯನ್ನು ಉಳಿಸಿಕೊಳ್ಳಲು ವಿಫಲರಾದ ಸಿಂಧು 16-21, 21-19, 19-21 ಅಂತರದಲ್ಲಿ ಸೋಲು ಕಂಡರು. ಈ ಸೋಲು ಪಂದ್ಯದಲ್ಲಿ ಪ್ರಮುಖ ತಿರುವಾಯಿತು.

ಪ್ರಿಯಾ-ಶ್ರುತಿಗೂ ಸೋಲು: ಮುಂದಿನ ಡಬಲ್ಸ್‌ನಲ್ಲಿ ಪ್ರಿಯಾ ಕೊಂಜೆಂಗ್ಬಾಮ್ ಮತ್ತು ಶ್ರುತಿ ಮಿಶ್ರಾ ಜೋಡಿ ಚೀನಾದ ವಿಶ್ವನಂ.1 ಜೋಡಿಗೆ ಸಾಟಿ ನೀಡಲು ವಿಫಲವಾಗಿ ನೇರ ಗೇಮ್‌ಗಳಲ್ಲಿ ಸೋತರು. ಎರಡನೇ ಸಿಂಗಲ್ಸ್‌ನಲ್ಲಿ ಇಶಾರಾಣಿ ಉತ್ತಮ ಹೋರಾಟ ನೀಡಿದರೂ, ಟೋಕಿಯೋ ಒಲಿಂಪಿಕ್ ಚಾಂಪಿಯನ್ ಚೆನ್ ಯುಫೇ ಎದುರು ನಿರ್ಣಾಯಕ ಕ್ಷಣಗಳಲ್ಲಿ ತಪ್ಪುಗಳನ್ನು ಮಾಡಿ ಸೋಲಿಗೆ ಒಳಗಾದರು. ಇದರೊಂದಿಗೆ ಚೀನಾ 3-0 ಮುನ್ನಡೆ ಪಡೆದು ಪಂದ್ಯವನ್ನು ತನ್ನದಾಗಿಸಿಕೊಂಡಿತು. ಮುಂದಿನ ಪಂದ್ಯಗಳಲ್ಲಿ ಟ್ರೀಸಾ ಜಾಲಿ-ಪ್ರಿಯಾ ಸೆಲ್ವಂ ಜೋಡಿ ಹಾಗೂ ದೇವಿಕಾ ಸಿಹಾಗ್ ಕೂಡ ಆರಂಭದಲ್ಲಿ ಉತ್ತಮ ಪ್ರದರ್ಶನ ನೀಡಿದರೂ, ಅಂತಿಮ ಕ್ಷಣಗಳಲ್ಲಿ ಸ್ಥಿರತೆ ಕಾಪಾಡಿಕೊಳ್ಳಲಾಗದೆ ಸೋಲು ಕಂಡರು.




ಒಟ್ಟಿನಲ್ಲಿ, ಭಾರತದ ಯುವ ಆಟಗಾರ್ತಿಯರು ಹೋರಾಟ ಮನೋಭಾವ ತೋರಿದರೂ, ಪ್ರಮುಖ ಕ್ಷಣಗಳಲ್ಲಿ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ವಿಫಲರಾದರು. ವಿಶೇಷವಾಗಿ ಸಿಂಧು ಕಳೆದುಕೊಂಡ ಮುನ್ನಡೆ ಪಂದ್ಯ ಫಲಿತಾಂಶದ ಮೇಲೆ ದೊಡ್ಡ ಪರಿಣಾಮ ಬೀರಿತು. ಇದೀಗ ಗಮನ ಥಾಮಸ್ ಕಪ್ ಕಡೆಗೆ ತಿರುಗಿದ್ದು, ಪುರುಷರ ತಂಡ ಚೀನಾ ವಿರುದ್ಧ ಪ್ರತೀಕಾರ ತೀರಿಸಬಹುದೇ ಎಂಬ ಕುತೂಹಲ ಹೆಚ್ಚಾಗಿದೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ

5968



ಎಡದಿಂದ ಬಲಕ್ಕೆ

1.ದಾಹದ ನಡುವೆ ಅಡಗಿದ ಜಲಪಕ್ಷಿ (3)
3.ದೇಹ ದಂಡಿಸಲು ಮಾಡುವ ವ್ಯಾಯಾಮ (5)
5.ಲಾಲಿತ್ಯವನ್ನೊಳಗೊಂಡ ಆದಿಶಕ್ತಿ (3)
6.ಬೆಡಗು-ಒಯ್ಯಾರದಿಂದ ಕೂಡಿದ್ದು (3)
8. ಪರಿಮಳವನ್ನು ಹೀಗೂ ಹೇಳುತ್ತೇವೆ (4)
10.ಹಿಂದೂ ಜ್ಯೋತಿಷ್ಯದಲ್ಲಿ ಛಾಯಾಗ್ರಹಗಳು (4)
13.ಭಯ-ಭಾವೋದ್ರೇಕದಿಂದಾಗುವ ದೇಹ ನಡುಕ (3)
15.ಪಲ್ಲವಿಯ ಪಟದಲ್ಲಾದ ಬದಲಾವಣೆ (3)
16.ಲಲಿತವಿದ್ಯಾಪರಿಣಿತ ವ್ಯಕ್ತಿ (5)
17.ಜಗಳ ಮಾಡು-ಹೊಡೆದಾಟಕ್ಕೆ ಇಳಿ (3)

ಮೇಲಿನಿಂದ ಕೆಳಕ್ಕೆ

1.ಸೇವಕರ ಸೇವಕ-ಅಡಿಯಾಳು (5)
2.ಸಮತಟ್ಟಾದ ಫಲಕವಿದು (3)
3. ಗಾಳಿಸುದ್ದಿ (4)
4.ಸ್ಮರಣೆಯ ಸಮಾನಪದ (3)
7.ಬಾವುಟವಿಲ್ಲಿ ತಲೆಕೆಳಗಾಗಿದೆ (3)
9.ಸ್ವಾಭಾವಿಕವಲ್ಲದ್ದು-ಕೆಟ್ಟ ಆಕಾರ (3)
11.ಕಳವುಮಾಡು (5)
12.ಜನರಿಂದ ಬಂದ ಸಂಸ್ಕೃತಿ (4)
13.ಕಟಕಕ್ಕೆ ಬಂದ ಕಷ್ಟ-ವಿಘ್ನಗಳು (3)
14.ಇದು ಕುದುರೆ ಎಳೆಯುವ ಗಾಡಿ (3)

5967 ಉತ್ತರ

ಎಡದಿಂದ ಬಲಕ್ಕೆ:
1.ಭಾಗವಹಿಸು
3.ನಿರ್ನಾಮ 5.ಮನುಜ
6.ರಮಣಿ 8.ದಸರ
10.ನಿರತ 13.ಹರವಿ
15.ಗಿಟುಕು 16.ಗುರಾಣಿ
17.ರಕ್ತಸಂಬಂಧ

ಮೇಲಿನಿಂದ ಕೆಳಕ್ಕೆ :
1.ಭಾಸ್ಕರ 2.ಸುಮಧುರ
3.ನಿಜಪದ 4.ಮಧುಕರ
7.ಮಧ್ಯಂತರ 9.ಸಹಕಾರ
10.ನಿಬ್ಬೆರಗು 11.ತರಂಗಿಣಿ
12.ಬೀಜಾಂಕುರ
14.ವಿರೋಧ

ಎಐಸಿಸಿ ಕಚೇರಿಗೆ ಭೇಟಿ ಸಹಜ: ಜಿ.ಪರಮೇಶ್ವರ

• **ಕಲಬುರಗಿ:** ದೆಹಲಿಗೆ ಹೋಗಬಾರದು ಎನ್ನುವ ಯಾವುದೇ ಕಾನೂನು ಇಲ್ಲ. ಇಲಾಖೆಯ ಕೆಲಸಕ್ಕಾಗಿ ಹೋದರೂ ರಾಜಕೀಯ ಚರ್ಚೆಗಳು ನಡೆಯುವುದು ಸಹಜ. ಎಐಸಿಸಿ ಕಚೇರಿಗೆ ಭೇಟಿ ನೀಡುವುದು ಸಾಮಾನ್ಯ ಪದ್ಧತಿ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಡಿನ್ನರ್ ರಾಜಕೀಯ ವಿವಾದಕ್ಕೆ ಸ್ಪಷ್ಟನೆ ನೀಡಿದ ಅವರು, ಒಟ್ಟಿಗೆ ಊಟ ಮಾಡುವುದೇ ತಪ್ಪೇ? ಸಿಎಂ, ರಾಜಣ್ಣ, ಸತೀಶ ಜಾರಕಿಹೊಳಿ, ಮಹಾದೇವಪ್ಪ, ಜಮೀರ್ ಅಹ್ಮದ್ ಎಲ್ಲರೂ ಸೇರಿ ಊಟ ಮಾಡುತ್ತೇವೆ. ಜೊತೆಗೆ ರಾಜಕೀಯ ವಿಚಾರಗಳನ್ನೂ ಚರ್ಚಿಸುತ್ತೇವೆ. ಇದರಲ್ಲಿ ತಪ್ಪೇನಿದೆ? ಎಂದು ಅವರು ಪ್ರಶ್ನಿಸಿದರು.

ಕ್ರಿಪ್ಟೋ ಕರೆನ್ಸಿ ಪ್ರಕರಣದ ಕುರಿತು ಮಾತನಾಡಿದ ಅವರು, ಸರ್ಕಾರಿ ವೆಬ್‌ಸೈಟ್ ಹ್ಯಾಕ್ ಪ್ರಕರಣವನ್ನು ಭಾರತ ಸರ್ಕಾರದ ಇಡಿಗೆ ಒಪ್ಪಿಸಲಾಗಿದೆ. ಈ ಕುರಿತು ನಾವು ಎರಡು ವರ್ಷಗಳ ಹಿಂದೆಯೇ ಮಾಹಿತಿಯನ್ನು ನೀಡಿದ್ದೇವೆ. ಪ್ರಸ್ತುತ ಬೆಂಗಳೂರುದಲ್ಲಿ ತನಿಖೆ ನಡೆಯುತ್ತಿದೆ. ಇನ್ನೊಂದು ತಿಂಗಳೊಳಗೆ ಚಾರ್ಜ್‌ಶೀಟ್ ಸಲ್ಲಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

ರಾಜ್ಯದ ಪೊಲೀಸರು ಉತ್ತಮ ಕೆಲಸ ಮಾಡುತ್ತಿದ್ದಾರೆ. ದೇಶದಲ್ಲೇ ಕರ್ನಾಟಕ ಪೊಲೀಸರಿಗೆ ಒಳ್ಳೆಯ ಹೆಸರು ಇದೆ. ಐಪಿಎಲ್ ಬೆಟ್ಟಿಂಗ್ ಹಾಗೂ ಮಟ್ಕಾ ಆಟದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಎಸ್‌ಪಿ ಮತ್ತು ಕಮಿಷನರ್‌ಗಳಿಗೆ ಸ್ಪಷ್ಟ ಸೂಚನೆ ನೀಡಲಾಗಿದೆ. ಇಂತಹ ಅಕ್ರಮಗಳಲ್ಲಿ ತೊಡಗಿದವರ ವಿರುದ್ಧ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದ್ದಾರೆ. ಪಿಎಸ್‌ಐ ನೇಮಕಾತಿ ಕುರಿತು ಮಾಹಿತಿ ನೀಡಿದ ಅವರು, ಹಿಂದಿನ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿದ್ದುದನ್ನು ಉಲ್ಲೇಖಿಸಿ, ಇದೀಗ ಎಲ್ಲಾ ಸಮಸ್ಯೆಗಳು ಬಗೆಹರಿದಿವೆ. ಒಟ್ಟು 545 ಪಿಎಸ್‌ಐಗಳನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ಡಿಕೆಶಿಗೆ 'ಬರ್ತ್‌ಡೇ ಗಿಫ್ಟ್'!

ದಲಿತ ಸಿಎಂ ಕೂಗು ಕುರಿತು ಮಾತನಾಡಿದ ಜಿ.ಪರಮೇಶ್ವರ, ಅದು ಜನಾಭಿಪ್ರಾಯ. ಜನರು ಪ್ರೀತಿ ಮತ್ತು ವಿಶ್ವಾಸದಿಂದ ಈ ರೀತಿಯ ಮಾತುಗಳನ್ನು ಹೇಳುತ್ತಾರೆ. ನಮ್ಮ ಪಕ್ಷದ ಹೈಕಮಾಂಡ್ ಎಲ್ಲವನ್ನೂ ಗಮನಿಸಿ ಸೂಕ್ತ ತೀರ್ಮಾನ ಕೈಗೊಳ್ಳುತ್ತದೆ. ಡಿ.ಕೆ.ಶಿವಕುಮಾರ ಅವರಿಗೆ 'ಬರ್ತ್‌ಡೇ ಗಿಫ್ಟ್' ರೂಪದಲ್ಲಿ ಅಧಿಕಾರ ಬದಲಾವಣೆ ನಡೆಯಬಹುದು ಎಂಬ ಮಾತುಗಳಿಗೆ ಪ್ರತಿಕ್ರಿಯಿಸಿದ ಅವರು, ಹೈಕಮಾಂಡ್ ಯಾವ ತೀರ್ಮಾನ ತೆಗೆದುಕೊಂಡರೂ ನಾವು ಅದಕ್ಕೆ ಬದ್ಧರಾಗಿರುತ್ತೇವೆ. ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಹೈಕಮಾಂಡ್ ತೀರ್ಮಾನವನ್ನು ಗೌರವಿಸುತ್ತಾನೆ. ಅಧಿಕಾರ ಬದಲಾವಣೆ ಬಗ್ಗೆ ಯಾವುದೇ ಗೊಂದಲವಿಲ್ಲ. ಕೆಲವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರಬಹುದು, ಅದನ್ನೇ ಗೊಂದಲ ಎಂದು ಹೇಳಲು ಆಗುವುದಿಲ್ಲ. ರಾಜ್ಯದ ನಾಲ್ಕು ಲಕ್ಷ ಕೋಟಿ ರೂಪಾಯಿ ಬಜೆಟ್ ಕಾರ್ಯಕ್ರಮಗಳು ಸಮರ್ಪಕವಾಗಿ ಜಾರಿಯಾಗುತ್ತಿವೆ ಎಂದು ತಿಳಿಸಿದ ಅವರು, ಸಿದ್ದರಾಮಯ್ಯ ಐದು ವರ್ಷ ಸಿಎಂ ಆಗಿ ಮುಂದುವರಿಯುತ್ತಾರೆ ಎಂಬ ಇತ್ತೀಚಿನ ಹೇಳಿಕೆ ಬಗ್ಗೆ ಕೇಳಿದ ಪ್ರಶ್ನೆಗೆ ಜಿ.ಪರಮೇಶ್ವರ ಅವರು ಉತ್ತರಿಸಲು ನಿರಾಕರಿಸಿದರು.

"ರಾಜ್ಯದಲ್ಲಿ ಸಿಎಂ ಬದಲಾವಣೆ ಕುರಿತ ಈ ಎಲ್ಲಾ ವಿಚಾರಗಳಿಗೆ ಶೀಘ್ರದಲ್ಲೇ ನಮ್ಮ ಹೈಕಮಾಂಡ್ ಉತ್ತರ ನೀಡಲಿದೆ. ಯಾವುದೇ ಗೊಂದಲವಿಲ್ಲದೆ ನಾವು ಜನರಿಗೆ ನೀಡಿದ ಭರವಸೆಯಂತೆ ಆಡಳಿತ ನಡೆಸುತ್ತಿದ್ದೇವೆ. ನಾನು ಸದ್ಯ ದೆಹಲಿಗೆ ಹೋಗುವ ಯಾವುದೇ ಯೋಜನೆ ಹೊಂದಿಲ್ಲ.
■ **ಜಿ.ಪರಮೇಶ್ವರ, ಗೃಹ ಸಚಿವ**

ಕರ್ನಾಟಕ ಪೊಲೀಸ್ ನಂ.1

ಕಲಬುರಗಿ: ನೊಂದವರಿಗೆ ನ್ಯಾಯ ಒದಗಿಸುವಲ್ಲಿ ಕರ್ನಾಟಕ ಪೊಲೀಸ್ ನಂಬರ್-1 ಸ್ಥಾನದಲ್ಲಿದೆ ಎಂದು ಕಳೆದ ವರ್ಷ ಇಂಡಿಯಾ ಜಸ್ಟೀಸ್ ಎಂಬ ಸಂಸ್ಥೆ ತನ್ನ ವರದಿಯಲ್ಲಿ ಉಲ್ಲೇಖಿಸಿದ್ದು, ಇದು ನಾಡಿನ ಪೊಲೀಸ್ ಸೇವೆಗೆ ಸಂದ ಗೌರವವಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ರೂ.20 ಲಕ್ಷ ವಂಚನೆ

• **ಕಾರವಾರ:** ಕಾರವಾರದಲ್ಲಿ ಎಲ್‌ಐಸಿ ಎಜೆಂಟ್ ಆಗಿರುವ ದಾಮೋದರ ಭಟ್ ಅವರು ಕ್ರಿಪ್ಟೋ ಕರೆನ್ಸಿ ವಿಷಯದಲ್ಲಿ ಹಣ ಹೂಡಿಕೆ ಮಾಡಿ ರೂ.20 ಲಕ್ಷದಷ್ಟು ಹಣ ಕಳೆದುಕೊಂಡ ಘಟನೆ ನಡೆದಿದೆ.

ಸುಂಕೇರಿಯ ದಾಮೋದರ ಭಟ್ ಎಲ್‌ಐಸಿ ಏಜೆಂಟ್ ಆಗಿದ್ದು, ಇವರು ಫೇಸ್‌ಬುಕ್‌ದಲ್ಲಿ ಬಂದಿರುವ ಜಾಹೀರಾತು ನೋಡಿ ಹಣ ಹೂಡಿಕೆ ಮಾಡಿದ್ದಾರೆ. ಅಂತಾರಾಷ್ಟ್ರೀಯ ಶೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭವಾಗುತ್ತದೆ ಎನ್ನುವ ಜಾಹೀರಾತು ನೋಡಿ ಮರುಳಾಗಿ ಹಣವನ್ನು 2022ನೇ ಸಾಲಿನಿಂದ ಹೂಡಿಕೆ ಮಾಡುತ್ತ ಬಂದಿದ್ದಾರೆ.

ಅಕ್ಟೋಬರ್ 2025ರಲ್ಲಿ ವಾಟ್ಸ್ಆ್ಯಪ್ ಕರೆಯಲ್ಲಿ 2022ರಲ್ಲಿ ತಾವು ಹೂಡಿಕೆ ಮಾಡಿದ ದಕ್ಷಿಣ ಆಫ್ರಿಕದ ಕಂಪನಿಯ ವಿರುದ್ಧ ಭ್ರಷ್ಟಾಚಾರ ಮತ್ತು ವಂಚನೆ ಪ್ರಕರಣ ದಾಖಲಾಗಿದೆ.

ಕಂಪನಿ ಸ್ಥಗಿತಗೊಂಡಿದೆ. ಆದರೆಮ ತಾವು ಹೂಡಿಕೆ ಮಾಡಿದ ಹಣವು 51 ಲಕ್ಷರೂ. ತಮ್ಮ ಖಾತೆಯಲ್ಲಿ ಜಮಾ ಆಗಿದೆ. ಅದನ್ನು ಭಾರತಕ್ಕೆ ತರಲು ಕ್ರಿಪ್ಟೋ ಕರೆನ್ಸಿ, ಪೆನಾಲ್ಟಿ, ಟ್ಯಾಕ್ಸ್ ಮತ್ತು ಇತರೆ ಶುಲ್ಕ ಭರಣ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ.

ಇದನ್ನು ನಂಬಿದ ದಾಮೋದರ ಭಟ್‌ರವರು ತಮ್ಮ ವಿವಿಧ ಬ್ಯಾಂಕ್ ಖಾತೆಯಲ್ಲಿದ್ದ ಸುಮಾರು 20.44 ಲಕ್ಷರೂ. ವನ್ನು ಜಮಾ ಮಾಡಿದ್ದಾರೆ. ನಂತರ ವಾಟ್ಸ್ಆ್ಯಪ್ ಕರೆಯನ್ನು ಮಾಡಿದ ವ್ಯಕ್ತಿಗೆ ಫೋನ್ ಮಾಡಿದಾಗ ಅವರಿಂದ ಯಾವುದೇ ಪ್ರತಿಕ್ರಿಯೆ ಬಾರದೇ ಇದ್ದಾಗ ದಾಮೋದರ ಭಟ್ ತಾವು ಮೋಸ ಹೋಗಿದ್ದು ಗಮನಕ್ಕೆ ಬಂದಿದೆ.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಬೇಳೆ	6500	6550
ಕಡಲೆಕಾಳು	1510	5665
ಉದ್ದಿನಬೇಳೆ	10201	10201
ಉದ್ದಿನಕಾಳು	6211	6511
ಹೆಸರುಕಾಳು	3265	6710
ನೆಲಗಡಲೆ (ಶೇಂಗಾ)	4741	6916
ಹುರುಳಿ ಕಾಳು	3761	3761
ಬೆಲ್ಲ	4150	4150
ಜೋಳ	1525	4056
ಮೆಕ್ಕೆಜೋಳ	1751	1958
ಈರುಳ್ಳಿ	500	1800
ಆಲೂಗಡ್ಡೆ	1300	1900
ಅಕ್ಕಿ	5318	8800
ಕುಸುಬೆ	4816	5481
ಸೋಯಾಬಿನ್	5721	5815
ತೊಗರಿ	4231	4231
ತೊಗರಿ ಬೇಳೆ	8500	9300
ಗೋಧಿ	2316	5472

ಕರ್ನಾಟಕ ಸರಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ
ಟೆಂಡರ್ ಪ್ರಕಟಣೆ ಸಂ:: ಕಾಇಂ/ಪಂರಾಇಂವಿಉ/ ಟೆಂಡರ್ ಪ್ರಕಟಣೆ ನಂ 02/2026-27:ಎಇ-1/ 168 /ದಿನಾಂಕ: 24-04-2026

ಟೆಂಡರ್ ಪ್ರಕಟಣೆ (ಇ-ಪೋರ್ಟಲ್ ಪದ್ಧತಿಯಲ್ಲಿ e-portal ನಡಿಯಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರವರಿಂದ 2025-26 ಸಾಲಿನ ಜಿಲ್ಲಾ ವಿಪತ್ತು ಉಪಶಮನ ನಿಧಿ (SDMF) ರಡಿಯ ಅನುದಾನದ ಯೋಜನೆಯಡಿಯಲ್ಲಿನ ಈ ಕೆಳಗಿನ ಕಾಮಗಾರಿಗಳಿಗೆ ಇ-ಪೋರ್ಟಲ್ ಪದ್ಧತಿಯಲ್ಲಿ (Standard Tender Documents for Procurment of Goods) ನ ನಿಭಂದನೆಗೊಳಪಟ್ಟಂತೆ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು ಇ-ಪೋರ್ಟಲ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka e-procurement portal WEB site https://www.kppp.karnataka.gov.in ಮೂಖಾಂತರ ಸ್ವೀಕರಿಸಲಾಗುವುದು.

1) ಕಾಮಗಾರಿಯ ವಿವರ : Construction of a Retaining Wall at landslide area of near the Government Higher Primary School, Mudradi Grama panchayath of Hebri Taluk. (Reserved For CAT-IIA) (CALL-2) ಟೆಂಡರಿಗಿಟ್ಟ ಅಂದಾಜು ಮೊತ್ತ **60.00 ಲಕ್ಷ ರೂಪಾಯಿಗಳು. ಇ.ಎಂ.ಡಿ. ಮೊತ್ತ 60000.00 ರೂಪಾಯಿಗಳು. ಗುತ್ತಿಗೆದಾರರ ಅರ್ಹತೆ :** ಕ್ಲಾಸ್ -3 ಮತ್ತು ಮೇಲ್ಪಟ್ಟು (CAT-IIA ಗುತ್ತಿಗೆದಾರರು ಮಾತ್ರ)

1. ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ : 24-04-2026ರಿಂದ 04-05-2026ರ 4.00 (PM) ಗಂಟೆಯವರೆಗೆ. 2. ಟೆಕ್ನಿಕಲ್ ಬಿಡ್ಡುಗಳನ್ನು ತೆರೆಯುವ ದಿನಾಂಕ : 05-05-2026ರ 4.30 (PM) ಗಂಟೆಯ ನಂತರ. 3. ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ : 08-05-2026ರ 11.00 (AM) ಗಂಟೆಯ ನಂತರ.

ಇನ್ನಿತರೆ ನಿಬಂಧನೆಗಳು, ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ವೆಬ್ ಸೈಟ್ https://www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಚೇರಿಯವರಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ.

ಅಸಲು ದಾವಾ ನಂ. 189/2023
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಹುನಗುಂದ ಇವರ ನ್ಯಾಯಾಲಯದಲ್ಲಿ

1) ವಿಶ್ವನಾಥ ತಂ: ಸಂಗನಗೌಡ ಹನಮಗೌಡರ ಹಾಗೂ ಇತರರು .....ವಾದಿಯರು
ವಿರುದ್ಧ
1) ಸಂಗನಗೌಡ ತಂ: ಲಕ್ಕನಗೌಡ ಹನಮಗೌಡರ ಹಾಗೂ ಇತರರು .....ಪ್ರತಿವಾದಿಯರು

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 ರಡಿಯಲ್ಲಿ ಪತ್ರಿಕಾ ಪ್ರಕಟಣೆ

ಇದರಲ್ಲಿ ವಾದಿಯರು ತಮ್ಮ ಅವಿಭಕ್ತ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಆಗಿರುವ ಖರೀದಿ ಪತ್ರಗಳು, ಕಂದಾಯ ದಾಖಲೆಗಳು ಖೊಟ್ಟಿ ಇರುತ್ತವೆ ಅಂತಾ ಠರಾಯಿಸಲು ಮತ್ತು ಅವಿಭಕ್ತ ಕುಟುಂಬದ ಆಸ್ತಿಗಳಲ್ಲಿ ತಮ್ಮ ಪಾಲಿನ ಹಿಸ್ಸಾ ವಿಂಗಡಿಸಿ ಪ್ರತ್ಯೇಕ ಕಬ್ಜಾ ಕೊಡುಸುವಂತೆ ಕೋರಿ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯ ಹುನಗುಂದ ಇವರಲ್ಲಿ ಅಸಲು ದಾವಾ ನಂ. 189/2023 ಅಂತಾ ದಾವೆಯನ್ನು ಸಲ್ಲಿಸಿರುತ್ತಾರೆ. ಸದರ ದಾವೆಯಲ್ಲಿ 10) ಶ್ರೀಮತಿ ಸುಜಾತ ಗಂ: ಶಿವನಗೌಡ ಬಿರಾದಾರ ಹಾಗೂ 11) ಶ್ರೀಮತಿ ಸಾವಿತ್ರಿ ಗಂ: ಸಂಗನಗೌಡ ಮನ್ನಾಪೂರ, ಇಬ್ಬರೂ ಸಾ: ತಿಮ್ಮಾಪೂರ, ತಾ: ಹುನಗುಂದ, ಜಿ: ಬಾಗಲಕೋಟ, ದಾವೆಯಲ್ಲಿ ಇವರಿಬ್ಬರು ಅನುಕ್ರಮವಾಗಿ 10 ಮತ್ತು 11ನೇ ಪ್ರತಿವಾದಿಯರು ಅಂತಾ ಇದ್ದು, ಸದರಿಯವರಿಗೆ ಈ ಪತ್ರಿಕಾ ಪ್ರಕಟಣೆ ಮೂಲಕ ಸಮನ್ಸ್ ಜಾರಿಗೊಳಿಸಲಾಗಿದೆ. ಸದರ ದಾವೆಯು ದಿನಾಂಕ: 10/06/2026 ರಂದು ವಿಚಾರಣೆಗೆ ಇದ್ದು, ಮೇಲೆ ಹೆಸರಿಸಿದ 10 ಮತ್ತು 11ನೇ ಪ್ರತಿವಾದಿಯರು ನೀವಾಗಲಿ ಅಥವಾ ನಿಮ್ಮ ವಕೀಲರಾಗಲಿ ಸದರ ದಾವೆಯಲ್ಲಿ ಹಾಜರಾಗಿ ನಿಮ್ಮ ಪರವಾಗಿ ಏನಾದರೂ ತಕರಾರು/ಕೈಫಿಯತ್ ಇದ್ದಲ್ಲಿ, ಸದರ ವಿಚಾರಣೆ ದಿನಾಂಕದಂದು ಬೆಳಿಗ್ಗೆ 10:30 ಘಂಟೆಗೆ ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಹುನಗುಂದ ಇವರ ನ್ಯಾಯಾಲಯದಲ್ಲಿ ಹಾಜರಾಗಿ ಸಲ್ಲಿಸಬಹುದು. ತಪ್ಪಿದಲ್ಲಿ ಮಾನ್ಯ ನ್ಯಾಯಾಲಯವು ಮುಂದಿನ ಆದೇಶ ಮಾಡುವುದು.

ನ್ಯಾಯಾಲಯದ ಆದೇಶದ ಮೇರೆಗೆ ಇಂದು ದಿನಾಂಕ: 27/3/2026 ರಂದು ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.
ಸ್ಥಳ: ಹುನಗುಂದ
ದಿನಾಂಕ: 18/03/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು,
ಹಿರಿಯ ದಿವಾಣಿ ನ್ಯಾಯಾಲಯ ಹುನಗುಂದ
ಸಹಿ/- (ಶ್ರೀ ಎಮ್. ಎಸ್. ಬಿಜಕಲ್ಲ)
ವಾದಿಯರ ಪರ ವಕೀಲರು

G. & W No : 03/2026
ಮಾನ್ಯ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ಬ್ಯಾಡಗಿ ಇವರ ನ್ಯಾಯಾಲಯಕ್ಕೆ

ಅರ್ಜಿದಾರರು : 1) ಪ್ರಶಾಂತ ತಂದೆ ರವಿ ಹಡಗಲಿ ಸಾ:ತಡಸ ತಾ:ಬ್ಯಾಡಗಿ ಜಿ:ಹಾವೇರಿ ಹಾಗೂ ಇತರರು.
ವಿರುದ್ಧ
ಎದುರುಗಾರರು: ಯಾರೂ ಇಲ್ಲ.

ಇಶ್ತಿಯಾರ ನಾಮೆ

ಇದರಲ್ಲಿ 1ನೇ ಅರ್ಜಿದಾರನಾದ ಪ್ರಶಾಂತ ತಂದೆ ರವಿ ಹಡಗಲಿ ಹಾಗೂ 2ನೇ ಅರ್ಜಿದಾರನಾದ ದೀಪಕ ತಂದೆ ರವಿ ಹಡಗಲಿ ಇವರ ಅಲ್ಪವಹಿ ಸಂರಕ್ಷಣದಾರನಾದ ಹಾಗೂ 3ನೇ ಅರ್ಜಿದಾರನಾದ ರಾಜು ತಂದೆ ಸಹದೇವಪ್ಪ ಹಡಗಲಿ ಆದ ನಾನು ನನ್ನ ಪೋತಿ ಅಣ್ಣನ ಮಕ್ಕಳ ಸಂರಕ್ಷಣದಾರನು ಇರುತ್ತೇನೆ ಅಂತಾ ಮಾನ್ಯ ನ್ಯಾಯಾಲಯದಿಂದ ಆದೇಶವನ್ನು ಪಡೆಯುವ ಕುರಿತು ಜಿ. ಡಬ್ಲ್ಯೂ ನಂ: 03/2026 ನೇದ್ದನ್ನು ದಾಖಲಿಸಿದ್ದು ಇರುತ್ತದೆ.

ಕಾರಣ ಈ ಮೇಲ್ಕಂಡ ವಿಷಯದ ಬಗ್ಗೆ ಯಾರಾದರು ಹಿತಾಸಕ್ತಿಯುಳ್ಳವರು ಇದ್ದಲ್ಲಿ ತಮ್ಮ ತಕರಾರು ಏನಾದರು ಇದ್ದಲ್ಲಿ ದಿನಾಂಕ: 12-06-2026 ರಂದು ಮುಂಜಾನೆ 10-30 ಘಂಟೆಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸಬೇಕು. ಸದರಿ ಕೇಸಿನಲ್ಲಿ ಮುಂದಿನ ಆದೇಶ ಮಾಡಲಾಗುವದು.

ಈ ದಿವಸ ದಿನಾಂಕ: 18 ಎಪ್ರಿಲ್ ತಿಂಗಳು 2026 ರಂದು ತಮ್ಮ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿತು.

ಮಾನ್ಯ ನ್ಯಾಯಾಲಯದ ಆದೇಶ ಮೇರೆಗೆ
ಸಹಿ/- ಜೆ. ಬಿ. ಬಾರ್ಕಿ, ಶಿರಸ್ತೇದಾರರು
ಮಾನ್ಯ ಹಿರಿಯ ಸಿವ್ಹಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಬ್ಯಾಡಗಿ
ಸಹಿ/- ಶ್ರೀ ಮಾಲತೇಶ ಬಿ. ಹಾವೇರಿ
ಅರ್ಜಿದಾರರ ಪರ ನ್ಯಾಯವಾದಿಗಳು

IN THE COURT OF THE DEPUTY COMMISSIONER VIJAYANAGARA DISTRICT
ROR APPEAL No. 146/2025
K. Abdul Jabbar S/o K. Imam Sab .....Appellant
-V/s-
Chowtgi Gonemma and 12 others .....Respondents

Summons/Notices for settlement of issues U/O V R. 20 (1A) of C.P.C.

To
The RESPONDENT No.10
Ganji Balappa S/o Late Hanumanthappa, Hitnal Village, Koppal Taluk & District-583231

Where as the above named Appellant has filed the above appeal against you and others before this Hon'ble Court for setting aside the order of Assistant Commissioner. Therefore you are hereby summoned to appear in person or through pleader duly instructed and able to answer all the material questions relating to the case or who shall be accompanied by some person able to answer all the questions relating to the suit on 12:00 pm, 29th day of April of 2026 to answer the claim and you are hereby directed to produce on that day all the documents on which you intended to relay in support of your defense.

Please take notice that in default of your appearance on the day before mentioned, the appeal will be heard and determined in your absence.

Given under my hand and seal of the Court on 23/4/2026
By the order of the Court
Sd/- Chief ministerial Officer
The Deputy Commissioner, Vijayanagara District.
From : H.Venkata Rao, H. Bhagawan, Suresh D., Advocates, Hosapete

---

ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ ಸಮಗ್ರ ಶಿಕ್ಷಣ ಕರ್ನಾಟಕ ಕೋಲಾರ ಜಿಲ್ಲೆ, ಕೋಲಾರ
ಸಂಖ್ಯೆ: ಸಶಿಅ/ಆ2/ಬ್ಲಾ.ಹಂ. ARP/ನೇ.ಇ-ಟೆಂಡರ್/2026-27
ದಿನಾಂಕ:21.04.2026

ಇ-ಟೆಂಡರ್ ಪ್ರಕಟಣೆ

2026-27ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮಗಳ ಅನುಷ್ಠಾನ ಸಂಬಂಧ 6 ಬಿ.ಆರ್.ಸಿ. ಕೇಂದ್ರಗಳಿಗೆ ತಲಾ ಒಬ್ಬರಂತೆ Block Academic Resource Person for Career Counsellor ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ಒದಗಿಸಲು ಅರ್ಹ ಅಧಿಕೃತ ಸರಬರಾಜುದಾರರು /ಏಜೆನ್ಸಿಗಳಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ **http://kppp.karanatka.gov.in** ವೀಕ್ಷಿಸಿ. **ಚಟುವಟಿಕೆ:** ಬ್ಲಾಕ್ ಕಛೇರಿಗೆ ತಲಾ ಒಬ್ಬರಂತೆ Block Academic Resource Person for Career Counsellor ಒಟ್ಟು 6 ಹೊರಗುತ್ತಿಗೆ ನೌಕರರ ಸೇವೆ ಒದಗಿಸಲು. ಇ-ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **08.05.2026ರ ಸಂಜೆ: 4.00 ಗಂಟೆ. ಟೆಂಡರ್‌ಗೆ ಇಟ್ಟ ಮೊತ್ತ:** ರೂ 19.80 ಲಕ್ಷಗಳು. ಇಲಾಖೆಯ ವೆಬ್‌ಸೈಟ್: **http://kppp.karanatka.gov.in**

ಸಹಿ/-ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸಶಿಕ ಕೋಲಾರ ಜಿಲ್ಲೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:48/ಕೆಎಸ್‌ಎಂಸಿಎ/2026-27

ಪುರಸಭಾ ಕಾರ್ಯಾಲಯ, ಕೃಷ್ಣರಾಜಪೇಟೆ
ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ-571426.
ದೂರವಾಣಿ: 08230 - 295073
E-Mail: ka.krishnarajapete.tmc@gmail.com
Web: www.krishnarajapetetown.mrc.gov.in

ಸಂಖ್ಯೆ: ಪು.ರಾ.ಕೃ/ಕಂ.ಶಾ/ಇ-ಹರಾಜು/02/2025-26
ದಿನಾಂಕ: 26-03-2026

ಹರಾಜು ಪ್ರಕಟಣೆ

ಕೃಷ್ಣರಾಜಪೇಟೆ ಪುರಸಭಾ ವ್ಯಾಪ್ತಿಯಲ್ಲಿರುವ ವಿವಿಧ ಬಾಬ್ತುಗಳಾದ (1) ನೆಲ ತೆರಿಗೆ (2) ಖಾಸಗಿ ಬಸ್ ನಿಲ್ದಾಣದ ಬಳಿ ಇರುವ ಎ ಬ್ಲಾಕಿನ 18 ಮಳಿಗೆಗಳು (3) ಪುರಸಭಾ ಖಾಸಗಿ ಬಸ್ ನಿಲ್ದಾಣದ ಬಳಿ ಇರುವ ಬಿ ಬ್ಲಾಕಿನ 18 ಮಳಿಗೆಗಳಿಗೆ ಮತ್ತು ಖಾಸಗಿ ಬಸ್ ನಿಲ್ದಾಣದಲ್ಲಿರುವ (6) ಮಳಿಗೆಗಳಿಗೆ, ಕುರಿ, ಮೇಕೆ ಮತ್ತು ಮೀನು ಮಾರಾಟ ಮಾಡುವ ಹರಾಜು ದಿನಾಂಕ 01-05-2026 ರಿಂದ ದಿನಾಂಕ: 31-03-2027 (11) ತಿಂಗಳು ಅವಧಿಗೆ 30-04-2026 ರ ಗುರುವಾರ ಬೆಳಗ್ಗೆ 10: 30 ಕ್ಕೆ ಪುರಸಭೆಯ ಖಾಸಗಿ ಬಸ್ ನಿಲ್ದಾಣದಲ್ಲಿ ಬಹಿರಂಗ ಹರಾಜು ನಡೆಸಲಾಗುವುದು. ಹರಾಜಿಗೆ ಭಾಗವಹಿಸುವವರು 29-04-2026 ರ ಬುಧವಾರ ಸಂಜೆ 5: 30 ರೊಳಗೆ ಡಿ.ಡಿ ಮೂಲಕ ಹಣ ಸಂದಾಯ ಮಾಡತಕ್ಕದ್ದು ನಂತರ 30-04-2026 ರಂದು ಹರಾಜಿನ ದಿನಾಂಕದಂದು ನೀಡುವಂತ ಡಿ.ಡಿ ಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗೆ ಕಛೇರಿಯ ಕಂದಾಯ ಶಾಖೆಯಿಂದ ಮಾಹಿತಿ ಪಡೆದುಕೊಳ್ಳತಕ್ಕದ್ದು ಈ ವಿವಿಧ ಬಾಬ್ತುಗಳ ಪ್ರಕಟಣೆ ಮಾಡಿದ ಬಾಬ್ತುಗಳನ್ನು ಕಛೇರಿಯಿಂದ ನೀಡಲಾಗುವುದು.

ಸಹಿ/- ಆಡಳಿತಾಧಿಕಾರಿ, ಪುರಸಭೆ, ಕೃಷ್ಣರಾಜಪೇಟೆ.
ಸಹಿ/- ಮುಖ್ಯಾಧಿಕಾರಿ, ಪುರಸಭೆ, ಕೃಷ್ಣರಾಜಪೇಟೆ.

CHANGE OF NAME
I, YERMAL HUSENABBA ASMATH (Old Name) R/o Keni Road Ankola 581314, have changed my name as **ASMATH NASEER AHMED SAB** (New Name) henceforth I will be called and recognized by new name for all future purposes, dated: 28/04/2026.

CHANGE OF NAME
I, VIDYA ELLUR (Old Name) Resident of 393, Main Road, Hirekerur Town, Haveri - 581111, Karnataka, India, have changed my name as **VIDYA PAVAN JEEVANNANAVAR** (New Name) henceforth I will be called and recognized by new name for all future purposes, dated: 28/04/2026.

CHANGE OF NAME
I, MOUSEENA DEGANAL (Old Name) Resident of Salma Sheikh Building, Plot no 3, 1st Floor, Sulla Road, Manoj Park, Opposite Raghvendra Enclave Apartment, 3rd cross, Suncity Estate, Gopankoppa, Dharwad, Karnataka Pin Code: 580023, have changed my name as **MOHSINA AKHTAR** (New Name) henceforth I will be called and recognized by new name for all future purposes, dated: 28/04/2026.

CHANGE OF NAME
I, UMADEVI ALLURI (Old Name) Resident of H No: 5-3-125 Krishnadevaraya Marg, Vivekananda Colony Gangawati, Koppal 583227, have changed my name as **DATLA UMA DEVI** (New Name) henceforth I will be called and recognized by new name for all future purposes, dated: 28/04/2026.

CHANGE OF NAME
I, POOJA RAHUL BHANDARI (Old Name) Resident of C/o-4, G3 Toral Apartment Keshwapur, Hubli, Dharwad, Karnataka, Pin Code: 580023, have changed my name as **POOJA JITENDRA JAIN** (New Name) henceforth I will be called and recognized by new name for all future purposes, dated: 28/04/2026.

CHANGE OF NAME
I, PARIHAR DHANRAJ PRAVIN (Old Name) Resident of No: 58, 15th Cross 15th Main, J C Nagar, Mahalakshmipuram, Bangalore North, Mahalakshmipuram Layout, Bengaluru, Karnataka, Pin Code: 560086, have changed my name as **DHANRAJ PARIHAR** (New Name) henceforth I will be called and recognized by new name for all future purposes, dated: 28/04/2026.

CHANGE OF NAME
I, SUNITA NEGALUR (Old Name) Resident of H No 83, 2nd Cross, Ravi Nagar, Gokul Road, Hubli, Hubballi - Dharwad City - 580030, Karnataka, India, have changed my name as **SUNITA PRASANNA VAIDYA** (New Name) henceforth I will be called and recognized by new name for all future purposes, dated: 28/04/2026.

ದೃಢೀಕರಣ
ನಾನು ಜಗದೀಶ ತಂದೆ ಹನುಮಂತಪ್ಪ ವಾಲ್ಮೀಕಿ ಉರ್ಫ್ ತಳವಾರ, ಉದ್ಯೋಗ: ಚಾಲಕ, ಸಾ: [illegible] 15ನೇ ಕ್ರಾಸ್, ಕೇಶ್ವಾಪುರ, [illegible] ಹುಬ್ಬಳ್ಳಿ, ಹುಬ್ಬಳ್ಳಿ-24 ತಿಳಿಸುವುದೇನೆಂದರೆ ನನ್ನ ಆಧಾರ ಕಾರ್ಡ್ [illegible] ದಾಖಲಾತಿಗಳಲ್ಲಿ ತಳವಾರ ಎಂದೂ ಹಾಗೂ ಮನೆತನದ ದಾಖಲಾತಿಗಳಲ್ಲಿ ವಾಲ್ಮೀಕಿ ಎಂದು ಇರುತ್ತದೆ. ಕಾರಣ ಈ ಎರಡೂ ಹೆಸರುಗಳು ಒಬ್ಬನೇ ವ್ಯಕ್ತಿಯ [illegible] ಎಂದು ದೃಢೀಕರಿಸುತ್ತೇನೆ.
ಸಹಿ S.N.REDDY ದಿನಾಂಕ 27.04.2026

CHANGE OF NAME
I, Ms. DOLLY (Old Name) Residing At No.114, "Mahaveer Nivas" 4th Main, Mico Layout, J C Nagar, Mahalakshmipuram, Bengaluru - 560086, have changed my name as **DOLY** (New Name) henceforth I will be called and recognized by new name for all future purposes, dated: 28/04/2026.

CHANGE OF NAME
I, GADDEPPA LAMANI (Old Name) Resident of H NO.379/A Tq: Badami, Hullikeri Inam, Hullikeri, Bagalkot, Kamalaka Pin Code: 587201, have changed my name as **GADDEPPA SHANKRAPPA LAMANI** (New Name) henceforth I will be called and recognized by new name for all future purposes, dated: 28/04/2026.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.
ಜಾಹೀರಾತು ವ್ಯವಸ್ಥಾಪಕರು

CHANGE OF NAME
I, PRIYANKA SANGHAI (Old Name) Resident of Flat No - T2, A Block, 3rd Floor, Ashwamedha Castel, Keshwapur, Hubballi - Dharwad City - 580020, Karnataka, India, have changed my name as **PRIYANKA SANDEEP SANGHAI** (New Name) henceforth I will be called and recognized by new name for all future purposes, dated: 28/04/2026.

IN THE COURT OF THE V ADDITIONAL CIVIL JUDGE & JMFC AT BALLARI
Crl. M.C. No. 125 OF 2026
Between :-
Channa Basava And another .....Petitioner
AND
The Chief Officer cum Town Registrar of Birth's & and Death's Town Municipal Council Kurugodu .....Respondent

NOTICE
To The Chief Officer cum Tow Registrar of Birth's & and Death's Town Municipal Council Kurugodu Ballari District

Whereas the above named petitioners have filed Application against the respondent seeking death certificate of Petitioners MOTHER By name HANUMAKKA W/O NAGADEVAPPA, WHO DIED ON 05-04-2003 AT RESIDENCE AT KURUGODU TOWN, BALLARI DISTRICT

You are hereby summoned to appear in this court in person or by an Advocate duly instructed and able to answer all material questions relating to the claim or who shall be accompanied by some person able to answer all such 30-04-2026 at 11-00 'O' Clock in questions, on the day the forenoon, to answer the claim And further you are hereby directed to file on that day a Counter of your defense and to produce on the said day all documents in your possession or Power upon which you base. Your defense, where you rely on any other document whether in your possession or power or not, as evidence in support of your defense you shall enter such documents in a list to be annexed to the counter.

Take notice that, in default of your appearance on the day before mentioned, the suit will be heard and determined in your absence.

Given under my hand and seal of the court on this 25th day of March- 2026.
By Order of the court.
Sd/- Shirestedar,
V Addl Civil Judge and JMFC Ballari
Sd/- Shivanna S.
Advocate for the petitioner

IN THE COURT OF THE III ADDITIONAL CIVIL JUDGE & J.M.F.C. AT BALLARI.
Crl. M.C. No. 420/2025
Between:-
1) BASHA S/O LATE.MOHAMMED SAB, aged about 41 years, R/o ward No.29, Danappa street, Cowl Bazaar, Ballari.
2) CHAND BI W/O HONUR SAB D/O LATE. MOHAMMED SAB, aged about 57 years,
3) SHAMSHAD BI W/O VADDU DADHAPEERA D/O LATE. MOHAMMED SAB, aged about 46 years,
4) JAREENA BEE W/O KHADER BASHA D/O LATE.MOHAMMED SAB, aged about 39 years, all are R/o Kolagallu village, Ballari taluk and District. .....Petitioners
And
RESPONDENTS.
1) The Register of Births & Death's, Thasildhar, Taluk office, Ballari.
2) ABDUL KARIM S/O LATE.MOHAMMED SAB, aged about 49 years, R/o Kolagallu village, Ballari taluk and District. .....Respondents

NOTICE
WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of petitioner's father by name MOHAMMED SAB S/O LATE. KALA SAB, was died on 11-07-1995 at Kolagallu village, Ballari taluk and District in the above mentioned address.

Therefore, If any persons are interested you are hereby directed to appear in this court in person or by a pleader duly instructed on 27-05-2026 at about 11.00 a.m to show cause against the above suit, failing which the suit will be heard and determined ex-parte against you.

Given under my hand and seal of the court on this 28th day April 2026.
By Order of the court.
Sd/- Chief Ministerial Officer,
III Addl Civil Judge & JMFC at Ballari
Sd/- S. G. SHANMUKHA
Advocate for the petitioners

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ
ದೂರವಾಣಿ: 08384-226381 ಇ-ಮೇಲ್: ee_zpedsirsi@yahoo.co.in
ಕ್ರಸಂ: ಪಂ.ರಾ.ಇಂ/ವಿಶಿ/ಪಿ.ಬಿ-1/ಟೆಂಡರ್-01/ಶಿ.ಇ./2026-27/110 ದಿನಾಂಕ: 23-04-2026

ಟೆಂಡರ್ ಪ್ರಕಟಣೆ 01/2026-27 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಶಿರಸಿ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನವೀಕೃತ ನೊಂದಾಯಿತ 2019-20 ನೇ ಸಾಲಿನ ನವೀಕೃತ ನೋಂದಾಯಿಸಿದ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಶಿಕ್ಷಣ ಇಲಾಖೆ ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ http://www.kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿ ಹೆಸರು: SC Category: (1) RDPR/2026-27/BD/WORK_INDENT 26225
ST Category: (2) RDPR/2026-27/BD/WORK_INDENT26224 (3) RDPR/2026-27/BD/WORK_INDENT26281
CAT II (A) Category: (4) RDPR/2026-27/BD/WORK_INDENT 26287 (5) RDPR/2026-27/BD/WORK_INDENT26288 (6) RDPR/2026-27/BD/WORK_INDENT26337
Others Category: (7) RDPR/2026-27/BD/WORK_INDENT26282 (8) RDPR/2026-27/BD/WORK_INDENT26248 (9) RDPR/2026-27/BD/WORK_INDENT25952 (10) RDPR/2026-27/BD/WORK_INDENT 26339

(1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 06-05-2026 ರ ಸಂಜೆ 16.00 ಘಂಟೆವರೆಗೆ (2) ಟೆಂಡರನ್ನು ತೆರೆಯುವ ದಿನಾಂಕ: 07-05-2026 ಸಂಜೆ 16.30 ಘಂಟೆಗೆ (ಸಾಧ್ಯವಾದಲ್ಲಿ) ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟಿನಲ್ಲಿ ಅಥವಾ ಈ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ
DIPR/KWR/KSMCA/83/26-27 dt.27.04.2026

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಎಇ-3:ಟೆಂಡರ್-05:2026-27 ದಿನಾಂಕ: 28.04.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ :- ಕೆಪಿಪಿಪಿ ಪೋರ್ಟಲ್ ಮೂಲಕ- ದ್ವಿ ಲಕೋಟೆ ಪದ್ಧತಿ :-
ಸಾಮಾನ್ಯ :- ಲೆಕ್ಕ ಶೀರ್ಷಿಕೆ: 5054-03-337-0-17-154 ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳು ಸುಧಾರಣೆ :- (1) ಹೊಳಲ್ಕೆರೆ ತಾಲ್ಲೂಕು ರಾಷ್ಟ್ರೀಯ ಹೆದ್ದಾರಿ 13 ಚಿತ್ರಹಳ್ಳಿ ಸರ್ಕಲ್‌ನಿಂದ ಕೊಳಹಾಳು ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ (ಎಸ್.ಹೆಚ್.243) (ವ.ಇಂ. 27836)/2ನೇ ಕರೆ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):-200.00

ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 04-05-2026 ಸಮಯ 17-30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 05-05-2026 ಸಮಯ 16-00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 06-05-2026 ಸಮಯ 16-15
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 08-05-2026 ಸಮಯ 11-00

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 91 9240214000 ಮತ್ತು 91 9240214001 ರಿಂದ ಮಾಹಿತಿ ಪಡೆಯಬಹುದು

DIPR/CTA/KSMCA/70/2026-27
ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ದೊಡ್ಡತೋಗೂರು
ದೂ.ಸಂ: 080-22111177
ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ - 560 100
e-Mail:ka.doddathoguru.tp@gmail.com | Web: www.doddathoguru.mrc.gov.in
ಸಂ.ದೊಪಪಂ/ತಾ.ಶಾ/ಎಸ್.ಎಫ್.ಸಿ/ಟೆ.ಪ್ರ/02/2026-27 ದಿನಾಂಕ: 28.04.2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2026-27 ಸಾಲಿನ ಎಸ್.ಎಫ್.ಸಿ(ಎಸ್.ಸಿ.ಎಸ್.ಪಿ & ಶೇ5%)ರ ಅನುದಾನದಡಿಯಲ್ಲಿ ನಿರ್ವಹಿಸಲು ಈ ಕೆಳಕಂಡ ಇಂಡೆಂಟ್ ಸಂಖ್ಯೆಗಳ ಕಾಮಗಾರಿಗಳ ಟೆಂಡರ್ ಆಹ್ವಾನಿಸಲು ಉದ್ದೇಶಿಸಲಾಗಿದ್ದು, ಅದರಂತೆ ಲೋಕೋಪಯೋಗಿ ಇಲಾಖೆಯ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ಕೆಪಿಪಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಪಡೆದು ಭಾಗವಹಿಸ ಬಹುದಾಗಿರುತ್ತದೆ.

Sl No	Indent No.
01	DMA/2026-27/OW/WORK INDENT57739
02	DMA/2026-27/OW/WORK INDENT57740

1. ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 08.05.2026ರ ಸಂಜೆ 5.30 ಗಂಟೆಯವರೆಗೆ. 2. ಟೆಂಡರ್‌ನ್ನು ತೆರೆಯುವ ದಿನಾಂಕ: 11.05.2026ರ ಬೆಳಗ್ಗೆ 11.30 ಗಂಟೆ ನಂತರ ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸ ಬಹುದಾಗಿರುತ್ತದೆ. 3. ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ ಪಟ್ಟಣ ಪಂಚಾಯಿತಿಯ ತಾಂತ್ರಿಕ ಶಾಖೆಯಲ್ಲಿ ಮಾಹಿತಿ ಪಡೆಯ ಬಹುದಾಗಿರುತ್ತದೆ. 4. ದೂರವಾಣಿ ಸಂಖ್ಯೆ: 080-22111177. ಇ-ಮೇಲ್: **ka.doddathoguru.tp@gmail.com**

ಸಹಿ/- ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ, ದೊಡ್ಡತೋಗೂರು.
ಸಹಿ/- ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ದೊಡ್ಡತೋಗೂರು.
ವಾಸಾಸಂಇ/ವಾಪ್ರ/ಜಿಎ/396/2026-27

ಲೋಕೋಪಯೋಗಿ ಇಲಾಖೆ
ಕಾರ್ಯನಿವಾಹಕ ಇಂಜನೀಯರವರ ಕಛೇರಿ, ಧಾರವಾಡ ವಿಭಾಗ, ಧಾರವಾಡ. ದೂ.: 0836-2747944, ಇ-ಮೇಲ್: eepwddha@gmail.com
ಕ್ರಸಂ : ಕಾನಿಇಂಧಾ/ಗುತ್ತಿಗೆ/ಪಿ.ಬಿ.1/2026-27/381 ದಿನಾಂಕ: 27.04.2026

ಟೆಂಡರ್ ಪ್ರಕಟಣೆ
I.F.T – KW –1,3,4
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ ಡಬ್ಲ್ಯೂ-1,3,4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. (kppp.karnataka.gov.in) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಕನಿಷ್ಠ ರೂ.2.28 ಲಕ್ಷಗಳಿಂದ ಗರಿಷ್ಠ ರೂ.300.00 ಲಕ್ಷಗಳ ವರೆಗೆ, 4216-01-700-2-01-386 ನಿವಾಸಿ ಕಟ್ಟಡಗಳ ನಿರ್ಮಾಣ, 2025-26ನೇ ಸಾಲಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಲೆಕ್ಕಶೀರ್ಷಿಕೆ 4059-80-051-0-60-132 ಮೂಲ ಸೌಕರ್ಯ ಬಂಡವಾಳ ವೆಚ್ಚ ಅಡಿ ಹಾಗೂ 3054-03-337-0-05-200 ರಾಜ್ಯ ಹೆದ್ದಾರಿ ನಿರ್ವಹಣೆ 4059-80-051-0-60-132 ಇಲಾಖಾ ಕಟ್ಟಡಗಳು, 4059-SCP ಲೆಕ್ಕ ಶೀರ್ಷಿಕೆ ಅಡಿ ಬರುವ ಕಾಮಗಾರಿಗಳಿಗೆ ಟೆಂಡರನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಗಿನಂತಿದೆ.

1. Calender of Events: ಸಾಮಾನ್ಯ
1. PWD/2026-27/SE1189 2. PWD/2025-26/RD/WORK_INDENT30736/CALL-3 (Extension) 3. PWD/2025-26/RD/WORK_INDENT35121 4. PWD/2025-26/RD/WORK_INDENT35092
1) ಆಕ್ಷೇಪಣೆ-ಸಂದೇಹ ದಿನಾಂಕ: 05-05-2026 (ಬೆಳಿಗ್ಗೆ 12:30 ಗಂಟೆಯವರೆಗೆ) 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 06-05-2026 (ಸಾಯಂಕಾಲ 16:00 ಗಂಟೆಯವರೆಗೆ) 3) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 07-05-2026 (ಸಾಯಂಕಾಲ 16:30 ಗಂಟೆಯ ನಂತರ) 4) ಆರ್ಥಿಕ ಬಿಡ್‌ತೆರೆಯುವ ದಿನಾಂಕ: 08-05-2026 (ಸಾಯಂಕಾಲ 16:30 ಗಂಟೆಯ ನಂತರ)

2. Calender of Events: ಸಾಮಾನ್ಯ
1.PWD/2025-26/RD/WORK_INDENT31546/CALL-3
2. PWD/2025-26/BD/WORK_INDENT27630/CALL-5
1) ಆಕ್ಷೇಪಣೆ-ಸಂದೇಹ ದಿನಾಂಕ: 08-05-2026 (ಬೆಳಿಗ್ಗೆ 12:30 ಗಂಟೆಯವರೆಗೆ) 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 11-05-2026 (ಸಾಯಂಕಾಲ 16:00 ಗಂಟೆಯವರೆಗೆ) 3) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 12-05-2026 (ಸಾಯಂಕಾಲ 16:30 ಗಂಟೆಯ ನಂತರ) 4) ಆರ್ಥಿಕ ಬಿಡ್‌ತೆರೆಯುವ ದಿನಾಂಕ: 13-05-2026 (ಸಾಯಂಕಾಲ 16:30 ಗಂಟೆಯ ನಂತರ)

ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ http://www.kppp.karnataka.gov.in ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ ಕಚೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಡಿಐಪಿಆರ್/ಧಾರವಾಡ/99/ಮಣಿಪಾಲ್/2026-27
ಸಹಿ/- ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ಹೊಸ ದಿಗಂತ
ಬುಧವಾರ, 29 ಏಪ್ರಿಲ್ 2026
ಹುಬ್ಬಳ್ಳಿ

ನವಭಾರತದ ಡಿಜಿಟಲ್ ಪ್ರತಿರೋಧ

ಪ್ರಹಾರ್ ನೀತಿ ಮತ್ತು ಬದಲಾಗುತ್ತಿರುವ ಭದ್ರತಾ ಆಯಾಮಗಳು



ತ್ವರಿತ ವಿಶ್ಲೇಷಣೆಗೆ ಪ್ರಹಾರ್ ಬದ್ಧ

ದತ್ತಾಂಶಗಳ ವೈಜ್ಞಾನಿಕ ಮತ್ತು ಆಳವಾದ ವಿಶ್ಲೇಷಣೆಯು ಈ ಇಡೀ ಭದ್ರತಾ ವ್ಯವಸ್ಥೆಯ ಬೆನ್ನೆಲುಬಾಗಿದೆ ಎನ್ನಬಹುದು. ಕಳೆದ ಎರಡು ವರ್ಷಗಳ ಅಂದರೆ 2024 ರಿಂದ ಇಲ್ಲಿಯವರೆಗೂ ಅಧಿಕೃತ ಅಂಕಿ–ಅಂಶಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಿದರೆ, ಭಾರತದ ಗುಪ್ತಚರ ಸಂಸ್ಥೆಗಳು ಈ ಹೊಸ ತಾಂತ್ರಿಕ ನಿಗಾ ವ್ಯವಸ್ಥೆಯ ಮೂಲಕ ಸಾಧಿಸಿದ ಯಶಸ್ಸು ಕಣ್ಣಿಗೆ ಕಟ್ಟುವಂತಿದೆ. ಈ ಯಶಸ್ಸಿನ ಹಿಂದೆ 'ನ್ಯಾಟ್‌ಗ್ರಿಡ್' ಅಥವಾ ನ್ಯಾಷನಲ್ ಇಂಟೆಲಿಜೆನ್ಸ್ ಗ್ರಿಡ್‌ನ ವಿಶೇಷ ಪಾತ್ರವಿದೆ. 3,400 ಕೋಟಿ ರೂ. ಹೂಡಿಕೆಯೊಂದಿಗೆ 21 ಸಂಸ್ಥೆಗಳ ದತ್ತಾಂಶ ಜೋಡಿಸಿದ ಈ ವ್ಯವಸ್ಥೆ ಪ್ರತಿ ತಿಂಗಳು 45,000 ಗುಪ್ತಚರ ಕ್ವೆರಿಗಳನ್ನು ಸಂಸ್ಕರಿಸುತ್ತದೆ. ತೆರಿಗೆ ವಿವರಗಳು, ಬ್ಯಾಂಕ್ ವಹಿವಾಟುಗಳು, ಪಾಸ್ಪೋರ್ಟ್ ವಿವರಗಳು, ವಿಮಾನ ಮತ್ತು ರೈಲು ಪ್ರಯಾಣದ ದಾಖಲೆಗಳು ಹಾಗೂ ದೂರಸಂಪರ್ಕ ದತ್ತಾಂಶಗಳನ್ನು ಒಂದೇ ವೇದಿಕೆಯಲ್ಲಿ ಜೋಡಿಸುವ ಮೂಲಕ ಸಂಶಯಾಸ್ಪದ ವ್ಯಕ್ತಿಗಳ ಚಟುವಟಿಕೆಗಳನ್ನು ತ್ವರಿತವಾಗಿ ವಿಶ್ಲೇಷಿಸಲು ನಮ್ಮ ಏಜೆನ್ಸಿಗಳಿಗೆ ಈಗ ಸಾಧ್ಯವಾಗುತ್ತಿದೆ.



ಭಾರತದ ಆಂತರಿಕ ಭದ್ರತೆಯ ಇತಿಹಾಸದಲ್ಲಿ ನಾವು ಒಂದು ಅತ್ಯಂತ ಸಂಕೀರ್ಣವಾದ ಮತ್ತು ಸವಾಲಿನ ಕಾಲಘಟ್ಟದಲ್ಲಿ ನಿಂತಿದ್ದೇವೆ. ಜಾಗತಿಕವಾಗಿ ಯುದ್ಧದ ಪರಿಕಲ್ಪನೆಗಳು ಬದಲಾಗುತ್ತಿವೆ. ಒಂದು ಕಾಲದಲ್ಲಿ ಎರಡು ರಾಷ್ಟ್ರಗಳ ನಡುವಿನ ಸಂಘರ್ಷ ಎಂದರೆ ದೇಶದ ಗಡಿಭಾಗದಲ್ಲಿ ಸೈನಿಕರು ಮುಖಾಮುಖಿಯಾಗಿ ನಡೆಸುವ ಹೋರಾಟವಾಗಿತ್ತು. ಆದರೆ ಇಪ್ಪತ್ತೊಂದನೇ ಶತಮಾನದ ಈ ಮೂರನೇ ದಶಕದಲ್ಲಿ ಯುದ್ಧವು ಕೇವಲ ಭೂಮಿ, ಆಕಾಶ ಅಥವಾ ಸಮುದ್ರಕ್ಕೆ ಸೀಮಿತವಾಗಿಲ್ಲ. ಇಂದಿನ ಯುದ್ಧಗಳು ಕಣ್ಣಿಗೆ ಕಾಣದ ಡಿಜಿಟಲ್ ತರಂಗಾಂತರಗಳಲ್ಲಿ, ದತ್ತಾಂಶಗಳ ನಡುವೆ ಮತ್ತು ಪ್ರತಿಯೊಬ್ಬ ನಾಗರಿಕನ ಮನಸ್ಸಿನಲ್ಲಿ ಮೂಡುವ ಆಲೋಚನೆಗಳನ್ನು ಗುರಿಯಾಗಿಸಿ ನಡೆಯುತ್ತಿವೆ. ಈ ಹೊಸ ಮಾದರಿಯ ಯುದ್ಧವನ್ನು ತಾಂತ್ರಿಕವಾಗಿ 'ಹೈಬ್ರಿಡ್ ವಾರ್‌ಫೇರ್' ಎಂದು ಕರೆಯಲಾಗುತ್ತದೆ.

ಅದೃಶ್ಯ ಶತ್ರು ಎದುರಿಸಲು ಪ್ರಹಾರ್

ಇಂತಹ ಅದೃಶ್ಯ ಶತ್ರುಗಳನ್ನು ಎದುರಿಸಲು ಮತ್ತು ದೇಶದ ಸಾರ್ವಭೌಮತ್ವವನ್ನು ಕಾಪಾಡಲು ಸರ್ಕಾರ ಫೆಬ್ರವರಿ 23, 2026ರಂದು ಜಾರಿಗೆ ತಂದ 'ಪ್ರಹಾರ್' (PRAHAAR) ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ನೀತಿಯು ದೇಶದ ರಕ್ಷಣಾ ವ್ಯೂಹದಲ್ಲಿ ಒಂದು ಐತಿಹಾಸಿಕ ಮೈಲಿಗಲ್ಲಾಗಿದೆ. ಈ ನೀತಿಯು ಕೇವಲ ಶಸ್ತ್ರಾಸ್ತ್ರ ಬಲವನ್ನು ನಂಬದೆ, ಆಧುನಿಕ ತಂತ್ರಜ್ಞಾನ ಮತ್ತು ದತ್ತಾಂಶ ವಿಶ್ಲೇಷಣೆಯನ್ನು ತನ್ನ ಅಸ್ತ್ರವನ್ನಾಗಿ ಮಾಡಿಕೊಂಡಿರುವುದು ವಿಶೇಷ.

PRAHAAR

ಪ್ರಚೋದನಾತ್ಮಕ ಪೋಸ್ಟ್‌ಗಳ ಮೇಲೆ ಕಣ್ಗಾವಲು

ತಂತ್ರಜ್ಞಾನದ ಬಳಕೆಯು ಕೇವಲ ದತ್ತಾಂಶಗಳಿಗೆ ಮಾತ್ರ ಸೀಮಿತವಾಗಿಲ್ಲ. ಭಾರತೀಯ ಸೇನೆ ಮತ್ತು ಕೇಂದ್ರ, ಮೀಸಲು ಪೊಲೀಸ್ ಪಡೆಗಳು ಇಂದು ಅತ್ಯಾಧುನಿಕ ಕೃತಕ ಬುದ್ಧಿಮತ್ತೆ ಆಧಾರಿತ 'ಇಂಟೆಲಿಜೆನ್ಸ್ ಫ್ಯೂಷನ್ ಸೆಂಟರ್'ಗಳನ್ನು ನಿರಂತರವಾಗಿ ನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ ಪ್ರತಿ ಕ್ಷಣವೂ ಲಕ್ಷಾಂತರ ಮಾಹಿತಿಗಳು ವಿಶ್ಲೇಷಣೆಗೆ ಒಳಪಡುತ್ತವೆ. ಉದಾಹರಣೆಗೆ, ಯಾವುದಾದರೂ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಇದ್ದಕ್ಕಿದ್ದಂತೆ ಪ್ರಚೋದನಾತ್ಮಕ ಪೋಸ್ಟ್‌ಗಳ ಸಂಖ್ಯೆ ಹೆಚ್ಚಾದರೆ ಅಥವಾ ವಿದೇಶಿ ಐಪಿ ವಿಳಾಸಗಳಿಂದ ಸುಳ್ಳು ಸುದ್ದಿಗಳು ದೊಡ್ಡ ಮಟ್ಟದಲ್ಲಿ ಹರಡುತ್ತಿದ್ದರೆ, ಈ ತಾಂತ್ರಿಕ ವ್ಯವಸ್ಥೆಯು ತಕ್ಷಣವೇ ಗೃಹ ಸಚಿವಾಲಯಕ್ಕೆ ಎಚ್ಚರಿಕೆಯ ಸಂದೇಶವನ್ನು ಕಳುಹಿಸುತ್ತದೆ. ಇದರಿಂದ ಸ್ಥಳೀಯ ಪೊಲೀಸರು ಮತ್ತು ಆಡಳಿತ ಮಂಡಳಿಯು ಅಹಿತಕರ ಘಟನೆಗಳು ಸಂಭವಿಸುವ ಮೊದಲೇ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಬೇಕಾದ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿದೆ. ಇದು ಡಿಜಿಟಲ್ ಜಗತ್ತಿನಲ್ಲಿ ಭಾರತವು ಸಾಧಿಸಿರುವ ತಾಂತ್ರಿಕ ಪ್ರಭುತ್ವಕ್ಕೆ ಒಂದು ಅತ್ಯುತ್ತಮ ಉದಾಹರಣೆಯಾಗಿದೆ.



ತಪ್ಪು ಮಾಹಿತಿಗೆ ತಡೆಗೋಡೆ

ಸಶಕ್ತ ತಂತ್ರಜ್ಞಾನದ ಜೊತೆಗೆ ಬಲಿಷ್ಠವಾದ ಕಾನೂನು ಚೌಕಟ್ಟು ಕೂಡ ಈ ಹೋರಾಟದಲ್ಲಿ ಅಷ್ಟೇ ಪ್ರಬಲವಾದ ಪಾತ್ರ ನಿರ್ವಹಿಸುತ್ತದೆ. 2025 ಮತ್ತು 2026ರಲ್ಲಿ ಮಾಹಿತಿ ತಂತ್ರಜ್ಞಾನ ಕಾಯ್ದೆಗೆ ತರಲಾದ ಮಹತ್ವದ ತಿದ್ದುಪಡಿಗಳು ಕೇಂದ್ರ ಸರ್ಕಾರಕ್ಕೆ ಡಿಜಿಟಲ್ ರಕ್ಷಣೆಯ ವಿಷಯದಲ್ಲಿ ಹೆಚ್ಚಿನ ಅಧಿಕಾರವನ್ನು ನೀಡಿವೆ. ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಅಥವಾ ಸಾರ್ವಜನಿಕ ಶಾಂತಿಯನ್ನು ಕದಡುವ ಯಾವುದೇ ಮಾಹಿತಿಯನ್ನು ಅಥವಾ ಖಾತೆಯನ್ನು ಮೂರು ಗಂಟೆಗಳ ಕಾಲಾವಧಿಯೊಳಗೆ ಡಿಜಿಟಲ್ ವೇದಿಕೆಗಳಿಂದ ತೆಗೆದುಹಾಕುವ ಅಧಿಕಾರವನ್ನು ಈಗ ಭಾರತೀಯ ಏಜೆನ್ಸಿಗಳು ಹೊಂದಿವೆ. ಕೇಂದ್ರ ಗೃಹ ಸಚಿವಾಲಯದ ವಾರ್ಷಿಕ ವರದಿ 2024–25ರ ಪ್ರಕಾರ ಕಳೆದ ಒಂದು ವರ್ಷದಲ್ಲಿ 1,11,185 ವಿಧ್ವಂಸಕ ಮತ್ತು ದ್ವೇಷಪೂರಿತ ಸೋಷಿಯಲ್ ಮೀಡಿಯಾ ಪೋಸ್ಟ್‌ಗಳನ್ನು ಗುರುತಿಸಿ ತೆಗೆದು ಹಾಕಿದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನವಲ್ಲ, ಬದಲಾಗಿ ದೇಶದ ನೂರ ನಲವತ್ತು ಕೋಟಿ ಜನರ ಸುರಕ್ಷತೆ ಮತ್ತು ರಾಷ್ಟ್ರೀಯ ಭದ್ರತೆಗಾಗಿ ಅನಿವಾರ್ಯವಾದ ಒಂದು ಶಿಸ್ತುಕ್ರಮವಾಗಿದೆ. ವಿಶೇಷವಾಗಿ ಸೈಬರ್ ಅಪರಾಧಗಳ ತಡೆ ವಿಭಾಗವು ಇಂದು ಅತ್ಯಂತ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಸಮಾಜದಲ್ಲಿ ಅಶಾಂತಿ ಹರಡುವ ಯಾವುದೇ ಸಣ್ಣ ಪ್ರಯತ್ನವನ್ನೂ ಆರಂಭದಲ್ಲೇ ಚಿವುಟಿ ಹಾಕುತ್ತಿದೆ.



▸ ಅಜಿತ್ ಶೆಟ್ಟಿ ಹೆರಂಜೆ

ಮಾಹಿತಿ ಪ್ರಸರಣಕ್ಕೆ ಕಡಿವಾಣ



ಭಾರತವು ಎದುರಿಸುತ್ತಿರುವ ಅತಿದೊಡ್ಡ ಆತಂಕವೆಂದರೆ ಸಾಮಾಜಿಕ ಜಾಲತಾಣಗಳ ಮೂಲಕ ಹರಡುತ್ತಿರುವ ವ್ಯವಸ್ಥಿತ ಸಂಚುಗಳು ಮತ್ತು ಮಾಹಿತಿ ಪ್ರಸರಣಗಳು. ಇದನ್ನು ತಾಂತ್ರಿಕವಾಗಿ 'ಸೋಷಿಯಲ್ ಮೀಡಿಯಾ ಇಂಟೆಲಿಜೆನ್ಸ್' ಅಥವಾ ಸಂಕ್ಷಿಪ್ತವಾಗಿ 'SOCMINT' ಎಂದು ಗುರುತಿಸಲಾಗುತ್ತದೆ. ಭಯೋತ್ಪಾದಕ ಸಂಘಟನೆಗಳು ಯುವಜನತೆಯನ್ನು ಸೆಳೆಯಲು ಗಡಿ ದಾಟಿ ಬರುವ ಅಗತ್ಯವಿಲ್ಲ. ಅವರು ತಮ್ಮ ತತ್ವ ಸಿದ್ಧಾಂತಗಳನ್ನು, ಪ್ರಚೋದನಾತ್ಮಕ ಭಾಷಣಗಳನ್ನು ಮತ್ತು ತಿರುಚಿದ ಮಾಹಿತಿಗಳನ್ನೊಳಗೊಂಡ ವಿಡಿಯೋಗಳನ್ನು ಇಂಟರ್ನೆಟ್ ಮೂಲಕ ನೇರವಾಗಿ ನಮ್ಮ ಯುವಕರ ಕೈಯಲ್ಲಿರುವ ಮೊಬೈಲುಗಳಿಗೆ ತಲುಪಿಸುತ್ತಿದ್ದಾರೆ. ಸುಳ್ಳು ಸುದ್ದಿ ಅಥವಾ ಎಐ ತಂತ್ರಜ್ಞಾನದ ಮೂಲಕ ಸೃಷ್ಟಿಸಿದ 'ಡೀಪ್ ಫೇಕ್' ವಿಡಿಯೋಗಳನ್ನು ಬಳಸಿ ಸಮಾಜದಲ್ಲಿ ಕೋಮು ದ್ವೇಷವನ್ನು ಬಿತ್ತುವುದು ಇಂದಿನ ಶತ್ರುಗಳ ಪ್ರಧಾನ ಕಾರ್ಯತಂತ್ರವಾಗಿದೆ. 'ಪ್ರಹಾರ್' ನೀತಿಯು ಈ ಮೂಲವನ್ನೇ ಭೇದಿಸುವ ಗುರಿ ಹೊಂದಿದೆ. ಇದು ಕೇವಲ ದುರಂತ ನಡೆದ ನಂತರ ತನಿಖೆ ನಡೆಸುವ ಹಳೆಯ ಪದ್ಧತಿಯಲ್ಲದೆ, ಸಂಚುಗಳು ರೂಪಿತವಾಗುತ್ತಿರುವ ಹಂತದಲ್ಲೇ ಅವುಗಳನ್ನು ಗುರುತಿಸಿ ವಿಫಲಗೊಳಿಸುವ ಒಂದು ಸಕ್ರಿಯ ಪ್ರೋ ಆಕ್ಟೀವ್ ರಕ್ಷಣಾ ಕವಚವಾಗಿದೆ.

ಹಣಕಾಸಿನ ವ್ಯವಹಾರದ ಮೇಲೆ ಕಟ್ಟೆಚ್ಚರ

ಯಾವುದೇ ಭಯೋತ್ಪಾದನಾ ಚಟುವಟಿಕೆಗಳು ಜೀವಂತವಾಗಿರಲು ಹಣಕಾಸಿನ ನೆರವು ಅನಿವಾರ್ಯ. ಈ ಹಣಕಾಸಿನ ಮೂಲಗಳನ್ನೇ ಗುರಿಯಾಗಿಸಿಕೊಂಡು ನಡೆಸಿದ ಕಾರ್ಯಾಚರಣೆಗಳು ಈ ಹೊಸ ನೀತಿಯ ಅಡಿಯಲ್ಲಿ ಅಭೂತಪೂರ್ವ ಯಶಸ್ಸನ್ನು ಕಂಡಿವೆ.



ಹವಾಲಾ ಜಾಲಗಳು, ಅಕ್ರಮ ದೇಣಿಗೆಗಳು ಮತ್ತು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿರುವ ಕ್ರಿಪ್ಟೋಕರೆನ್ಸಿ ಮೂಲಕ ನಡೆಯುವ ವಹಿವಾಟುಗಳ ಮೇಲೆ ತೀವ್ರ ನಿಗಾ ಇಡಲಾಗುತ್ತಿದೆ. ಭಾರತವು ಈಗ ಅಂತಾರಾಷ್ಟ್ರೀಯ ಮಟ್ಟದ ಹಣಕಾಸು ಕಾರ್ಯಪಡೆಯೊಂದಿಗೆ ಅಂದರೆ FATF ಜೊತೆಗೂಡಿ ನಿರಂತರವಾಗಿ ಕೆಲಸ ಮಾಡುತ್ತಿದೆ. ಈ ಸಮನ್ವಯದ ಪರಿಣಾಮವಾಗಿ ವಿದೇಶಗಳಿಂದ ದೇಶವಿರೋಧಿ ಚಟುವಟಿಕೆಗಳಿಗೆ ಹರಿಯುತ್ತಿದ್ದ ಹಣದ ಹರಿವನ್ನು ಬಹುಮಟ್ಟಿಗೆ ಸ್ಥಗಿತಗೊಳಿಸುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಇದು ಆಂತರಿಕವಾಗಿ ದೇಶದ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವಲ್ಲಿ ಒಂದು ಗಟ್ಟಿಯಾದ ತಳಹದಿಯನ್ನು ನಿರ್ಮಿಸಿದೆ.

FATF

ಗಡಿ ನಿರ್ವಹಣೆಯಲ್ಲಿ ತಂತ್ರಜ್ಞಾನ

ಭಾರತದ ಕರಾವಳಿ ಭದ್ರತೆ ಮತ್ತು ಗಡಿ ನಿರ್ವಹಣೆಯಲ್ಲೂ ತಂತ್ರಜ್ಞಾನದ ಅಳವಡಿಕೆ ಒಂದು ಹೊಸ ಆಯಾಮವನ್ನು ಪಡೆದುಕೊಂಡಿದೆ. 2000ದಲ್ಲಿ ಕಾರ್ಗಿಲ್ ರಿವ್ಯೂ ಕಮಿಟಿ ಕರಾವಳಿ ರೇಡಾರ್ ಜಾಲದ ಅಗತ್ಯವನ್ನು ಸ್ಪಷ್ಟಪಡಿಸಿತು, ವಾಜಪೇಯಿ ಸರ್ಕಾರ ಇದನ್ನು ಮೊದಲ ಬಾರಿಗೆ ಪ್ರಸ್ತಾಪ ಮಾಡಿತು. ನಂತರ ಬಂದ ಕಾಂಗ್ರೆಸ್ ಸರ್ಕಾರ ಅದನ್ನು ಮುಂದುವರಿಸಲಿಲ್ಲ. 2008ರ 26/11 ಮುಂಬೈ ದಾಳಿಯಲ್ಲಿ 166 ಜೀವ ಹೋದ ನಂತರ ಎಚ್ಚೆತ್ತ ಕಾಂಗ್ರೆಸ್ 2009ರಲ್ಲಿ ಅನುಮತಿ ನೀಡಿತಾದರೂ ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದ ಯೋಜನೆಯ ಅನುಷ್ಠಾನದಲ್ಲಿ ನಿಧಾನ ಮಾಡಿತು. 2014ರಲ್ಲಿ ಮೋದಿ ಸರ್ಕಾರ ನಿಜವಾದ ರಾಜಕೀಯ ಇಚ್ಛಾಶಕ್ತಿ ತೋರಿಸಿ 2015ರಲ್ಲಿ SAGAR ಅನ್ನುವ ಸುರಕ್ಷಣಾ ಯೋಜನೆಯನ್ನು ಘೋಷಿಸಿ, 2016ರಲ್ಲಿ ಮೊದಲ ಹಂತವನ್ನು ಪೂರ್ಣಗೊಳಿಸಿ, 2018ರಲ್ಲಿ ಎರಡನೇ ಹಂತಕ್ಕೂ ಅನುಮೋದನೆ ಕೊಟ್ಟು ಈ ಯೋಜನೆಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದರು. ಇಂದು ಗುಜರಾತಿನ ಸರ್ ಕ್ರೀಕಿನಿಂದ ಪಶ್ಚಿಮ ಬಂಗಾಳದ ಸುಂದರಬನ್ ವರೆಗೆ 7,516 ಕಿಲೋಮೀಟರ್ ಕರಾವಳಿ ತೀರದಲ್ಲಿ DRDO ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ನಿರ್ಮಿಸಿದ Integrated Coastal Surveillance System ಅಡಿ 46 ರೇಡಾರ್ ಕೇಂದ್ರಗಳು 24/7 ಗಂಟೆ ನಿಗಾ ಇಡುತ್ತಿವೆ. ನೌಕಾ ಸೇನೆ, ಕೋಸ್ಟ್ ಗಾರ್ಡ್ ಮತ್ತು ಮರೀನ್ ಪೊಲೀಸ್ ಮೂರು ಹಂತದಲ್ಲಿ ಒಂಬತ್ತು ಕರಾವಳಿ ರಾಜ್ಯಗಳು, ಲಕ್ಷದ್ವೀಪ ಮತ್ತು ಅಂಡಮಾನ್–ನಿಕೋಬಾರ್ ದ್ವೀಪ ಪ್ರದೇಶಗಳ ರಕ್ಷಣೆ ನಡೆಸುತ್ತಿವೆ. ಕೊಚ್ಚಿನ್ ಶಿಪ್ಯಾರ್ಡ್ ಅಂತಹ ಪ್ರಮುಖ ಸಂಸ್ಥೆಗಳು ದೇಶೀಯವಾಗಿ ನಿರ್ಮಿಸಿದ INS ವಿಕ್ರಾಂತ್ ವಿಮಾನವಾಹಕ ನೌಕೆ ಮತ್ತು ಅತ್ಯಾಧುನಿಕ ಗಸ್ತು ಹಡಗುಗಳು ಭಾರತದ ಜಲ ಗಡಿಯನ್ನು ರಕ್ಷಣೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಮೀನುಗಾರ ಸಮುದಾಯ Community Interaction Programme ಮೂಲಕ ಈ ಜಾಲದ 'ಕಣ್ಣು ಮತ್ತು ಕಿವಿ'ಯಾಗಿ ಈ ಒಟ್ಟು ರಕ್ಷಣಾ ಜಾಲದ ಪ್ರಾಥಮಿಕ ಹಂತದ ಮಾಹಿತಿದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಈ ವ್ಯವಸ್ಥಿತ ಕಾವಲು 26/11ರ ಅನಾಹುತದಂತಹ ಘಟನೆಗಳು ಪುನಃ ಸಂಭವಿಸದಂತೆ ನೋಡಿಕೊಳ್ಳುವಲ್ಲಿ ಸಮಾಜ ಹಾಗು ಸರಕಾರ ಒಂದು ಯೋಜನಾ ಬದ್ಧ ರೀತಿಯಲ್ಲಿ ದೇಶದ ರಕ್ಷಣೆಯಲ್ಲಿ ತೊಡಗಿಸಿಕೊಂಡ ಒಂದು ವಿನೂತನ ಪ್ರಯೋಗವಾಗಿದೆ.





INS ವಿಕ್ರಾಂತ್

ಮಾಹಿತಿ ನಂಬುವ ಮುನ್ನ ಎಚ್ಚರವಿರಲಿ

ದಿಲ್ಲಿಯಲ್ಲಿ ಸ್ಥಾಪಿಸಲಾಗಿರುವ ರಾಷ್ಟ್ರೀಯ ಸೈಬರ್ ಭದ್ರತಾ ಕೇಂದ್ರವು ದಿನದ 24 ಗಂಟೆಯೂ ದೇಶದ ಪ್ರಮುಖ ಮೂಲಸೌಕರ್ಯಗಳಾದ ವಿದ್ಯುತ್ ಕೇಂದ್ರಗಳು, ಪರಮಾಣು ಸ್ಥಾವರಗಳು ಮತ್ತು ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಅಭೇದ್ಯವಾದ ಕಾವಲು ಕಾಯುತ್ತಿದೆ. ಆದರೆ ಯಾವುದೇ ಭದ್ರತಾ ನೀತಿಯ ಅಂತಿಮ ಯಶಸ್ಸು ಕೇವಲ ಸರ್ಕಾರದ ಸಿದ್ಧತೆ ಅಥವಾ ಸೈನ್ಯದ ಶಕ್ತಿಯ ಮೇಲೆ ಮಾತ್ರ ಅವಲಂಬಿತವಾಗಿರುವುದಿಲ್ಲ. ಇದು ಒಂದು 'ಸಂಪೂರ್ಣ ಸಮಾಜದ ಸಹಭಾಗಿತ್ವ'ದ ಮೇಲೆ ನಿಂತಿದೆ. ಡಿಜಿಟಲ್ ಯುಗದ ನಾಗರಿಕರಾಗಿ ನಮಗೆ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಪ್ರತಿಯೊಂದು ಮಾಹಿತಿಯನ್ನೂ ಸತ್ಯವೆಂದು ನಂಬುವ ಮುನ್ನ ಅದರ ಮೂಲ ಮತ್ತು ಉದ್ದೇಶವನ್ನು ಅರಿಯುವ ವಿವೇಕ ಇರಬೇಕಾದುದು ಅತ್ಯಗತ್ಯ. ಶತ್ರುಗಳು ನಮ್ಮ ಭಾವನೆಗಳನ್ನು ಕೆರಳಿಸಿ ಆ ಮೂಲಕ ದೇಶದಲ್ಲಿ ಅಶಾಂತಿ ಸೃಷ್ಟಿಸಲು ಪ್ರಯತ್ನಿಸುತ್ತಿರುವಾಗ, ಸಂಯಮ ಮತ್ತು ರಾಷ್ಟ್ರೀಯ ಏಕತೆಯ ಮನೋಭಾವವೇ ಅವರಿಗೆ ನೀಡುವ ಅತ್ಯಂತ ದೊಡ್ಡ ಪ್ರತ್ಯುತ್ತರವಾಗುತ್ತದೆ. ತಂತ್ರಜ್ಞಾನವು ಎಷ್ಟೇ ಮುಂದುವರಿದರೂ ಭಾರತದ ಸಾಂಸ್ಕೃತಿಕ ಒಗ್ಗಟ್ಟು ಮತ್ತು ಪ್ರತಿಯೊಬ್ಬ ನಾಗರಿಕನ ಜಾಗೃತ ಪ್ರಜ್ಞೆಯೇ ರಾಷ್ಟ್ರವಿರೋಧಿ ಶಕ್ತಿಗಳ ವಿರುದ್ಧದ ಅಂತಿಮ ವಿಜಯವನ್ನು ಸಾಧಿಸಬಲ್ಲವು ಎಂಬುದರಲ್ಲಿ ಸಂಶಯವಿಲ್ಲ.

24h

ಪ್ರಮುಖ ಅಂಶಗಳು

1. ದತ್ತಾಂಶ ವಿಶ್ಲೇಷಣೆಯೇ ಪ್ರಹಾರ್‌ನ ಅಸ್ತ್ರ
2. ಪ್ರಚೋದನಾತ್ಮಕ ಭಾಷಣಗಳನ್ನು ಮತ್ತು ತಿರುಚಿದ ಮಾಹಿತಿಗಳನ್ನೊಳಗೊಂಡ ವಿಡಿಯೋಗಳಿಗೆ ಬೀಳಲಿದೆ ಕಡಿವಾಣ
3. ತೆರಿಗೆ, ಬ್ಯಾಂಕ್ ವಹಿವಾಟು, ಪಾಸ್ಪೋರ್ಟ್ ವಿವರ, ವಿಮಾನ ಮತ್ತು ರೈಲು ಪ್ರಯಾಣದ ದಾಖಲೆಗಳು ಹಾಗೂ ದೂರಸಂಪರ್ಕ ದತ್ತಾಂಶಗಳನ್ನು ಒಂದೇ ವೇದಿಕೆಯಲ್ಲಿ ಜೋಡಿಸುವಲ್ಲಿ ಪಾತ್ರ
4. ಪ್ರಚೋದನಕಾರಿ ಪೋಸ್ಟ್‌ಗಳ ಕಡಿವಾಣಕ್ಕೆ ಕೃತಕ ಬುದ್ಧಿಮತ್ತೆ ಆಧಾರಿತ 'ಇಂಟೆಲಿಜೆನ್ಸ್ ಫ್ಯೂಷನ್ ಸೆಂಟರ್ ಬಳಕೆ
5. ಹವಾಲಾ ಜಾಲಗಳು, ಅಕ್ರಮ ದೇಣಿಗೆಗಳು ಮತ್ತು ಕ್ರಿಪ್ಟೋಕರೆನ್ಸಿ ಮೂಲಕ ನಡೆಯುವ ವಹಿವಾಟುಗಳ ಮೇಲೆ ತೀವ್ರ ನಿಗಾ



ದತ್ತಾಂಶಗಳ ಸುರಕ್ಷತೆಗೆ ಪ್ರಹಾರ್

ಸಾಂಪ್ರದಾಯಿಕ ಯುದ್ಧಗಳ ಕಾಲವು ಈಗ ಇತಿಹಾಸದ ಪುಟಗಳಿಗೆ ಸೇರುತ್ತಿದೆ ಎಂಬುದು ಸತ್ಯ. ಇಂದಿನ ಜಾಗತಿಕ ರಾಜಕೀಯ ವ್ಯವಸ್ಥೆಯಲ್ಲಿ ಮಾಹಿತಿಯೇ ನಿಜವಾದ ಸಂಪತ್ತು ಮತ್ತು ಶಕ್ತಿಶಾಲಿ ಆಯುಧವಾಗಿದೆ. ಈ ನಿಟ್ಟಿನಲ್ಲಿ 'ಪ್ರಹಾರ್' ನೀತಿಯ ಅಡಿಯಲ್ಲಿ ಭಾರತವು ತನ್ನದೇ ಆದ ಸ್ವದೇಶಿ ರಕ್ಷಣಾ ತಂತ್ರಜ್ಞಾನಗಳನ್ನು ಮತ್ತು ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿರುವುದು ಅತ್ಯಂತ ಹೆಮ್ಮೆಯ ಮತ್ತು ಆಶಾದಾಯಕ ಬೆಳವಣಿಗೆಯಾಗಿದೆ. ವಿದೇಶಿ ತಂತ್ರಜ್ಞಾನಗಳ ಮೇಲಿನ ಅವಲಂಬನೆಯನ್ನು ಹಂತಹಂತವಾಗಿ ಕಡಿಮೆ ಮಾಡುತ್ತಾ, ಭಾರತೀಯ ದತ್ತಾಂಶಗಳನ್ನು ಭಾರತದ ಒಳಗಿನ ಸರ್ವರ್‌ಗಳಲ್ಲೇ ಸುರಕ್ಷಿತವಾಗಿ ಸಂರಕ್ಷಿಸುವ 'ಡೇಟಾ ಸಾರ್ವಭೌಮತ್ವ'ಕ್ಕೆ ಈ ನೀತಿಯಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ಇದು ಶತ್ರು ದೇಶಗಳು ಅಥವಾ ವಿದೇಶಿ ಹ್ಯಾಕರ್‌ಗಳು ನಮ್ಮ ರಾಷ್ಟ್ರೀಯ ದತ್ತಾಂಶಗಳನ್ನು ಕದ್ದು ಅವುಗಳನ್ನು ನಮ್ಮ ವಿರುದ್ಧವೇ ಸೈಬರ್ ದಾಳಿ ಮಾಡಲು ಬಳಸಿಕೊಳ್ಳುವುದನ್ನು ಸಮರ್ಥವಾಗಿ ತಡೆಯುತ್ತದೆ.

ಬಲಿಷ್ಠ ಶಕ್ತಿ

ಒಟ್ಟಾರೆಯಾಗಿ ಹೇಳುವುದಾದರೆ, 'ಪ್ರಹಾರ್' ನೀತಿಯು ಭಾರತವನ್ನು ಕೇವಲ ಅನಾಹುತಗಳಿಗೆ ಪ್ರತಿಕ್ರಿಯಿಸುವ ರಾಷ್ಟ್ರವಾಗಿರಿಸದೆ, ಶತ್ರುವಿನ ಪ್ರತಿಯೊಂದು ಸಂಚನ್ನು ಆಕ್ರಮಣಕಾರಿಯಾಗಿ ಎದುರಿಸುವ ಮತ್ತು ಅದನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ ಸೂಕ್ತ ಸಮಯ ಮತ್ತು ಸಂದರ್ಭದಲ್ಲಿ ಕಾರ್ಯಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೂಲಕ ವಿಫಲಗೊಳಿಸುವ ಒಂದು ಬಲಿಷ್ಠ ಶಕ್ತಿಯನ್ನಾಗಿ ರೂಪಿಸಿದೆ. ಇಂದು ನಾವು ನಮ್ಮ ಭೌತಿಕ ಗಡಿಗಳನ್ನು ಮಾತ್ರವಲ್ಲ, ನಮ್ಮ ಡಿಜಿಟಲ್ ಗಡಿಗಳನ್ನು, ನಮ್ಮ ನಾಗರಿಕರ ದತ್ತಾಂಶಗಳನ್ನು ಮತ್ತು ಮುಖ್ಯವಾಗಿ ನಮ್ಮ ಯುವಜನತೆಯ ಯೋಚನಾ ರೀತಿಯಲ್ಲಿ ಪ್ರಭಾವ ಬೀರುವ ದೇಶ ವಿರೋಧಿ ಶಕ್ತಿಗಳಿಂದ ರಕ್ಷಿಸುತ್ತಿದ್ದೇವೆ. ಆಧುನಿಕ ಯುಗದ ಸಂಕೀರ್ಣ ಸವಾಲುಗಳಿಗೆ ಆಧುನಿಕ ಮತ್ತು ತಾಂತ್ರಿಕ ಪರಿಹಾರಗಳೇ ಸರಿಯಾದ ಉತ್ತರ ಎಂಬುದನ್ನು ಭಾರತವು ಇಂದು ಇಡೀ ಜಗತ್ತಿಗೆ ಮನವರಿಕೆ ಮಾಡಿಕೊಟ್ಟಿದೆ. ಭವಿಷ್ಯದ ಸುರಕ್ಷಿತ ಭಾರತದ ನಿರ್ಮಾಣದಲ್ಲಿ ಇಂತಹ ತಾಂತ್ರಿಕ, ಕಾನೂನಾತ್ಮಕ ಮತ್ತು ಬೌದ್ಧಿಕ ಸನ್ನದ್ಧತೆಗಳು ಅತ್ಯಂತ ಅನಿವಾರ್ಯವಾಗಿವೆ. ನವಭಾರತದ ಈ ಡಿಜಿಟಲ್ ಕವಚವು ಮುಂದಿನ ಪೀಳಿಗೆಯ ಸಮೃದ್ಧಿ ಮತ್ತು ಶಾಂತಿಗೆ ಭದ್ರವಾದ ಬುನಾದಿಯಾಗಲಿದೆ ಎಂಬುದು ಖಚಿತ. ಜಾಗೃತ ನಾಗರಿಕರಾಗಿ ಭದ್ರತಾ ಸಂಸ್ಥೆಗಳೊಂದಿಗೆ ಸಹಕರಿಸುವುದು ಮತ್ತು ತಾಂತ್ರಿಕ ಜಗತ್ತಿನ ಅಪಾಯಗಳ ಬಗ್ಗೆ ಎಚ್ಚರದಿಂದಿರುವುದು ಇಂದಿನ ಕಾಲದ ಅತಿದೊಡ್ಡ ಆದ್ಯತೆಯಾಗಿದೆ. ಈ ಸಂಘಟಿತ ಪ್ರಯತ್ನದಿಂದ ಮಾತ್ರ ನಾವು ಭಯೋತ್ಪಾದನೆ ಮುಕ್ತ ಮತ್ತು ಸದೃಢ ಭಾರತವನ್ನು ಕಟ್ಟಲು ಸಾಧ್ಯವಾಗುತ್ತದೆ.

ಕಿರುಸುದ್ದಿ

ಎಸ್ಸೆಸ್ಸೆಲ್ಸಿ ಫಲಿತಾಂಶ: ಕಲ್ಲಾಪೂರ ಸರ್ಕಾರಿ ಶಾಲೆ ಸಾಧನೆ



• **ನರಗುಂದ:** ತಾಲೂಕಿನ ಕಲ್ಲಾಪೂರ ಸರ್ಕಾರಿ ಪ್ರೌಢಶಾಲೆ 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ದಾಖಲಿಸಿದೆ. ಬಸವರಾಜ ಸಾರಾಪೂರ 85.6% ಪ್ರಥಮ, ರೇಖಾ ಬಾಪಸ್ತಾರ 83.2% ದ್ವಿತೀಯ, ಅಂಕಿತಾ ಮೇಣಸಗಿ 82.4% ತೃತೀಯ, ಸಹನಾ ಅರಿಸಿ 82.4% ಚತುರ್ಥ ಸ್ಥಾನ ಪಡೆದು 100% ಉತ್ತಮ ಫಲಿತಾಂಶಗಳಿಸಿದ್ದಾರೆ. ಈ ಸಾಧನೆಗೆ ಶಾಲೆ ಎಸ್‌ಡಿಎಂಸಿ ಅಧ್ಯಕ್ಷರು, ಪ್ರಧಾನ ಗುರುಗಳು ಶಿಕ್ಷಕ ವೃಂದ, ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

ಶಿವಾನುಭವ ಗೋಷ್ಠಿ ಇಂದು

• **ನರೇಗಲ್ಲ:** ಪಟ್ಟಣದ ಅನ್ನದಾನೇಶ್ವರ ಸಂಸ್ಥಾನಮಠ, ಗದಗ ಅಕ್ಷರ ಭಾರತ ಪ್ರತಿಷ್ಠಾನ, ಅನ್ನದಾನ ವಿಜಯ ವಿದ್ಯಾ ಪ್ರಸಾರ ಸಮಿತಿ ಸಹಯೋಗದಲ್ಲಿ ಏ.29ರಂದು ಸಂಜೆ 6:30ಕ್ಕೆ ಅನ್ನದಾನೇಶ್ವರ ಶಿವಾನುಭವ ಮಂಟಪದಲ್ಲಿ 71ನೇ ಶಿವಾನುಭವ ಗೋಷ್ಠಿ ಜರುಗಲಿದೆ. ಹಾಲಕೆರೆ ಸಂಸ್ಥಾನ ಮಠದ ಜಗದ್ಗುರು ಮುಪ್ಪಿನ ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯವನ್ನು ವಹಿಸುವರು. ಈ ವೇಳೆ ಸಮಾಜ ಸುಧಾರಣೆಯಲ್ಲಿ ಬಸವ–ಅಂಬೇಡ್ಕರ ಚಿಂತನೆಗಳು ವಿಷಯದ ಬಗ್ಗೆ ನಿವೃತ್ತ ಶಿಕ್ಷಕ ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಘಟಕದ ಅಧ್ಯಕ್ಷ ಎಂ.ಎಸ್.ಧಡೇಸೂರಮಠ ಉಪನ್ಯಾಸ ನೀಡಲಿದ್ದಾರೆ ಎಂದು ಅನ್ನದಾನ ವಿಜಯ ವಿದ್ಯಾ ಪ್ರಸಾರ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

• **ನರಗುಂದ:** 110 ಕೆವಿ ಗೋಪನಕೊಪ್ಪ–ನರಗುಂದ ಮಾರ್ಗದ ಗೋಪುರ ಸಂಖ್ಯೆ: 136 ಹಾಗೂ137 ರಲ್ಲಿ ಇನ್ಸುಲೇಟರ್ ಸ್ಟ್ರಿಂಗನ್ನು ಹಾಗೂ ವಾಹಕವನ್ನು ಬದಲಿಸುವ ವಿದ್ಯುತ್ ಮಾರ್ಗ ದುರಸ್ತಿ ಇರುವುದರಿಂದ ಏ.29ರಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 12.30ರವರೆಗೆ 110 ಕೆವಿ ನರಗುಂದ ಉಪ ಕೇಂದ್ರದಿಂದ ಹೊರಡುವ ಎಲ್ಲ ಫೀಡರ್‌ಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ ಎಂದು ಹುಬ್ಬಳ್ಳಿ ನರಗುಂದ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಲೂಕು ಘಟಕದ ಚುನಾವಣೆ ಮೇ 24ರಂದು

• **ನರಗುಂದ:** ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ತಾಲೂಕು ಘಟಕದ ಅಧ್ಯಕ್ಷರು, ಕಾರ್ಯನಿರ್ವಾಹಕ ಸಮಿತಿ ಸದಸ್ಯರ ಆಯ್ಕೆ ಚುನಾವಣೆ ಘೋಷಣೆಯಾಗಿದೆ. ತಾಲೂಕು ಘಟಕದ ಚುನಾವಣೆ ಪ್ರಕ್ರಿಯೆ ನಡೆಸಿ ಚುನಾವಣಾ ಘಟಕ ರಚಿಸಲು ನ್ಯಾಯವಾದಿ ಎಸ್.ಆರ್.ಪಾಟೀಲ ಅವರನ್ನು ಸಹಾಯಕ ಚುನಾವಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಎಚ್.ಎಂ.ರೇಣುಕ ಪ್ರಸನ್ ತಿಳಿಸಿದ್ದಾರೆ. ತಾಲೂಕು ಘಟಕದ ಅಧ್ಯಕ್ಷರು, ಕಾರ್ಯನಿರ್ವಾಹಕ ಸಮಿತಿ ಸದಸ್ಯರ ಆಯ್ಕೆಗಾಗಿ ಚುನಾವಣೆ ವೇಳಾಪಟ್ಟಿ ಹೊರಡಿಸಲಾಗಿದೆ. ನಾಮಪತ್ರ ಸ್ವೀಕೃತಿ ಆರಂಭ ಏ.29ರಂದು ಬೆಳಗ್ಗೆ 10.30ರಿಂದ ಪ್ರಾರಂಭವಾಗಿದ್ದು, ನಾಮಪತ್ರ ಸ್ವೀಕರಿಸುವ ಕೊನೆಯ ದಿನ ಮೇ 6 ಮಧ್ಯಾಹ್ನ 3ರವರೆಗೆ, ನಾಮಪತ್ರ ಪರಿಶೀಲನೆ ಮೇ 7ರಂದು ಬೆಳಗ್ಗೆ 10.30ರಿಂದ. ನಾಮಪತ್ರ ಹಿಂಪಡೆಯಲು ಕೊನೆ ದಿನ ಮೇ 10 ಮಧ್ಯಾಹ್ನ 3ರವರೆಗೆ, ಮತದಾನ ದಿನ ಮೇ 24ರಂದು ಬೆಳಗ್ಗೆ 8ರಿಂದ ಸಂಜೆ 4ರವರೆಗೆ ನಡೆಯಲಿದೆ. ನಂತರ ಮತ ಏಣಿಕೆ ಕಾರ್ಯ ನಡೆಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಾರುಕಟ್ಟೆ ಧಾರಣೆ

ಗದಗ — ಕ್ವಿಂಟಲ್

ಗೆಜ್ಜಿ ಶೇಂಗಾ	4421-5893
ಅಜವಾನ	9381-10101
ಅಲಸಂದಿಕಾಳು	4249-5244
ಕಡಲೆ	1277-5569
ಉದ್ದು	2517-2517
ಹವೀಜ	2412-3647
ಹೆಸರು	509-7511
ಜೋಳ	2059-4457
ಗೋವಿನಜೋಳ	1830-1830
ಸಜ್ಜೆ	2550-2550
ಕುಸಬಿ	2509-5549
ಸೂರ್ಯಕಾಂತಿ	5772-6390
ತೊಗರಿ	4344-5809
ಗೋಧಿ	1702-5012
ಸಬ್ಬಸಗಿ	6029-6029
ಬೆಲ್ಲ	4151-4151



ಗದಗ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ತೋಂಟದ ಸಿದ್ದಲಿಂಗ ಕನ್ನಡ ಭವನದಲ್ಲಿ ಜರುಗಿದ ಡಾ.ಶಾಂತರಸ ಸ್ಮರಣಾರ್ಥ ದತ್ತಿ ಉಪನ್ಯಾಸದಲ್ಲಿ ಸಾಹಿತಿ ಸಿದ್ದರಾಮ ಹಿರೇಮಠ ವರು ಶಾಂತರಸರು ಮತ್ತು ಗಜಲ್ ಒಂದು ಅವಲೋಕನ ಕುರಿತು ಉಪನ್ಯಾಸ ನೀಡಿದರು.

ಮೋಕ್ಷ ಹೊಂದಲು ಜ್ಞಾನ ಮಾರ್ಗ ಶ್ರೇಷ್ಠ: ಶ್ರೀಗಳು

• **ಗದಗ:** ಮೋಕ್ಷ ಪ್ರಾಪ್ತಿಗಾಗಿ ಭಕ್ತಿ, ಕರ್ಮ ಜ್ಞಾನ ಯೋಗ, ಮಾರ್ಗಗಳನ್ನು ಭಾರತೀಯ ಸನಾತನ ಪರಂಪರೆಯಲ್ಲಿ ಉಪದೇಶಿಸಲಾಗಿದೆ. ಆದರೆ ಇವುಗಳೆಲ್ಲವುಗಳಲ್ಲಿ ಜಗದ್ಗುರು ಶಂಕರಾಚಾರ್ಯರು ಪ್ರತಿಪಾದಿಸಿದ ಜ್ಞಾನ ಮಾರ್ಗವೇ ಶ್ರೇಷ್ಠವಾಗಿದೆ ಎಂದು ಹುಬ್ಬಳ್ಳಿಯ ಆರ್ಷ ವಿದ್ಯಾ ಕೇಂದ್ರದ ಪ.ಪೂ.ಸ್ವಾಮೀ ಚಿದ್ರೂಪಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ನಗರದ ತ್ರಿಕೋಟೇಶ್ವರ ದೇವಸ್ಥಾನದಲ್ಲಿ ನಡೆದ ಶಂಕರಾಚಾರ್ಯ ಉತ್ಸವದಲ್ಲಿ ಶಂಕರಾಚಾರ್ಯ ಬೋಧನೆಗಳ ಕುರಿತು ಪ್ರವಚನ ನೀಡಿದರು. ಕರ್ಮ ಮಾರ್ಗಕ್ಕೆ ಅನೇಕ ಮಿತಿಗಳಿವೆ ಆದರೆ ಭಕ್ತಿಯಿಂದ ಕೂಡಿದ ಜ್ಞಾನಮಾರ್ಗವು ಎಲ್ಲ ಮಾರ್ಗಗಳಿಗಿಂತ ಉತ್ತಮವಾದದ್ದು, ಇದು ಮನುಷ್ಯನಿಗೆ ಮಾನಸಿಕ ಸಂಸ್ಕಾರವನ್ನು ನೀಡುತ್ತದೆ. ಹಾಗೂ ಅಹಂ ಬ್ರಹ್ಮಾಸ್ಮಿ ಜಗತ್ತು ಮಾಯೆ ಎಂಬುದರ ಅರಿವನ್ನು ಮೂಡಿಸುತ್ತದೆ. ತನ್ಮೂಲಕ ಭಕ್ತನು ಆತ್ಮಜ್ಞಾನವನ್ನು ಪಡೆದು ಮುಕ್ತಿಯತ್ತ ಸಾಗುವಂತೆ ಮಾಡುತ್ತದೆ. ಆದ್ದರಿಂದ ಸರ್ವರೂ ಶಂಕರಾಚಾರ್ಯರ ಬೋಧನೆಗಳ ಕುರಿತು ಅಧ್ಯಯನ ಮಾಡಿ ಅವುಗಳನ್ನು ಅನುಸರಿಸಬೇಕು ಎಂದರು. ಪ್ರೊ.ಎ.ಡಿ.ಗೋಡಖಿಂಡಿ ವಂದಿಸಿದರು. ರಮೇಶ್ ಪೂಜಾರ್, ರಾಮಣ್ಣ ಪೂಜಾರ್ ಗಿರೀಶ್ ಪಂತರ, ಕೃಷ್ಣಾಜಿ ನಾಡಿಗೇರ್, ಅನಿಲ ಪುರಾಣಿಕ, ಲಕ್ಷ್ಮೀ ಪುರಾಣಿಕ್ ಸುಮನ್ ಪಾಟೀಲ್, ಹಿಮಾಂಶ ಗೋಡಖಿಂಡಿ ಸೇರಿದಂತೆ ನೂರಾರು ಭಕ್ತರು ಉಪಸ್ಥಿತರಿದ್ದರು. ಶಂಕರಭಟ್ ಸೊರಟೂರ್ ಅವರ ವೇದ ಘೋಷದೊಂದಿಗೆ ಆರಂಭಗೊಂಡಿತು. ರತ್ನಾಕರಭಟ್ ಜೋಶಿ ಮಾತನಾಡಿದರು. ಡಾ.ದತ್ತಪ್ರಸನ್ನ ಪಾಟೀಲ ನಿರೂಪಿಸಿದರು.



ಗದಗ: ನಗರದ ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯದ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ 25ನೇಯ ಫ್ಲಾರೆನ್ಸ್ ನೈಟಿಂಗೇಲ್ ಅವಾರ್ಡ–2026 ಪ್ರಯುಕ್ತವಾಗಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಸ್ಪರ್ಧೆ ರಾಜ್ಯಕ್ಕೆ ಪ್ರಥಮ ಸ್ಥಾನ ಹಾಗೂ ಪೆನ್ಸಿಲ್ ಚಿತ್ರಕಲೆಯಲ್ಲಿ 2ನೇ ಸ್ಥಾನ ಪಡೆದಿದ್ದಾರೆ. ಮುಖ್ಯಸ್ಥ ಐವನ ಇಗ್ನಿ, ಸಂಸ್ಥೆಯ ಎಲ್ಲ ವಿದ್ಯಾರ್ಥಿಗಳ ಸಾಧನೆಗೆ ಪ್ರಸಂಶೆ ವ್ಯಕ್ತಗೊಳಿಸಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ರೇಖಾ ಕೆ.ಬಿ. ಸೇರಿದಂತೆ ಇತರರು ಇದ್ದರು.

ಹಸ್ತಪ್ರತಿಗಳ ಸಂರಕ್ಷಣೆ, ಡಿಜಟಲೀಕರಣ ಯೋಜನೆ ಕುರಿತು ಸಭೆ

ಸಾಂಸ್ಕೃತಿಕ ಪರಂಪರೆ ಶಾಶ್ವತ ರಕ್ಷಣೆಗೆ ಕ್ರಮ

• **ಗದಗ:** ಕೇಂದ್ರ ಸರ್ಕಾರದ ಜ್ಞಾನ ಭಾರತಂ ಮಿಷನ್ ಯೋಜನೆಯಡಿಯಲ್ಲಿ ರಾಷ್ಟದಾದ್ಯಂತ ಲಭ್ಯವಿರುವ ಶತಮಾನಗಳಷ್ಟು ಹಳೆಯ ಕೈಬರಹದ ಪತ್ರಗಳು, ಹಸ್ತಪ್ರತಿಗಳು ಮತ್ತು ದಾಖಲೆಗಳನ್ನು ಇಂದಿನ ತಂತ್ರಜ್ಞಾನ ಮೂಲಕ ಶಾಶ್ವತವಾಗಿ ಉಳಿಸಲು ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಡಿಜಿಟಲೀಕರಣ ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಜ್ಞಾನ ಭಾರತಂ ಮಿಷನ್ ಯೋಜನೆಯಡಿಯಲ್ಲಿ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಕಾರ್ಯಯೋಜನೆ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಡೀ ದೇಶದಲ್ಲಿರುವ ಹಸ್ತಪ್ರತಿಗಳ ಮಾಹಿತಿ ಕೇಂದ್ರ ಸರ್ಕಾರವು ಅಭಿವೃದ್ಧಿ ಪಡಿಸಿರುವ ಮೊಬೈಲ್ ಅಪ್ಲಿಕೇಷನ್‌ನಲ್ಲಿ ಅಪ್ ಲೋಡ್ ಮಾಡುವ ಮೂಲಕ ಸಂಗ್ರಹಣೆಗೊಳ್ಳುವ ಹಸ್ತಪ್ರತಿಗಳ ರಾಷ್ಟ್ರೀಯ ಭಂಡಾರದ ದತ್ತಾಂಶದ ಮಾಹಿತಿ ವಿಶ್ವಕ್ಕೆ ಹಂಚಿಕೊಳ್ಳುವ ಉದ್ದೇಶದಿಂದ ಈ ಯೋಜನೆ ಜಾರಿಗೊಳಿಸಲಾಗಿದೆ ಎಂದರು.

ರಾಷ್ಟದ್ಯಂತ ಲಭ್ಯವಿರುವ ಶತಮಾನಗಳಷ್ಟು ಹಳೆಯ ಕೈ ಬರಹದ ಪತ್ರಗಳು, ಹಸ್ತಪ್ರತಿಗಳು ಮತ್ತು ದಾಖಲೆಗಳ ಇಂದಿನ ತಂತ್ರಜ್ಞಾನ ಮೂಲಕ ಶಾಶ್ವತವಾಗಿ ಉಳಿಸಲು ಇವುಗಳ ಸಮೀಕ್ಷೆ, ಸಂರಕ್ಷಣೆ, ರಕ್ಷಣೆ, ಡಿಜಿಟಲೀಕರಣ, ನೋಂದಣಿ, ವಿಮರ್ಶಾತ್ಮಕ ಸಂಪಾದನೆ, ಅನುವಾದ ಮತ್ತು ಪ್ರಕಟಣೆ ಮಾಡುವ ಮೂಲಕ ಕರ್ನಾಟಕದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಒಂದೇ ರಾಷ್ಟ್ರೀಯ ವೇದಿಕೆ ಮೂಲಕ ಸಾರ್ವಜನಿಕ ಪ್ರವೇಶ ಒದಗಿಸಿ ಭವಿಷ್ಯದ ಪೀಳಿಗೆಗೆ ಅವುಗಳ ಜ್ಞಾನ ಸಂಪತ್ತಿನ ಸಂರಕ್ಷಣೆ ಮತ್ತು ಬಳಕೆಯ ಉದ್ದೇಶ ಹೊಂದಿದೆ ಎಂದರು.



> ಇಡೀ ದೇಶದಲ್ಲಿರುವ ಹಸ್ತಪ್ರತಿಗಳ ಮಾಹಿತಿ ಕೇಂದ್ರ ಸರ್ಕಾರವು ಅಭಿವೃದ್ಧಿ ಪಡಿಸಿರುವ ಮೊಬೈಲ್ ಅಪ್ಲಿಕೇಷನ್‌ನಲ್ಲಿ ಅಪ್‌ಲೋಡ್ ಮಾಡುವ ಮೂಲಕ ಸಂಗ್ರಹಣೆಗೊಳ್ಳುವ ಹಸ್ತಪ್ರತಿಗಳ ರಾಷ್ಟ್ರೀಯ ಭಂಡಾರದ ದತ್ತಾಂಶದ ಮಾಹಿತಿ ವಿಶ್ವಕ್ಕೆ ಹಂಚಿಕೊಳ್ಳುವ ಉದ್ದೇಶದಿಂದ ಈ ಯೋಜನೆ ಜಾರಿಗೊಳಿಸಲಾಗಿದೆ.
> ■ ಸಿ.ಎನ್.ಶ್ರೀಧರ್, ಡಿಸಿ

ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ವರ ವಿಭೂತಿ ಮಾತನಾಡಿ, ರಾಜ್ಯ ಸರ್ಕಾರವು ಕೈ ಜೋಡಿಸುವ ಸಲುವಾಗಿ ರಾಜ್ಯದಾದ್ಯಂತ ಹಸ್ತಪ್ರತಿಗಳ ಸಮೀಕ್ಷೆ ಕಾರ್ಯ ಪ್ರಾರಂಭಿಸಿ, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಮಟ್ಟದ ಸ್ಥಾಯಿ ಸಮಿತಿ ರಚಿಸಲಾಗಿದೆ. ಅದೇ ರೀತಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿ ರಚನೆ ಮಾಡಲಾಗಿದೆ. ಸಂಬಂಧಿತ ಜಿಲ್ಲೆ ಜಿಲ್ಲಾಧಿಕಾರಿಗಳು ಸಮಿತಿ ಅಧ್ಯಕ್ಷರಾಗಿದ್ದು, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕರು, ಸಹಾಯಕ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ ಎಂದರು.

ಜಿಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಮಹಾನಗರಪಾಲಿಕೆ ಹಾಗೂ ನಗರಸಭೆ ಪೌರಾಯುಕ್ತರು, ಕ್ಲಸ್ಟರ್ ಕೇಂದ್ರದ ಸಂಯೋಜಕರು, ಜಿಲ್ಲೆಯ ರಾಜ್ಯ ವಿಶ್ವ ವಿದ್ಯಾಲಯ ಸಂಶೋಧನಾ ಸಂಸ್ಥೆ ನೋಂದಣಾಧಿಕಾರಿಗಳು, ಹಸ್ತಪ್ರತಿ, ಶಿಲಾಶಾಸನಶಾಸ್ತ್ರ / ಇತಿಹಾಸ/ ಸಂಸ್ಕೃತ/ ಪ್ರಾದೇಶಿಕ ಬಾಷೆಗಳು/ ಆರ್ಕೆವ್ ವಿಷಯದಲ್ಲಿ ಜಿಲ್ಲಾಧಿಕಾರಿಗಳಿಂದ ನಾಮನಿರ್ದೇಶಿತ ಇಬ್ಬರು ತಜ್ಞರು ಸಮಿತಿ ಸದಸ್ಯರುಗಳಾಗಿರುತ್ತಾರೆ ಎಂದರು.

ಈ ವೇಳೆ ಕ್ಲಸ್ಟರ್ ಕೇಂದ್ರಗಳ ಪಾತ್ರ, ಜಿಲ್ಲಾ ಮಟ್ಟದ ಸಮನ್ವಯ , ಸಮೀಕ್ಷೆ ಜಾರಿಯ ವಿಧಾನ, ಮೇಲ್ವಿಚಾರಣೆ ಮತ್ತು ಪರಿಶೀಲನೆ, ಅನುಸರಣೆ ಮತ್ತು ನೈತಿಕ ಮಾರ್ಗಸೂಚಿಗಳ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಗಂಗಪ್ಪ ಎಂ, ಗದಗಬೆಟಗೇರಿನಗರಸಭೆಪೌರಾಯುಕ್ತರಾಜಾರಾಮ ಪವಾರ, ತಹಶೀಲ್ದಾರ್ ಶ್ರೀನಿವಾಸಮೂರ್ತಿ ಕುಲಕರ್ಣಿ, ಆರ್‌ಡಿಪಿಆರ್ ವಿಶ್ವವಿದ್ಯಾಲಯದ ಶಶಿಭೂಷಣ, ಎಸ್.ಎಂ.ಸಿಂಪಿಗೇರ, ಜಿ.ಎಸ್. ಗಾವಕರ್, ಗುರುಸಿದ್ದಪ್ಪಯ್ಯ ಹಿರೇಮಠ, ಶ್ರೀಧರ್ ರಾವ್ ಸೇರಿದಂತೆ ಇತರರು ಹಾಜರಿದ್ದರು.

ಗೋ ಹತ್ಯೆ ನಿಷೇಧ ಕಾನೂನು ಜಾರಿಯಾಗಲಿ

• **ಲಕ್ಷ್ಮೇಶ್ವರ:** ದೇಶದಲ್ಲಿ ಗೋವುಗಳಿಗೆ ದೇವತೆಗಳಂತೆ ಪೂಜ್ಯನೀಯ ಸ್ಥಾನವಿದೆ. ಗೋಮಾತೆ ಹತ್ಯೆ ಮಾಡುವವರ ವಿರುದ್ಧ ಕಠಿಣ ಕಾನೂನು ಜಾರಿಯಾಗಬೇಕು. ಪ್ರತಿ ಗ್ರಾಮದಲ್ಲಿ ಗೋಶಾಲೆ ತೆರೆಯಬೇಕು ಗೋ ಕಳ್ಳ ಸಾಗಣೆದಾರರಿಗೆ ಜಾಮೀನು ರಹಿತ ವಾರೆಂಟ್ ತೆರೆಯಬೇಕು ಎಂದು ಬಿಜೆಪಿ ಮಂಡಳ ಅಧ್ಯಕ್ಷ ಸುನೀಲ ಮಹಾಂತಶೆಟ್ಟರ ಹೇಳಿದರು.

ಗೋ ಸಮ್ಮಾನ ಅಹ್ವಾನ ಅಭಿಯಾನದಡಿ ತಾಲೂಕಿನ ಪ್ರತಿ ಗ್ರಾಮದಿಂದ ಸಹಿ ಸಂಗ್ರಹಿಸಿ ರಾಷ್ಟಪತಿ ಪ್ರಧಾನಮಂತ್ರಿ, ರಾಜ್ಯಪಾಲ, ಮುಖ್ಯಮಂತ್ರಿಗಳಿಗೆ ತಹಶೀಲ್ದಾರ್ ಮೂಲಕ ಮನವಿ ಸಲ್ಲಿಸಿ ಮಾತನಾಡಿ, ಗೋಮಾತೆ, ಭೂಮಿತಾಯಿಗೆ ಸಮಾನಳು ಎಂತಲೂ ಮತ್ತು ಸಕಲ ದೇವತೆಗಳ ಆವಾಸ ಸ್ಥಾನ ಎಂಬ ನಂಬಿಕೆವಿದೆ. ಕಾಮಧೇನು ಕಲ್ಪವೃಕ್ಷವೇ ಆಗಿದ್ದಾಳೆ. ಇಂತಹ ಗೋಮಾತೆ ಉಳಿಸಿಕೊಳ್ಳುವ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಗಿದೆ. ಮುಂಬರುವ ದಿನಗಳಲ್ಲಿ ಗೋಮಾತೆ ರಕ್ಷಣೆಗಾಗಿ ಬದ್ಧರಾಗಬೇಕಿದ್ದು ಎಲ್ಲರೂ ಈ ಅಭಿಯಾನದಲ್ಲಿ ಭಾಗಿಯಾಗಬೇಕು ಎಂದರು.

ರಾಮ ಸೇನೆ ತಾಲೂಕ ಅಧ್ಯಕ್ಷ ಈರಣ್ಣ ಪೂಜಾರ, ಹಿಂದೂ ಯುವ ಮುಖಂಡ ನವೀನ ಹಿರೇಮಠ ಮಾತನಾಡಿ, ದೇಶಿ ಗೋವಂಶ ರಾಷ್ಟ ಮಾತೆ ಎಂದು ಅಧಿಕೃತವಾಗಿ ಘೋಷಿಸಲು ವಿಶೇಷ ನಿರ್ಣಯ ಅಂಗೀಕರಿಸಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. ರಾಜ್ಯಮಟ್ಟದಲ್ಲೂ ದೇಶಿಗೋವಂಶವನ್ನು ರಾಜ್ಯ ಮಾತೆ ಎಂದು ಘೋಷಣೆ ಮಾಡಬೇಕು. ಶಾಲಾ ಪಠ್ಯದಲ್ಲಿ ಗೋ ವಿಜ್ಞಾನ ವಿಷಯ ಕಡ್ಡಾಯವಾಗಿ ಸೇರಿಸಬೇಕು ಎಂದರು.

ಈ ವೇಳೆ ಎಂ.ಎಸ್.ದೊಡ್ಡಗೌಡ್ರ, ನಿಂಗಪ್ಪ ಬನ್ನಿ, ಥಾವರಪ್ಪ ಲಮಾಣಿ, ನಿಂಗಪ್ಪ ಬನ್ನಿ, ದುಂಡೇಶ ಕೋಟಗಿ, ಗಂಗಾಧರ ಮೆಣಸಿನಕಾಯಿ, ವಿಜಯ ಕುಂಬಾರ, ಪ್ರವೀಣ ಬೋಮಲೆ, ಸೋಮೇಶ ಉಪನಾಳ, ಮಂಜುನಾಥ ಹೊಗೆಸೊಪ್ಪಿನ, ಬಸವರಾಜ ಕಲ್ಲೂರ, ವಸಂತಗೌಡ ಪಾಟೀಲ, ಬಸವರಾಜ ಚಕ್ರಸಾಲಿ, ಪ್ರಕಾಶ ಮಾದನೂರ, ಭೀಮಣ್ಣ ಯಂಗಾಡಿ, ಮಂಜನಗೌಡ ಕೆಂಚನಗೌಡ್ರ, ಹನುಮಂತ ರಾಮಗೇರಿ, ಮಂಜುನಾಥ ಬಸಾಪುರ, ಬಸವರಾಜ ಮಜಿಗುಡ್ಡ, ಪ್ರಶಾಂತ ಗಾಂಜಿ, ಅರುಣ ಪಾಟೀಲ, ದುಂಡಪ್ಪ ಸವಣೂರ, ರುದ್ರಪ್ಪ ಉಮಚಗಿ, ಆಕಾಶ ಸೌದತ್ತಿ, ಸುಮಂಗಲಾ ಕುಂಬಾರ, ವಿದ್ಯಾ ಅಂಗಡಿ ಅನೇಕರು ಇದ್ದರು. ಗ್ರೇಡ್ –2 ತಹಶೀಲ್ದಾರ್ ಮಂಜುನಾಥ ಅಮಾಸಿ ಮನವಿ ಸ್ವೀಕರಿಸಿದರು.



ಗಜಲ್ ಸಾಹಿತ್ಯಕ್ಕೆ ರಹದಾರಿ ನಿರ್ಮಿಸಿದ ಶಾಂತರಸರು

• **ಗದಗ:** ಶಾಂತರಸರು ಎಲ್ಲ ಸಾಹಿತ್ಯ ಪಂಥದ ಜೊತೆಗೆ ಒಡನಾಟ ಹೊಂದಿದ್ದರೂ ಯಾವುದಕ್ಕೂ ಕಟ್ಟು ಬೀಳದೇ ಪ್ರಚಲಿತ ಸಂಗತಿಗಳಿಗೆ ತಮ್ಮ ಬರೆಹವನ್ನು ಮುಖಾಮುಖಿಯಾಗಿಸಿದರು ಎಂದು ಸಾಹಿತಿ ಸಿದ್ಧರಾಮ ಹಿರೇಮಠ ತಿಳಿಸಿದರು.

ಜಿಲ್ಲಾಕನ್ನಡಸಾಹಿತ್ಯ ಪರಿಷತ್ತಿನವತಿಯಿಂದ ತೋಂಟದ ಸಿದ್ದಲಿಂಗ ಕನ್ನಡ ಭವನದಲ್ಲಿ ಜರುಗಿದ ಡಾ.ಶಾಂತರಸ ಸ್ಮರಣಾರ್ಥ ದತ್ತಿ ಉಪನ್ಯಾಸದಲ್ಲಿ ಶಾಂತರಸರು ಮತ್ತು ಗಜಲ್ ಒಂದು ಅವಲೋಕನ ಕುರಿತು ಉಪನ್ಯಾಸ ನೀಡಿದರು.

ಶಾಂತರಸರು ನಮ್ಮದಲ್ಲದ ಗಜಲ್ ಪ್ರಕಾರವನ್ನು ಅದರ ಮೂಲ ಗುಣಧರ್ಮಗಳಿಗೆ ಎರವಾಗದ ಭಾವದಲ್ಲಿ ಕನ್ನಡದಲ್ಲಿ ಬೇರೂರಿ ಬೆಳಸಿ 'ಗಜಲ್ ಗಾರುಡಿಗ'ರಾಗಿದ್ದಾರೆ. ಗಜಲ್ ಪ್ರಕಾರದಲ್ಲಿ ಕೃಷಿಮಾಡುತ್ತಿರುವ ಪಡೆಗೆ ರಹದಾರಿಯನ್ನು ನಿರ್ಮಿಸಿಕೊಟ್ಟಿದ್ದಾರೆ. ಶರಣರ, ಸಂತರ ಕುರಿತು ಸುಪ್ರಭಾತಗಳನ್ನು ರಚಿಸಿದ್ದಾರೆ. ಕತೆ ಕಾದಂಬರಿಗಳ ಮೂಲಕ ಸಂಕಟಗಳಿಗೆ ದನಿಯಾಗಿದ್ದಾರೆ. ಹೈದ್ರಾಬಾದ್ ಕರ್ನಾಟಕದ ಗಟ್ಟಿಧ್ವನಿಯಾಗಿ ಅಸಮಾನತೆಯ ವಿರುದ್ಧ ಹೋರಾಟ ಮಾಡಿದ್ದಾರೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಶಾಂತರಸರು ಕತೆ, ಕಾದಂಬರಿ, ಜೀವನ ಚರಿತ್ರೆ, ಸಂಶೋಧನೆ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಶಾಂತರಸರನ್ನು ಗಜಲ್ ಗಾರುಡಿಗ ಎಂದು ಕರೆಯಲಾಗುತ್ತಿದೆ. ಹೈದ್ರಾಬಾದ ಕರ್ನಾಟಕದ ಅಸಮಾನತೆ, ಸ್ತ್ರೀ ಶೋಷಣೆಯನ್ನು ಕತೆ, ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಗಜಲ್ ಕಾವ್ಯ ಪ್ರಕಾರವನ್ನು ಕನ್ನಡಕ್ಕೆ ಕಸಿ ಮಾಡಿ ಹುಲುಸಾಗಿ ಬೆಳೆಯುವಂತೆ ಮಾಡಿದ್ದಾರೆ ಎಂದರು. .

ಭಾರತಿ ಮೋಹನ ಕೋಟಿ ಮಾತನಾಡಿ, ಗದುಗಿನಲ್ಲಿ ಶಾಂತರಸರು ಕಳೆದ ದಿನಗಳನ್ನು ಸ್ಮರಿಸಿದರು. ಮನೆ ಮನಗಳಲ್ಲಿ ಸಾಹಿತ್ಯದೊಲವನ್ನು ಬೆಳೆಸುವ ಹಿನ್ನೆಲೆಯಲ್ಲಿ ಮಹತ್ವದ ಪಾತ್ರವನ್ನು ಆಡಿದ್ದಾರೆ ಎಂದರು.

ಡಾ.ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ರಾಹುಲ ಗಿಡ್ನಂದಿ ಸ್ವಾಗತಿಸಿದರು. ಸತೀಶಕುಮಾರ ಚನ್ನಪ್ಪಗೌಡರ ವಂದಿಸಿದರು.

ಕೆ.ಎಚ್.ಬೇಲೂರ, ಅನ್ನದಾನಿ ಹಿರೇಮಠ, ರತ್ನಕ್ಕ ಪಾಟೀಲ, ರಶ್ಮಿ ಅಂಗಡಿ, ಶ್ವೇತಾ ಪಾಟೀಲ, ಡಿ.ಎಸ್.ಬಾಪುರಿ, ಸಿದ್ದು ಯಾಪಲಪರ್ವಿ, ಡಾ. ಶಿವಪ್ಪ ಕುರಿ, ಡಾ. ಜಿ.ಬಿ.ಪಾಟೀಲ, ಸಿದ್ದಲಿಂಗೇಶ ಸಜ್ಜನಶೆಟ್ಟರ, ಶಿವಾನಂದ ಹೊಂಬಳ, ನಿಸ ಪಾಟೀಲ, ಬಸವರಾಜ ತೋಟಿಗೇರ, ಬಿ.ಎಲ್. ಚವ್ಹಾಣ, ಜೆ.ಎ.ಪಾಟೀಲ, ನಿರ್ಮಲಾ ಪಾಟೀಲ, ಶಿಲ್ಪಾ ಮ್ಯಾಗೇರಿ, ಎಂ.ಎಫ್. ಡೋಣಿ, ಶಿವಾನಂದ ಭಜಂತ್ರಿ, ಎಸ್.ಎನ್. ಗದ್ದಿ, ಪಿ.ವಿ.ಇನಾಮದಾರ, ಶೈಲಜಾ ಗಿಡ್ನಂದಿ, ಮಂಜುಳಾ ವೆಂಕಟೇಶಯ್ಯ, ಅನಸೂಯಾ ಮಿಟ್ಟಿ, ರತ್ನಾ ಪುರಂತರ, ಉಮಾದೇವಿ ಕಣವಿ, ಪ್ರೀತಂ ಪಾಟೀಲ, ರಕ್ಷಿತಾ ಗಿಡ್ನಂದಿ, ಉಮಾದೇವಿ ಹೊಂಬಳ, ಶಾಮನಗೌಡ ಅಳಗುಂಡಿ, ಈರನಗೌಡ ಮಣಕವಾಡ, ಈಶ್ವರಪ್ಪ ಕುಬುಸದ, ಬೂದೇಶ ಮಜ್ಜಿಗುಡ್ಡ, ಬಿ.ಬಿ.ಹೊಳಗುಂದಿ, ಯಲ್ಲಪ್ಪ ಹಂದ್ರಾಳ, ಬಿ.ವಾಯ್.ಡೊಳ್ಳಿನ, ರಾಜಶೇಖರ ಕರಡಿ, ಶಶಿಕಾಂತ ಕೊರ್ಲಹಳ್ಳಿ, ಅಶೋಕ ಸತ್ಯರಡ್ಡಿ, ಎಂ.ಎಂ. ಅಂಗಡಿ ಇದ್ದರು.

ಸುಂಕ ಸಂಗ್ರಹಣಾ ಮೇಲ್ವಿಚಾರಣಾ ಸಮಿತಿ ಸಭೆ

• **ಗದಗ:** ಜಿಪಂ ಹಾಗೂ ಅಧೀನ ಬರುವ ಕಚೇರಿಗಳಿಂದ ವಿವಿಧ ಯೋಜನೆಗಳಡಿ ಪ್ರಾರಂಭವಾಗಿರುವ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕಟ್ಟಡ, ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಶೇ.1%ರಷ್ಟು ಸುಂಕ ಭರಿಸಿರುವುದನ್ನು ಪರಿಶೀಲಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಅಧ್ಯಕ್ಷತೆಯಲ್ಲಿ ಜರುಗಿದ ಸುಂಕ ಸಂಗ್ರಹಣಾ ಮೇಲ್ವಿಚಾರಣಾ ಸಮಿತಿ ಸಭೆಯ್ಲಿ ಮಾತನಾಡಿ, ಯಾವುದೇ ಸರ್ಕಾರದ ಇಲಾಖೆ, ಸಾರ್ವಜನಿಕ ಪ್ರಾಧಿಕಾರ / ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತಿ ರಾಜ್ ಸಂಸ್ಥೆಗಳು ಕಡಿತ ಮಾಡಿದ ಅಥವಾ ವಸೂಲು ಮಾಡಿದ ಸುಂಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ರವಾನಿಸದಿದ್ದಲ್ಲಿ, ಸದರಿ ಸುಂಕ ಮಂಡಳಿಗೆ ರವಾನಿಸಲು ಅಗತ್ಯ ಕ್ರಮಕೈಗೊಳ್ಳಬೇಕು. ಪ್ರತಿ ತಿಂಗಳು ಈ ಕುರಿತು ಸಭೆ ಜರುಗಿಸಬೇಕು ಎಂದು ಸೂಚಿಸಿದರು.

ಸರ್ಕಾರದ ಇಲಾಖೆಗಳು ಅಥವಾ ಸಾರ್ವಜನಿಕ ಉದ್ದಿಮೆಯಾವುದೇ ನಿರ್ಮಾಣ ಕಾಮಗಾರಿ ನಡೆಸಿದ್ದಲ್ಲಿ ಅಂತಹ ಇಲಾಖೆ ಅಥವಾ ಸಾರ್ವಜನಿಕ ಉದ್ದಿಮೆ ನಿರ್ಮಾಣ ಕಾಮಗಾರಿ ವೆಚ್ಚ ಪಾವತಿಸುವಾಗ ಪಾವತಿಯ ಮೂಲದಲ್ಲೇ ಶೇ.1ರಷ್ಟು ಸುಂಕ, ಯಾವುದೇ ವ್ಯಕ್ತಿಗೆ ನಿರ್ಮಾಣ ಕಾಮಗಾರಿ ಕೈಗೊಳ್ಳಲು ನಗರ ಸ್ಥಳೀಯ ಸಂಸ್ಥೆ ನಕ್ಷೆ ಅನುಮೋದನೆ ಅಥವಾ ಪರವಾನಿಗೆ ನೀಡಿದ್ದಲ್ಲಿ ಹೀಗೆ ಪರವಾನಿಗೆ ಅಥವಾ ನಕ್ಷೆ ಅನುಮೋದನೆ ನೀಡುವ ಸಮಯದಲ್ಲಿ ಶೇ.1ರಷ್ಟು ಸುಂಕ ಪಡೆದುಕೊಂಡು ಮಂಡಳಿಗೆ ರವಾನಿಸಬೇಕು. ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತಿ ರಾಜ್ ಸಂಸ್ಥೆಗಳು ನೀಡಿದ ನಕ್ಷೆ, ಅನುಮೋದನೆ ಅಥವಾ ನಿರ್ಮಾಣ ಪರವಾನಿಗೆ ಪರಿಶೀಲನೆ ನಡೆಸಿ ಮಾಲೀಕರು, ನಿಯೋಜಕರಿಂದ ವಸೂಲು ಮಾಡಿದ ಸುಂಕವನ್ನು ಮಂಡಳಿಗೆ ರವಾನಿಸಿದ ಕುರಿತು ಪರಿಶೀಲನೆ ನಡೆಸಬೇಕು ಎಂದರು.



ಜಿಪಂ ಮುಖ್ಯ ಯೋಜನಾಧಿಕಾರಿ ಎ.ಎ.ಕಂಬಾಳಿಮಠ, ನಗರಾಬಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೋಟೂರ, ಜಿಲ್ಲಾ ಬಾಲಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕ ಸಂದೇಶ ಪಾಟೀಲ ಸೇರಿದಂತೆ ಸಮಿತಿ ಸದಸ್ಯರು ಹಾಜರಿದ್ದರು. ಕಾರ್ಮಿಕ ಇಲಾಖೆ ಅಧಿಕಾರಿ ಶ್ರೀಶೈಲ ಸೋಮನಕಟ್ಟಿ ಸ್ವಾಗತಿಸಿ ವಂದಿಸಿದರು.

ಗೋಮಾತೆ ರಾಷ್ಟ್ರ ಮಾತೆಯಾಗಿ ಘೋಷಿಸಲು ಆಗ್ರಹಿಸಿ ಮನವಿ

• **ಗದಗ:** ಗೋಮಾತೆಯನ್ನು ರಾಷ್ಟ ಮಾತೆಯಾಗಿ ಘೋಷಣೆ ಮಾಡಿ ಮತ್ತು ಗೋಹತ್ಯೆ ಕಾನೂನನ್ನು ಸಂಪೂರ್ಣವಾಗಿ ನಿಷೇಧ ಕಾಯ್ದೆ ಜಾರಿಗೆ ಬರಲಿ ಎಂದು ಆಗ್ರಹಿಸಿ ಭಗತಸಿಂಗ ಅಭಿಮಾನಿ ಬಳಗದ ಪ್ರಮುಖರು ಗೋಮಾತೆ ಗೌರವ ಅಭಿಯಾನದ ಆಹ್ವಾನ ಮತ್ತು ಸಹಿ ಸಂಗ್ರಹಣೆ ಮಾಡಿದ ಕರಪತ್ರಗಳ ಮೂಲಕ ತಹಶೀಲ್ದಾರ್ ಶ್ರೀನಿವಾಸಮೂರ್ತಿ ಕುಲಕರ್ಣಿಗೆ ಮನವಿ ಸಲ್ಲಿಸಿದರು.

ವಿಎಚ್‌ಪಿ ಜಿಲ್ಲಾ ಪ್ರಮುಖ ಶ್ರೀನಿವಾಸ ಹುಬ್ಬಳ್ಳಿ ಮಾತನಾಡಿ, ಗೋಹತ್ಯೆ ಕಾನೂನು ಕಟ್ಟುನಿಟ್ಟಾಗಿ ಎಲ್ಲಾ ರಾಜ್ಯಗಳಲ್ಲಿ ಜಾರಿಗೆಯಾಗಬೇಕು. ರೈತರು ಜನರು ಹೆಚ್ಚು ಹೆಚ್ಚು ಆಕಳು ಮತ್ತು ಗೋವು ಸಾಕುವ ಕಾರ್ಯವಾಗಬೇಕಾಗಿದೆ ಎಂದರು.

ರೈತ ಸಂಘದ ಜಿಲ್ಲಾಧ್ಯಕ್ಷ ಪರಮೇಶ್ವರಪ್ಪ ಜಂತ್ಲಿ ಮಾತನಾಡಿ, ಈ ಗೋಸಮ್ಮಾನ ಆಹ್ವಾನ ಅಭಿಯಾನಕ್ಕೆ ರೈತ ಸಂಘಟನೆಗಳ ಸಂಪೂರ್ಣ ಬೆಂಬಲವಿದೆ ಎಂದರು.ಭಗತಸಿಂಗ ಅಭಿಮಾನಿ ಬಳಗದ ಪ್ರಮುಖರು ಮತ್ತು ಗೋಮಾತೆಯ ಗೌರವ ಅಭಿಯಾನದ ಆಹ್ವಾನ ಸಮಿತಿಯ ಜಿಲ್ಲಾ ಪ್ರಮುಖರು ಮಾತನಾಡಿದರು.

ಭಗತಸಿಂಗ ಅಭಿಮಾನಿ ಬಳಗ, ವಿಎಚ್‌ಪಿ, ಎಬಿವಿಪಿ, ಗೋರಕ್ಷಕ ದಳ, ಗೋಪ್ರೇಮಿಗಳು, ರೈತ ಸಂಘಟನೆಗಳು ಶ್ರೀರಾಮಸೇನೆ, ಶ್ರೀರಾಮ ತರುಣ ಸಂಘ, ಬೆಟಗೇರಿ, ಕ್ರಾಂತಿ ಸೇನಾ, ಮಹಿಳಾ ಗೋ ಸಮ್ಮಾನ ಸಮಿತಿ ಪ್ರಮುಖರು, ಯೋಗೇಶ್ವರಿ, ಭಾವಿಕಟ್ಟಿ, ಸ್ವಾತಿ ಅಕ್ಕಿ, ಚನ್ನಮ್ಮ ಹುಳಕಣ್ಣವರ, ಮೇಘನಾ ಕೊಟ್ಟೂರು, ವಿಜಯಲಕ್ಷ್ಮೀ ಅನವಾಲದ, ರಾಘು ಹಬೀಬ, ಅಭಿಷೇಕ, ಮಹೇಶ ಹಡಪದ, ಸಂತೋಷ ಅಕ್ಕಿ, ವೀರಣ್ಣ ಹೇಮಾದ್ರಿ, ರಾಮು, ಬಸು, ಅನಿಲ, ಬಸವರಾಜ, ರವಿ, ಅಮಿತ, ಮಹಾಂತೇಶ, ಈಶ್ವರ, ಮಂಜು, ಕಿರಣ, ಮಹಾಂತೇಶ, ಗಿರೀಶ, ಹೇಮಂತ, ಸರ್ವ ಹಿಂದೂಪರ ಸಂಘಟನೆ ಸದಸ್ಯರು, ಹಿರಿಯರು, ಮಾತೆಯರು, ರೈತರು ಭಾಗಿಯಾಗಿದ್ದರು.

ವಿಮಾನ ನಿಲ್ದಾಣಗಳಿಗೆ ಮಹನೀಯರ ಹೆಸರಿಡಿ

• **ಲಕ್ಷ್ಮೇಶ್ವರ:** ರಾಜ್ಯದ ಪ್ರಮುಖ ವಿಮಾನ ನಿಲ್ದಾಣಗಳಿಗೆ ಕನ್ನಡ ನಾಡು ನುಡಿಗಾಗಿ ಹೋರಾಟ ಮಾಡಿದ ಮಹನೀಯರ ಹೆಸರನ್ನು ಇಡುವುದರ ಮೂಲಕ ಅವರಿಗೆ ಗೌರವ ಸಲ್ಲಿಸಬೇಕೆಂಬ ಬೇಡಿಕೆ ಹಲವಾರು ವರ್ಷಗಳಿಂದ ಮಾಡುತ್ತಿದ್ದು, ಅದಕ್ಕೆ ಸರ್ಕಾರ ಕೂಡಲೇ ಮಾನ್ಯತೆ ನೀಡಬೇಕು ಎಂದು ಹುಬ್ಬಳ್ಳಿ ಹೋರಾಟಗಾರ ಶಿವಾನಂದ ಮುತ್ತಣ್ಣವರ ಆಗ್ರಹಿಸಿದರು.

ಪಟ್ಟಣದ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಾಲಯದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬ್ರಿಟಿಷರ ವಿರುದ್ಧ ಹೋರಾಡಿದ ರಾಣಿ ಕಿತ್ತೂರು ಚನ್ನಮ್ಮನ ಹೆಸರನ್ನು ಬೆಳಗಾವಿ ವಿಮಾನ ನಿಲ್ದಾಣ, ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಸಂಗೊಳ್ಳಿ ರಾಯಣ್ಣ, ವಿಜಯಪುರ ನಿಲ್ದಾಣಕ್ಕೆ ಜಗಜ್ಯೋತಿ ಬಸವಣ್ಣ ಹಾಗೂ ಶಿವಮೊಗ್ಗ ನಿಲ್ದಾಣಕ್ಕೆ ರಾಷ್ಟಕವಿ ಕುವೆಂಪು, ಟರ್ಮಿನಲ್ –2ಕ್ಕೆ ಡಾ.ರಾಜಕುಮಾರ ಹೆಸರಿಡಬೇಕು ಎಂದು ಹತ್ತು ಹಲವು ಬಾರಿ ರಾಜ್ಯ, ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ಆದರೆ ಯಾವುದೇ ಪ್ರಯೋಜನ ಆಗಿಲ್ಲ. ಇದಕ್ಕೆ ಸರ್ಕಾರ ನಿರ್ಲಕ್ಷ್ಯ, ಅಸಡ್ಡೆಯೋ ತಿಳಿದುಬರುತ್ತಿಲ್ಲ ಎಂದು ಆರೋಪಿಸಿದರು.

ಈ ಧೋರಣೆ ಹೀಗೆ ಮುಂದುವರೆದರೆ ಮುಂದಿನ ದಿನಗಳಲ್ಲಿ ಗೋಕಾಕ ಚಳುವಳಿ ಮಾದರಿಯಲ್ಲಿ ಹೋರಾಟ ನಡೆಸಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಈ ಹೋರಾಟದ ರೂಪುರೇಷೆ ಕುರಿತು ಚರ್ಚಿಸಲು ಮೇ 2ರಂದು ಕ್ಯೂಬೆಕ್ಸ್ ಹೊಟೇಲ್‌ನಲ್ಲಿ ಬೆಳಿಗ್ಗೆ 10ಕ್ಕೆ ಸಭೆ ಆಯೋಜಿಸಲಾಗಿದ್ದ, ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳ ಕನ್ನಡಾಭಿಮಾನಿಗಳು, ಕನ್ನಡಪರ ಹೋರಾಟಗಾರರು ಆಗಮಿಸಬೇಕು ಎಂದು ಮನವಿ ಮಾಡಿದರು.



ಯುವ ಮುಖಂಡ ಸೋಮಣ್ಣ ಬೇಟಗೇರಿ ಮತ್ತು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಶರಣು ಗೋಡಿ ಮಾತನಾಡಿ, ನಾಡಿಗೆ ಅನೇಕ ಮಹನೀಯರು ನೀಡಿದ ಕೊಡುಗೆ ಮರೆಯುವಂತಿಲ್ಲ. ಅಂತಹ ಮಹನೀಯರ ಹೆಸರು ವಿಮಾನ ನಿಲ್ದಾಣಕ್ಕೆ ಇಡಲು ಸರ್ಕಾರ ಹಿಂದೇಟು ಹಾಕುತ್ತಿರುವದು ಸರಿಯಲ್ಲ. ಕನ್ನಡ ಜನರ ಧ್ವನಿಗೆ ಸರ್ಕಾರ ಕೂಡಲೇ ಕಿವಿಯಾಗಲಿ ಇಲ್ಲದಿದ್ದಲ್ಲಿ ದೊಡ್ಡ ಮಟ್ಟದ ಹೋರಾಟ ನಡೆಯುವಂತಾಗುತ್ತದೆ ಎಂದರು.

ಫಕ್ಕೀರಪ್ಪ ಮದ್ರಾಸಿ, ಶೇಖಣ್ಣ ಕಾಳೆ, ನೀಲಪ್ಪ ಪಡಗೇರಿ, ಮುದಕಣ್ಣ ಗದ್ದಿ, ನಾಗೇಶ ಅಮರಾಪೂರ, ಮಂಜುನಾಥ ಕಲ್ಲೂರ, ಮುತ್ತಣ್ಣ ಟೋಕಾಳಿ, ಹನುಂತ ಶರಸೂರಿ, ಬಸಪ್ಪ ರಟಗೇರಿ, ನೀಲಪ್ಪ ಬಸಾಪೂರ, ಕೈಸರ್‌ಮಹ್ಮದ್ ಅಲಿ, ರಮೇಶ ಗೊಜಗೊಜಿ ಮತ್ತಿತರರು ಹಾಜರಿದ್ದರು.

ಸಿಸಿ ರಸ್ತೆ ನಿರ್ಮಾಣಕ್ಕೆ ಆಗ್ರಹ

• **ಲಕ್ಷ್ಮೇಶ್ವರ:** ಪಟ್ಟಣದ 14ನೇ ವಾರ್ಡನಲ್ಲಿನ ಪರ್ವತ ಮಲ್ಲಯ್ಯನ ದೇವಸ್ಥಾನದಿಂದ ಹಳೆಬಸ್ ನಿಲ್ದಾಣದವರೆಗೂ ರಸ್ತೆ ನಿರ್ಮಿಸಲು 14ನೇ ವಾರ್ಡ್ ಸಾರ್ವಜನಿಕರು ಮಂಗಳವಾರ ಪುರಸಭೆ ಮುಖ್ಯಾದಿಕಾರಿ ಪರಶುರಾಮ ಗುಡದಾರಿ ಅವರಿಗೆ ಮನವಿ ಸಲ್ಲಿಸಿದರು.

ಮನವಿ ಪತ್ರದಲ್ಲಿ 10 ರಿಂದ 12ವರ್ಷಗಳ ಹಿಂದೆಯೇ ಸೋಮೇಶ್ವರ ಪಾದಗಟ್ಟಿಯಿಂದ ಹಳೆ ಬಸ್ ಸ್ಟಾಂಡ್ ವರೆಗೆ ರಸ್ತೆ ಅಗಲೀಕರಣವಾಗಿತ್ತು ಸತತ ಹೋರಾಟ ಪಲವಾಗಿ ಪಾದಗಟ್ಟಿಯಿಂದ ಪರ್ವತ ಮಲ್ಲಯ್ಯ ದೇವಸ್ಥಾನವರೆಗೆ ಸಿಸಿ ರಸ್ತೆ ನಿರ್ಮಾಣವಾಗಿದೆ ಮುಂದುವರೆದ ರಸ್ತೆ ಕಾಮಗಾರಿ ಶೀಘ್ರ ಪ್ರಾರಂಬಿಸಬೇಕು ಇಲ್ಲವಾದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ವಾರ್ಡಿನ ಸಾರ್ವಜನಿಕರು ಎಚ್ಚರಿಸಿದ್ದಾರೆ.

ಈ ವೇಳೆ ವಾಗೀಶ ಪುರಾಣಿಕಮಠ, ಕೊಟ್ರೇಶ ಕತ್ತಿ, ಮಂಜುನಾಥ ಗಾಂಜಿ, ಶಿವಾನಂದ ಮೆಕ್ಕಿ, ವಾಸು ಗೋಸಾವಿ, ಗಣೇಶ ಬೆಳವಿಗಿ, ಶ್ರೇಯಾಂಕ ಹಿರೇಮಠ ಸೇರಿದಂತೆ ಅನೇಕರಿದ್ದರು.



ಗುರು ಸ್ಮರಣೆ ಗುರು–ಶಿಷ್ಯರ ಸಂಬಂಧದ ಜೀವಾಳ

• **ನರೇಗಲ್ಲ:** ಗುರು–ಶಿಷ್ಯರ ಅನನ್ಯ ಬಾಂಧವ್ಯ, ಕೃತಜ್ಞತೆ ಇವುಗಳನ್ನು ನೆನಪಿಸಿಕೊಳ್ಳುವುದು ಗುರುವಿನ ಸ್ಮರಣೆ ಬಹಳ ಮುಖ್ಯವಾಗಿದ್ದು, ಗುರು ಸ್ಮರಣೆ ಗುರು–ಶಿಷ್ಯರ ಸಂಬಂಧದ ಜೀವಾಳವಾಗಿ ನೆಲೆಸುತ್ತದೆ. ಅದಕ್ಕೆ ಇಂತಹ ಕಾರ್ಯಕ್ರಮ ಅವಿಸ್ಮರಣೀಯ ಕಾರ್ಯಕ್ರಮ ಎಂದು ಎಸ್‌ಎವಿವಿಪಿ ಸಮಿತಿ ಆಡಳಿತ ಅಧಿಕಾರಿ ಡಾ.ಜಿ ಕೆ ಕಾಳೆ ಹೇಳಿದರು.

ಅವರು ಸ್ಥಳೀಯ ಅನ್ನದಾನೇಶ್ವರ ಶಿವಾನುಭವ ಮಂಟಪದಲ್ಲಿ ಅನ್ನದಾನ ವಿಜಯ ಬಾಲಕಿಯರ ಪ್ರೌಢಶಾಲೆಯ 2005–2006ನೇ ಸಾಲಿನ ಹಳೆ ವಿದ್ಯಾರ್ಥಿನಿಯರು ತಮ್ಮ ಜೀವನದ ದಾರಿಗೆ ಬೆಳಕು ಹಚ್ಚಿದ ಗುರುಗಳಿಗೆ ಗೌರವ ಸಲ್ಲಿಸಲು ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿ, ಗುರುಗಳನ್ನು ಸ್ಮರಿಸುವುದು ಎಂದರೆ ನಮ್ಮ ಜೀವನದ ಮೌಲ್ಯ ನೆನಪಿಸಿಕೊಳ್ಳುವುದು ಎಂದರು.

ಸಮಿತಿ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ ಮಾತನಾಡಿ, ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯಡಿಯಲ್ಲಿ ನಡೆಯುತ್ತಿರುವ ಈ ಶಾಲೆ ಭಾಗದ ಪ್ರಮುಖ ವಿದ್ಯಾಸಂಸ್ಥೆಯಾಗಿದ್ದು, ಇಲ್ಲಿನ ಶಿಕ್ಷಕರು ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣಕ್ಕೆ ಮಹತ್ವದ ಪಾತ್ರವಹಿಸುತ್ತಿದ್ದಾರೆ ಎಂದರು.

ಈ ವೇಳೆ ಹಳೆ ವಿದ್ಯಾರ್ಥಿನಿಯರು ತಮ್ಮ ಗುರುಗಳಿಗೆ ಪುಷ್ಪವೃಷ್ಟಿ ಮಾಡಿ ಸನ್ಮಾನಿಸಿದರು.



ಶಿಕ್ಷಕರಾದ ಎ.ಟಿ. ಮಳ್ಳಿ, ಬಿ.ಡಿ. ಯರಗೊಪ್ಪ, ಎಂ.ಎಸ್.ಅತ್ತಾರ್, ಎಸ್.ಶಿವಮೂರ್ತಿ, ಎಸ್. ಎಫ್.ಧರ್ಮಾಯತ, ಆರ್.ಎಂ.ಗುಳಬಾಳ, ರಮೇಶ ಶಿಳ್ಳಿನ್ ಸೇರಿದಂತೆ ಶಾಲಾ ಸಿಬ್ಬಂದಿ ಬಸಮ್ಮ ಅಸುಂಡಿ ಹಾಗೂ ಸಂಗಮೇಶ ಕುರಡಗಿ ಇದ್ದರು. ಬೆಂಗಳೂರು, ಪುಣೆ, ದಾಂಡೇಲಿ ಮೊದಲಾದ ದೂರದ ಊರುಗಳಿಂದ ಆಗಮಿಸಿದ ವಿದ್ಯಾರ್ಥಿನಿಯರ ಉಪಸ್ಥಿತಿಯಿಂದ ಕಾರ್ಯಕ್ರಮಕ್ಕೆ ಮೆರುಗು ಮೂಡಿತು. ಶಯನಾಜ್ ಉಮಚಗಿ, ಅನಿತಾ ವೈದ್ಯಮಠ, ಆಶಾ ಮೇಟಿ ನಿರ್ವಹಿಸಿದರು. ಮುಖ್ಯೋಪಾಧ್ಯಾಯ ಎಸ್.ಎನ್. ಹೂಲಗೇರಿ ಉದ್ಘಾಟಿಸಿದರು. ರೇಖಾ ಮಡಿವಾಳ ಹಾಗೂ ರೇಖಾ ಉಳ್ಳಾಗಡ್ಡಿ ನಿರೂಪಿಸಿದರು. ಪ್ರಾಸ್ತಾವಿಕವಾಗಿ ಸ್ನೇಹಾ ಕಣವಿ, ಜಯಶ್ರೀ ಆದಿ ಮಾತನಾಡಿದರು. ಮಂಜುಳಾ ಪಾಚಂಗಿ ಪ್ರಾರ್ಥನೆ ಸಲ್ಲಿಸಿದರು. ಗುರುಗಳ ಸ್ಮರಣೆ ಶ್ವೇತಾ ಅರವಟಗಿಮಠ ಹಾಗೂ ಗೀತಾ ಕಣಗಿನಹಾಳ ಗೀತ ಗಾಯನದ ಮೂಲಕ ನೆರವೇರಿಸಿದರು.

ಪಿಎಸ್ಐ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ | ಡಾ.ಜಿ.ಪರಮೇಶ್ವರ ಹೇಳಿಕೆ

ಖಾಕಿ ಸೇವಾ ಧರ್ಮ ಪಾಲನೆ ಮಾಡಲಿ



◆**ಕಲಬುರಗಿ:** ಸಂಬಳಕ್ಕಾಗಿ ಖಾಕಿ ಸೇವೆ ಅಲ್ಲ ಎಂಬುದನ್ನು ಪೊಲೀಸರು ಮೊದಲು ಮನಗಾಣಬೇಕು. ಖಾಕಿ ಗೌರವದ ಸಂಕೇತವಾಗಿದೆ. ಇದು ಉದ್ಯೋಗವಲ್ಲ ಜನ ಸೇವೆಯಾಗಿದೆ ಎಂದು ರಾಜ್ಯದ ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ಮಂಗಳವಾರನಗರದಹೊರವಲಯದನಾಗನಹಳ್ಳಿ ಪೊಲೀಸ್ ತರಬೇತಿ ಮಹಾವಿದ್ಯಾಲಯದ ಮಧುಕರ ಶೆಟ್ಟಿಕವಾಯತು ಮೈದಾನದಲ್ಲಿ ನಡೆದ 13ನೇ ತಂಡದ ಪಿಎಸ್ಐ (ಸಿವಿಲ್), 12ನೇ ತಂಡದ ಆರ್‌ಎಸ್ಐ, ಸ್ಪೆಷಲ್ ಆರ್‌ಎಸ್ಐ ಹಾಗೂ 6ನೇ ತಂಡದ ಪಿಎಸ್ಐ (ಕೆಎಸ್ಐಎಸ್ಎಫ್) ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನದಲ್ಲಿ ಭಾಗವಹಿಸಿ ವಿವಿಧ ತುಕಡಿಗಳನ್ನು ವೀಕ್ಷಿಸಿದಲ್ಲದೆ, ಪ್ರಶಿಕ್ಷಣಾರ್ಥಿಗಳಿಂದ ಗೌರವ ವಂದನೆ ಸ್ವೀಕರಿಸಿ ಮಾತನಾಡಿದರು.

ಎಲ್ಲರಿಗೂ ಖಾಕಿ ಹಾಕಲು ಅವಕಾಶವಿಲ್ಲ, ಸ್ವತ 3 ಬಾರಿ ಗೃಹ ಸಚಿವನಾಗಿದ್ದರು ನನಗೆ ಈ ಅವಕಾಶ ಇಲ್ಲ, ಠಾಣೆಗೆ ಬರುವ ನೊಂದವರಿಗೆ ಕಣ್ಣೀರು ಒರೆಸುವ, ಸಮಯೋಚಿತ ಪರಿಹಾರ ಕಂಡುಕೊಳ್ಳುವ ಕೆಲಸ ನಿಮ್ಮಿಂದಾಗಬೇಕು ಎಂದರು.

ತುಳಿತಕ್ಕೊಳಗಾದಂತಹ ಬಡವರು, ಅಲ್ಪಸಂಖ್ಯಾತರು, ಎಸ್.ಸಿ-ಎಸ್.ಟಿ. ಸಮುದಾಯದ ಜನರನ್ನು ಮುಖ್ಯ ವಾಹಿನಿಗೆ ತರಲು ನೆರವಾಗುವ ಮೂಲಕ ಪೊಲೀಸರು ಸೇವಾ ಧರ್ಮ ಪಾಲಿಸಬೇಕು ಎಂದು ಪ್ರಶಿಕ್ಷಣಾರ್ಥಿಗಳಿಗೆ ಸಲಹೆ ನೀಡಿದರು.

ಪರಿಶಿಷ್ಟ ಜಾತಿಯಲ್ಲಿನ ಒಳ ಮೀಸಲಾತಿ ನ್ಯಾಯಯುತವಾಗಿ ಹಂಚಿಕೆಯಾಗಿದ್ದರಿಂದ ಇನ್ಮುಂದೆ ಪೊಲೀಸ್ ನೇಮಕಾತಿ ಮಂಡಳಿ ನೇಮಕಾತಿ ಪ್ರಕ್ರಿಯೆ ನಡೆಸಲಿದೆ ಎಂದರು.

ಕಳೆದಮೂರುವರ್ಷದಅವಧಿಯಲ್ಲಿಕೋಟ್ಯಾಂತರ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡು ಕಾನೂನು ರೀತಿಯಲ್ಲಿ ಅದನ್ನು ನಾಶಪಡಿಸಿದ್ದೇವೆ. ಡ್ರಗ್ಸ್ ಜಾಲಕ್ಕೆ ನಮ್ಮ ಯುವಕರು ಬಲಿಯಾಗುತ್ತಿರುವುದು ತುಂಬಾ ಖೇದಕರ ವಿಷಯವಾಗಿದೆ. ಡ್ರಗ್ಸ್ ಮುಕ್ತ ಕರ್ನಾಟಕ ನಮ್ಮ ಗುರಿಯಾಗಿದ್ದು, ಪೊಲೀಸ್ ಇಲಾಖೆ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ. ಸಲೀಂ, ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ವಿಪ ಸದಸ್ಯರಾದ ಜಗದೇವ ಗುತ್ತೇದಾರ, ತಿಪ್ಪಣ್ಣಪ್ಪ ಕಮಕನೂರ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ತರಬೇತಿ) ದೇವಜ್ಯೋತಿ ರೇ, ಈಶಾನ್ಯ ವಲಯದ ಐ.ಜಿ.ಪಿ ಶಾಂತನು ಸಿನ್ಹಾ, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಎಸ್.ಪಿ.ಅಡ್ಡೂರು ಶ್ರೀನಿವಾಸುಲು, ಡಿವೈಎಸ್‌ಪಿ ರಾಜಣ್ಣ ಸೇರಿದಂತೆ ಅನೇಕ ಹಿರಿಯ ಪೊಲೀಸ್ ಅಧಿಕಾರಿಗಳು, ಪ್ರಶಿಕ್ಷಣಾರ್ಥಿಗಳ ಪೋಷಕರು ಭಾಗವಹಿಸಿದ್ದರು.

ಕಲಬುರಗಿ ಪೊಲೀಸ್ ತರಬೇತಿ ಮಹಾವಿದ್ಯಾಲಯದ ಪ್ರಾಂಶುಪಾಲ ಸಿ. ಪುಟ್ಟಮಾದಯ್ಯ ಪ್ರಶಿಕ್ಷಣಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದಲ್ಲದೆ ಸಂಸ್ಥೆಯ ವರದಿ ವಾಚನ ಮಾಡಿದರು.

ಶೀಘ್ರದಲ್ಲೇ 56,834 ಹುದ್ದೆ ನೇಮಕ

◆**ಕಲಬುರಗಿ:** ರಾಜ್ಯದಲ್ಲಿ ಖಾಲಿ ಇರುವ 56,834 ಹುದ್ದೆಗಳಿಗೆ ಅತಿ ಶೀಘ್ರದಲ್ಲೇ ಅಧಿಸೂಚನೆ ಹೊರಡಿಸಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ನಗರದ ಪೊಲೀಸ್ ಆಯುಕ್ತಾಲಯದ ಕಚೇರಿಯಲ್ಲಿ ಕೆಕೆಆರ್‌ಡಿಬಿ ಅನುದಾನದಡಿಯಲ್ಲಿ ಖರೀದಿಸಲಾದ ನೂತನ ವಾಹನಗಳ ಹಸ್ತಾಂತರ ಕಾರ್ಯಕ್ರಮ ಹಾಗೂ ಇಂಟಲಿಜೆಂಟ್ ಟ್ರಾಫಿಕ್ ಮ್ಯಾನೇಜ್ಮೆಂಟ್ ಸೆಂಟರ್ ಉದ್ಘಾಟನೆ ನೆರವೇರಿಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಖಾಲಿ ಹುದ್ದೆಗಳ ಭರ್ತಿಗಾಗಿ ಒಳಮೀಸಲಾತಿ ಸಮಸ್ಯೆ ಎದುರಾಗಿತ್ತು. ಅದೀಗ ಸರ್ಕಾರ ಬಗೆಹರಿಸಿದೆ. ಈಗಾಗಲೇ ಸಾವಿರಾರು ಹುದ್ದೆಗಳ ನೇಮಕಾತಿಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದರು.

56 ಸಾವಿರ ಹುದ್ದೆಗಳಲ್ಲಿ 8 ಸಾವಿರ ಪೊಲೀಸ್ ಕಾನ್ಸ್‌ಟೇಬಲ್ ಹಾಗೂ 600 ನೂತನ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. 545 ಪಿಎಸ್ಐ ನೇಮಕಾತಿ ಪ್ರಕರಣ ಬಳಿಕ ಅವುಗಳನ್ನು ಸ್ಥಗಿತಗೊಳಿಸಿ ಮತ್ತೊಮ್ಮೆ ನೇಮಕಾತಿ ಮಾಡಿಕೊಂಡಿದ್ದೇವೆ. ಅದರ ಜೊತೆಗೆ 402 ಪಿಎಸ್ಐ ಗಳ ನೇಮಕ ಮಾಡಿಕೊಂಡು ತರಬೇತಿಗೆ ಕಳುಹಿಸಿದ್ದೇವೆ. ಹೀಗೆ ಒಟ್ಟು 947 ಸಬ್ ಇನ್ಸ್‌ಪೆಕ್ಟರ್‌ಗಳ ನೇಮಕ ಮಾಡಿದ್ದೇವೆ ಎಂದರು.

ಕೆಕೆಆರ್‌ಡಿಬಿ ಅನುದಾನದಡಿಯಲ್ಲಿ ಟ್ರಾಫಿಕ್ ಮ್ಯಾನೇಜ್ಮೆಂಟ್ ಸಿಸ್ಟಮ್, ವಿವಿಧ ವಾಹನಗಳಿಗೆ ಚಾಲನೆ ನೀಡಲಾಗಿದ್ದು ಮಂಡಳಿಯಿಂದ ಕಳೆದ ಬಾರಿ 50 ಕೋಟಿ ರೂ.ಅನುದಾನ ಕೊಟ್ಟಿದ್ದರು. ಇದೀಗ 100ಕೋಟಿ ಅನುದಾನ ಕೇಳಿದ್ದೇವೆ ಎಂದ ಅವರು, 20 ಕೋಟಿ ವೆಚ್ಚದಲ್ಲಿ 72 ವಸತಿ ಗೃಹಗಳು ನಿರ್ಮಿಸಲಾಗಿದೆ. 2030 ರವರೆಗೆ ಶೇ.80ರಷ್ಟು ಪೊಲೀಸರಿಗೆ ವಸತಿ ಸೌಲಭ್ಯ ಪೂರೈಸಲು ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಬೀದರ್ ಎಟಿಎಂ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಸಚಿವರು, ದರೋಡೆ ನಡೆಸಿದ ಆರೋಪಿಗಳು ವಿದೇಶಿಯಲ್ಲಿ ನೆಲೆಸಿದ್ದಾರೆ ಎನ್ನುವ ಮಾಹಿತಿ ಸಿಕ್ಕಿದೆ. ತನಿಖಾ ತಂಡ ಅವರ ಮೇಲೆ ಕಣ್ಣಿಟ್ಟಿದ್ದು ಶೀಘ್ರದಲ್ಲಿ ದರೋಡೆಕೋರರನ್ನು ಬಂಧಿಸಲಿದೆ. ಕರ್ನಾಟಕ ರಾಜ್ಯದ ಪೊಲೀಸ್ ಇಲಾಖೆಯು ದೇಶದಲ್ಲೇ ನಂಬರ್ ಒನ್ ಪೊಲೀಸ್ ಇಲಾಖೆ ಎಂದು ಗರಿ ಪಡೆದಿದೆ. ಇಲಾಖೆಯಲ್ಲಿ ಹಲವಾರು ಬದಲಾವಣೆ ಮಾಡಿದ್ದೇವೆ. ಪೊಲೀಸರಿಗೆ ಪಿ ಕ್ಯಾಪ್ ನೀಡುವುದರ ಮೂಲಕ ಅವರಿಗೆ ಅಧಿಕಾರಿ ಎನ್ನುವ ಮನೋಭಾವ ಮೂಡಿಸಿದ್ದೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, ಶಾಸಕ ಬಿ.ಆರ್.ಪಾಟೀಲ್, ಖನೀಜಾ ಫಾತಿಮಾ, ಎಂ.ವೈ. ಪಾಟೀಲ್, ವಿಧಾನ ಪರಿಷತ್ ಸದಸ್ಯರ ಜಗದೇವ್ ಗುತ್ತೇದಾರ್, ತಿಪ್ಪಣ್ಣಪ್ಪ ಕಮಕನೂರ್, ಸೈಯದ್ ಮೊಹಮ್ಮದ್ ಚಿಸ್ತಿ, ಮಜಹರ್ ಆಲಂ ಖಾನ್, ಕಲಬುರಗಿ ಮಹಾನಗರ ಪಾಲಿಕೆ ಪೂಜ್ಯ ಮಹಾಪೌರರಾದ ವರ್ಷಾ ರಾಜೀವ ಜಾನೆ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಂದ್ರಿಕಾ ಪರಮೇಶ್ವರ್ ಉಪಸ್ಥಿತರಿದ್ದರು.

ಹೋರಾಟ ರೂಪಿಸಲು ಸಾರ್ವಜನಿಕರ ನಿರ್ಧಾರ

ಭಾವಿಕೇರಿ ಅಣುಸ್ಥಾವರಕ್ಕೆ ತೀವ್ರ ವಿರೋಧ



◆**ಅಂಕೋಲಾ:** ತಾಲೂಕಿನ ಬಾವಿಕೇರಿಯಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಸರ್ಕಾರ ಸಿದ್ಧತೆ ನಡೆಸುತ್ತಿರುವ ಕುರಿತಂತೆ ಮಾಧ್ಯಮಗಳಲ್ಲಿ ಸುದ್ದಿಪ್ರಕಟಗೊಂಡ ಹಿನ್ನೆಲೆಯಲ್ಲಿ ಬಾವಿಕೇರಿ ಸುತ್ತಮುತ್ತಲಿನ ಗ್ರಾಮಸ್ಥರು ಮಹಾದೇವಿ ಮಂಡದ ಮನೆಯಲ್ಲಿ ಸಭೆ ಸೇರಿ ಯೋಜನೆಯ ಕುರಿತು ಕಳವಳ ವ್ಯಕ್ತಪಡಿಸಿ ಯೋಜನೆಯ ವಿರುದ್ಧ ಉಗ್ರ ಹೋರಾಟಕ್ಕೆ ನಿರ್ಧರಿಸಿದ್ದಾರೆ.

ಈಗಾಗಲೇ ಯೋಜನೆಗಳಿಂದ ಉತ್ತರ ಕನ್ನಡ ಜಿಲ್ಲೆ ಅದರಲ್ಲೂ ಕಾರವಾರ ಅಂಕೋಲಾ ಸುತ್ತಮುತ್ತಲಿನ ಪ್ರದೇಶಗಳು ಜರ್ಜರಿತವಾಗಿದ್ದು, ಮತ್ತೆ ಮಾರಕ ಯೋಜನೆಯನ್ನು ಜಾರಿಗೊಳಿಸಲು ಹೊರಟಿರುವುದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದು ಸಭೆಯಲ್ಲಿ ಆಕ್ರೋಶ ವ್ಯಕ್ತವಾಯಿತು.

ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಯೋಜನೆಯ ಕುರಿತಂತೆ ಮಾಹಿತಿ ಇದ್ದರೂ ಅದನ್ನು ಗೌಪ್ಯವಾಗಿರಿಸಿ ಬಡ ಜನರ ಬದುಕಿನ ಜೊತೆ ಆಟವಾಡುತ್ತಿದ್ದಾರೆ. ಜನ ಜೀವನ ಉಳಿಸಿಕೊಳ್ಳಲು ಯಾವುದೇ ರೀತಿಯ ಹೋರಾಟದ ಅಗತ್ಯತೆ ಇದ್ದರೂ ಅದರಿಂದ ಹಿಂದೆ ಸರಿಯುವುದಿಲ್ಲ ಎಂದು ಸಭೆಯ ಮೂಲಕ ಎಚ್ಚರಿಕೆ ನೀಡಲಾಯಿತು.

ಸ್ಥಳೀಯ ಪ್ರಮುಖ ಗ್ರಾಮ ಪಂಚಾಯತ್ ಸದಸ್ಯ ಉದಯ ವಾಮನ ನಾಯಕ ಮಾತನಾಡಿ, ಜನವಸತಿ ಇರುವ ಅತಿದೊಡ್ಡ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅಣು ಸ್ಥಾವರದಂತ ಯೋಜನೆ ಜಾರಿಯಾಗಲಿದೆ ಎನ್ನುವ ಸಂಗತಿ ಭಯಾನಕವಾಗಿದ್ದು, ಸರ್ಕಾರದ ವಿವಿಧ ಯೋಜನೆಗಳ ಪರಿಹಾರ ಇದುವರೆಗೆ ಸರಿಯಾಗಿ ದೊರಕಿಲ್ಲ. ಕೈಗಾ ಅಣು ಸ್ಥಾವರ ಯೋಜನೆ ಬಂದು ನಾಲ್ಕು ದಶಕಗಳು ಕಳೆದರೂ ಯೋಜನಾ ನಿರಾಶ್ರಿತರಿಗೆ ಉದ್ಯೋಗ ದೊರಕಿಲ್ಲ. ಕೈಗಾ ಯೋಜನೆಯಿಂದ ಕ್ಯಾನ್ಸರ್ ರೋಗ ಹೆಚ್ಚಿದ್ದು ಇದೀಗ ಬಾವಿಕೇರಿಯಲ್ಲಿ ಅಣು ಸ್ಥಾವರ ಯೋಜನೆಯ ಮೂಲಕ ಕ್ಯಾನ್ಸರ್ ಬೀಜ ಬಿತ್ತುವ ಮೂಲಕ ಜನರನ್ನು ಸಾಯಿಸುವ ತಯಾರಿ ನಡೆಸುತ್ತಿರುವಂತಿದೆ ಎಂದರು.

ಒಂದು ಪ್ರದೇಶದ ಜನಜೀವನದ ಮೇಲೆ ಪರಿಣಾಮ ಬೀರುವ ಯೋಜನೆಗಳ ಕುರಿತಂತೆ ತಮಗೆ ಗೊತ್ತಿಲ್ಲ ಎಂದು ಜಿಲ್ಲಾಧಿಕಾರಿಗಳು ಮತ್ತಿತರ ಅಧಿಕಾರಿಗಳು ಜನರನ್ನು ಕತ್ತಲಲ್ಲಿ ಇಡುವ ಕೆಲಸ ಮಾಡುತ್ತಿದ್ದು, ಈ ಭಾಗದ ಜನರು ಈಗಾಗಲೇ ವಿವಿಧ ಯೋಜನೆಗಳಿಂದ ನಿರಾಶ್ರಿತರಾಗಿದ್ದಾರೆ. ಇಲ್ಲಿ ಭೂಮಿಯ ಲಭ್ಯತೆ ಇಲ್ಲ ಎಂದು ಜಿಲ್ಲಾಧಿಕಾರಿ ಸರ್ಕಾರಕ್ಕೆ ಮನವರಿಕೆ ಮಾಡಬೇಕಿತ್ತು ಎಂದ ಅವರು, ಮುಂದಿನ ದಿನಗಳಲ್ಲಿ ಹೋರಾಟದ ರೂಪರೇಷೆಗಳು ನಡೆಯಲಿದ್ದು ಇಂಥ ಮಾರಕ ಯೋಜನೆ ವಿರೋಧಿಸಿ ಜನಪ್ರತಿನಿಧಿಗಳು ಹೋರಾಟಕ್ಕಿಳಿಯಲಿ ಎಂದು ಒತ್ತಾಯಿಸಿದರು.

ಬಿಜೆಪಿ ಪ್ರಮುಖ ಸಂಜಯ ನಾಯ್ಕ ಮಾತನಾಡಿ, ಯೋಜನೆ ವಿರೋಧಿಸಲು ಜಿಲ್ಲೆಯ ಜನ ಒಂದಾಗಬೇಕಿದೆ ಎಂದರು. ಸಾಮಾಜಿಕ ಕಾರ್ಯಕರ್ತ ಕೆ.ಆರ್.ನಾಯಕ ಮಾತನಾಡಿ, ಯೋಜನೆ ಪ್ರಸ್ತಾವನೆ ಹಂತದಲ್ಲಿರುವಾಗಲೇ ಕಾನೂನಾತ್ಮಕ ಹೋರಾಟ ಅಗತ್ಯ ಎಂದರು.

ಸ್ಥಳೀಯ ಪ್ರಮುಖ ಮಂಜುನಾಥ ನಾಯ್ಕ,ರಾಮಕೃಷ್ಣ ನಾಯಕ, ಮಹೇಶ ಗೌಡ, ರಾಜೇಂದ್ರ ಗುನಗಾ ಮಾತನಾಡಿದರು. ಬಾವಿಕೇರಿ,ಬೆಲೇಕೇರಿ, ಬಡಗೇರಿ, ಕೇಣಿ ಸುತ್ತ ಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.

> **ವಾಣಿಜ್ಯ ಬಂದರು ಯೋಜನೆಗೂ ಅಣು ವಿದ್ಯುತ್ ಸ್ಥಾವರಕ್ಕೂ ಸಂಬಂಧವಿದ್ದು, ಜೆ.ಎಸ್.ಡಬ್ಲ್ಯೂ ಕಂಪನಿ ಇರುವಲ್ಲೆಲ್ಲ ಅಣು ವಿದ್ಯುತ್ ಸ್ಥಾವರವಿದೆ ಬಂದರು ಯೋಜನೆಯ ಹಿಂದಿನ ಉದ್ದೇಶವೇ ಪರಮಾಣು ವಿದ್ಯುತ್ ಘಟಕ ಇದರ ಜೊತೆಗೆ 13 ಪೆಟ್ರೋಕೆಮಿಕಲ್ ಘಟಕಗಳು ಬರಲಿವೆ ಗೋಕರ್ಣ ರಾಮತೀರ್ಥದಿಂದ ಚೆಂಡಿಯಾವರೆಗಿನ 103 ಹಳ್ಳಿಗಳನ್ನು ಯೋಜನೆಗಾಗಿ ಬಳಸುವ ಎಲ್ಲಾ ತಯಾರಿ ನಡೆದಿದೆ. ಐದು ಸಾವಿರ ಎಕರೆ ಜಮೀನು ಸ್ವಾಧೀನ ಪಡಿಸುವ ಹುನ್ನಾರ ಗೌಪ್ಯವಾಗಿ ನಡೆದಿದೆ. ಬಡ ಜನರು ಪ್ರಾಣಿ ಪಕ್ಷಿಗಳು ಯಾರೂ ಬದುಕುವುದಿಲ್ಲ.**
> ■ **ಸಂಜೀವ ಬಲೆಗಾರ, ಉತ್ತರ ಕನ್ನಡ ಉಳಿಸಿ ಹೋರಾಟ ಸಮಿತಿಯ ಪ್ರಮುಖ**

ಕಿರುಸುದ್ದಿ

ಸಂಪುಟ ಸರ್ಜರಿಯಾದರೂ ಸಚಿವನಾಗಿರುವೆ: ತಂಗಡಗಿ

◆**ಕೊಪ್ಪಳ:** ಜನರ ಆಶೀರ್ವಾದ, ಕನಕ ಚಲಪತಿ ಕೃಪೆಯಿಂದ ಸಚಿವ ಸಂಪುಟ ಸರ್ಜರಿ ಬಳಿಕವೂ ಸಚಿವನಾಗಿರುತ್ತೇನೆ ಎಂಬ ಭರವಸೆ ನನಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ವಿಶ್ವಾಸ ವ್ಯಕ್ತಪಡಿಸಿದರು.



ಕೊಪ್ಪಳದಲ್ಲಿನ ಕಾರ್ಯಕ್ರಮದ ಬಳಿಕ ಸುದ್ದಿಗಾರರು, ಸಚಿವ ಸಂಪುಟ ಸರ್ಜರಿ ಬಳಿಕ ನಿಮ್ಮ ಸ್ಥಾನ-ಮಾನದ ಕತೆ ಏನು? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಸಚಿವ ಸುಂಪಟದ ಸರ್ಜರಿ ಅವಶ್ಯಕತೆ ಇದೆ. ಏಳೆಂಟು ವರ್ಷಗಳಿಂದ ಶಾಸಕರಾಗಿರುವವರಿಗೆ ಸಚಿವರಾಗುವ ಆಸೆ ಇದ್ದೇ ಇದೆ. ಹೀಗಾಗಿ ಹೈಕಮಾಂಡ್ ಭೇಟಿಗೆ ಹೋಗುವುದು ಸಹಜ. ಜನರ ಆಶೀರ್ವಾದ, ಕನಕ ಚಲಪತಿಯ ಕೃಪೆಯಿಂದ ಮುಂದೆ ಸಹ ಸಚಿವ ಸ್ಥಾನದಲ್ಲಿ ಮುಂದುವರಿಯತ್ತೇನೆ ಎಂದರು. ವರಿಷ್ಠರು ಹೈಕಮಾಂಡ್ ಭೇಟಿ ಮಾಡುವುದರಲ್ಲಿ ತಪ್ಪೇನಿದೇ?, ಕೇಂದ್ರದ ಎಚ್.ಡಿ.ಕುಮಾರಸ್ವಾಮಿ ಅಥವಾ ಅಮಿತ್ ಶಾ ಅವರನ್ನು ಭೇಟಿ ಮಾಡಲು ನಮ್ಮ ಪಕ್ಷದವರು ತೆರಳಿಲ್ಲ, ಕಾಂಗ್ರೆಸ್‌ದವರನ್ನು ಭೇಟಿ ಮಾಡುವುದರಲ್ಲಿ ತಪ್ಪೇನಿದೆ?, ರಾಜಕಾರಣ ಎಂದ ಮೇಲೆ, ಕೇಳುವುದು, ಹೇಳುವುದು ಹೀಗೆ ಹಲವು ವಿಚಾರಗಳಿರುತ್ತವೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರದ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದಾರೆ. ಇದರಲ್ಲಿ ತಪ್ಪೇನಿದೆ? ಎಂದು ಪತ್ರಕರ್ತರನ್ನೇ ಮರು ಪ್ರಶ್ನಿಸಿದರು.

‘ಇನ್‌ಕಾಮೆಕ್ಸ್-2026 ಬೃಹತ್ ವಸ್ತುಪ್ರದರ್ಶನ’ | ಸಂಸದ ಶೆಟ್ಟರ ಅಭಿಪ್ರಾಯ

ಭೂಮಿ ದರ ಕಡಿಮೆಯಾದರೆ ಕೈಗಾರಿಕಾಭಿವೃದ್ಧಿ

◆**ಹುಬ್ಬಳ್ಳಿ:** ಸುತ್ತಮುತ್ತಲಿನ ರಾಜ್ಯದಲ್ಲಿ ಉದ್ಯಮಗಳು ಅಭಿವೃದ್ಧಿ ಹೊಂದುತ್ತಿದ್ದು, ಉದ್ಯಮಿಗಳು ಉದ್ಯಮ ಆರಂಭಿಸಲು ಮುಂದೆ ಬರುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಅದು ಆಗುತ್ತಿಲ್ಲ. ಸರ್ಕಾರ ಭೂಮಿಯ ದರ ಕಡಿಮೆ ಮಾಡಿದರೆ ಇಲ್ಲಿಯೂ ಕೈಗಾರಿಕಾಭಿವೃದ್ಧಿ ಆಗಲು ಸಾಧ್ಯ ಎಂದು ಸಂಸದ ಜಗದೀಶ ಶೆಟ್ಟರ ತಿಳಿಸಿದರು.

ನಗರದ ಎಪಿಎಂಸಿ ಆವರಣದ ವಿವಿಧೋದ್ದೇಶ ಕೈಗಾರಿಕಾ ಮತ್ತು ವಾಣಿಜ್ಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹಮ್ಮಿಕೊಂಡಿರುವ ‘ಇನ್‌ಕಾಮೆಕ್ಸ್-2026 ಬೃಹತ್ ವಸ್ತುಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಆಂಧ್ರಪ್ರದೇಶದಲ್ಲಿ ಭೂಮಿ ದರ ಕಡಿಮೆ ನೀಡಿದ್ದರಿಂದ ಸಾಕಷ್ಟು ಉದ್ಯಮಗಳು ಆರಂಭವಾಗುತ್ತಿವೆ. ನಮ್ಮ ರಾಜ್ಯದಲ್ಲಿ ಸರ್ಕಾರ ಉದ್ಯಮಿಗಳಿಗೆ ಸಹಕರಿಸಿ ಕೈಗಾರಿಕೋದ್ಯಮಕ್ಕೆ ಪ್ರೋತ್ಸಾಹ ನೀಡಬೇಕು. ಎಂಎಂಸಿಜಿ ಕ್ಲಸ್ಟರ್ ಸ್ಥಾಪಿಸಲು ಭೂಮಿ ದರ ಹೆಚ್ಚಾಗಿರುವುದು ಕಾರಣವಾಗಿದೆ. 95 ಲಕ್ಷವಿದ್ದ ಭೂಮಿ ಈಗ 1.70 ಕೋಟಿ ಆಗಿದೆ. ಇದರಿಂದ ಉದ್ಯಮಿದಾರರು ಹಿಂದೇಟು ಹಾಕುತ್ತಿದ್ದಾರೆ ಎಂದರು.

ಎಫ್‌ಸಿಜಿ ಕ್ಲಸ್ಟರ್ ಆರಂಭವಾದರೆ ಸಾಕಷ್ಟು ಜನರಿಗೆ ಉದ್ಯೋಗ ದೊರೆಯಲಿದೆ. ಕೈಗಾರಿಕಾಭಿವೃದ್ಧಿ ಆಗಲಿವೆ. ಈ ನಿಟ್ಟಿನಲ್ಲಿ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಸರ್ಕಾರ ಗಮನ ಸೆಳೆಯಬೇಕು. ಬೆಂಗಳೂರು ಹೊರತು ಪಡಿಸಿ ಹುಬ್ಬಳ್ಳಿ-ಧಾರವಾಡ ಹಾಗೂ ಬೆಳಗಾವಿ ನಗರಗಳು ಅಭಿವೃದ್ಧಿಯಾಗಬೇಕು. ಈ ಮೂರು ನಗರಗಳ ಸೇರಿ ತ್ರಿವೇಣಿ ನಗರಗಳ ಮಾಡಬೇಕು ಎಂದು ತಿಳಿಸಿದರು.

ಈ ಭಾಗದಲ್ಲಿ ಸಾರಿಗೆ, ರಸ್ತೆ, ರೈಲ್ವೆ ಹಾಗೂ ವಿಮಾನ ಸಂಪರ್ಕವಿದೆ. ಕೈಗಾರಿಕೋದ್ಯಮಿಗಳು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಇನ್ನೂ ರಾಜ್ಯ ಸರ್ಕಾರ ಎಫ್‌ಸಿಜಿ ಕ್ಲಸ್ಟರ್ ಆರಂಭಿಸಲು ಸಹಕಾರ ನೀಡಿದರೆ ಬಿಟ್ಟು ಹೋಗಿರುವ ಉದ್ಯಮಿಗಳ ಮನವಲಿಸಿ ನಾನು ಕರೆ ತರುತ್ತೇನೆ ಎಂದು ಹೇಳಿದರು.

ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಉತ್ತರ ಕರ್ನಾಟಕ ಅಭಿವೃದ್ಧಿ ಹೊಸ ಯೋಜನೆಗಳ ರೂಪಿಸಬೇಕು. ಧಾರವಾಡ, ಕಿತ್ತೂರ ಮೂಲಕ ಬೆಳಗಾವಿ ರೈಲು ಮಾರ್ಗಕ್ಕೆ ರಾಜ್ಯ ಸರ್ಕಾರ ಭೂ ಸ್ವಾಧೀನ ಪ್ರಕ್ರಿಯೆ ಆದಷ್ಟು ಬೇಗ ಪೂರ್ಣಗೊಳಿಸಬೇಕು. 2-3 ತಿಂಗಳಲ್ಲಿ ಕಾಮಗಾರಿ ಆರಂಭಿಸಲಾಗುವುದು ಎಂದು ತಿಳಿಸಿದರು.



> **ಉತ್ತರ ಕರ್ನಾಟಕ ಭಾಗದಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪಿಸಲು ನಾನು ಪ್ರಯತ್ನ ಮಾಡುತ್ತಿದ್ದೇನೆ. ಇದರಿಂದ ಸಂಪರ್ಕ ಹೆಚ್ಚಾಗಲಿದ್ದು, ಅಭಿವೃದ್ಧಿ ಸಹಕಾರ ಆಗಲಿದೆ.**
> ■ **ಜಗದೀಶ ಶೆಟ್ಟರ, ಸಂಸದ**

ರಾಜ್ಯದಲ್ಲಿ 57 ತಾಲೂಕು ಅಭಿವೃದ್ಧಿ ಕಂಡಿಲ್ಲ

ಡಿ.ಎಂ.ನಂಜುಂಡಪ್ಪ ಅವರ ನೇತೃತ್ವದ ಸಮಿತಿಯ ಪ್ರಕಾರ 114 ತಾಲೂಕುಗಳ ಅಭಿವೃದ್ಧಿ ಗುರುತಿಸಿ ಅಭಿವೃದ್ಧಿ ಪಡಿಸಲು 35 ಸಾವಿರ ಕೋಟಿ ಖರ್ಚು ಮಾಡಲಾಗಿದೆ. ಆದರೆ, ಇನ್ನೂ 57 ತಾಲೂಕುಗಳು ಅಭಿವೃದ್ಧಿ ಕಂಡಿಲ್ಲ. ಅದರಲ್ಲಿ ಉತ್ತರ ಕರ್ನಾಟಕ ಭಾಗದ 43 ತಾಲೂಕುಗಳಿರುವುದು ಬೇಸರ ಸಂಗತಿ ಎಂದು ಸಂಸದ ಜಗದೀಶ ಶೆಟ್ಟರ ತಿಳಿಸಿದರು.

ಕಾರ್ಯಕ್ರಮ ಯಶಸ್ವಿ

ಇನ್ ಕಾಮೆಕ್ಸ್-2026 ಬೃಹತ್ ಕೈಗಾರಿಕಾ ಪ್ರದರ್ಶನದ ಅಂಗವಾಗಿ "ಗ್ಲೋಬಲ್ ಟ್ರೇಡ್ ಕನೆಕ್ಟ್" ಕಾರ್ಯಕ್ರಮವನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಜಿ.ಕೆ. ಆದಪ್ಪಗೌಡರವರು ವಹಿಸಿಕೊಂಡರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಹಾಗೂ ಭಾಷಣಕಾರರಾಗಿ ವ್ಹಿಟಿಪಿಸಿ, ಬೆಂಗಳೂರು ಜಂಟಿ ನಿರ್ದೇಶಕ ಬಾಬು ನಾಗೇಶ, ವಿದೇಶಿ ವ್ಯಾಪಾರ ಸಹಾಯಕ ಮಹಾನಿರ್ದೇಶಕ ಆದರ್ಶ ಕೆ., ಹಾಗೂ ನಾವಟೀಸ್ ಸೊಲ್ಯೂಷನ್ ಸಂಸ್ಥೆಯ ಸ್ಥಾಪಕರು ಮತ್ತು ಸಿಇಓ ಸತೀಶ್ ಕೋಟ್ ಅವರು ಭಾಗವಹಿಸಿ ಮಾರ್ಗದರ್ಶನ ನೀಡಿದರು.

ಅಮರಗೋಳ ಎಪಿಎಂಸಿಯಲ್ಲಿ ವಾಣಿಜ್ಯೋದ್ಯಮ ಸಂಸ್ಥೆಯ ವಿವಿಧೋದ್ದೇಶ ಕೈಗಾರಿಕಾ ಮತ್ತು ವಾಣಿಜ್ಯ ವಸ್ತು ಪ್ರದರ್ಶನ ಕೇಂದ್ರ ಸ್ಥಾಪಿಸಲಾಗಿದ್ದು, ಇದು ಅದಕೊಂಡಷ್ಟು ಅಭಿವೃದ್ಧಿಯಾಗಿಲ್ಲ. ಸಂಸ್ಥೆ ಅವರು ನಿರಂತರ ಕಾರ್ಯಕ್ರಮಗಳನ್ನು ಇಲ್ಲಿ ಮಾಡಬೇಕು ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ, ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಜೆ.ಕೆ.ಆದಪ್ಪಗೌಡರ, ಇನ್‌ಕಾಮೆಕ್ಸ್ ಅಧ್ಯಕ್ಷ ಮಹಾದೇವ ಕರಮರಿ, ಪ್ರವೀಣ ಅಗಡಿ, ಪ್ರಕಾಶ ಶೃಂಗೇರಿ, ಸಿದ್ದೇಶ್ವರ ಕಮ್ಮಾರ, ಉದಯ ವೆರ್ಣೇಕರ, ಬಸವರಾಜ ವಾಲಿಕರ ಇದ್ದರು.

ಒಳಮೀಸಲಾತಿ ಜಾರಿಯಾಗದಿದ್ದರೆ ಹೋರಾಟ: ಸಂಸದ ಕಾರಜೋಳ

◆**ಬಾಗಲಕೋಟೆ:** ಒಳಮೀಸಲಾತಿಯನ್ನು ತಕ್ಷಣ ಸರ್ಕಾರ ಸರಿಪಡಿಸದಿದ್ದರೆ ರಾಜ್ಯಾದ್ಯಂತ ಹೋರಾಟ ಮಾಡಬೇಕಾಗುತ್ತದೆ ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಎಚ್ಚರಿಕೆಯನ್ನು ನೀಡಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವರಿಗೆ ತವರು ಮನೆ ಗಂಡನ ಮನೆ ವ್ಯತ್ಯಾಸ ಗೊತ್ತಿಲ್ಲ, ಅಂತಹವರು ಒಳಮೀಸಲಾತಿ ಜಾರಿ ಸ್ವಾಗತ ಮಾಡಿದ್ದಾರೆ ಎಂದು ಹೇಳಿದರು. ಒಳ ಮೀಸಲಾತಿಯನ್ನು ಜಾರಿ ಮಾಡಬೇಕು ಎಂದು 30 ವರ್ಷದಿಂದ ಹೋರಾಟ ಮಾಡಿಕೊಂಡ ಬರಲಾಗಿದೆ. ಜನರಿಗೆ ಸಾಮಾಜಿಕ ನ್ಯಾಯ ಕೊಡಿಸಲು ಆಗದವರು ಅಹಿಂದ ನಾಯಕ ಎಂದು ಹೇಗೆ ಹೇಳಿಕೊಳ್ಳುತ್ತಿರಿ ಎಂದರು.



ಒಳಮೀಸಲಾತಿ ಜಾರಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ವಿಶೇಷ ಸಂಪುಟ ಸಭೆ ಕರೆದು ಒಳ ಮೀಸಲಾತಿ ನಿರ್ಣ ಮಾಡಿದ್ದು ಒಳಮೀಸಲಾತಿಯೇ ಅಲ್ಲ, ಎಷ್ಟೇ ಹುದ್ದೆಗಳು ಇದ್ದರೂ ಒಳಮೀಸಲಾತಿ ಅನ್ವಯವಾಗಬೇಕು. 15ಕ್ಕಿಂತಕಡಿಮೆಇದ್ದರೆಮೀಸಲಾತಿ ಅನ್ವಯವಾಗುವುದಿಲ್ಲ ಎಂದರೆ ಹೇಗೆ ಎಂದರು.

ಮೈಸೂರಿನಲ್ಲಿಯೇ ತಾರತಮ್ಯವಾಗಿದೆ. 47 ಜನ ಪ್ರೊಫೆಸರ್ ಇದ್ದರೆ 43 ಜನ ಒಂದೇ ಜಾತಿಯವರು ಇದ್ದಾರೆ. ಒಂದು ವಡ್ಡರ, ಮೂವರು ಮಾದಿಗರು ಮಾತ್ರ ಇರುವುದು ನೋಡಿದರೆ ಇದು ಸಾಮಾಜಿಕ ನ್ಯಾಯವೇ ಎಂದು ಸಿಎಂರನ್ನು ಪ್ರಶ್ನಿಸಿದರು.

ರಾಜ್ಯದಲ್ಲಿ ಒಳಮೀಸಲಾತಿ ಜಾರಿಯಾದ ಬಳಿಕ ಕೊರಮ, ಕೊರಚ, ಲಂಬಾಣಿ ಸೇರಿದಂತೆ ಇನ್ನಿತರ ಸಮುದಾಯದವರು ಸರ್ಕಾರದ ಮೇಲೆ ಸಿಟ್ಟಾಗಿದ್ದು ಶೀಘ್ರದಲ್ಲೇ ಒಳಮೀಸಲಾತಿ ಜಾರಿ ಸರಿಯಾಗದಿದ್ದರೆ ಇವೆಲ್ಲ ಸಮುದಾಯದವರು ಸರ್ಕಾರದ ವಿರುದ್ಧ ಹೋರಾಟಕ್ಕೆ ಅಣಿಯಾಗಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ತಮಗೆ ಬೇಕಾದಂತೆ ಸಿದ್ಧಪಡಿಸಿರುವ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ ನೇತೃತ್ವದಲ್ಲಿ ವರದಿ ತರಿಸಿಕೊಳ್ಳುವ ಅವಶ್ಯಕತೆ ಇದ್ದರೆ ನ್ಯಾ.ನಾಗಮೋಹನ್ ದಾಸ್, ನ್ಯಾ.ಸದಾಶಿವ ಆಯೋಗದ ವರದಿ, ಕಾನೂನು ಮಂತ್ರಿ ಮಾಧವಸ್ವಾಮಿ ನೇತೃತ್ವದ ವರದಿಯನ್ನು ಒಳಮೀಸಲಾತಿ ಕುರಿತು ಸರ್ಕಾರಕ್ಕೆ ಸಲ್ಲಿಸಿದ್ದರೂ ಇವೆಲ್ಲಾ ಅವೈಜ್ಞಾನಿಕ ಎಂದು ರಾಜ್ಯದ ಜನರಿಗೆ ತಿಳಿಸಬೇಕು ಎಂದು ಆಗ್ರಹಿಸಿದರು. ವಿಧಾನಸಭೆಯ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ, ಬಿಜೆಪಿ ನಗರ ಅಧ್ಯಕ್ಷ ಬಸವರಾಜ ಹುನಗುಂದ ಪತ್ರಿಕಾಗೋಷ್ಠಿಯಲ್ಲಿದ್ದರು.

ಸೃಷ್ಟಿ ನಾವೀನ್ಯತಾ ಕಾರ್ಯಕ್ರಮ | ವಿಜ್ಞಾನಿ ಡಾ.ದಾರುಕೇಶ ಅಭಿಮತ

ಬಾಹ್ಯಾಕಾಶದಲ್ಲಿ ಭಾರತ ಸಾರ್ವಭೌಮ

◆**ಧಾರವಾಡ:** ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಜಗತ್ತೆ ಬೆರಗಾಗುವಂತಹ ಸಾಧನೆ ಮಾಡಿದೆ. ಈ ಯಶಸ್ಸಿನ ಹಿಂದೆ ವಿಜ್ಞಾನಿಗಳ ಕಠಿಣ ಪರಿಶ್ರಮ ಮತ್ತು ಸ್ವದೇಶಿ ತಂತ್ರಜ್ಞಾನದ ಬಲವಿದೆ ಎಂದು ಇಸ್ರೋ ವಿಜ್ಞಾನಿ ಡಾ. ಬಿ.ಎಚ್.ಎಂ.ದಾರುಕೇಶ ಅಭಿಪ್ರಾಯಪಟ್ಟರು.

ನಗರದ ದವಳಗಿರಿಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಅಭಿಯಾಂತ್ರಿಕ ಮತ್ತು ತಾಂತ್ರಿಕ ಕಾಲೇಜಿನಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮಂಗಳವಾರ ಏರ್ಪಡಿಸಿದ ಸೃಷ್ಟಿ-2026ರ ನಾವೀನ್ಯತಾ ವಿನಿಮಯ ಕಾರ್ಯಕ್ರಮ ಅವರು ಮಾತನಾಡಿದರು.

ಚಂದ್ರಯಾನ ಮತ್ತು ಮಂಗಳಯಾನ ಯಶಸ್ವಿ ಮೂಲಕ ಭಾರತ ಬಾಹ್ಯಾಕಾಶ ರಂಗದಲ್ಲಿ ಮುಂಚೂಣಿಯಲ್ಲಿದೆ. ಭವಿಷ್ಯದಲ್ಲಿ ಗಗನಯಾನ ಮಹತ್ವಾಕಾಂಕ್ಷೆಯ ಯೋಜನೆಗಳ ಪಾಲ್ಗೊಳ್ಳಲು ಯುವ ವಿಜ್ಞಾನಿಗಳು ಸನ್ನದ್ಧರಾಗರಬೇಕು ಎಂದು ಸಲಹೆ ನೀಡಿದರು.

ರಾಕೆಟ್ ತಂತ್ರಜ್ಞಾನ, ಉಪಗ್ರಹಗಳ ಕಾರ್ಯವೈಖರಿ ಮತ್ತು ಬಾಹ್ಯಾಕಾಶ ಕ್ಷೇತ್ರದ ಉದ್ಯೋಗ ಅವಕಾಶಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರ ಡಾ.ದಾರುಕೇಶ, ತಾಂತ್ರಿಕ ನೈಪುಣ್ಯತೆ, ಸಂಶೋಧನಾಸಕ್ತಿ ಬೆಳೆಸಿಕೊಳ್ಳಲು ಸಲಹೆ ನೀಡಿದರು.



ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮಾತನಾಡಿ, ದೇಶದ ಅಭಿವೃದ್ಧಿಗೆ ತಂತ್ರಜ್ಞಾನ ದೊಡ್ಡ ಆಯುಧ. ಹೀಗಾಗಿ ವಿದ್ಯಾರ್ಥಿಗಳು ಮೇಕ್ ಇನ್ ಇಂಡಿಯಾ, ಮೇಡ್ ಇನ್ ಇಂಡಿಯಾ ಮೂಲಕ ಹೊಸ ತಂತ್ರಜ್ಞಾನ ಅವಿಷ್ಕರಿಸಬೇಕು ಎಂದು ಸಲಹೆ ನೀಡಿದರು.

ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಉಕುಲಪತಿ ಡಾ.ವಿದ್ಯಾ ಶಂಕರ್ ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ದೊಡ್ಡದಿದೆ. ಈ ಕಾರಣಕ್ಕೆ ಅಂಕಗಳಿಕೆಗೆ ಓದದೆ, ಪ್ರಾಯೋಗಿಕ ಜ್ಞಾನಕ್ಕೆ ಒತ್ತು ನೀಡುವಂತೆ ಹೇಳಿದರು.

ಸೃಷ್ಟಿ-2026 ವೇದಿಕೆಗಳು ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆ ಹೊರತರಲು ಸಹಕಾರಿ. ಪ್ರತಿ ಸಣ್ಣ ಯಡಿಯಾ ಸಹ ಭವಿಷ್ಯದಲ್ಲಿ ದೊಡ್ಡ ತಾಂತ್ರಿಕ ಕ್ರಾಂತಿಗೆ ಕಾರಣವಾಗಬಹುದು. ಛಲವಿದ್ದರೆ, ವಿಜ್ಞಾನ ಕ್ಷೇತ್ರದಲ್ಲಿ ಅದ್ಭುತ ಸೃಷ್ಟಿಸಲು ಸಾಧ್ಯ ಎಂದರು.

ಎಬಿವಿಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಆಶಿಷ್ ಚವ್ಹಾಣ ಮಾತನಾಡಿ, ಮಾನವ ಅಭಿವೃದ್ಧಿ ಸಂಶೋಧನೆ ಹಾಗೂ ನಾವೀನ್ಯತೆಯಿಂದ ಪ್ರೇರಿತವಾಗಿದೆ. ದೇಶದ ಅಭಿವೃದ್ಧಿ ಮತ್ತು ಮನುಕುಲದ ಕಲ್ಯಾಣಕ್ಕೆ ತಾಂತ್ರಿಕತೆ ಸಂಶೋಧಿಸಲು ಹೇಳಿದರು. ಎಬಿವಿಪಿ ರಾಜ್ಯಾಧ್ಯಕ್ಷ ಡಾ.ರವಿ ಮಂಡ್ಯ, ಕಾರ್ಯದರ್ಶಿ ಗೋಪಿ ರಂಗಸ್ವಾಮಿ, ಎಸ್ಡಿಎಂ ಸೊಸೈಟಿಯ ಕಾರ್ಯದರ್ಶಿ ವಿ.ಜೀವಂದರಕುಮಾರ್, ಕಾಲೇಜಿನ ಪ್ರಾಚಾರ್ಯ ಪ್ರೊ. ರಮೇಶ ಚಕ್ರಸಾಲಿ, ಪ್ರೊ.ಇಂದಿರಾ ಉಮರ್ಜಿ, ಪ್ರೊ.ಸಂಧ್ಯಾ ಇದ್ದರು.

> **ಇಸ್ರೋ ಬಳಸುವ ಬಹುಪಾಲು ಉಪಕರಣಗಳು ಭಾರತದಲ್ಲೇ ತಯಾರಾಗುತ್ತಿವೆ. ರಕ್ಷಣಾ ಕ್ಷೇತ್ರ ಮತ್ತು ಬಾಹ್ಯಾಕಾಶ ಕ್ಷಾತ್ರದಲ್ಲಿ ಆತ್ಮನಿರ್ಭರತೆ ಸಾಧಿಸಲು ಯುವ ಎಂಜನಿರ್‌ಗಳ ಕೊಡುಗೆ ಅಗತ್ಯ. ಸ್ವದೇಶಿ ತಂತ್ರಜ್ಞಾನ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕು.**
> ■ **ಡಾ.ಬಿ.ಎಚ್.ಎಂ.ದಾರುಕೇಶ, ಇಸ್ರೋದ ವಿಜ್ಞಾನಿ**

ಖರ್ಗೆ ಭೇಟಿಯಾದ ಜಾರಕಿಹೊಳಿ

◆**ಬೆಳಗಾವಿ:** ರಾಜ್ಯದಲ್ಲಿ ನಾಯಕತ್ವದ ಕುರಿತು ಹಬ್ಬಿರುವ ಗೊಂದಲಗಳಿಂದ ಪಕ್ಷಕ್ಕೆ ಹಾನಿಯಾಗುತ್ತಿದೆ. ಆದ ಕಾರಣ ಹೈಕಮಾಂಡ್ ಮಧ್ಯಪ್ರವೇಶಿಸಿ ಈ ಗೊಂದಲಗಳಿಗೆ ಕೂಡಲೇ ಬ್ರೇಕ್ ಹಾಕಬೇಕೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಮಾಡಿರುವುದಾಗಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಬಳಿಕ ಸಚಿವ ಸತೀಶ ಜಾರಕಿಹೊಳಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದ ರಾಜಕೀಯ ಗೊಂದಲಗಳ ಬಗ್ಗೆ ಹೈಕಮಾಂಡ್ ಶೀಘ್ರವೇ ತೀರ್ಮಾನಕೈಗೊಳ್ಳಬೇಕು. ನಾಯಕತ್ವ ಮತ್ತು ಅಧಿಕಾರ ಹಸ್ತಾಂತರದ ಗೊಂದಲಗಳನ್ನು ಮೇ ಅಂತ್ಯದೊಳಗೆ ಬಗೆಹರಿಸಬೇಕು. ವಿಳಂಬವಾದಷ್ಟು ಪಕ್ಷಕ್ಕೆ ಹೆಚ್ಚು ಹಾನಿಯಾಗಲಿದೆ ಎಂದು ತಿಳಿಸಿದ್ದಾಗಿ ಅವರು ಹೇಳಿದರು. ಇತರ ರಾಜ್ಯಗಳ ಚುನಾವಣಾ ಫಲಿತಾಂಶ ಪ್ರಕಟವಾದ ತಕ್ಷಣವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರನ್ನು ದೆಹಲಿಗೆ ಕರೆಸಿ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸುವಂತೆ ಹೈಕಮಾಂಡ್‌ಗೆ ಮನವಿ ಮಾಡಿದ್ದೇವೆ. ಸಂಪುಟ ವಿಸ್ತರಣೆ ಮತ್ತು ಪುನರ್ ರಚನೆಯ ಬಗ್ಗೆ ಹೈಕಮಾಂಡ್ ಈ ಹಿಂದೆಯೇ ಭರವಸೆ ನೀಡಿತ್ತು. ಪಕ್ಷಕ್ಕಾಗಿ ದುಡಿದವರಿಗೆ ನಿಗಮ ಮಂಡಳಿಗಳಲ್ಲಿ ಸ್ಥಾನ ನೀಡಬೇಕು ಎಂಬ ಚರ್ಚೆ ನಡೆಸಿದ್ದಾಗಿ ತಿಳಿಸಿದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ನಿರ್ಧಾರ ಹೈಕಮಾಂಡ್‌ಗೆ ಬಿಟ್ಟಿದ್ದು, ಆದರೆ ಈ ಬಗ್ಗೆ ನಡೆಯುತ್ತಿರುವ ಅನಗತ್ಯ ಚರ್ಚೆಗಳು ನಿಲ್ಲಬೇಕು ಎಂಬುದು ನಮ್ಮ ಕಳಕಳಿಯಾಗಿದೆ ಎಂದು ಮಾಧ್ಯಮಗಳಿಗೆ ಸ್ಪಷ್ಟಪಡಿಸಿದರು. ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಇದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi-580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ವಾರಸುದಾರರಿಗೆ ಮೊಬೈಲ್ ಒಪ್ಪಿಸಿದ ಪೊಲೀಸರು



ದಾಂಡೇಲಿ: ನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಮೊಬೈಲ್ ಕಳೆದು ಹೋಗಿರುವ ಬಗ್ಗೆ ಪೊಲೀಸ್ ಠಾಣೆಯಲ್ಲಿ ಕೆಲ ದಿನಗಳ ಹಿಂದೆ ದಾಖಲಾಗಿದ್ದ ದೂರಿಗೆ ಸಂಬಂಧಿಸಿದಂತೆ ಡಿವೈಎಸ್ಪಿ ಶಿವಾನಂದ ಮದರಕಂಡಿ ಹಾಗೂ ಸಿಪಿಐ ಶಿವಾನಂದ ಅಂಬಿಗೇರ ಅವರ ಮಾರ್ಗದರ್ಶನದಲ್ಲಿ ಪಿಎಸ್ಐಗಳಾದ ಅಮೀನ್ ಅತ್ತಾರ ಮತ್ತು ಕಿರಣ್ ಪಾಟೀಲ್ ಅವರ ನೇತೃತ್ವದಲ್ಲಿ ತನಿಖೆಗಿಳಿದ ಪೊಲೀಸರು ಕಳೆದು ಹೋಗಿದ್ದ ಮೊಬೈಲ್'ಗಳನ್ನು ಪತ್ತೆ ಹಚ್ಚಿ, ನಗರ ಪೊಲೀಸ್ ಠಾಣೆಯಲ್ಲಿ ವಾರಸುದಾರರಿಗೆ ಒಪ್ಪಿಸುವ ಮೂಲಕ ಶ್ಲಾಘನೆಗೆ ಪಾತ್ರರಾಗಿದ್ದಾರೆ.

ಕಳೆದು ಹೋಗಿದ್ದ ಒಟ್ಟು 6 ಮೊಬೈಲ್‌ಗಳನ್ನು ಆಯಾಯ ಮೊಬೈಲ್‌ಗಳ ವಾರಸುದಾರರಿಗೆ ಡಿವೈಎಸ್ಪಿ ಶಿವಾನಂದ ಮದರಕಂಡಿಯವರು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಿಪಿಐ ಶಿವಾನಂದ ಅಂಬಿಗೇರ, ಪಿಎಸ್‌ಐಗಳಾದ ಅಮೀನ್ ಅತ್ತಾರ ಮತ್ತು ಕಿರಣ್ ಪಾಟೀಲ್ ಉಪಸ್ಥಿತರಿದ್ದರು. ಮೊಬೈಲ್‌ಗಳನ್ನು ಪತ್ತೆ ಹಚ್ಚಿ ಹಸ್ತಾಂತರಿಸಿದ ಪೊಲೀಸ್ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಮೊಬೈಲಿನ ವಾರಿಸುದಾರರು ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

ಜನಿವಾರ ಪ್ರಕರಣ: ಖಂಡನೆ

ಗೋಕರ್ಣ: ಸಿ.ಇ.ಟಿ. ಪರೀಕ್ಷೆಯಲ್ಲಿ ವಿದ್ಯಾರ್ಥಿಯ ಜನಿವಾರ ತೆಗೆಸಿದ ಕ್ರಮವನ್ನ ಇಲ್ಲಿನ ಶ್ರೀಕ್ಷೇತ್ರ ಹವ್ಯಕ ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘ ಖಂಡಿಸಿದೆ.

ಈ ಕುರಿತು ಸಂಘದ ಅಧ್ಯಕ್ಷ ರಮೇಶ ಪ್ರಸಾದ ಪತ್ರಿಕಾ ಹೇಳಿಕೆ ನೀಡಿದ್ದು, ಹಿಂದಿನ ವರ್ಷ ನಡೆದ ಘಟನೆಯಿಂದ ಎಚ್ಚೆತ್ತು ಮರುಕಳಿಸದಂತೆ ಸರ್ಕಾರ ನೋಡಿಕೊಳ್ಳಬೇಕಿತ್ತು. ಆದರೆ ನಿರ್ಲಕ್ಷಿಸಿರುವುದು ಖೇದಕರ ಎಂದಿದ್ದಾರೆ.

ಒಂದು ಸಮಾಜದ ಸಂಪ್ರದಾಯದ ಮೇಲೆ ದೌರ್ಜನ್ಯ ಹಾಗೂ ಅಪಮಾನ ಮಾಡಿರುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದ್ದಾರೆ.

ನದಿಗೆ ಬಿದ್ದು ವ್ಯಕ್ತಿ ಸಾವು

ಅಂಕೋಲಾ: ಅಪರಿಚಿತ ವ್ಯಕ್ತಿಯೋರ್ವ ಗಂಗಾವಳಿ ನದಿಯ ನೀರಿಗೆ ಬಿದ್ದು ಮೃತಪಟ್ಟ ಘಟನೆ ತಾಲೂಕಿನ ಉಳುವರೆಯ ರೈಲ್ವೆ ಸೇತುವೆ ಬಳಿ ಸಂಭವಿಸಿದೆ.

ಮೃತ ವ್ಯಕ್ತಿ ಸುಮಾರು 50 ರಿಂದ 55 ವರ್ಷದ ವ್ಯಕ್ತಿ ಸದೃಢ ಮೈಕಟ್ಟು, ಗೋದಿ ಬಣ್ಣ,ದುಂಡನೆಯ ಮುಖ, ಬಲ ಬುಜದ ಮೇಲೆ ಕಪ್ಪು ಎಳ್ಳು ಕಲೆ ಹೊಂದಿದ್ದು ಸುಮಾರು 5 ಅಡಿ 5 ಇಂಚು ಎತ್ತರವಿದ್ದಾನೆ ನೀಲಿ ಬಣ್ಣದ ಗೆರೆಗಳಿರುವ ಬಿಳಿ ಬಣ್ಣದ ಉದ್ದ ತೋಳಿನ ಶರ್ಟ್ ಧರಿಸಿದ್ದಾನೆ ಉಳುವರೆಯ ರೈಲ್ವೆ ಸೇತುವೆಯ ಬಳಿ ಬಂದವನು ಯಾವುದೋ ಕಾರಣದಿಂದ ಗಂಗಾವಳಿ ನದಿಯ ನೀರಿಗೆ ಬಿದ್ದು ಮುಳುಗಿ ಮೃತಪಟ್ಟಿರಬಹುದು ವ್ಯಕ್ತಿಯ ಪರಿಚಯ ಇದ್ದರೆ ಅಂಕೋಲಾ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60089	70899
ಬಿಳಿಗೋಟು	26609	37399
ಕೆಂಪುಗೋಟು	22100	36299
ಬೆಟ್ಟೆ	30599	52099
ರಾಶಿ	50200	54199
ಚಾಲಿ	44490	48422

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58099	58999
ರಾಶಿ	49500	57265
ಬೆಟ್ಟೆ	38969	50399
ಕೆಂಪುಗೋಟು	21899	38961
ಬಿಳಿಗೋಟು	18099	39409
ಚಾಲಿ	39599	48599
ಕೋಕಾ	16501	34969
ಕಾಳುಮೆಣಸು	58815	68000



ಕಾರವಾರ: ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಅವರ ಅಧ್ಯಕ್ಷತೆಯಲ್ಲಿ ಪ.ಜಾತಿ ಉಪಯೋಜನೆ ಮತ್ತು ಗಿರಿ ಜನ ಉಪಯೋಜನೆ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಯು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆಯಿತು. ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಪ್ ಶಶಿ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಉಮೇಶ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

ಸಂಭ್ರಮದ ಬಂಡಿಹಬ್ಬದ ದೇವರು ಕರೆಯುವ ಪ್ರಕ್ರಿಯೆ

ಅಂಕೋಲಾ: ತಾಲೂಕಿನ ಶ್ರೀಶಾಂತಾದುರ್ಗಾದೇವಿಯ ಬಂಡಿಹಬ್ಬದ ದೇವರು ಕರೆಯುವ ಪ್ರಕ್ರಿಯೆ ಸಂಭ್ರಮ ಸಡಗರದಿಂದ ನಡೆಯಿತು.

ಮಧ್ಯಾಹ್ನ ಕುಂಬಾರಕೇರಿಯ ಕಳಸ ದೇವಾಲಯದಿಂದ ದೇವರ ಕಳಸದ ಮೆರವಣಿಗೆ ಲಕ್ಷ್ಮೇಶ್ವರ ಮಾರ್ಗವಾಗಿ ವಂದಿಗೆಗೆ ತೆರಳಿ ಅಲ್ಲಿ ಸಾಂಪ್ರದಾಯಿಕ ಪ್ರಕ್ರಿಯೆಗಳನ್ನು ನೆರವೇರಿಸಲಾಯಿತು.

ಸಂಜೆ ಹನುಮಟ್ಟ ಮಾರ್ಗದಿಂದ ಮರಳಿದ ಭೂಮ್ತಾಯಿಯ ಕಳಸಕ್ಕೆ ಸ್ಥಳೀಯ ಜನರು ಪೂಜೆ ನೀಡಿ ಸಂಭ್ರಮಿಸಿದರು. ಕೆರೆಕಟ್ಟೆಯ ದತ್ತಾತ್ರೇಯ ದೇವಾಲಯದ ಮಾರ್ಗವಾಗಿ ವಿಶೇಷ ವಾದ್ಯ ಘೋಷಗಳೊಂದಿಗೆ ಆಗಮಿಸಿದ ದೇವರ ಕಳಸ ಹೊತ್ತ ಗುನಗರು

ಶ್ರೀಕಾಳಮ್ಮ ದೇವಾಲಯದ ಬಳಿ ಮಂಡಿಯೂರಿ ನಮಸ್ಕರಿಸುವುದನ್ನು ನೂರಾರು ಜನರು ಜಮಾಯಿಸಿ ಕಣ್ತುಂಬಿಕೊಂಡರು.ದೇವರು ಕರೆಯುವ ದಿನದ ಪ್ರಯುಕ್ತ ಪಟ್ಟಣದ ಶೇಡಗೇರಿ ಪೌರ ಕಾರ್ಮಿಕರ ಕಾಲನಿಯನ್ನು ವಿಶೇಷವಾಗಿ ವಿದ್ಯುತ್ ದೀಪಾಲಂಕಾರಗಳಿಂದ ಶೃಂಗರಿಸಲಾಗಿತ್ತು,ರಂಗೋಲಿ ಕಲೆಯ ಬಣ್ಣದ ಚಿತ್ತಾರ ಗಮನ ಸೆಳೆಯಿತು.

ಬಂಡಿಹಬ್ಬದ ಜಾತ್ರೆಯ ಮಹತ್ವಪೂರ್ಣ ದಿನವೆಂದೇ ಹೇಳಲಾಗುವ ದೇವರು ಕರೆಯುವ ದಿನದ ಕಳಸದ ಮೆರವಣಿಗೆಯಲ್ಲಿ ಗುನಗರು, ಬಿಡಗುನಗರು, ಕಟಗಿದಾರರು, ಅರ್ಚಕರು ಸೇರಿದಂತೆ ವಿವಿಧ ಪಾರಂಪರಿಕ ಸೇವಾಕರ್ತರು ಪಾಲ್ಗೊಂಡಿದ್ದರು. ಪೊಲೀಸ್ ಇಲಾಖೆಯ ವತಿಯಿಂದ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿತ್ತು.



ಅಂಕೋಲಾ: ತಾಲೂಕಿನ ಶ್ರೀಶಾಂತಾದುರ್ಗಾದೇವಿಯ ಬಂಡಿಹಬ್ಬದ ದೇವರು ಕರೆಯುವ ಪ್ರಕ್ರಿಯೆ ಸಂಭ್ರಮ ಸಡಗರದಿಂದ ನಡೆಯಿತು.

ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ.ಮಂಜುಳಾ ಹೇಳಿಕೆ

ಮಹಿಳೆಯರಿಂದ ಕಾಂಗ್ರೆಸ್‌ಗೆ ತಕ್ಕ ಪಾಠ

ಕಾರವಾರ: ಅಂದು ಅಪರೇಷನ್ ಸಿಂಧೂರದ ನೇತೃತ್ವ ವಹಿಸಿದ್ದ ನಮ್ಮ ಸೇನಾಪಡೆಗಳ ಹೆಮ್ಮೆಯ ಮಹಿಳೆಯರು ಬುಲೆಟ್ ಮೂಲಕ ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಿದರು. ಇಂದು ಮಹಿಳಾ ಮೀಸಲಾತಿ ಮಸೂದೆ ವಿರುದ್ಧ ನಿಂತು ಈ ದೇಶದ ಮಹಿಳೆಯರನ್ನು ಅವಮಾನ ಮಾಡಿದ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳಿಗೆ ಬರುವ ಚುನಾವಣೆಯಲ್ಲಿ ಬ್ಯಾಲೆಟ್ ಮೂಲಕ ಮಹಿಳೆಯರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ.ಮಂಜುಳಾ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ನಾರೀ ಶಕ್ತಿ ಪೋರಂನಿಂದ ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ಎಸ್.ನಾಯ್ಕ ಸಂಘಟನೆಯಲ್ಲಿ ನಗರದ ಬಾಡ ಬೃಂದಾವನ ಗಾರ್ಡನ್ ನಲ್ಲಿ ಏರ್ಪಡಿಸಿದ್ದ ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಅಡ್ಡಿಯಾದ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ವಿರುದ್ಧ ಜನಾಕ್ರೋಶ ಮಹಿಳಾ ಸಭೆ ಉದ್ಘಾಟಿಸಿ, ಅವರು ಮಾತನಾಡಿದರು.

ನಮ್ಮ ರಾಮಾಯಣ, ಮಹಾಭಾರತ ಹಾಗೂ ಇತಿಹಾಸದಲ್ಲಿ ಮಹಿಳೆಯರನ್ನು ಅವಮಾನಿಸಿದರೆ ಏನೆಲ್ಲ ಆಗಲಿದೆ ಎನ್ನುವುದನ್ನು ನಾವು ನೋಡಿದ್ದೇವೆ. ಈಗ ಅದೇ ರೀತಿ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸಿ ಮಹಿಳೆಯರನ್ನು ಅವಮಾನಿಸಿವೆ. ಇದಕ್ಕೆ ಮಹಿಳೆಯರು ತಕ್ಕ ಉತ್ತರ ಹೇಳಲಿದ್ದಾರೆ ಎಂದು ತಿಳಿಸಿದರು.

ದೇಶದ ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳೆಯರಿಗೆ ವಿಶೇಷ ಸ್ಥಾನ ಮಾನ ನೀಡಿದ್ದಾರೆ. ಮಹಿಳೆಯರ ಪರವಾದ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ನಮ್ಮ ದೇಶದ ರಾಷ್ಟ್ರಪತಿಯಂತಹ ಉನ್ನತ ಸ್ಥಾನದಲ್ಲಿ ದ್ರೌಪದಿ ಮುರ್ಮು ಇದ್ದಾರೆ. ಆದರೆ ಮಹಿಳಾ ವಿರೋಧಿ ಧೋರಣೆ ತಾಳಿರುವ ಕಾಂಗ್ರೆಸ್ ಗೆ ಮಹಿಳೆಯರೇ ಸೂಕ್ತ ಉತ್ತರ ಹೇಳಲಿದ್ದಾರೆ ಎಂದರು.



ಮಹಿಳಾ ದಿನಾಚರಣೆ

ಮಧ್ಯಾಹ್ನ ಸಭಾಂಗಣದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಹಿಳೆಯರು ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಯೋಗ, ನೃತ್ಯ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಉತ್ಸಾಹದಿಂದ ಪಾಲ್ಗೊಂಡರು. ವಿಜೇತರಿಗೆ ಬಹುಮಾನ ನೀಡಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರು ಹಾಗೂ ಮಕ್ಕಳನ್ನು ಗುರುತಿಸಿ ಗೌರವಿಸಲಾಯಿತು. ಮಾಜಿ ಶಾಸಕಿ ರೂಪಾಲಿ ಎಸ್. ನಾಯ್ಕ ಅವರು ಆಯೋಜಿಸಿದ್ದ ಈ ಕಾರ್ಯಕ್ರಮ ಕಾರವಾರ ಅಂಕೋಲಾ ಜನರ ಮೆಚ್ಚುಗೆಗೆ ಪಾತ್ರವಾಯಿತು.

ರಾಜ್ಯ ಬಿಜೆಪಿ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ, ನಮ್ಮ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳೆಯರಿಗೆ ವಿಶೇಷ ವಾದ ಸ್ಥಾನ ಮಾನ ನೀಡಬೇಕು, ಮಹಿಳೆಯರು ಸಬಲರಾಗಬೇಕು ಎಂಬ ಉದ್ದೇಶದಿಂದ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಗೆ ತರಲು ಮುಂದಾದರೆ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳು ಅದನ್ನು ವಿರೋಧಿಸುವ ಮೂಲಕ ಮಹಿಳೆಯರಿಗೆ ಅನ್ಯಾಯ ಮಾಡಿದ್ದಾರೆ ಎಂದು ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳ ವಿರುದ್ಧ ಹರಿಹಾಯ್ದರು.

ಮಗು ಅತ್ತಾಗ ಚಾಕಲೇಟ್ ಕೊಡುತ್ತೇವೆ. ಹಾಗೂ ಮಹಿಳೆಯರಿಗೆ ಅಧಿಕಾರ ಕೊಡಿ ಎಂದರೆ ಕಾಂಗ್ರೆಸ್ ನವರು ಮಡಿಗಾಸಿನ ಗ್ಯಾರಂಟಿ ನೀಡುತ್ತಾರೆ. ಆದರೆ ಮಹಿಳೆಯರನ್ನು ಸಬಲರಾಗಿಸುವ, ಈ ನಾಡನ್ನು ಅಭಿವೃದ್ಧಿ ಪಥದಲ್ಲ ಕೊಂಡೊಯ್ಯಲು ಅವರ ಕೈಗೆ ಅಧಿಕಾರ ನೀಡುವಂತಾಗಬೇಕು ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷರಾದ ಎನ್.ಎಸ್. ಹೆಗಡೆ ಮಾತನಾಡಿದರು. ವೇದಿಕೆಯಲ್ಲಿ ರಾಜ್ಯ ಮಹಿಳಾ ಮೋರ್ಚಾ ಕಾರ್ಯದರ್ಶಿ ಸುಗುಣ,ಸುಜಾತಾ ಬಾಂದೇಕರ್, ಕಲ್ಪನಾ ನಾಯ್ಕ್, ನಯನಾ ನೀಲವರ್, ವೈಶಾಲಿ ತಾಂಡೆಲ್, ಗ್ರಾಮೀಣ ಅಧ್ಯಕ್ಷ ಸುಭಾಷ್ ಗುನಗಿ, ನಗರ ಅಧ್ಯಕ್ಷ ನಾಗೇಶ್ ಕುರ್ಡೇಕರ್, ಅಂಕೋಲಾ ಮಂಡಲ ಅಧ್ಯಕ್ಷ ಸಂಜಯ ನಾಯ್ಕ್, ರವಿರಾಜ್ ಅಂಕೋಲೇಕರ ಉಪಸ್ಥಿತರಿದ್ದರು.

ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮ ಆರಂಭಿಸಲಾಯಿತು. ಮಾಲಾ ಹುಲಸ್ವಾರ,ಪ್ರಾಸ್ತಾವಿಕ ಮಾತನಾಡಿದರು ವೈಶಾಲಿ ಸ್ವಾಗತಿಸಿದರು.

ಮಾದಕ ವಸ್ತು ಬಳಕೆ ತಡೆಗೆ ಅನಿರೀಕ್ಷಿತ ತಪಾಸಣೆ ಕೈಗೊಳ್ಳಿ: ಜಿಲ್ಲಾಧಿಕಾರಿ

ಕಾರವಾರ: ಜಿಲ್ಲೆಯಲ್ಲಿ ಮಾದಕ ವಸ್ತುಗಳ ಬಳಕೆ ಮತ್ತು ಸರಬರಾಜು ತಡೆಯಲು ಅನುಮಾನಾಸ್ಪದವಾಗಿ ಕಂಡು ಬರುವ ಹೋಂ ಸ್ಟೇ ಗಳು ಮತ್ತು ರೆಸಾರ್ಟ್‌ಗಳಲ್ಲಿ ಅನಿರೀಕ್ಷಿತ ತಪಾಸಣೆಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಸೂಚನೆ ನೀಡಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಎನ್‌ಕಾರ್ಡ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾದಕ ವಸ್ತುಗಳ ಸೇವನೆ ಕುರಿತಂತೆ ಪೊಲೀಸ್ ಇಲಾಖೆಯಲ್ಲಿ ದಾಖಲಾಗುವ ಪ್ರಕರಣಗಳಲ್ಲಿ 18 ರಿಂದ 35 ವಯೋಮಿತಿಯ ಯುವಜನತೆ ಹೆಚ್ಚಿನ ಸಂಖ್ಯೆಯಲ್ಲಿ ಈ ದುಶ್ಚಟಕ್ಕೆ ಬಲಿಯಾಗುತ್ತಿರುವುದು ಕಂಡು ಬರುತ್ತಿದ್ದು, ಜಿಲ್ಲೆಯ ಎಲ್ಲಾ ಕಾಲೇಜುಗಳಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತಂತೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಂಖ್ಯೆಯ ಅರಿವು ಕಾರ್ಯಕ್ರಮಗಳನ್ನು ಆಯೋಜಿಸುವಂತೆ ತಿಳಿಸಿದರು.

ಜಿಲ್ಲೆಯ ಎಲ್ಲಾ ಮೆಡಿಕಲ್ ಶಾಪ್ ಗಳಲ್ಲಿ ವೈದ್ಯರ ಸಲಹಾ ಚೀಟಿ ಇಲ್ಲದೇ ಔಷಧಗಳನ್ನು ಸರಬರಾಜು ಮಾಡದಂತೆ ಸೂಚನೆ ನೀಡುವಂತೆ ಮತ್ತು ಈ ಕುರಿತು ಮೆಡಿಕಲ್ ಶಾಪ್ ಗಳಲ್ಲಿ ಭಿತ್ತಿಪತ್ರ ಅಳವಡಿಸುವ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಔಷಧ ನಿಯಂತ್ರಕರಿಗೆ ಸೂಚಿಸಿದ ಜಿಲ್ಲಾಧಿಕಾರಿಗಳು, ಸಲಹಾ ಚೀಟಿ ಇಲ್ಲದೇ ಔಷಧ ವಿತರಿಸುವ ಶಾಪ್ ಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಮಾದಕ ವಸ್ತುಗಳ ಸಂಗ್ರಹ, ಬಳಕೆ, ಸರಬರಾಜು ಕುರಿತಂತೆ ಮಾಹಿತಿ ನೀಡಲು ರಚಿಸಿರುವ ಡ್ರಗ್ ಫ್ರೀ ಕರ್ನಾಟಕ ಮೊಬೈಲ್ ಅಪ್ಲಿಕೇಶನ್ ಬಳಕೆ ಮತ್ತು ಅದರ ಉಪಯೋಗದ ಕುರಿತಂತೆ ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸುವಂತೆ ಪೊಲೀಸ್ ಇಲಾಖೆಗೆ ಸೂಚಿಸಿದ ಅವರು, ಎನ್ ಕಾರ್ಡ್ ಸಮಿತಿಯ ಎಲ್ಲಾ ಸದಸ್ಯರು ಪ್ರತೀ ತಿಂಗಳು ತಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಕೈಗೊಂಡ ತಪಾಸಣೆಯ ಕುರಿತ ಪ್ರಗತಿ ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವಂತೆ ನಿರ್ದೇಶಿಸಿದರು.

ಜಿಲ್ಲೆಯಲ್ಲಿ 2026 ರಲ್ಲಿ ಇದುವರೆಗೆ ಮಾದಕ ವಸ್ತು ಸರಬರಾಜಿನ 8 ಪ್ರಕರಣಗಳಲ್ಲಿ 14 ಮಂದಿಯನ್ನು ಬಂಧಿಸಿ, ರೂ. 1,49,500 ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದು, ಮಾದಕ ವಸ್ತು ಸೇವನೆಯ 97 ಪ್ರಕರಣಗಳಲ್ಲಿ 112 ಮಂದಿಯನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್. ತಿಳಿಸಿದರು.

ಸಭೆಯಲ್ಲಿ ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಬಂದರು, ಮೀನುಗಾರಿಕೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

ಅಘನಾಶಿನಿ ಏತ ನೀರಾವರಿ ಯೋಜನೆ ಸ್ಥಗಿತಕ್ಕೆ ಮಾಹಿತಿ ಸಲ್ಲಿಕೆ: ರವೀಂದ್ರ

ಸಿದ್ದಾಪುರ: ತಾಲೂಕಿನಲ್ಲಿ ನಿಯೋಜನೆಗೊಳ್ಳಲಿದೆ ಎನ್ನಲಾದ ಅಘನಾಶಿನಿ ಏತ ನೀರಾವರಿ ಯೋಜನೆಯು ಸ್ಥಳೀಯ ಜನತೆ ಮತ್ತು ಪರಿಸರ ವಿರೋಧಿಯಾಗಿದೆ. ಹೀಗಾಗಿ ಯೋಜನೆಯನ್ನು ಸ್ಥಗಿತಗೊಳಿಸಬೇಕು ಎಂಬ ಹಿನ್ನೆಲೆಯಲ್ಲಿ ಕರ್ನಾಟಕ ಗಡಿ ಹಾಗೂ ನದಿಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಎಚ್.ಎಲ್.ನಾಗಮೋಹನದಾಸ ಅವರ ಗಮನಕ್ಕೆ ಅಂಕಿ ಸಂಖ್ಯೆಗಳೊಂದಿಗೆ ಮಾಹಿತಿ ನೀಡಲಾಗಿದೆ ಎಂದು ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ನೀರು ಅಭಿವೃದ್ಧಿ ಪ್ರಾಧಿಕಾರವು ಅಘನಾಶಿನಿ-ವೇದಾವತಿ (ವಾಣಿವಿಲಾಸ ಸಾಗರ) ಜೋಡಣೆ ಯೋಜನೆ ಕುರಿತು ಪ್ರಾಥಮಿಕ ಸಾಧ್ಯತೆ ವರದಿಯನ್ನು ಅಕ್ಟೋಬರ್ 2025 ರಂದು ಸಿದ್ಧಪಡಿಸಿದೆ. ಅಘನಾಶಿನಿ ನದಿ ನೀರು ಎತ್ತುವಿಕೆ ಯೋಜನೆಯಂತೆ 23 ಸಾವಿರ ಕೋಟಿ ರೂ. ವೆಚ್ಚದಲ್ಲಿ 194 ಕಿಲೋಮೀಟರ್ ಸುರಂಗ ಮತ್ತು ಪೈಪ್ ಲೈನ್ ಮೂಲಕ 35 ಟಿಎಂಸಿ ನೀರನ್ನು ಅಘನಾಶಿನಿಯಿಂದ ವಾಣಿವಿಲಾಸ ಜಲಾಶಯಕ್ಕೆ ಒಯ್ಯುವ ಯೋಜನೆ ಎಂದು ಪ್ರಸ್ತಾಪಿಸಲಾಗಿದೆ. ಪಶ್ಚಿಮ ಘಟ್ಟ ಪ್ರದೇಶದ ಜನಜೀವನ, ಪ್ರಾಣಿ-ಪಕ್ಷಿಗಳು ಹಾಗೂ ಅತ್ಯಮೂಲ್ಯ ಮರಗಿಡ ಸಸ್ಯಗಳ ಮೇಲೆ ಇದು ದುಷ್ಪರಿಣಾಮ ಬೀರುತ್ತದೆ. ನೈಸರ್ಗಿಕ ಅಸಮತೋಲನಕ್ಕೆ ಈ ಯೋಜನೆಯು



ಕಾರಣವಾಗುವುದು ಎಂಬ ಅಭಿಪ್ರಾಯವನ್ನು ಚರ್ಚೆಯಲ್ಲಿ ಪ್ರಸ್ತಾಪಿಸಲಾಗಿದೆ.

ಹೋರಾಟಗಾರರ ವೇದಿಕೆಯು ನದಿ ಜೋಡಣೆಗೆ ವಿರೋಧಿಸಿ ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಸುಮಾರು ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಕುಟುಂಬಗಳಿಂದ ವಯಕ್ತಿಕ ಆಕ್ಷೇಪಣಾ ಪತ್ರ ಸಲ್ಲಿಸಿರುವುದು ದಾಖಲೆಯ ಕಾರ್ಯ ಎಂಬುದನ್ನು ಸಹ ನದಿಗಳ ರಕ್ಷಣಾ ಆಯೋಗದ ಅಧ್ಯಕ್ಷರ ಗಮನಕ್ಕೆ ತರಲಾಯಿತು ಎಂದು ರವೀಂದ್ರ ನಾಯ್ಕ ತಿಳಿಸಿದ್ದಾರೆ. ಯುನೆಸ್ಕೋಗೆ ಹೋರಾಟಗಾರರ ವೇದಿಕೆ ಬರೆದಿರುವ ಯೋಜನಾ ಆಕ್ಷೇಪಣೆ ಪತ್ರಕ್ಕೆ ಸಂಬಂಧಿಸಿ ಯುನೆಸ್ಕೋ ಸಂಸ್ಥೆಯು ಉತ್ತರಿಸಿದ್ದು ವಿಶ್ವ ಪರಂಪರೆಯ ಸಮಾವೇಶದ ಮಾರ್ಗಸೂಚಿಗಳ ನಿಬಂಧನೆಗಳಿಗೆ ಅನುಸಾರವಾಗಿ ಕ್ರಮ ಜರುಗಿಸಬೇಕೆಂದು ಹಾಗೂ ಸಮಾವೇಶದ ನಿಬಂಧನೆಗಳನ್ನ ಪಾಲಿಸಬೇಕೆಂದು ತಿಳಿಸಿದ್ದು ಈ ಲಿಖಿತ ಉತ್ತರವನ್ನು ಪಡೆದ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ನಾಗಮೋಹನ್ ದಾಸ್ ಪ್ರಸಂಶೆ ವ್ಯಕ್ತ ಪಡಿಸಿದ್ದಾರೆ ಎಂದು ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ಅಧ್ಯಕ್ಷ ರವೀಂದ್ರ ನಾಯ್ಕ ಇದೇ ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಮಾನವ ಆಯೋಗದ ಅಧ್ಯಕ್ಷರಿಂದ ವಿವಿಧೆಡೆ ಭೇಟಿ: ಪರಿಶೀಲನೆ

ಕಾರವಾರ: ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷರಾದ ಟಿ.ಶ್ಯಾಮ ಭಟ್ ಮತ್ತು ಸದಸ್ಯರಾದ ಎಸ್.ಕೆ.ವಂಟಿಗೋಡಿ ಅವರು ಮಂಗಳವಾರ ಕಾರವಾರದ ಹಿಂದುಳಿದ ವರ್ಗಗಳ ಇಲಾಖೆಯ ಮತ್ತು ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ನಂತರ ಕ್ರಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಜಿಲ್ಲಾ ಕಾರಾಗೃಹಕ್ಕೆ ಭೇಟಿ ನೀಡಿ, ಪರಿಶೀಲಿಸಿದ ಅವರು, ಕೈದಿಗಳ ಕುಂದು ಕೊರತೆಗಳನ್ನು ಆಲಿಸಿದರು. ಜಿಲ್ಲಾ ಬಸ್ ನಿಲ್ದಾಣಕ್ಕೆ ಭೇಟಿ ನೀಡಿ, ನಿಲ್ದಾಣದಲ್ಲಿ ಸ್ವಚ್ಛತೆ



ಮತ್ತು ಶೌಚಾಲಯಗಳ ಸ್ಥಿತಿಗತಿ ಬಗ್ಗೆ ಪರಿಶೀಲಿಸಿ, ನಿಲ್ದಾಣದ ಆವರಣದಲ್ಲಿನ ಮಳಿಗೆಗಳಲ್ಲಿ ಮಾರಾಟ ಮಾಡುವ ಆಹಾರ ಪದಾರ್ಥಗಳ ಗುಣಮಟ್ಟ ಪರಿಶೀಲಿಸಿದರು. ನಂತರ ಗ್ರಾಮೀಣ ಪೊಲೀಸ್ ಠಾಣೆ ಮತ್ತು ಶಹರ ಪೊಲೀಸ್ ಠಾಣೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಅಲ್ಲಾಭಕ್ಷ್, ತಾಪಂ ಕಾರ್ಯನಿರ್ವಹಣಾಧಿಕಾರಿ ವೀರನಗೌಡ ಪಿ. ಏನಗಗೌಡರ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಉಮೇಶ, ಜಿಲ್ಲಾ ಪರಿಸರ ಅಧಿಕಾರಿ ಸಂತೋಷ ಮತ್ತಿತರರು ಇದ್ದರು.

ಕುಗ್ರಾಮಕ್ಕೆ ನೀರು ಒದಗಿಸಿದ ಉದ್ಯಮಿ

ಯಲ್ಲಾಪುರ: ಬಹುದಶಕಗಳಿಂದ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿ ಕುಡಿಯುವ ನೀರಿಗಾಗಿ ಹಾಹಾಕಾರ ಎದುರುಸುತ್ತಿದ್ದ ತಾಲ್ಲೂಕಿನ ಪಾಣಿಗುಂಡಿ ಗ್ರಾಮಕ್ಕೆ ಏ. 27ರಂದು ತಮ್ಮ ಮಗನ ಹುಟ್ಟುಹಬ್ಬದ ಸಂಭ್ರಮದಲ್ಲಿ ಬೋರ್‌ವೆಲ್ ಕೊರೆಸಿ ಗ್ರಾಮದ ನೀರಡಿಕೆ ನೀಗಿಸಿ ಸಾರ್ಥಕ ಕಾರ್ಯ ಮಾಡುವ ಮೂಲಕ ಉದ್ಯಮಿ ಬಾಲು ನಾಯಕ ಮಾದರಿಯಾಗಿದ್ದಾರೆ.

4ಇಂಚು ನೀರು ಬಂದಿದ್ದು ಗ್ರಾಮಸ್ಥರ ಪ್ರತಿಯೊಬ್ಬರ ಮುಖದಲ್ಲಿ ಸಂತಸ ಕಾಣುವಂತೆ ಮಾಡಿದ್ದಾರೆ. ನಂತರ ಗ್ರಾಮಸ್ಥರಿಂದ ಕೃತಜ್ಞತಾ ಪೂರ್ವಕ ಸನ್ಮಾನ ಸ್ವೀಕರಿಸಿ ಬಾಲಕೃಷ್ಣ ನಾಯಕ ಮಾತನಾಡಿ ಬಡವರ, ನೊಂದವರ ಸೇವೆ ಮಾಡುವುದು ಸಾಕ್ಷಾತ್ ಭಗವಂತ ಸೇವೆ ಮಾಡಿದಂತೆ ಎಂಬ ನನ್ನ ತಂದೆ ತಾಯಿಗಳ ಮಾರ್ಗದರ್ಶನ, ಸಂಸ್ಕಾರ ಇಂತಹ ಸೇವಾ ಕಾರ್ಯಕ್ಕೆ ಪ್ರೇರಣೆಯಾಗಿದೆ. ಸಣ್ಣ ಪಾನಿಗುಂಡಿ ಜನರ ದಾಹ ನೀಗಿಸುವ ಸೌಭಾಗ್ಯ ನನಗೆ ದೊರೆತಿದೆ ಎಂದರು.



ಅರ್ಜಿ ಆಹ್ವಾನ

ಕಾರವಾರ: ದಾಂಡೇಲಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ 3+1 ವರ್ಷದ ಅವಧಿಯ ಡಿಪ್ಲೋಮಾ ದೀರ್ಘಾವಧಿ ಕೋರ್ಸುಗಳ ಪ್ರವೇಶವು ಪ್ರಾರಂಭವಾಗಿದ್ದು, ಆಸಕ್ತ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರವೇಶಾತಿಯು ಜಿಟಿಟಿಸಿ ಆನ್‌ಲೈನ್ ಮುಖಾಂತರ ನಡೆಯಲಿದ್ದು, ಆಸಕ್ತ ವಿದ್ಯಾಥಿಗಳು ಸಂಸ್ಥೆಗೆ ಭೇಟಿ ನೀಡುವ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಲು ಮೇ 10 ಕೊನೆಯ ದಿನವಾಗಿದೆ. ಪ್ರವೇಶಾತಿ ಪ್ರಕ್ರಿಯೆಯನ್ನು ಮೆರಿಟ್ ಕಮ್ ರೋಸ್ಟರ್ ಆಧಾರದ ಮೂಲಕ ಸೀಟು ಹಂಚಿಕೆ ಮಾಡಲಾಗುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಪ್ರವರ್ಗ-1 ದವರು ರೂ.50, ಇತರೆ ಹಿಂದುಳಿದ ವರ್ಗ ಮತ್ತು ಸಾಮನ್ಯ ವರ್ಗದವರು ರೂ.100 ಶುಲ್ಕ ಪಾವತಿಸಿ ಅರ್ಜಿ ಪಡೆಯಬಹುದು. ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ಮೊಬೈಲ್ ಸಂಖ್ಯೆ: 08284-230437, 8618413074 8105889940 ನ್ನು ಸಂಪರ್ಕಿಸುವಂತೆ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪ್ರಿನ್ಸಿಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕಿಯಿಂದ ಮನೆ ಪಟ್ಟಿ ಕಾರ್ಯಾಚರಣೆ ಪೂರ್ಣ

ಮುಂಡಗೋಡ: ಸರ್ಕಾರ ಹಾಗೂ ಶಿಕ್ಷಣ ಇಲಾಖೆಯ ಆದೇಶದಂತೆ ಏಪ್ರಿಲ್ 16ರಿಂದ ಮೇ 15ರವರೆಗೆ ನಡೆಯಬೇಕಿದ್ದ ಮನೆ ಪಟ್ಟಿ ಕಾರ್ಯಾಚರಣೆಯನ್ನು ತಾಲೂಕಿನ ಶಿಕ್ಷಕಿಯೊಬ್ಬರು ಈಗಾಗಲೇ ಯಶಸ್ವಿಯಾಗಿ ಪೂರ್ಣಗೊಳಿಸಿ ಮಾದರಿಯಾಗಿದ್ದಾರೆ.



ತಾಲೂಕಿನ ಗಡಿ ಭಾಗ ಕುರ್ಲಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಮಮತಾ ರಾಘವೇಂದ್ರ ನಿಗದಿತ ಅವಧಿಗಿಂತ ಮುಂಚೆಯೇ ಮನೆ ಪಟ್ಟಿ ಕಾರ್ಯಾಚರಣೆಯನ್ನು ಪೂರ್ಣಗೊಳಿಸಿ ಕರ್ತವ್ಯನಿಷ್ಠೆ ಮೆರೆದಿದ್ದಾರೆ.

ಬೆಡಸಗಾಂವ ಗ್ರಾ.ಪಂ.ವ್ಯಾಪ್ತಿಯ ಆಟಬೈಲ, ತೊಗರಳ್ಳಿ, ಹಿತ್ಲಸರ, ಮೂಲೆಗದ್ದೆ, ಚೌಡಿಕೊಪ್ಪ ಮುಂತಾದ ಗ್ರಾಮಗಳು ದಟ್ಟ ಅರಣ್ಯದ ಮಧ್ಯದಲ್ಲಿ ಇರುವುದರಿಂದ ಮನೆ ಪಟ್ಟಿ ಕಾರ್ಯಾಚರಣೆ ಅತ್ಯಂತ ಕಷ್ಟಕರವಾಗಿತ್ತು. ಒಂದರಿಂದ ಮತ್ತೊಂದು ಮನೆಗೆ ಮೂರರಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿದ್ದು, ಸರಿಯಾದ ರಸ್ತೆ ಸೌಲಭ್ಯವೂ ಇಲ್ಲದ ಪರಿಸ್ಥಿತಿಯಲ್ಲಿ ಕಾಲ್ನಡಿಗೆಯೇ ಏಕೈಕ ಮಾರ್ಗವಾಗಿತ್ತು. ಕಿರಿದಾದ ದಾರಿಗಳು, ಹಳ್ಳ-ಕೊಳ್ಳಗಳನ್ನು ದಾಟುತ್ತಾ ಮನೆಗಳಿಗೆ ತಲುಪಬೇಕಾದ ಸವಾಲುಗಳ ನಡುವೆಯೂ, ಅವರು ತಮ್ಮ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳ ಕಾರ್ಯಗಳನ್ನು ಸರಿಯಾದ ಸಮಯಕ್ಕೆ ಅಥವಾ ಅದಕ್ಕೂ ಮುನ್ನವೇ ಪ್ರಾಮಾಣಿಕವಾಗಿ ಮಾಡಿದರೆ ಮಾಹಿತಿ ನೀಡಲು ಮತ್ತು ಕಾರ್ಯಕ್ರಮ ಆಯೋಜನೆಗೆ ಅನುಕೂಲವಾಗುತ್ತದೆ. ವಿಳಂಬವಾದರೆ ಯೋಜನೆಗಳು ಫಲಪ್ರದವಾಗಲು ತಡವಾಗುತ್ತದೆ. ಭಾರತ ಸರ್ಕಾರದಿಂದ ಮಾಡುತ್ತಿರುವ ಕಾರ್ಯವಾಗಿರುವುದರಿಂದ ಶಿಕ್ಷಕಿ ಮಮತಾ ರಾಘವೇಂದ್ರ ಇಡೀ ದೇಶಕ್ಕೇ ಮಾದರಿಯಾಗಿದ್ದಾರೆ. ಅವರ ಬಗ್ಗೆ ನನಗೆ ತುಂಬಾ ಅಭಿಮಾನವಿದೆ ಎಂದು ಬಿಇಒ ಸುಮಾ ಜಿ. ಹೇಳಿದರು.

ತಾಲೂಕು ಘಟಕಕ್ಕೆ ಚುನಾವಣೆ ಘೋಷಣೆ

ದಾಂಡೇಲಿ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ದಾಂಡೇಲಿ ತಾಲೂಕು ಘಟಕಕ್ಕೆ ಚುನಾವಣೆ ಘೋಷಣೆಯಾಗಿದೆ ಎಂದು ಸಹಾಯಕ ಚುನಾವಣಾ ಅಧಿಕಾರಿ ಎಸ್.ಜಿ.ಬಿರಾದಾರ ಅವರು ತಿಳಿಸಿದರು.

ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿಯನ್ನು ನೀಡಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕಕ್ಕೆ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಸಮಿತಿಗೆ 13 ಪುರುಷ ಸದಸ್ಯರು ಮತ್ತು 7 ಮಹಿಳಾ ಸದಸ್ಯರುಗಳ ಆಯ್ಕೆಗೆ ಚುನಾವಣೆ ನಡೆಯಲಿದ್ದು, ಒಟ್ಟು 478 ಮತದಾರರಿದ್ದಾರೆ. ಏ.29ರ ಬೆಳಗ್ಗೆ 10.30 ಗಂಟೆಯಿಂದ ನಾಮಪತ್ರವನ್ನು ಸ್ವೀಕರಿಸಲಾಗುತ್ತದೆ. ಮೇ.6 ರ ಮಧ್ಯಾಹ್ನ 3 ಗಂಟೆಯ ವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶವಿರುತ್ತದೆ.

ಮೇ 7ರಂದು ಬೆಳಿಗ್ಗೆ 10.30 ಗಂಟೆಯಿಂದ ನಾಮಪತ್ರಗಳ ಪರಿಶೀಲನೆ ನಡೆಯಲಿದೆ.



ಮೇ 10ರಂದು ಮಧ್ಯಾಹ್ನ 3 ಗಂಟೆಯವರೆಗೆ ನಾಮಪತ್ರಗಳನ್ನು ಹಿಂಪಡೆಯಲು ಕೊನೆಯ ದಿನವಾಗಿರುತ್ತದೆ. ಮೇ 24ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 4. ಗಂಟೆಯವರೆಗೆ ಕೋಗಿಲಬನದಲ್ಲಿರುವ ಶ್ರೀ ಮೃತ್ಯುಂಜಯ ಮಠದ ಸಭಾ ಭವನದಲ್ಲಿ ಮತದಾನ ನಡೆಯಲಿದ್ದು, ಮತದಾನ ಪ್ರಕ್ರಿಯೆ ಮುಗಿದ ಬಳಿಕ ಮತ ಎಣಿಕೆ ಕಾರ್ಯ ನಡೆಯಲಿದೆ. ನಾಮಪತ್ರ ಹಾಗೂ ಇನ್ನಿತರ ಚುನಾವಣಾ ಕಾರ್ಯನಿರ್ವಹಣೆಗಾಗಿ ಶ್ರೀ ಮೃತ್ಯುಂಜಯ ಮಠದ ಯಾತ್ರಿ ನಿವಾಸದಲ್ಲಿ ಚುನಾವಣಾ ಕಾರ್ಯಾಲಯವನ್ನು ತೆರೆಯಲಾಗಿದೆ ಎಂದರು.

ಚುನಾವಣಾ ಸಹಾಯಕರುಗಳಾದ ಬಸಯ್ಯ ನಾಗಶೆಟ್ಟಿಕೊಪ್ಪ ಮತ್ತು ವಿಜಯ ವಿ.ಕಣವಿ ಉಪಸ್ಥಿತರಿದ್ದರು.

ಮೇ 2ಕ್ಕೆ ಬೆಳಕೆ ದುರ್ಗಾಪರಮೇಶ್ವರಿ ದೇವಸ್ಥಾನ ವರ್ಧಂತ್ಯುತ್ಸವ

ಭಟ್ಕಳ: ಅಖಿಲ ಹವ್ಯಕ ಮಹಾಸಭಾದ ಶ್ರೀ ಕ್ಷೇತ್ರ ಬೆಳಕೆ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವರ್ಧಂತ್ಯುತ್ಸವ ಮತ್ತು ಹವ್ಯಕ ಭವನ ಲೋಕಾರ್ಪಣೆ ಮೇ. 1 ಮತ್ತು 2ನೇ ತಾರೀಖಿನಂದು ಶ್ರೀ ಸಂಸ್ಥಾನ ಗೋಕರ್ಣ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ನಡೆಯಲಿದೆ ಎಂದು ಹವ್ಯಕ ಮಹಾಸಭಾದ ಕಾರ್ಯದರ್ಶಿ ಪ್ರಶಾಂತ ಭಟ್ಟ ಹೇಳಿದರು.

ಅವರು ಬೆಳಕೆ ದುರ್ಗಾಪರಮೇಶ್ವರಿ ದೇವಸ್ಥಾನದ ಸಭಾಭವನದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಮೇ1ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ. ಮೇ. 2 ರಂದು ಬೆಳಿಗ್ಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿದ್ದು, ಬೆಳಿಗ್ಗೆ 10.30 ಗಂಟೆಗೆ ರಾಘವೇಶ್ವರ ಭಾರತೀ ಮಹಾಸ್ವಾಮೀಜಿಯವರು ಆಗಮಿಸಿ ನೂತನ ಸಭಾಭವನ



ಉದ್ಘಾಟಿಸಲಿದ್ದಾರೆ. ಅಂದು ಅಪರಾಹ್ನ 11.30 ಗಂಟೆಗೆ ಧರ್ಮ ಸಭೆ ನಡೆಯಲಿದ್ದು, ರಾಘವೇಶ್ವರ ಭಾರತೀ ಮಹಾಸ್ವಾಮೀಜಿಯವರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಚಿವ ಮಂಕಾಳ ಎಸ್ ವೈದ್ಯ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ,ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ, ಮಾಜಿ ಶಾಸಕ ಸುನೀಲ ನಾಯ್ಕ, ಭೂಮಿ ದಾನ ನೀಡಿದ ಮಂಜುನಾಥ ಬಿಲ್ಲವ ಪಾಲ್ಗೊಳ್ಳಲಿದ್ದು, ಅಧ್ಯಕ್ಷತೆಯನ್ನು ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ ವಹಿಸಲಿದ್ದಾರೆ ಎಂದರು. ಬೆಳಕೆ, ಗೊರ್ಟೆ ಮತ್ತಿತರ ಭಾಗದ ಸರ್ವ ಜನತೆಗೂ ಅನುಕೂಲವಾಗಲಿ ಎನ್ನುವ ಸದಾಶಯದೊಂದಿಗೆ ಸುಮಾರು 75 ಲಕ್ಷ ರೂಪಾಯಿ ವೆಚ್ಚದಲ್ಲಿ ಸುಸಜ್ಜಿತ ಸಭಾಭವನ ನಿರ್ಮಿಸಲಾಗಿದೆ. ಸಭಾಭವನ ನಿರ್ಮಾಣದಿಂದ ಸ್ಥಳೀಯರಿಗೆ ಮದುವೆ, ಉಪನಯನ, ನಾಮಕರಣ, ಮುಂತಾದ ಶುಭಕಾರ್ಯಗಳಿಗೆ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಲು ಅನುಕೂಲವಾಗಲಿದೆ. ಬೆಳಕೆ ದುರ್ಗಾಪರಮೇಶ್ವರಿ ದೇವಸ್ಥಾನ ಸ್ವಚ್ಛ ಹಾಗೂ ಸುಂದರ ಪರಿಸರದಲ್ಲಿದ್ದು, ಜನತೆಗೆ ಅನುಕೂಲವಾಗಲು ಇದೀಗ 600 ಜನರ ಆಸನ ಸಾಮರ್ಥ್ಯ ಇರುವ ಸಭಾಭನ ನಿರ್ಮಿಸಲಾಗಿದೆ. ಏಕಕಾಲದಲ್ಲಿ 200 ಜನ ಸಾಮರ್ಥ್ಯದ ಭೋಜನಾಲಯ, 1000 ಜನ ಸಾಮರ್ಥ್ಯದ ಅಡುಗೆ ಮನೆ ಮತ್ತು ಪರಿಕರಗಳು, ಸುಸಜ್ಜಿತವಾದ ವಾಹನ ನಿಲುಗಡೆ ಸೇರಿದಂತೆ ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಹವ್ಯಕ ಮಹಾಸಭಾಕ್ಕೆ ಕಳೆದ ನಾಲ್ಕೈದು ವರ್ಷಗಳ ಹಿಂದೆ ಉದ್ಯಮಿ ಮಂಜುನಾಥ ಬಿಲ್ಲವ ಅವರು ಜಾಗವನ್ನು ದಾನ ನೀಡಿದ್ದು, ನಾವು ಜಾಗ ಸ್ವೀಕರಿಸಿದ ನಂತರ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇವೆ ಎಂದ ಅವರು ಸುಸಜ್ಜಿತ ಸಭಾಭವನದ ಸದುಪಯೋಗವನ್ನು ಸ್ಥಳೀಯ ಜನರು ಪಡೆಯಬೇಕು. ಮುಂದೆ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲು ಹವ್ಯಕ ಮಹಾಸಭಾ ಚಿಂತನೆ ನಡೆಸಿದ್ದು, ಸ್ಥಳೀಯರ ಸಹಕಾರ ಅಗತ್ಯ ಎಂದರು. ಈ ಸಂದರ್ಭದಲ್ಲಿ ಬೆಳಕೆ ದುರ್ಗಾಪರಮೇಶ್ವರ ದೇವಸ್ಥಾನದ ಸಂಚಾಲಕ ನಾಗರಾಜ ಮಧ್ಯಸ್ಥ, ಅರ್ಚಕ ಸುಮಂತ ಭಟ್ಟ, ವೇಮೂ. ವಿಶ್ವನಾಥ ಭಟ್ಟ ಮುಂತಾದವರಿದ್ದರು.

ಕಿರುಸುದ್ದಿ

ಗೋವುಗಳ ಸಂರಕ್ಷಣೆಗೆ ಅಗತ್ಯ ಕ್ರಮಕ್ಕೈಗೊಳ್ಳಿ

ಹಾವೇರಿ: ಸಂವಿಧಾನದ 48ನೇ ವಿಧಿಗೆ ಅಗತ್ಯ ತಿದ್ದುಪಡಿ ತಂದು ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇದಿಸಬೇಕು ಹಾಗೂ ರಾಜ್ಯದಲ್ಲಿರುವ ಗೋವುಗಳ ತಳಿಗಳ ಸಂರಕ್ಷಣೆಗೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಕಳಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಶ್ರೀರಾಮ ಸೇನೆ ವತಿಯಿಂದ ತಹಶೀಲ್ದಾರ್ ಮೂಲಕ ರಾಷ್ಟ್ರಪತಿ, ಪ್ರಧಾನಿ, ರಾಜ್ಯಪಾಲರು ಹಾಗೂ ಸಿಎಂಗೆ ಅವರಿಗೆ ಮನವಿ ಸಲ್ಲಿಸಿದರು.

ಶ್ರೀರಾಮ ಸೇನಾ ಜಿಲ್ಲಾಧ್ಯಕ್ಷ ವಿನಾಯಕ ಇಚ್ಚಂಗಿ ಮಾತನಾಡಿ, ಗೋವುಗಳು ಕೇವಲ ಜಾನುವಾರಗಳಲ್ಲ, ಅವು ನಮ್ಮ ಸಂಸ್ಕೃತಿ, ಸಂಸ್ಕಾರಗಳ ಪ್ರತೀಕ. ಗ್ರಾಮೀಣ ಸಂಸ್ಕೃತಿ ಮತ್ತು ಸಹಜವಾದ ಒಲವುಗಳಿಗೆ ಗೋವುಗಳೂ ಕಾರಣವಾಗಿವೆ. ಕೇವಲ ನಮ್ಮ ಶ್ರದ್ಧಾ ಕೇಂದ್ರಗಳಾಗಿರದೇ ಗ್ರಾಮೀಣ ಸಹಜೀವನ, ಕೃಷಿ ಮತ್ತು ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬಾಗಿವೆ. ರಾಜ್ಯಮಟ್ಟದ ತಳಿಗಳ ಸಂರಕ್ಷಣೆ ಮತ್ತು ಗೋಹತ್ಯೆ ತಡೆಗೆ ಕಾನೂನಾತ್ಮಕ ಕ್ರಮಕ್ಕೆ ಮುಂದಾಗಬೇಕು. ಗೋವುಗಳ ಕಳ್ಳಸಾಗಣೆ ಮತ್ತು ಹತ್ಯೆಯನ್ನು ಜಾಮೀನುರಹಿತ ಅಪರಾಧ ಎಂದು ಪರಿಗಣಿಸಿ, ಆಜೀವ ಕಾರಾಗೃಹ ಶಿಕ್ಷೆ ಹಾಗೂ ತಪ್ಪಿತಸ್ಥರ ಆಸ್ತಿ ಮುಟ್ಟುಗೋಲಿಗೆ ಕ್ರಮಕ್ಕೆ ಮುಂದಾಗಬೇಕೆಂದು ಆಗ್ರಹಿಸಿದರು. ಆರ್ಥಿಕ ಸ್ವಾವಲಂಭನೆಯ ಅಡಿಯಲ್ಲಿ ಪಂಚಗವ್ಯ ಸಂಶೋಧನೆಯನ್ನು ಪ್ರೋತ್ಸಾಹಿಸಬೇಕು, ಶಾಲೆಗಳ ಮಧ್ಯಾಹ್ನದ ಊಟ ಮತ್ತು ದೇವಸ್ಥಾನಗಳ ಪ್ರಸಾದದಲ್ಲಿ ಗೋವುಗಳ ಹಾಲು ಮತ್ತು ಅದರ ಉಪಉತ್ಪನ್ನಗಳ ಬಳಕೆ ಕಡ್ಡಾಯಗೊಳಿಸಬೇಕು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗೋವುಗಳ ಸಂರಕ್ಷಣೆಗೆ ನಂದಿಶಾಲೆ ಹಾಗೂ ಜಿಲ್ಲಾ ಮಟ್ಟದಲ್ಲಿ ಮಾದರಿ ಗೋ ಅಭಯಾರಣ್ಯ ಸ್ಥಾಪಿಸಿ ಅವುಗಳ ಸಂಕುಲದ ಉಳಿವಿಗೆ ಕ್ರಮಕ್ಕೆ ಮುಂದಾಗಬೇಕು. ಪ್ರತಿ 50-100 ಕೀ.ಮೀ. ಅಂತರದಲ್ಲಿ ಗೋ-ವಾಹಿನಿ ಅಂಬ್ಯುಲೆನ್ಸ್ ಮತ್ತು ಟ್ರಾಮಾ ಸೆಂಟರ್ ಆರಂಭದ ಮೂಲಕ ಗೋವುಗಳ ವಂಶ ಉಳಿವಿಗೆ ಅಗತ್ಯ ಕ್ರಮಕ್ಕೆ ಮುಂದಾಗಬೇಕೆಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.ಈ ವೇಳೆ ಸಂಘಟನೆಯ ಸೋಮು ರಾಠೋಡ, ಕಲ್ಮೇಶ ಹತ್ತಿಮತ್ತೂರ, ಮಹಾಂತೇಶ ಕೂರಗುಂದ, ಪರಮೇಶ ಕೂರಗುಂದ ಇದ್ದರು.

ಜಿಲ್ಲಾಸ್ಪತ್ರೆಯ ವೈದ್ಯರ ನಿರ್ಲಕ್ಷ್ಯ ಖಂಡಿಸಿ ಪ್ರತಿಭಟನೆ



ಹಾವೇರಿ: ಹರ್ನಿಯಾ ಆಪರೇಷನ್ ವೇಳೆ ಜಿಲ್ಲಾಸ್ಪತ್ರೆಯ ವೈದ್ಯರ ನಿರ್ಲಕ್ಷ್ಯದಿಂದ ಬಾಲಕ ಕೋಮಾ ಸ್ಥಿತಿಗೆ ತಲುಪಿಸಿದ್ದಾನೆ ಎಂದು ಆರೋಪಿಸಿ ಬಾಲಕನ ಕುಟುಂಬಸ್ಥರು ಜಿಲ್ಲಾಸ್ಪತ್ರೆಯ ಎದುರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ರಾಣೆಬೆನ್ನೂರು ತಾಲೂಕಿನ ಬೆನಕನಗೊಂಡ ಗ್ರಾಮದ ಚಾಂದಪೀರ್ ಫಕ್ರುಸಾಬ್ ದೊಡ್ಡಮನಿ (7) ಕೋಮಾ ಸ್ಥಿತಿಗೆ ಹೋದ ಬಾಲಕ. ಹರ್ನಿಯಾ ಚಿಕಿತ್ಸೆಗೆ ಸಂಬಂಧಿಸಿದಂತೆ ಜಿಲ್ಲಾಸ್ಪತ್ರೆಗೆ ಬಾಲಕನನ್ನು ದಾಖಲಿಸಲಾಗಿತ್ತು. ಆಪರೇಷನ್ ವೇಳೆ ಜಿಲ್ಲಾಸ್ಪತ್ರೆಯ ವೈದ್ಯರ ಯಡವಟ್ಟಿನಿಂದಾಗಿ ಬಾಲಕ ಈಗ ಕೋಮಾ ಸ್ಥಿತಿಗೆ ತಲುಪಿದ್ದು, ಸದ್ಯ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಬಾಲಕನ ಈ ಸ್ಥಿತಿಗೆ ಜಿಲ್ಲಾಸ್ಪತ್ರೆಯ ವೈದ್ಯರ ನಿರ್ಲಕ್ಷ್ಯವೇ ಕಾರಣ. ಈ ಕೂಡಲೇ ಹರ್ನಿಯಾ ಆಪರೇಷನ್ ಮಾಡಿದ ವೈದ್ಯರ ವಿರುದ್ಧ ದೂರು ದಾಖಲು ಮಾಡಬೇಕು. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ಬಾಲಕನ ಕುಟುಂಬಕ್ಕೆ ನ್ಯಾಯ ಕೊಡಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿ ಮನವಿ ಸಲ್ಲಿಸಿದರು. ಈ ವೇಳೆ ಬಾಲಕನ ಪಾಲಕರು, ಕುಟುಂಬಸ್ಥರು ಇದ್ದರು.

ಇಂದು ಶಿಕ್ಷಕರ ಕೌನ್ಸೆಲಿಂಗ್

ಹಾವೇರಿ: ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಪ್ರಾಥಮಿಕ ಶಾಲಾ ಸಹ ಶಿಕ್ಷಕರಿಗೆ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಕೌನ್ಸೆಲಿಂಗ್ ಪ್ರಕ್ರಿಯೆ ಏ.29 ರಂದು ಬೆಳಿಗ್ಗೆ 9 ಗಂಟೆಯಿಂದ ಹಾವೇರಿ ನಗರದ ಮುನ್ಸಿಪಲ್ ಹೈಸ್ಕೂಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಮೋಹನ ದಂಡಿನ ಅವರು ತಿಳಿಸಿದ್ದಾರೆ.ಜಿಲ್ಲೆಯಲ್ಲಿ ಒಟ್ಟು 244 ಕನ್ನಡ ಭಾಷಾ ಸಹ ಶಿಕ್ಷಕರಿಗೆ ಹಾಗೂ 58 ಉರ್ದು ಸಹ ಶಿಕ್ಷಕರಿಗೆ ಪ್ರಾಥಮಿಕ ಶಾಲಾ ಸಹ ಶಿಕ್ಷಕರ 1:2 ಪಟ್ಟಿಯಂತೆ 488 ಕನ್ನಡ ಭಾಷಾ ಶಿಕ್ಷಕರು ಹಾಗೂ 116 ಉರ್ದು ಭಾಷಾ ಶಿಕ್ಷಕರು ಸೇರಿ ಒಟ್ಟು 604 ಜನ ಶಿಕ್ಷಕರು ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕಾಗಿರುತ್ತದೆ ಎಂದು ತಿಳಿಸಿದ್ದಾರೆ.



ಹಾವೇರಿ: ಸಂವಿಧಾನದ 48ನೇ ವಿಧಿಗೆ ಅಗತ್ಯ ತಿದ್ದುಪಡಿ ತಂದು ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇದಿಸಬೇಕು ಹಾಗೂ ರಾಜ್ಯದಲ್ಲಿರುವ ಗೋವುಗಳ ತಳಿಗಳ ಸಂರಕ್ಷಣೆಗೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಕಳಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಶ್ರೀರಾಮ ಸೇನೆ ವತಿಯಿಂದ ತಹಶೀಲ್ದಾರ್ ಮೂಲಕ ರಾಷ್ಟ್ರಪತಿ, ಪ್ರಧಾನಿ, ರಾಜ್ಯಪಾಲರು ಹಾಗೂ ಸಿಎಂಗೆ ಅವರಿಗೆ ಮನವಿ ಸಲ್ಲಿಸಿದರು.

2027ಕ್ಕೆ ಮಲೇರಿಯಾ ನಿವಾರಣೆ ಗುರಿ

ಹಾವೇರಿ: ಕರ್ನಾಟಕ ರಾಜ್ಯದಲ್ಲಿ 2027ರ ವೇಳೆಗೆ ಮಲೇರಿಯಾ ನಿವಾರಣಾ ಗುರಿ ಉದ್ದೇಶ ಹೊಂದಲಾಗಿದೆ ಎಂದು ಜಿಲ್ಲಾ ಕೀಟ ಶಾಸ್ತ್ರಜ್ಞ ಶ್ರೀಕಾಂತ ಪಾಟೀಲ ಹೇಳಿದರು.

ಹಾವೇರಿ ನಗರದ ದೇವಧರ ಆಸ್ಪತ್ರೆಯಲ್ಲಿ ಮಂಗಳವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ ಹಾಗೂ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಘಟಕದ ಸಹಯೋಗದಲ್ಲಿ ಆಯೋಜಿಸಲಾದ ಜಿಲ್ಲಾಮಟ್ಟದ ವಿಶ್ವ ಮಲೇರಿಯಾ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮಲೇರಿಯಾ ಎಂದರೇನು? ಮಲೇರಿಯಾ ಲಕ್ಷಣಗಳು, ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮಗಳು ಬಗ್ಗೆ ವಿದ್ಯಾರ್ಥಿಗಳಿಗೆ ಆರೋಗ್ಯ ಶಿಕ್ಷಣ ನೀಡಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಗದೀಶ ಪಾಟೀಲ ಉದ್ಘಾಟನೆ ನೆರವೇರಿಸಿದರು.

ದೇವಧರ ಸೆಂಟರ್‌ನ ಪ್ರಾಂಶುಪಾಲ ಸಿ.ಬಿ. ಗುಡ್ಡೇರ ಅಧ್ಯಕ್ಷತೆ ವಹಿಸಿದ್ದರು. ತಾಲೂಕಾ ಆರೋಗ್ಯಾಧಿಕಾರಿ ಡಾ.ಪ್ರಭಾಕರ ಕುಂದೂರ. ಡಾ.ಪ್ರೇಮಾ ಪೂಜಾರ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಚಂದ್ರು ಹಿತ್ತಲಮನಿ, ಉಮಾ, ಎ.ಪಿ. ಪಾಟೀಲ್, ಕೃಷ್ಣಪ್ಪ ಇತರರು ಉಪಸ್ಥಿತರಿದ್ದರು. ಸಂಗೀತಾ ದೊಡ್ಡಮನಿ ವಂದಿಸಿದರು.



ಹಾವೇರಿ: ನಗರದ ದೇವಧರ ಆಸ್ಪತ್ರೆಯಲ್ಲಿ ಮಂಗಳವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ ಹಾಗೂ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಘಟಕದ ಸಹಯೋಗದಲ್ಲಿ ಆಯೋಜಿಸಲಾದ ಜಿಲ್ಲಾಮಟ್ಟದ ವಿಶ್ವ ಮಲೇರಿಯಾ ದಿನ ಕಾರ್ಯಕ್ರಮವನ್ನು ಜಿಲ್ಲಾ ಕೀಟ ಶಾಸ್ತ್ರಜ್ಞ ಶ್ರೀಕಾಂತ ಪಾಟೀಲ ಅವರು ಉದ್ಘಾಟಿಸಿದರು.

ಮೇ 3ಕ್ಕೆ ನೀಟ್ ಪರೀಕ್ಷೆ | ಡಿಸಿ ಡಾ.ವಿಜಯಮಹಾಂತೇಶ ಸೂಚನೆ

ವ್ಯವಸ್ಥಿತ, ಪಾರದರ್ಶಕ ಪರೀಕ್ಷೆ ನಡೆಸಿ

ಹಾವೇರಿ: ಜಿಲ್ಲೆಯಲ್ಲಿ 2026ನೇ ಸಾಲಿನ ನೀಟ್ ಪರೀಕ್ಷೆ ಇದೇ ಮೇ 3ರಂದು ರವಿವಾರ ಹಾವೇರಿ ನಗರದ ಐದು ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಪಾರದರ್ಶಕವಾಗಿ ಹಾಗೂ ವ್ಯವಸ್ಥಿತವಾಗಿ ಪರೀಕ್ಷೆ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜರುಗಿದ ನೀಟ್ ಪರೀಕ್ಷಾ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪರೀಕ್ಷಾ ಕಾರ್ಯಕ್ಕೆ ನಿಯೋಜಿತ ಎಲ್ಲರೂ ಪರೀಕ್ಷಾ ಮಾರ್ಗಸೂಚಿಗಳನ್ನು ಪಾಲಿಸಬೇಕು. ನೀಟ್ ಪರೀಕ್ಷೆ ಬಹಳ ಸೂಕ್ಷ್ಮವಾಗಿದೆ, ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾದ ಅಧಿಕಾರಿ, ಮಾರ್ಗಾಧಿಕಾರಿ, ವೀಕ್ಷಕರು, ಸ್ಕ್ವಾಡ್‌ಗಳು, ಕೊಠಡಿ ಮೇಲ್ವಿಚಾರಕರು ತಮ್ಮ ಕರ್ತವ್ಯಗಳಲ್ಲಿ ಯಾವುದೇ ಲೋಪವಾಗದಂತೆ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಬೇಕು. ಪರೀಕ್ಷಾ ಕೇಂದ್ರದ ಹೊರ ವಲಯ ಹಾಗೂ ಕೊಠಡಿಯ ಒಳಗೆ ಶಿಸ್ತುಬದ್ಧವಾಗಿ ಪರೀಕ್ಷಾ ಪ್ರಾಧಿಕಾರದ ನಿಯಮಗಳ ಉಲ್ಲಂಘನೆಯಾಗದಂತೆ ಎಚ್ಚರಿಕೆ ವಹಿಸಿ ಎಂದು ನಿರ್ದೇಶನ ನೀಡಿದರು.

ಸಿಸಿ ಟಿವಿ, ಜಾಮರ್: ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಟಿವಿ ಅಳವಡಿಕೆ, ಜಾಮರ್ ಹಾಗೂ ಕೊಠಡಿಯೊಳಗೆ ಗಡಿಯಾರ ಅಳವಡಿಕೆ ಕಡ್ಡಾಯವಾಗಿದೆ. ಪರೀಕ್ಷಾರ್ಥಿಗಳಿಗೆ ಶುದ್ಧ ಕುಡಿಯುವ ನೀರು, ಗಾಳಿ, ಬೆಳಕು, ಸೂಕ್ತ ಪೀಠೋಪಕರಣ ಒಳಗೊಂಡಂತೆ ಮೂಲಭೂತ ಸೌಕರ್ಯ ಒದಗಿಸಬೇಕು. ಪರೀಕ್ಷಾರ್ಥಿಗಳು ಹಾಗೂ ಕೊಠಡಿಯ ಮೇಲ್ವಿಚಾರಕರಾಗಲಿ ಪರೀಕ್ಷಾ ಕೇಂದ್ರದೊಳಗೆ ಅತ್ಯಾಧುನಿಕ ಇಲೆಕ್ಟ್ರಾನಿಕ್ ಉಪಕರಣ ಗಳಾದ ಮೊಬೈಲ್, ಬ್ಲೂಟೂತ್, ಇಯರ್ ಫೋನ್‌ಗಳು, ಮೈಕ್ರೋಫೋನ್, ಪೇಜರ್, ವೈರಲೆಸ್ ಸೆಟ್, ಲಾಗ್ ಟೇಬಲ್, ಕ್ಯಾಲಕ್ಯುಲೇಟರ್ ಹಾಗೂ ಗಡಿಯಾರಗಳನ್ನು ನಿಷೇಧಿಸಿದೆ. ಈ ಕುರಿತಂತೆ ಅಧಿಕಾರಿಗಳು ಎಚ್ಚರವಹಿಸಬೇಕು ಎಂದು ಸೂಚಿಸಿದರು.

ಸಾರಿಗೆ ವ್ಯವಸ್ಥೆ: ಪರೀಕ್ಷಾ ದಿನದಂದು ಪರೀಕ್ಷಾರ್ಥಿಗಳಿಗೆ ಅನುಕೂಲವಾಗುವಂತೆ ಸಂಬಂಧಪಟ್ಟ ಪರೀಕ್ಷಾ ಕೇಂದ್ರಗಳಿಗೆ ನಿಗಧಿತ ಸಮಯಕ್ಕೆ ಅಭ್ಯರ್ಥಿಗಳು ತಲುಪಲು ಪರೀಕ್ಷಾ ಕೇಂದ್ರಗಳಿಗೆ ಕೇಂದ್ರ ಬಸ್ ನಿಲ್ದಾಣದಿಂದ ವಿಶೇಷ ಬಸ್ ವ್ಯವಸ್ಥೆ ಮಾಡಬೇಕು ಎಂದು ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳಿಗೆ ಸೂಚನೆ ನೀಡಿದರು.

ವೈದ್ಯಕೀಯ ವ್ಯವಸ್ಥೆ : ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಆರೋಗ್ಯ ಸಹಾಯಕರನ್ನು ನಿಯೋಜನೆ ಮಾಡಬೇಕು ಹಾಗೂ ಬೇಸಿಗೆ ಕಾಲವಾದ್ದರಿಂದ ತುರ್ತು ಸಂದರ್ಭಕ್ಕೆ ಬೇಕಾದ ಓಆರ್‌ಎಸ್ ಹಾಗೂ ಇತರೆ ಔಷಧಿಗಳು ಆಂಬುಲೆನ್ಸ್ ವ್ಯವಸ್ಥೆ ಮಾಡಬೇಕು ಎಂದು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಎಸ್ಪಿ ಯಶೋಧಾ ವಂಟಗೋಡಿ ಮಾತನಾಡಿ, ಪರೀಕ್ಷೆಗಳು ಪಾರದರ್ಶಕವಾಗಿ ಶಾಂತಯುತವಾಗಿ ನಡೆಯಲು ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗುತ್ತದೆ. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಕಾರ್ಯಕ್ಕೆ ಉಪಯೋಗಿಸುವ ಕೊಠಡಿಗಳನ್ನು ಹೊರತುಪಡಿಸಿ ಹೆಚ್ಚುವರಿ ಕೊಠಡಿಗಳಿಗೆ ಬೀಗ ಹಾಕಬೇಕು ಎಂದು ಸಲಹೆ ನೀಡಿದರು.

ಅಪರ ಜಿಲ್ಲಾಧಿಕಾರಿ ಡಾ.ಎಲ್ ನಾಗರಾಜ್ ಮಾತನಾಡಿ, ಪರೀಕ್ಷೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವ ದೃಷ್ಟಿಯಿಂದ ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಫ್ರಿಸ್ಕಿಂಗ್ ಮಾಡಲಾಗುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ತೆರಳುವ ಮೊದಲು ಅವರ ತಪಾಸಣೆ ನಡೆಸಬೇಕು ಎಂದರು.

ಕೇಂದ್ರಿಯ ವಿದ್ಯಾಲಯ ಪ್ರಾಂಶುಪಾಲ ಪಿ.ಎಸ್. ರಾಜು ಮಾತನಾಡಿ, ಜಿಲ್ಲೆಯಲ್ಲಿ 2,360 ಅಭ್ಯರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ. ಈಗಾಗಲೇ ಪರೀಕ್ಷಾ ಪೂರ್ವ ತಯಾರಿ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಡಿಡಿಪಿಐ ಮೋಹನ ದಂಡಿನ, ಪರೀಕ್ಷಾ ಕೇಂದ್ರದ ಮುಖ್ಯಸ್ಥರು, ಪ್ರಾಚಾರ್ಯರು ಉಪಸ್ಥಿತರಿದ್ದರು.



ವಸ್ತ್ರ ಸಂಹಿತೆ

ನಿಗದಿಪಡಿಸಿದ ವಸ್ತ್ರ ಸಂಹಿತೆ (ಡ್ರೆಸ್ ಕೋಡ್)ನ್ನು ಪ್ರತಿಯೊಬ್ಬ ಅಭ್ಯರ್ಥಿಯು ಕಡ್ಡಾಯವಾಗಿ ಪಾಲಿಸಬೇಕು. ಉದ್ದ ತೋಳಿನ ಹಾಗೂ ತಲೆ ಮುಚ್ಚುವ ಉಡುಪು ಧರಿಸಿ ಬರುವಂತಿಲ್ಲ. ಬೆಲ್ಟ್, ಟೋಪಿ ಹಾಗೂ ಯಾವುದೇ ಆಭರಣಗಳನ್ನು ಧರಿಸುವಂತಿಲ್ಲ (ಮಂಗಳಸೂತ್ರ ಹೊರತು ಪಡಿಸಿ). ಶೂ ಹಾಕಿಕೊಂಡು ಬರುವಂತಿಲ್ಲ, ಸಾಧಾ ಚಪ್ಪಲಿಗಳನ್ನು ಧರಿಸಿರಬೇಕು ಎಂದು ತಿಳಿಸಿದರು.

ಪರೀಕ್ಷಾ ಕೇಂದ್ರಗಳು

ಹಾವೇರಿ ನಗರದ ಗುದ್ಲೆಪ್ಪ ಹಳ್ಳಿಕೇರಿ ಪದವಿ ಪೂರ್ವ ಕಾಲೇಜು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಬಾಲಕರ ಪದವಿ ಪೂರ್ವ ಕಾಲೇಜು, ದೇವಗಿರಿ ಸರ್ಕಾರಿ ಇಂಜನೀಯರ್ ಕಾಲೇಜ ಹಾಗೂ ಗಾಂಧಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ನೀಟ್ ಪರೀಕ್ಷೆಗಳು ನಡೆಯಲಿವೆ.

ಸತ್ಯದ ಮಾರ್ಗದಲ್ಲಿ ಬದುಕಿ: ಬೊಮ್ಮಾಯಿ

ಬ್ಯಾಡಗಿ: ನಾವು ನ್ಯಾಯ, ನೀತಿ, ಧರ್ಮದಿಂದ ಬದುಕಬೇಕು. ಜಾತಿಯ ಧರ್ಮ ಅಲ್ಲ, ಸತ್ಯದ ಮಾರ್ಗದಲ್ಲಿ ಬದುಕಬೇಕು. ಸತ್ಯದ ಮಾರ್ಗದಿಂದ ಬದುಕಬೇಕೆಂದರೆ ದೇವಸ್ಥಾನದಂತಹ ಶ್ರದ್ಧಾ ಕೇಂದ್ರ ಮಾಡಿದಾಗ ಅಲ್ಲಿ ಭಕ್ತರಲ್ಲಿ ಭಕ್ತಿಯು ಭಾವನೆ ಬರಲು ಸಾಧ್ಯವಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಮಂಗಳವಾರ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಘಾಳಪೂಜಿ ಗ್ರಾಮದಲ್ಲಿ ಶ್ರೀ ವೀರ ಮಾರುತಿ ದೇವಸ್ಥಾನ ಕಟ್ಟಡದ ಲೋಕಾರ್ಪಣೆ ಹಾಗೂ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕೆತ್ತನೆ ಅತ್ಯಂತ ಕಲಾತ್ಮಕವಾಗಿದೆ. ಜಕಣಾಚಾರ್ಯರ ಕಾಲದ ದೇವಸ್ಥಾನದಂತೆ ನಿರ್ಮಾಣ ಆಗಿದೆ. ನಾವು ಧರ್ಮದಿಂದ ಬದುಕಬೇಕು. ನ್ಯಾಯ, ನೀತಿ, ಧರ್ಮದಿಂದ ಬದುಕಬೇಕು. ಜಾತಿಯ ಧರ್ಮ ಅಲ್ಲ, ಸತ್ಯದ ಮಾರ್ಗದಲ್ಲಿ ಬದುಕಬೇಕು. ಸತ್ಯದ ಮಾರ್ಗದಿಂದ ಬದುಕಬೇಕೆದರೆ ಇಂತಹ ಶ್ರದ್ಧಾ ಕೇಂದ್ರ ಮಾಡಿದಾಗ ಅಲ್ಲಿ ಭಕ್ತರಲ್ಲಿ ಭಕ್ತಿಯ ಭಾವನೆ ಬರಲು ಸಾಧ್ಯವಿದೆ. ಎಲ್ಲಿ ಧರ್ಮ ಇದೆ. ಅಲ್ಲಿ ನ್ಯಾಯ ಇದೆ ಎಂದು ಹೇಳಿದರು.

ನಮ್ಮಲ್ಲಿ ಆಸೂಯೆ, ದುಃಖ ದುಮ್ಮಾನ ಇದೆ. ಅದು ಕಡಿಮೆಯಾಗಬೇಕೆಂದರೆ ಪ್ರತಿಶನಿವಾರ ಇಡೀ ಊರಿನ ಜನರು ಬಂದು ದೇವರ ಪೂಜೆ ಮಾಡಬೇಕು. ಪ್ರಾಣ ಪ್ರತಿಷ್ಠಾನ ಎಂದರೆ ನಮ್ಮ ಪ್ರಾಣವನ್ನು ಭಕ್ತಿಯ ಮುಖಾಂತರ ಕೊಡಬೇಕು. ಭಕ್ತಿ ಎಂದರೆ ಉತ್ಕೃಷ್ಟವಾದ ಪೀತಿ, ಉತ್ಕೃಷ್ಟವಾದ ಪೀತಿ ಎಂದರೆ ಕರಾರು ರಹೀತವಾದ ಭಕ್ತಿ, ಅವನಲ್ಲಿ ಕರಗಿ ಲೀನವಾಗುವುದು. ಭಕ್ತಿ ದೇವರ ಜೊತೆ ವ್ಯವಹಾರ ಮಾಡಲು ಆಗುವುದಿಲ್ಲ. ದೇವಸ್ಥಾನದ ಮುಂದೆ ನಿರಂತರ ಸಾಮೂಹಿಕ ಪ್ರಾರ್ಥನೆ ಮಾಡಬೇಕು ಎಂದು ಹೇಳಿದರು.

ಈ ಸಂಧರ್ಭದಲ್ಲಿ ಮಾಜಿ ಶಾಸಕರು ಹಾಗೂ ಭಾರತೀಯ ಜನತಾ ಪಾರ್ಟಿಯ ಜಿಲ್ಲಾಧ್ಯಕ್ಷರಾದ ವೀರುಪಾಕ್ಷಪ್ಪ ಬಳ್ಳಾರಿ, ಬ್ಯಾಡಗಿ ಮಂಡಳದ ಅಧ್ಯಕ್ಷರಾದ ನಿಂಗಪ್ಪ ಬಟ್ಟಲಕಟ್ಟಿ, ಕಮೀಟಿಯ ಅಧ್ಯಕ್ಷರಾದ ಹನುಮಂತಪ್ಪ ಹಂಚಿನಗೌಡ್ರ ಸೇರಿದಂತೆ ಗ್ರಾಮದ ಹಿರಿಯರು ಹಾಗೂ ಪ್ರಮುಖರು ಉಪಸ್ಥಿತರಿದ್ದರು.



ಆಸ್ಪತ್ರೆಗೆ ಶಾಸಕ ಮಾನೆ ಭೇಟಿ: ಪರಿಶೀಲನೆ

ಹಾನಗಲ್: ಪಟ್ಟಣದ ತಾಲೂಕು ಆಸ್ಪತ್ರೆಯಲ್ಲಿ ಏ.25ರಂದು ಅಗ್ನಿ ಅವಘಡ ಸಂಭವಿಸಿ ಸುಮಾರು 80 ಲಕ್ಷ ರೂ.ಗಳ ವೈದ್ಯಕೀಯ ಪೀಠೋಪಕರಣ ಸೇರಿದಂತೆ ಅಪಾರ ಪ್ರಮಾಣದ ಔಷಧಿ ಸಾಮಗ್ರಿಗಳು ಬೆಂಕಿಗೆ ಸುಟ್ಟು ಕರಕಲಾದ ಹಿನ್ನೆಲೆಯಲ್ಲಿ ಸೋಮವಾರ ಶಾಸಕ ಶ್ರೀನಿವಾಸ ಮಾನೆ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಅಗ್ನಿ ಅವಘಡಕ್ಕೀಡಾದ ಔಷಧ ದಾಸ್ತಾನು ಕೊಠಡಿಗೆ ತೆರಳಿ ಪರಿಸ್ಥಿತಿ ಅವಲೋಕಿಸಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಅಖಿಲೇಶ್ ಮಾಳೋಧೆ ಹಾಗೂ ಸಿಬ್ಬಂದಿಯಿಂದ ಅಗತ್ಯ ಮಾಹಿತಿ ಪಡೆದರು.

ಔಷಧ ದಾಸ್ತಾನು ಕೊಠಡಿಯ ಪಕ್ಕದಲ್ಲಿರುವ ಇದೇ ಸಂಧರ್ಭದಲ್ಲಿ ಡಯಾಲಿಸಿಸ್ ಕೊಠಡಿಯನ್ನೂ ವೀಕ್ಷಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ಆಕಸ್ಮಿಕ ಅಗ್ನಿ ಅವಘಡದಿಂದ ಔಷಧ ದಾಸ್ತಾನು ಪೂರ್ಣ ಸುಟ್ಟು ಹೋಗಿದೆ. ಕೆಲ ವೈದ್ಯಕೀಯ ಉಪಕರಣಗಳಿಗೂ ಹಾನಿಯಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಆಸ್ಪತ್ರೆಯ ಸಿಬ್ಬಂದಿ ಮತ್ತು ಸಾರ್ವಜನಿಕರು ಸಮಯಪ್ರಜ್ಞೆ ಮೆರೆದು ರೋಗಿಗಳನ್ನು ಸುರಕ್ಷಿತವಾಗಿ ಹೊರಗೆ ಕರೆ ತಂದಿದ್ದಾರೆ. ಆಸ್ಪತ್ರೆಯಲ್ಲಿ ವೈದ್ಯಕೀಯ ಸೇವೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಅಕ್ಕಿಆಲೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸೇವೆ ನೀಡಲಾಗುತ್ತಿದೆ. ಬ್ಯಾಡಗಿ, ಹಾವೇರಿ, ಶಿಗ್ಗಾಂವಿ ಮತ್ತು ಹುಬ್ಬಳ್ಳಿಯಲ್ಲಿ ರೋಗಿಗಳಿಗೆ ಡಯಾಲಿಸಸಗೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದ ಶಾಸಕ ಮಾನೆ ಬುಧವಾರದಿಂದ ತುರ್ತು ಚಿಕಿತ್ಸೆ, ಹೊರ ರೋಗಿ ವಿಭಾಗದಲ್ಲಿ ಚಿಕಿತ್ಸೆ ನೀಡಲು ಸೂಚಿಸಲಾಗಿದೆ. ಒಂದು ವಾರದ ನಂತರ ಆಸ್ಪತ್ರೆ ಪೂರ್ಣ ಪ್ರಮಾಣದಲ್ಲಿ ಆರಂಭಗೊಳ್ಳಲಿದೆ. ಅವಘಡದಲ್ಲಿ ಔಷಧ ದಾಸ್ತಾನು ಹಾಳಾಗಿರುವ ಬಗ್ಗೆ ಆರೋಗ್ಯ ಇಲಾಖೆಯ ಆಯುಕ್ತರ ಗಮನ ಸೆಳೆಯುವುದಾಗಿ ವಿವರಿಸಿದರು.

ಈ ವೇಳೆ ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ವಿಜಯಕುಮಾರ ದೊಡ್ಡಮನಿ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಮುಖಂಡರಾದ ಈರಣ್ಣ ಬೈಲವಾಳ, ಇರ್ಫಾನ್ ಇನಾಂದಾರ, ಇರ್ಫಾನ್ ಮಿಠಾಯಿಗಾರ, ಖಾಲಿದ ಶೇಷಗಿರಿ, ರವಿ ದೇಶಪಾಂಡೆ, ಹನೀಫ್ ಬಂಕಾಪೂರ, ಶಿವು ತಳವಾರ, ಶಿವು ಭದ್ರಾವತಿ, ಅಮಾನ್ ಮೂಡೂರ, ಭರತ್ ಶೇತಸನದಿ, ಮುಸ್ತಫಾ, ಆರೋಗ್ಯ ರಕ್ಷಾ ಸಮಿತಿ ಸದಸ್ಯರು, ಮುಖಂಡರು ಇದ್ದರು.



ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ: ಹಕ್ಕುಪತ್ರ ವಿತರಣೆ

ರಾಣೇಬೆನ್ನೂರ: ನೂರಾರು ವರ್ಷಗಳಿಂದ ಖಾಸಗಿ ಅಥವಾ ಸರ್ಕಾರಿ ಭೂಮಿಯಲ್ಲಿ ಅಕ್ರಮ, ಅನಧಿಕೃತವಾಗಿ ತಮ್ಮ ಪೂರ್ವಜರು ಮನೆಗಳನ್ನು ಅಥವಾ ಗುಡಿಸಲುಗಳನ್ನು ಕಟ್ಟಿಕೊಂಡು ಇಲ್ಲಿಯವರೆಗೂ ಜೀವನವನ್ನು ಸಾಗಿಸುತ್ತಾ ಬಂದಿದ್ದೀರಿ. ಇದರಿಂದ ತಮಗೆ ಯಾವುದೇ ಸ್ವಂತವೆಂಬ ಸೂರು ಇಲ್ಲದೆ ಅನಧಿಕೃತವಾಗಿ ಬದುಕುವಂತಾಗಿತ್ತು. ರಾಜ್ಯ ಸರ್ಕಾರ ಇದೀಗ ಗ್ಯಾರಂಟಿ ಯೋಜನೆಯಲ್ಲಿ ಜಾರಿಗೆ ತಂದು ಸಕ್ರಮವಾಗಿ ಮಾಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಬ್ಯಾಡಗಿ ಶಾಸಕ ಹಾಗೂ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ ಹೇಳಿದರು.

ತಾಲೂಕಿನ ವೆಂಕಟಪುರ ಗ್ರಾಮದಲ್ಲಿ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ ಕಾರ್ಯಕ್ರಮದಲ್ಲಿ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು. ಗ್ರಾಮೀಣ ಅಭಿವೃದ್ಧಿ ಪಡಿಸುವುದೇ ಸರ್ಕಾರದ ಮುಖ್ಯ ಉದ್ದೇಶವಾಗಿದೆ ಎಂದರು.

ಈ ಹಿಂದೆ ಮಾಜಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು ಉಳುವವನೇ ಭೂಮಿ ಒಡೆಯ ನೀತಿ ಜಾರಿಗೆ ತಂದು ಬಡವರ ಪಾಲಿಗೆ ಆಶಾ ಕಿರಣವಾಗಿದ್ದರು. ಇದೀಗ ಮತ್ತೆ ಅಕ್ರಮ ಭೂಮಿ ಸಕ್ರಮಗೊಳಿಸಿ ಪಟ್ಟಾ ವಿತರಿಸಿ ಸ್ವಾವಲಂಭಿ ಮತ್ತು ಸ್ವಂತಿಕೆ ನನ್ನದು ಎನ್ನುವ ಸ್ವಾಭಿಮಾನ ತಂದುಕೊಟ್ಟಿದ್ದಾರೆ. ಪಟ್ಟ ಸರಿಯಾದ ರೀತಿಯಲ್ಲಿ ಇಟ್ಟುಕೊಂಡು ಆಯಾ ಸಂದರ್ಭದಲ್ಲಿ ಅಗತ್ಯವಿರುವ ಸರ್ಕಾರದ ಎಲ್ಲಾ ಸೌಲತ್ತುಗಳನ್ನು ಪಡೆದುಕೊಳ್ಳಲು ಈ ಯೋಜನೆ ಸಹಕಾರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜಪ್ಪ ಸವಣೂರು, ಹನುಮಂತಪ್ಪ ಶಿಕಾರಿ, ರೂಪ್ಲೆಪ್ಪ ಹಂಚಿನಮನಿ, ಶಾಂತಾ ಕಿವುಡನವರ, ನಾಗವ್ವ ಬಿ, ಹನುಮಂತಪ್ಪ, ಸೋಮಪ್ಪ ಸೇರಿದಂತೆ ಮತ್ತಿತರರು ಇದ್ದರು.



ಚುನಾವಣೆಯಿಂದ ಕಾಂಗ್ರೆಸ್ ಬಹಿಷ್ಕರಿಸಿ: ಶೆಟ್ಟಿ

ಬ್ಯಾಡಗಿ: ಕೇಂದ್ರದ ಮೋದಿ ನೇತೃತ್ವದ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿದ್ದ ನಾರೀ ಶಕ್ತಿ ವಂದನ್ ಮಸೂದೆಗೆ ಅಡ್ಡ ಪಡಿಸುವ ಮೂಲಕ ದೇಶದ ಮಹಿಳೆಯರ ಸ್ವಾಭಿಮಾನಕ್ಕೆ ಧಕ್ಕೆ ತಂದು ಮಹಾ ದ್ರೋಹ ಬಗೆದಿರುವ ಭ್ರಷ್ಟ ಕಾಂಗ್ರೆಸ್ ಮತ್ತು ಅವರಿಗೆ ಬೆಂಬಲ ಸೂಚಿಸಿದ ಪಕ್ಷಗಳನ್ನು ಚುನಾವಣೆಯಲ್ಲಿ ಬಹಿಷ್ಕರಿಸುವ ಮೂಲಕ ದೇಶದ ಮಹಿಳೆಯರು ಅವರಿಗೆ ತಕ್ಕ ಪಾಠ ಕಲಿಸುತ್ತೇವೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿದ್ಯಾ ಶೆಟ್ಟಿ ಹೇಳಿದರು.

ಪಟ್ಟಣದ ಬಿಜೆಪಿ ಕಾರ್ಯಾಲಯದಿಂದ ತಹಶೀಲ್ದಾರ್ ಕಚೇರಿ ಅವರಿಗೆ ಪಾದಯಾತ್ರೆ ನಡೆಸಿ ತಹಶೀಲ್ದಾರ್ ಕಚೇರಿಯಲ್ಲಿ ಕಾಂಗ್ರೆಸ್ ಪಕ್ಷ ಹಾಗೂ ಇಂಡಿ ಒಕ್ಕೂಟದ ಪಕ್ಷಗಳ ವಿರುದ್ಧ ಆಕ್ರೋಶ ಹೊರ ಹಾಕಿ ಮಹಿಳಾ ಮೋರ್ಚಾ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದವರು. ಸೋನಿಯಾ ಗಾಂಧಿ ರಾಹುಲ್ ಗಾಂಧಿ ಸಿದ್ದರಾಮಯ್ಯ ಹಾಗೂ ಮಲ್ಲಿಕಾರ್ಜುನ್ ಖರ್ಗೆ ಇವರ ವಿರುದ್ಧ ಘೋಷಣೆ ಕೂಗಿದರು.

ಮಹಿಳೆಯರಿಗೆ ಕಾಂಗ್ರೆಸ್ ಮಾಡಿರುವ ಈ ಮಹಾ ದ್ರೋಹದ ಕುರಿತು ಎಚ್ಚೆತ್ತುಕೊಂಡು ಬೀದಿಗಿಳಿದು ಹೋರಾಟ ಮಾಡುವ ಸಂಕಲ್ಪ ಮಾಡಬೇಕು ನಿಮ್ಮೊಂದಿಗೆ ಬಿಜೆಪಿ ಪಕ್ಷವಿದೆ ಮತ್ತು ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸೋಣ ಎಂದರು.

ತಾಲೂಕು ಮಹಿಳಾ ಮೂರ್ಚಾ ಅಧ್ಯಕ್ಷ ರಾದ ಸರೋಜಮ್ಮ ಉಳ್ಳಾಗಡ್ಡಿ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರು ವಿರುಪಾಕ್ಷಪ್ಪ ಬಳ್ಳಾರಿ, ಬಿಜೆಪಿ ತಾಲೂಕು ಅಧ್ಯಕ್ಷ ನಿಂಗಪ್ಪ ಬತ್ತಲ ಕಟ್ಟಿ ಮಾತನಾಡಿದರು.

ಬಿಜೆಪಿ ಪಕ್ಷದ ಸದಸ್ಯರಾದ ಗಾಯತ್ರಿ ರಾಯ್ಕರ್. ಕಲಾವತಿ ಬಡಿಗೇರ್. ಮುರಿಗೆಪ್ಪ ಶೆಟ್ಟರ್. ಎಂಎಸ್ ಪಾಟೀಲ್ .ಸುರೇಶ ಅಸಾದಿ. ವಿಜಯ್ ಮಾಳಗಿ. ಎಂಡಿ ಚಿಕ್ಕಣ್ಣನವರ. ಜಿತೇಂದ್ರ ಸುಣಗಾರ. ಹನುಮಂತಪ್ಪ ಮ್ಯಾಗೇರಿ. ಶಂಕರಗೌಡ ಪಾಟೀಲ. ನಾಗರಾಜ್ ಹಾವನೂರ. ಲಿಂಗರಾಜ್ ಅಡಿನವರ್ ಹಾಗೂ ಅನೇಕ ಮಹಿಳೆಯರು ಮುಖಂಡರು ಉಪಸ್ಥಿತರಿದ್ದರು.



ಅರ್ಹ ಫಲಾನುಭವಿಗಳಿಗೆ ಮನೆಗಳ ಹಕ್ಕುಪತ್ರ ವಿತರಣೆ

ಹಾನಗಲ್: ಭೂ ಗ್ಯಾರಂಟಿ ಕಾರ್ಯಕ್ರಮದಡಿ ಬಡವರು, ಮಧ್ಯಮ ವರ್ಗಗಳಿಗೆ ಸೇರಿದ ಕುಟುಂಬಗಳಿಗೆ ಕನಿಷ್ಠ 8 ರಿಂದ 15 ಲಕ್ಷದ ವರೆಗಿನ ಆಸ್ತಿ ನೋಂದಣಿ ಮಾಡಿಕೊಡಲಾಗಿದೆ. ಇನ್ನು ಮುಂದೆ ವಾಸಿಸುವವರೇ ಮನೆಗಳ ಮಾಲಿಕರಾಗಲಿದ್ದಾರೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ಸೋಮವಾರ ಸಂಜೆ ತಾಲೂಕಿನ ಅರಳೇಶ್ವರ ಗ್ರಾಮದಲ್ಲಿ ನಡೆದ ಅರಳೇಶ್ವರ ಹಾಗೂ ಸುರಳೇಶ್ವರ ಗ್ರಾಪಂ ವ್ಯಾಪ್ತಿಯ 250ಕ್ಕೂ ಹೆಚ್ಚು ಫಲಾನುಭವಿಗಳಿಗೆ ಭೂಗ್ಯಾರಂಟಿ ಕಾರ್ಯಕ್ರಮದಡಿ ಹಕ್ಕುಪತ್ರ ವಿತರಿಸಿ ಮಾತನಾಡಿದ ಅವರು, ಒಂದು ಕಾಲದಲ್ಲಿ ಇಂದಿರಾ ಗಾಂಧಿ ಅವರು ಊಳುವವನಿಗೆ ಭೂಮಿ ಕೊಟ್ಟು ಹಸಿರು ಕ್ರಾಂತಿ ಮಾಡಿದರು. ಈಗ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ, ಸಚಿವರಾದ ಕೃಷ್ಣ ಬೈರೇಗೌಡ, ಶಿವಾನಂದ ಪಾಟೀಲ ಅವರ ಕಾಲದಲ್ಲಿ ಅತಂತ್ರವಾಗಿ ವಾಸಿಸುತ್ತಿದ್ದ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿ ವಾಸಿಸುವವರನ್ನೇ ಮನೆಯ ಮಾಲಿಕರನ್ನಾಗಿಸಲಾಗಿದೆ. ಮನೆ ಮಾಲಿಕತ್ವ ಇಲ್ಲದ ಕಾರಣ ಯಾವುದೇ ಸೌಲಭ್ಯಗಳಿಂದ ಸಾವಿರಾರು ಕುಟುಂಬ ಗಳು ವಂಚಿತವಾಗಿದ್ದವು. ಈಗ ಬ್ಯಾಂಕ್ ಅಧಿಕಾರಿಗಳೇ ಮನೆ ಬಾಗಿಲಿಗೆ ಬಂದು ಸಾಲ ಸೌಲಭ್ಯ ನೀಡಲಿದ್ದಾರೆ ಎಂದರು.

ತಹಶೀಲ್ದಾರ್ ರೇಣುಕಾ ಎಸ್. ಮಾತನಾಡಿ, 40, 50 ವರ್ಷಗಳಿಂದ ಸರ್ಕಾರಿ ಮತ್ತು ಖಾಸಗಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ದಾಖಲೆ ರಹಿತವಾಗಿ ಅತಂತ್ರ ಜೀವನ ನಡೆಸುತ್ತಿದ್ದ ಕುಟುಂಬಗಳನ್ನೀಗ ಸ್ವತಂತ್ರಗೊಳಿಸಲಾಗಿದೆ. ತಾಲೂಕಿನಲ್ಲಿ 13 ಸಾವಿಕ್ಕೂ ಹೆಚ್ಚು ಕುಟುಂಬಗಳು ಯಾವುದೇ ದಾಖಲೆಗಳಿಲ್ಲದ ಕಾರಣ ಇಂದಲ್ಲ, ನಾಳೆ ಯಾವುದಾದರೂ ಸಮಸ್ಯೆ ಎದುರಿಸಬೇಕಿತ್ತು. ಯಾವುದೇ ರೀತಿಯ ಸಮಸ್ಯೆ ಎದುರಿಸಬಾರದು ಎನ್ನುವ ಉದ್ದೇಶದಿಂದ ಹಕ್ಕುಪತ್ರ ವಿತರಿಸಿ, ಮನೆಯ ಮಾಲಿಕತ್ವ ನೀಡಲಾಗಿದೆ. ಸರ್ಕಾರದ ಮಹತ್ವಾಕಾಂಕ್ಷೆಯ ಈ ಕಾರ್ಯಕ್ರಮದಿಂದ ಬಡವರು ಮತ್ತು ಮಧ್ಯಮ ವರ್ಗಗಳಿಗೆ ಸೇರಿದ ಕುಟುಂಬಗಳಿಗೆ ಅನುಕೂಲವಾಗಿದೆ. ಶಾಸಕರಾದ ಶ್ರೀನಿವಾಸ ಮಾನೆ ಅವರ ಮಾರ್ಗದರ್ಶನದಲ್ಲಿ ಅಧಿಕಾರಿಗಳು ಕಳೆದ 2 ವರ್ಷಗಳಿಂದ ಹಗಲಿರುಳು ಕೆಲಸ ಮಾಡಿದ್ದಾರೆ. ಸರ್ಕಾರವೇ ಮನೆ ಬಾಗಿಲಿಗೆ ಬಂದು ಅನುಕೂಲ ಕಲ್ಪಿಸಿಕೊಟ್ಟಿದೆ ಎಂದರು.

ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಅರಳೇಶ್ವರ, ದಯಾನಂದ ನಾಗನೂರ, ಕೊಟ್ರಪ್ಪ ಅಂಗಡಿ, ಶಿವಾನಂದ ಕನ್ನಕ್ಕನವರ, ಬಸವರಾಜ ಲೇಖಿ, ಮಲ್ಲೇಶ ಜಾವೋಜಿ, ಫಕೀರಪ್ಪ ತೋಟದ, ಮಕ್ಬೂಲ್ ಹಿತ್ತಲಮನಿ, ಚನ್ನಬಸಗೌಡ ಕಲ್ಲಗೌಡ್ರ, ಲಿಂಗರಾಜ ಮಡಿವಾಳರ, ಅರುಣ ಮಣ್ಣಮ್ಮನವರ, ಶಿವಾನಂದ ಕಾಡಮ್ಮನವರ, ದಯಾನಂದ ಕನ್ನಕ್ಕನವರ, ಪ್ರಕಾಶಪ್ಪ ಲಕ್ಕೊಳ್ಳಿ, ಹನುಮಂತ ಅಂಬಿಗೇರ, ರಾಮಣ್ಣ ಕುರಿಯವರ, ಪ್ರಕಾಶ ಯಳ್ಳೂರ, ಪುಟ್ಟಪ್ಪ ಕುರಿಯವರ, ಹನುಮಂತ ನಾಯ್ಕ, ಶಿವಪುತ್ರಪ್ಪ ಬಾರ್ಕಿ, ಗಣೇಶ ಸಂಬರಗಿ ಸೇರಿದಂತೆ ಇನ್ನೂ ಹಲವರು ಇದ್ದರು.



ಪರಿಸರ ಸಂರಕ್ಷಣೆ ನಮ್ಮೆಲ್ಲರ ಮೂಲಭೂತ ಕರ್ತವ್ಯ

ಹಾವೇರಿ: ಮೂಲಭೂತ ಹಕ್ಕುಗಳಿಗಾಗಿ ಹೋರಾಡುವ ನಾವುಗಳು ಈ ಭೂಮಿಯನ್ನು ಸಂರಕ್ಷಿಸುವುದನ್ನೆ ಮರೆತುಬಿಟ್ಟಿದ್ದೇವೆ. ವಿನಾಶದತ್ತ ಸಾಗುತ್ತಿರುವ ಮನುಕುಲವನ್ನು ಉಳಿಸಲು ಈಗಲಾದರೂ ಎಚ್ಚೆತ್ತುಕೊಳ್ಳಬೇಕಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಬಿರಾದಾರ ದೇವಿಂದ್ರಪ್ಪಾ ಅವರು ಹೇಳಿದರು.

ನಗರದ ಪ್ರಾದೇಶಿಕ ಅರಣ್ಯ ವಿಭಾಗದ ಕಚೇರಿ ಆವರಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಅಂತರಾಷ್ಟ್ರೀಯಭೂದಿನ-2026ಕಾರ್ಯಕ್ರಮದಲ್ಲಿ ಸಸಿಯನ್ನು ನೆಟ್ಟು ನೀರೆರೆಯುವುದರ ಮೂಲಕ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಜಾಗತಿಕ ತಾಪಮಾನ ಅರಣ್ಯ ನಾಶ ಹಾಗೂ ಮಾಲಿನ್ಯದಂತಹ ಸವಾಲುಗಳನ್ನು ಮೆಟ್ಟನಿಲ್ಲಲು ಭೂ ದಿನದ ಆಚರಣೆ ಪೂರಕವಾಗಿದೆ. ಭವಿ?ದ ಪೀಳಿಗೆಗಾಗಿ ಭೂಮಿಯನ್ನು ಉಳಿಸಲು ತುರ್ತು ಕ್ರಮಗಳ ಅಗತ್ಯವಿದೆ. ಕೇವಲ ದಿನಾಚರಣೆಗಳಿಗೆ ಸೀಮಿತವಾಗದೆ ಸಾಮಾಜಿಕವಾಗಿ ಸಾಂಘಿಕವಾಗಿ ಹೋರಾಟ ಮಾಡುವುದರ ಮೂಲಕ ಈ ಸುಂದರ ಪರಿಸರವನ್ನು ಸಂರಕ್ಷಣೆ ಮಾಡಬೇಕಿದೆ ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎಚ್.ಸಿ. ಸಿದ್ದನಗೌಡ್ರ ಮಾತನಾಡಿ, ಮಾನವನ ದುರಾಸೆಗಳೇ ಇಂದಿನ ಪರಿಸರ ದುರಂತಗಳಿಗೆ ಬೀಜಗಳಾಗಿವೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವಿತಾವಧಿಯಲ್ಲಿ ಕನಿ? ಪಕ್ಷ ಕೆಲವು ಸಸಿಗಳನ್ನಾದರೂ ನೆಟ್ಟು ಪೋಷಿಸುವ ಮೂಲಕ ಭೂಮಿತಾಯಿಯ ಋಣ ತೀರಿಸಬೇಕು ಎಂದರು.

ಪ್ರಾದೇಶಿಕ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಪ್ರಕಾಶ್ಕರ್ ಅಕ್ಷಯ ಅಶೋಕ ಅವರು ಮಾತನಾಡಿ, ನಮಗೆ ಇರುವುದೊಂದೇ ಭೂಮಿ ಇದನ್ನು ಪಾಲನೆ, ಪೋಷಣೆ ಮಾಡುವುದರ ಮೂಲಕ ಸುಂದರ ನಾಳೆಗಾಗಿ ಹಸಿರಾಗಿಸೋಣ ಮತ್ತು ಈ ಸುಂದರ ಪರಿಸರವನ್ನು ನಮ್ಮ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡೋಣ. ಜಿಲ್ಲೆಯ ಪ್ರತಿಯೊಂದು ಶಾಲೆ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ತಾವು ಸೇವಿಸುವ ಹಣ್ಣುಗಳ ಬೀಜಗಳನ್ನು ಸಂಗ್ರಹಿಸಿ ಅರಣ್ಯ ಇಲಾಖೆಗೆ ನೀಡುವುದರ ಮೂಲಕ ಹಸಿರು ವೃದ್ಧಿಗೆ ಸಹಕರಿಸಬೇಕು ಎಂದು ಕರೆ ನೀಡಿದರು.

ಹಾವೇರಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎಚ್. ಮಂಜುನಾಥ ಸ್ವಾಗತಿಸಿದರು, ವಲಯ ಅರಣ್ಯ ಅಧಿಕಾರಿ ಸಿದ್ದಮ್ಮ ಕರಿಗಾರ ವಂದಿಸಿದರು, ಗಸ್ತು ಅರಣ್ಯ ಪಾಲಕ ಬಸವರಾಜ ಕುಲಕರ್ಣಿ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್.ವಿ, ಅರಣ್ಯ ಇಲಾಖೆಯ ಸಿಬ್ಬಂದಿಗಳು, ಜಿ.ಎಚ್. ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಕಿರುಸುದ್ದಿ

ಸರ್ಕಾರಿ ಶಾಲೆಗೆ ಶೇ.90ರಷ್ಟು ಫಲಿತಾಂಶ



ಮೂಡಲಗಿ: ಸ್ಥಳಿಯ ಕೆ.ಎಚ್. ಸೋನೋವಾಲಕರ ಸರ್ಕಾರಿ ಪ್ರೌಢಶಾಲೆ ಮಾರ್ಚ್ 2026ರ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೇಕಡ 90 ಫಲಿತಾಂಶ ಸಾಧನೆ ಮಾಡಿದೆ. ವಿದ್ಯಾರ್ಥಿನಿಯರಾದಅನ್ನಪೂರ್ಣೇಶ್ವರಿ ಬಬ್ಬಲಿ 96.67% ಪ್ರಥಮ, ಆಶಾರಾಣಿ ಲಂಗೋಟಿ 93.76 ದ್ವಿತೀಯ ಮತ್ತುವಿದ್ಯಾರ್ಥಿಕಾರ್ತಿಕ್ ಖಾನಪ್ಪಗೋಳ 91.52 ತೃತೀಯ ಸ್ಥಾನ ಪಡೆದಿದ್ದಾರೆ. ಈ ವಿದ್ಯಾರ್ಥಿಗಳನ್ನು ಎಸ್ ಡಿ ಎಂ ಸಿ ಅಧ್ಯಕ್ಷ ಸಂತೋಷ್ ಸೋನವಾಲಕರ, ಮುಖ್ಯೋಪಾಧ್ಯಾಯ ಭೀಮಪ್ಪ ಕಸಾಳೆ, ಎಸ್‌ಡಿಎಂಸಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರುಅಭಿನಂದನೆ ಸಲ್ಲಿಸಿದ್ದಾರೆ. ಶಾಸಕ ಬಾಲಚಂದ್ರ ಲ.ಜಾರಕಿಹೊಳಿ ಇವರು ಶಾಲೆಗೆ ಆಗಮಿಸಿ ರಾಂಕ್ ವಿಜೇತ ವಿದ್ಯಾರ್ಥಿಗಳನ್ನು ಸತ್ಕರಿಸಿ ಅಭಿನಂದಿಸಿದ್ದಾರೆ.

ಸರ್ಕಾರಿ ಪ್ರೌಢಶಾಲಾ ಮಕ್ಕಳ ಸಾಧನೆ



ಬೆಳಗಾವಿ: ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಮೂಡಲಗಿ ವಲಯದ ದಂಡಾಪೂರ ಸರ್ಕಾರಿ ಪ್ರೌಢ ಶಾಲೆಯ 2026ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷಾ ಫಲಿತಾಂಶ 100 ಕ್ಕೆ 100ರಷ್ಟಾಗಿದ್ದು, ಆರತಿ ವಿಠ್ಠಲ ಹೊಸುರ 609 ಅಂಕ ಪಡೆದು ಪ್ರಥಮ, ವಿದ್ಯಾಶ್ರೀ ಹೊಸುರ 598 ಅಂಕ ಪಡೆದು ದ್ವಿತೀಯ ಹಾಗೂ ಚೈತ್ರಾ ರೇವಪ್ಪ ನಾಯಿಕ 583 ಅಂಕ ಪಡೆದು ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಗ್ರಾಮದ ಪ್ರಮುಖರಾದ ಲಕ್ಷ್ಮಣ ಗಣಪ್ಪಗೋಳ, ರಾಮಕೃಷ್ಣ ಹೊರಟ್ಟಿ, ಲಕ್ಷ್ಮಣ ಶೀಮಕ್ಕನವರ, ಮುಖ್ಯೋಪಾಧ್ಯಾಯ ಶಂಕರ ಕವಣಿ, ಶಿಕ್ಷಕರಾದ ಶ್ರೀಶೈಲ ಲಟ್ಟಿ, ಲಕ್ಷ್ಮೀ ಭಜಂತ್ರಿ ಸೇರಿದಂತೆ ಗ್ರಾಮಸ್ಥರು ಅಭಿನಂದಿಸಿದ್ದಾರೆ.

ದಳವಾಯಿ ಪ್ರೌಢ ಶಾಲೆಯ ಎಸ್ಸೆಸ್ಸೆಲ್ಸಿ ಉತ್ತಮ ಫಲಿತಾಂಶ



ಮೂಡಲಗಿ: ಸಮೀಪದ ಕೌಜಲಗಿಯ ಡಾ. ಮಹದೇವಪ್ಪ ಮಡ್ಡೆಪ್ಪ ದಳವಾಯಿ ಪ್ರೌಢಶಾಲೆ ಎಸ್ ಎಸ್‌ಎಲ್‌ಸಿ ಫಲಿತಾಂಶ ಪ್ರತಿಶತ 97.32 ರಷ್ಟಾಗಿದ್ದು ಉತ್ತಮ ಫಲಿತಾಂಶವನ್ನು ಹೊಂದಿದೆ. ಪರೀಕ್ಷೆಗೆ 112 ವಿದ್ಯಾರ್ಥಿಗಳು ಕುಳಿತಿದ್ದು, ಅದರಲ್ಲಿ 109 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅತ್ಯುನ್ನತ ಶ್ರೇಣಿಯಲ್ಲಿ 9 ವಿದ್ಯಾರ್ಥಿಗಳು, ಪ್ರಥಮ ಶ್ರೇಣಿಯಲ್ಲಿ 52 ವಿದ್ಯಾರ್ಥಿಗಳು, ದ್ವಿತೀಯ ಶ್ರೇಣಿಯಲ್ಲಿ 28 ವಿದ್ಯಾರ್ಥಿಗಳು, ತೃತೀಯ ಶ್ರೇಣಿಯಲ್ಲಿ 20 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಭಾಗ್ಯಲಕ್ಷ್ಮೀ ಗೋಪಾಲ ದಳವಾಯಿ ಶೇ.93 ಪ್ರಥಮ, ಬಸವರಾಜ ಕುಂಬಾಳೆ ಶೇ. 92 ದ್ವಿತೀಯ, ಲಕ್ಷ್ಮೀ ಬಿರಾಣೆ ಶೇ.91 ತೃತೀಯ ಸ್ಥಾನಗಳನ್ನು ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಅನಿಲಕುಮಾರ ದಳವಾಯಿ, ಧರ್ಮದರ್ಶಿ ಅರವಿಂದ ದಳವಾಯಿ ಮುಖ್ಯೋಪಾಧ್ಯಾಯ ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

ನಿಧನ ಸುದ್ದಿ

ಬಸಪ್ಪ ಕಾಶಪ್ಪ ಲಾಳ

ಬೈಲಹೊಂಗಲ: ತಾಲೂಕಿನ ಸಂಗೊಳ್ಳಿ ಗ್ರಾಮದ ನಿವಾಸಿ, ಬಸಪ್ಪ ಕಾಶಪ್ಪ ಲಾಳ (59) ಸೋಮವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ನ್ಯಾಯವಾದಿ ಉಮೇಶ ಲಾಳ ಸೇರಿ ಇಬ್ಬರು ಪುತ್ರರು ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.





ಸಂಕೇಶ್ವರ: ವಿಶ್ವಗುರು ಬಸವಣ್ಣನವರ ಜಯಂತಿ ನಿಮಿತ್ತವಾಗಿ ಪಟ್ಟಣದ ಪ್ರಮುಖ ರಸ್ತೆಯಲ್ಲಿ ಬಸವಣ್ಣನವರ ಬೃಹತ್ ಉತ್ಸವ ಮೂರ್ತಿ ಮೆರವಣಿಗೆಯು ವಿಜೃಂಭಣೆಯಿಂದ ನಡೆಯಿತು. ಗಾಂಧಿ ಚೌಕದಿಂದ ಪ್ರಾರಂಭವಾದ ಭವ್ಯ ಮೆರವಣಿಗೆಗೆ ಯಮಕನಮರಡಿಯ ಹುಣಸಿಕೊಳ್ಳಮಠದ ಸಿದ್ಧ ಬಸವ ದೇವರು ಸ್ವಾಮೀಜಿ ಹಾಗೂ ಗಣ್ಯರಿಂದ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು.

ಆಸ್ತಿ ಹಂಚಿಕೆ ವಿಚಾರದಲ್ಲಿ ಕಾನೂನು ಪಾಲಿಸಿ

ಸವದತ್ತಿ: ತಾಲೂಕಿನ ಶಿರಸಂಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಇನಾಂಗೋವನಕೊಪ್ಪ ಗ್ರಾಮದಲ್ಲಿ ಶ್ರೀ ದ್ಯಾಮ್ಮವ್ವ ದೇವಿ ಜಾತ್ರೆಯ ನಿಮಿತ್ತ ಸವದತ್ತಿ ತಾಲೂಕು ಕಾನೂನು ಸೇವೆಗಳ ಸಮಿತಿ, ಸವದತ್ತಿ ವಕೀಲರ ಸಂಘ, ಶ್ರೀ ದ್ಯಾಮ್ಮವ್ವ ದೇವಿ ಜೀರ್ಣೋದ್ದಾರ ಟ್ರಸ್ಟ್ ಕಮೀಟಿ ಇನಾಂಗೋವನಕೊಪ್ಪ ಸಂಯುಕ್ತ ಆಶ್ರಯದಲ್ಲಿ ಕಾನೂನು ಅರಿವು ನೆರವು ಕಾರ್ಯಕ್ರಮ ನಡೆಯಿತು. ಪ್ರಧಾನ ಹಿರಿಯ ಸಿವ್ಹಿಲ್ ನ್ಯಾಯಾಧೀಶ ಸಿದ್ದರಾಮ ಅವರು ಮಾತನಾಡಿ, ಭಾರತೀಯ ಉತ್ತರಾಧಿಕಾರ ಕಾಯ್ದೆಯಡಿ ಪುತ್ರಿಯರಿಗೂ ಸಮಾನ ಆಸ್ತಿ ಹಕ್ಕು ಇದೆ. ಆಸ್ತಿ ಹಂಚಿಕೆ ಮಾಡುವಾಗ ಎಲ್ಲ ಸದಸ್ಯರ ಸಮ್ಮತಿ ಮತ್ತು ಪಾರದರ್ಶಕತೆ ಇರಲಿ. ಇದು ಭವಿಷ್ಯದ ಕಾನೂನು ಹೋರಾಟ ಮತ್ತು ಮನಸ್ತಾಪಗಳನ್ನು ತಪ್ಪಿಸುತ್ತದೆ ಎಂದರು. ವಕೀಲ ಬಿ.ಎಸ್. ಕಬ್ಬೂರ, ಬಿ.ಕೆ. ಕಡಕೋಳ ಮಾತನಾಡಿದರು. ಎಚ್. ಆರ್. ಕುಂಬಾರ್ ನಿರೂಪಿಸಿ, ವಂದಿಸಿದರು. ಈ ಸಂದರ್ಭದಲ್ಲಿ ಎಮ್.ಎಸ್. ಹುಬ್ಬಳ್ಳಿ, ಸುರೇಶ, ಕಾಳಪ್ಪನ್ನವರ, ಆರ್.ವಿ. ಹುಂಬಿ, ಎ.ಎಮ್. ಒಂಟಿ, ಜಯಶ್ರೀ ಪೂಜಾರ, ಆರ್.ಬಿ. ಜಾಲಿಕಟ್ಟಿ, ಎಮ್.ಆರ್. ರಾಮದುರ್ಗ, ಎಸ್.ಐ. ಈರನಗೌಡ್ರ, ಬಿ.ಎ. ಕೋಲಿನ, ಎಸ್.ಎಸ್. ಪಠಾಣ, ಸಿ.ಎಸ್. ಜಾಲಿಕಟ್ಟಿ, ಎಸ್.ಐ. ಸಾಣಿಕೊಪ್ಪ, ಪ್ರವೀಣ ಮಾನಗಾವ, ಬಿ.ಎಸ್. ಕಬ್ಬೂರ, ಜೆ. ಎಂ. ತಾಂಬೋಳಿ, ವಿಕಾಸ್ ಕಲಾಲ, ಎಚ್.ಆರ್. ಕುಂಬಾರ ಹಾಗೂ ಶ್ರೀ ದ್ಯಾಮವ್ವ ದೇವಿ ಜೀರ್ಣೋದ್ದಾರ ಟ್ರಸ್ಟ್ ಕಮಿಟಿ ಇನಾಂಗೋವನಕೊಪ್ಪ ಅಧ್ಯಕ್ಷರು ಇತರರು ಉಪಸ್ಥಿತರಿದ್ದರು.



ಸವದತ್ತಿ: ತಾಲೂಕಿನ ಶಿರಸಂಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಇನಾಂಗೋವನಕೊಪ್ಪ ಗ್ರಾಮದಲ್ಲಿ ಶ್ರೀ ದ್ಯಾಮ್ಮವ್ವ ದೇವಿ ಜಾತ್ರೆಯ ನಿಮಿತ್ತ ಸವದತ್ತಿ ತಾಲೂಕು ಕಾನೂನು ಸೇವೆಗಳ ಸಮಿತಿ, ಸವದತ್ತಿ ವಕೀಲರ ಸಂಘ, ಶ್ರೀ ದ್ಯಾಮ್ಮವ್ವ ದೇವಿ ಜೀರ್ಣೋದ್ದಾರ ಟ್ರಸ್ಟ್ ಕಮೀಟಿ ಇನಾಂಗೋವನಕೊಪ್ಪ ಸಂಯುಕ್ತ ಆಶ್ರಯದಲ್ಲಿ ಕಾನೂನು ಅರಿವು ನೆರವು ಕಾರ್ಯಕ್ರಮ ನಡೆಯಿತು.

ಕುಡಿಯುವ ನೀರಿಗಾಗಿ ಪಾಲಿಕೆ ಮಾಸ್ಟರ್ ಪ್ಲ್ಯಾನ್ | ಆಯುಕ್ತ ಕಾರ್ತಿಕ ಭರವಸೆ

ಜೂನ್‌ವರೆಗೂ ಸಮರ್ಪಕ ನೀರು ಪೂರೈಕೆ

ಬೆಳಗಾವಿ: ಬೆಳಗಾವಿ ಮಹಾನಗರದಲ್ಲಿ ಬೇಸಿಗೆಯ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಪೂರೈಕೆ ನಿರ್ವಹಣೆ ಕುರಿತು ಪಾಲಿಕೆ ಆಯುಕ್ತ ಕಾರ್ತಿಕ್ ಎಂ. ಮಹತ್ವದ ಮಾಹಿತಿ ನೀಡಿದ್ದಾರೆ.



ನಗರದ 58 ವಾರ್ಡ್‌ಗಳ ಪೈಕಿ 10 ವಾರ್ಡ್‌ಗಳಲ್ಲಿ ಈಗಾಗಲೇ ನಿರಂತರ ನೀರು ಸರಬರಾಜು ಮಾಡಲಾಗುತ್ತಿದ್ದು, ಉಳಿದ ಕಡೆಗಳಲ್ಲಿಯೂ ನೀರಿನ ಅಭಾವ ತಲೆದೂರದಂತೆ ಪರ್ಯಾಯ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಪಾಲಿಕೆ ಆಯುಕ್ತ ಕಾರ್ತಿಕ್ ಎಂ, ಬೆಳಗಾವಿ ನಗರಕ್ಕೆ ರಾಕಸಕೊಪ್ಪ, ಹಿಡಕಲ್ ಮತ್ತು ಬಸವನಕೊಳ್ಳ ಮೂಲಗಳಿಂದ ಒಟ್ಟು 105 ಎಂಎಲ್‌ಡಿ ನೀರು ಪೂರೈಕೆಯಾಗುತ್ತಿದೆ ಎಂದು ತಿಳಿಸಿದರು.

ನಗರದ 48 ವಾರ್ಡ್‌ಗಳಲ್ಲಿ ಸದ್ಯ 4 ರಿಂದ 5 ದಿನಕ್ಕೊಮ್ಮೆ ನೀರು ನೀಡಲಾಗುತ್ತಿದ್ದು, ಜೂನ್ ವರೆಗೂ ನೀರಿನ ನಿರ್ವಹಣೆಗೆ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ ಎಂದರು.

ಪಾಲಿಕೆ ವ್ಯಾಪ್ತಿಯಲ್ಲಿರುವ 840 ಬೋರ್‌ವೆಲಗಳ ಜೊತೆಗೆ ಹೆಚ್ಚುವರಿಯಾಗಿ 30 ಖಾಸಗಿ ಬೋರವೆಲ್ ಹಾಗೂ 10 ತೆರೆದ ಬಾವಿಗಳನ್ನು ಗುರುತಿಸಲಾಗಿದ್ದು, ಅಗತ್ಯವಿದ್ದಲ್ಲಿ ಬಾಡಿಗೆ ಆಧಾರದ ಮೇಲೆ ಬಳಸಿಕೊಳ್ಳಲಾಗುವುದು. ಇಷ್ಟೇ ಅಲ್ಲದೆ, ನೀರಿನ ತುರ್ತು ಅವಶ್ಯಕತೆ ಇರುವ ಕಡೆಗಳಲ್ಲಿ ಪೂರೈಸಲು ಪಾಲಿಕೆಯ 28 ಟ್ಯಾಂಕರ್‌ಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇಡಲಾಗಿದೆ ಎಂದು ಆಯುಕ್ತರು ತಿಳಿಸಿದರು.

- 10 ವಾರ್ಡ್ ಗಳಲ್ಲಿ ನಿರಂತರ ನೀರು
- 48 ವಾರ್ಡ್‌ಗಳಲ್ಲಿ ಸದ್ಯ 4 ರಿಂದ 5 ದಿನಕ್ಕೊಮ್ಮೆ ನೀರು
- ಪಾಲಿಕೆ ವ್ಯಾಪ್ತಿಯಲ್ಲಿರುವ 840 ಬೋರ್‌ವೆಲ್
- 30 ಖಾಸಗಿ ಬೋರವೆಲ್
- 10 ತೆರೆದ ಬಾವಿ
- 28 ಟ್ಯಾಂಕರ್ ಸನ್ನದ್ಧ

43 ವರ್ಷಗಳ ಬಳಿಕ ಮಹಾಲಕ್ಷ್ಮೀ ಜಾತ್ರೆಗೆ ಸಂಭ್ರಮದ ಚಾಲನೆ

ಬೆಳಗಾವಿ: ಸುಮಾರು 43 ವರ್ಷಗಳ ದೀರ್ಘ ನಿರೀಕ್ಷೆಯ ನಂತರ ಕಂಗ್ರಾಳಿ ಬಿ.ಕೆ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿರುವ ಶ್ರೀ ಮಹಾಲಕ್ಷ್ಮಿ ದೇವಿಯ ಜಾತ್ರಾ ಮಹೋತ್ಸವಕ್ಕೆ ಸಕಲ ಪೂಜಾ ವಿಧಿ ವಿಧಾನಗಳೊಂದಿಗೆ ಭವ್ಯವಾಗಿ ಚಾಲನೆ ನೀಡಲಾಯಿತು.

ಗ್ರಾಮದೆಲ್ಲೆಡೆ ಭಕ್ತಿ, ಸಂಭ್ರಮ ಮತ್ತು ಹಬ್ಬದ ವಾತಾವರಣ ಕಂಗೊಳಿಸಿತು. ಜಾತ್ರೆಯ ಅಂಗವಾಗಿ ಬೆಳಿಗ್ಗೆ ದೇವಾಲಯದಲ್ಲಿ ವಿಶೇಷ ಪೂಜೆ, ಹೋಮ-ಹವನ ಹಾಗೂ ಮಂತ್ರಾಕ್ಷತೆ ಕಾರ್ಯಕ್ರಮಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು.

ಈ ವೇಳೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ತಮ್ಮ ಕುಟುಂಬ ಸದಸ್ಯರೊಂದಿಗೆ ಭಾಗವಹಿಸಿ, ದೇವಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಯುವ ಮುಖಂಡ ಮೃಣಾಲ್ ಹೆಬ್ಬಾಳ್ಕರ್, ಗ್ರಾಮಸ್ಥರು, ಹಿರಿಯರು, ಯುವಕರು ಹಾಗೂ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು, ಜಾತ್ರೆಯ ಸಂಭ್ರಮಕ್ಕೆ ಸಾಕ್ಷಿಯಾದರು.

ಸಾಂಪ್ರದಾಯಿಕ ವಾದ್ಯಗಳ ನಾದ, ಪೂಜಾ ವಿಧಿವಿಧಾನಗಳು ಮತ್ತು ಭಕ್ತರ ಜಯಘೋಷಗಳಿಂದ ಗ್ರಾಮವು ಹಬ್ಬದ ಮೆರಗು ಪಡೆದುಕೊಂಡಿತು.

ಜಾತ್ರಾ ಮಹೋತ್ಸವದ ಅಂಗವಾಗಿ ಮುಂದಿನ ದಿನಗಳಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಲಕ್ಷಾಂತರ ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ನಿರ್ದೇಶನದಂತೆ ಗ್ರಾಮದಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಗ್ರಾಮ ಪಂಚಾಯತಿ ಹಾಗೂ ಸ್ಥಳೀಯ ಸಮಿತಿಯವರು ಸೂಕ್ತ ವ್ಯವಸ್ಥೆ ಮಾಡಿರುವುದು ಗಮನಾರ್ಹವಾಗಿದೆ.

ಒಟ್ಟಾರೆ, ಕಂಗ್ರಾಳಿ ಬಿ.ಕೆ ಗ್ರಾಮವು ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿ, ಭಕ್ತಿ ಮತ್ತು ಸಂಪ್ರದಾಯಗಳ ಸಮ್ಮಿಲನದ ಮೂಲಕ ಹೊಸ ಚರಿತ್ರೆ ಬರೆಯುತ್ತಿರುವುದು ವಿಶೇಷವಾಗಿದೆ.





ಸಮರ್ಪಕ ವಿದ್ಯುತ್ ಸಂಪರ್ಕಕ್ಕೆ ಆಗ್ರಹ

ಖಾನಾಪುರ: ತಾಲೂಕಿನ ಗ್ರಾಮೀಣ ಭಾಗದ ಕೃಷಿ ಜಮೀನುಗಳಿಗೆ ಸಮರ್ಪಕ ವಿದ್ಯುತ್ ಸರಬರಾಜು ಒದಗಿಸುವಂತೆ ಆಗ್ರಹಿಸಿ ನೇಗಿಲಯೋಗಿ ರೈತ ಸೇವಾ ಸಂಘದ ನೇತೃತ್ವದಲ್ಲಿ ತಾಲೂಕಿನ ವಿವಿಧ ಭಾಗಗಳ ರೈತರು ಮಂಗಳವಾರ ಪಟ್ಟಣದ ಹೆಸ್ಕಾಂ ಕಚೇರಿಗೆ ತೆರಳಿ ಹೆಸ್ಕಾಂ ಎಇಇ ಅವರಿಗೆ ಲಿಖಿತ ಮನವಿ ಸಲ್ಲಿಸಿದರು. ಮನವಿ ಸಲ್ಲಿಸಿ ಮಾತನಾಡಿದ ನೇಗಿಲಯೋಗಿ ರೈತ ಸೇವಾ ಸಂಘದ ರಾಜ್ಯಾಧ್ಯಕ್ಷ ರವಿ ಪಾಟೀಲ, ''ಹೆಸ್ಕಾಂ ವತಿಯಿಂದ ಲೋಡ್ ಶೆಡ್ಡಿಂಗ್ ಮತ್ತು ಲೈನ್ ಫಾಲ್ಟ್ ನೆಪದಲ್ಲಿ ಅನಿಯಮಿತವಾಗಿ ವಿದ್ಯುತ್ ನಿಲುಗಡೆ ಮಾಡಲಾಗುತ್ತಿದೆ. ಸಧ್ಯ ಬೇಸಿಗೆ ಕಾಲವಾದ ಕಾರಣ ಬಿಸಿಲಿನ ಶಾಖದಿಂದ ಬೆಳೆಗಳು ಒಣಗುತ್ತಿವೆ. ಸರಿಯಾದ ವಿದ್ಯುತ್ ಸಂಪರ್ಕ ನೀಡದಿದ್ದರೆ ಬೆಳೆಗಳಿಗೆ ಸರಿಯಾಗಿ ತೇವಾಂಶ ಸಿಗದೇ ಬೆಳೆನಾಶ ಉಂಟಾಗಲಿದೆ. ಸರ್ವೇ ನಂಬರ್‌ಗಳಲ್ಲಿ ಮನೆ ಕಟ್ಟಿಕೊಂಡಿರುವ ರೈತರಿಗೆ ಗ್ರಾಮ ಪಂಚಾಯ್ತಿಗಳಿಂದ ಸೌಲಭ್ಯ ಸಿಗುತ್ತಿಲ್ಲ. ಹೆಸ್ಕಾಂನಿಂದ ವಿದ್ಯುತ್ ಸಂಪರ್ಕ ಸಿಗುತ್ತಿಲ್ಲ. ಕಾಟಗಾಳಿ, ನಿಟ್ಟೂರ, ಗಣೇಬೈಲ, ನಾಗುರ್ಡಾ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜು ಕುರಿತಂತೆ ತೀವ್ರ ಸಮಸ್ಯೆ ಇದೆ. ಈ ಎಲ್ಲ ಸಮಸ್ಯೆಗಳನ್ನು ಹೆಸ್ಕಾಂ ಅಧಿಕಾರಿಗಳು ಕೂಡಲೇ ಪರಿಹರಿಸಬೇಕು'' ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಭೈರುನಾಥ ಪಾಟೀಲ, ಮನೋಹರ ಸುಳೇಭಾವಿ, ನವನಾಥ ಹೊಸೂರಕರ, ಸತ್ಯವ್ವ ನಾಯ್ಕ, ನಜೀರ ಸನದಿ ಹಾಗೂ ಇತರರು ಇದ್ದರು.

ಎಸ್ಸೆಸ್ಸೆಲ್ಸಿ ಸಾಧಕರಿಗೆ ಸನ್ಮಾನ



ಹಾರೂಗೇರಿ: ಸ್ಥಳೀಯ ಅನುದಾನಿತ ಶ್ರೀ ಕರೇಸಿದ್ಧೇಶ್ವರ ಪ್ರಾಥಮಿಕ ಹಾಗೂ ಪ್ರೌಢಶಾಲೆ 2025-26 ನೇ ಸಾಲಿನ ಹತ್ತನೇ ತರಗತಿ ಪರೀಕ್ಷೆಯಲ್ಲಿ ಟಾಪ್ ಟೆನ್ ವಿದ್ಯಾರ್ಥಿಗಳಾದ ನಿಸರ್ಗಾ ರಮೇಶ್ ಬಡಿಗೇರ,

ಅಂಕಿತಾ ಬಸವರಾಜ್ ಪಾಟೀಲ, ಸಭಾ ಯೂಸುಫ್ ಶೇಖ, ಸಾದಿಯ ಯಾಸಿನ್ ಜಮಾದಾರ, ಪ್ರೀತಿ ಹನುಮಂತ್ ಗಾಣಿಗೇರ, ಮೀಜಬಾ ಇಲಾಯಿ ಜಮಾದಾರ, ವಿನೋದ್ ಮಲ್ಲಿಕಾರ್ಜುನ್ ಬಡಿಗೇರ, ಲಕ್ಷ್ಮೀ ವಿಠ್ಠಲ ನಾವಿ,ಕವಿತಾ ಶ್ರಾವಣ ಹೆಗಡೆ,

ಈಶ್ವರಿ ರವೀಂದ್ರ ಸರಿಕರ ಹಾಗೂ ಉನ್ನತ ಶ್ರೇಣಿಯಲ್ಲಿ ಪಾಸಾದ ಎಲ್ಲ ವಿದ್ಯಾರ್ಥಿಗಳಿಗೆ ಸನ್ಮಾನಿಸಿ, ಅಭಿನಂದಿಸಿದರು.

ಅಧ್ಯಕ್ಷರಾದ ಭಗವಂತ ಸತ್ಯಪ್ಪ ಬಂತಿ, ಹಿರಿಯ ನಿರ್ದೇಶಕರಾದ ಸಿದ್ದಪ್ಪ ಹಾಡಕಾರ, ವಕೀಲರಾದ ಎಂ.ಜಿ. ಹಾಡಕಾರ ಹಾಜರಿದ್ದರು. ಮುಖ್ಯೋಪಾಧ್ಯಾಯರಾದ ಈಶ್ವರ ಬಿರಾದಾರ ಅವರು ಸ್ವಾಗತಿಸಿ, ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಎನ್ ಎಲ್ ತಟ್ಟಿಮನಿ ಫಲಿತಾಂಶ ವಿವರ ನೀಡಿದರು.ಕೆ ವೈ ನಾಯಕ,ಪ್ರಮೋದ ದೊಡಮನಿ ,ದೈಹಿಕ ಶಿಕ್ಷಕ ಜಗದೀಶ ಗಡಾದ,ಜ್ಞಾನೇಶ್ವರ ಹಾಡಕಾರ ಹಾಗೂ ಪಾಲಕರಾದ ರಮೇಶ್ ಬಡಿಗೇರ, ಬಸವರಾಜ ಪಾಟೀಲ್,ಹಣಮಂತ ಗಾಣಿಗೇರ,ಬಾಬಾಗೌಡ ಪಾಟೀಲ ಹಾಗೂ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

104 ಮೊಬೈಲ್ ಫೋನ್ ಪತ್ತೆ ಹಚ್ಚಿದ ಪೊಲೀಸರು

ಬೈಲಹೊಂಗಲ: ಬೈಲಹೊಂಗಲ ಉಪವಿಭಾಗದ ವ್ಯಾಪ್ತಿಯ ಪೊಲೀಸ್ ಠಾಣೆಗಳ ಸಿಬ್ಬಂದಿಗಳು ಸಿಇಐಆರ್ ಪೋರ್ಟಲ್‌ನ ಪರಿಣಾಮಕಾರಿ ಬಳಕೆ ಮೂಲಕ ಕಳೆದುಹೋದ ಮೊಬೈಲ್‌ಗಳನ್ನು ಪತ್ತೆ ಮಾಡಿ, ಒಟ್ಟು 104 ಮೊಬೈಲ್‌ಗಳನ್ನು ಮೂಲ ವಾರಸುದಾರರಿಗೆ ವಿತರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಡಿವೈಎಸ್‌ಪಿ ಡಾ. ವೀರಯ್ಯ ಹಿರೇಮಠ ಅವರ ಮಾರ್ಗದರ್ಶನದಲ್ಲಿ ನಡೆದ ಈ ಕಾರ್ಯಾಚರಣೆ ಪೊಲೀಸ್ ಇಲಾಖೆಯ ತಂತ್ರಜ್ಞಾನ ಬಳಕೆ ಹಾಗೂ ಕಾರ್ಯನಿಷ್ಠೆಯಿಂದ ಮೊಬೈಲ್ ಫೋನ್ ಪತ್ತೆ ಮಾಡಲಾಗಿದೆ.

ಮೊಬೈಲ್ ವಿತರಣೆ ಸಂದರ್ಭದಲ್ಲಿ ಮಾತನಾಡಿದ ಡಿವೈಎಸ್‌ಪಿ ಡಾ. ವೀರಯ್ಯ ಹಿರೇಮಠ ಅವರು, ಸಿಇಐಆರ್ ಪೋರ್ಟಲ್ ಮೂಲಕ ಕಳೆದುಹೋದ ಮೊಬೈಲ್‌ಗಳನ್ನು ಶೀಘ್ರವಾಗಿ ಪತ್ತೆಹಚ್ಚುವುದು ಸಾಧ್ಯವಾಗಿದೆ ಎಂದು ತಿಳಿಸಿದರು. ಸಾರ್ವಜನಿಕರು ತಮ್ಮ ಮೊಬೈಲ್ ಕಳೆದುಕೊಂಡ ತಕ್ಷಣ ಸಿಇಐಆರ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸುವುದು ಅತ್ಯಂತ ಅಗತ್ಯ ಎಂದು ಸಲಹೆ ನೀಡಿದರು.

ಈ ಸಾಧನೆಗೆ ಕಾರಣವಾದ ಕ್ರೈಂ ವಿಭಾಗದ ಸಿಬ್ಬಂದಿಗಳ ಪರಿಶ್ರಮವನ್ನು ಡಿ.ವೈ.ಎಸ್.ಪಿ ಶ್ಲಾಘಿಸಿದರು. ಪ್ರೊಬೆಶನರಿ ಐಪಿಎಸ್ ಅಧಿಕಾರಿ ಡಾ ಭಾನು ಪ್ರಕಾಶ, ಪಿಐ ಶಿವಾನಂದ ಗುಡಗನಟ್ಟಿ, ರವಿಕುಮಾರ ಧರ್ಮಟ್ಟಿ, ಪ್ರವೀಣ ಗಂಗೋಳ ಮಾತನಾಡಿದರು.

ಬೈಲಹೊಂಗಲ, ಕಿತ್ತೂರು, ನೇಸರಗಿ, ದೊಡವಾಡ, ನಂದಗಡ ಹಾಗೂ ಖಾನಾಪುರ ಪೊಲೀಸ್ ಠಾಣೆಗಳ ಪಿಎಸ್‌ಐ ಮತ್ತು ಸಿಬ್ಬಂದಿ ಇದ್ದರು.



- ಬೈಲಹೊಂಗಲ - 19,
- ನೇಸರಗಿ - 13,
- ಕಿತ್ತೂರು - 27,
- ದೊಡವಾಡ - 20,
- ಖಾನಾಪುರ - 18
- ನಂದಗಡ - 7
- ಒಟ್ಟು - 104 ಮೊಬೈಲ್ ಫೋನ್ ಪತ್ತೆ ಮಾಡಲಾಗಿದೆ.

ಇಂದು ಸಭಾ ಮಂಟಪ ಲೋಕಾರ್ಪಣೆ

ಯರಗಟ್ಟಿ: ತಾಲೂಕಿನ ಯರಝರ್ವಿ ಗ್ರಾಮದಲ್ಲಿ ಮುಖ್ಯಮಂತ್ರಿ ವಿಶೇಷ ಅನುದಾನದಲ್ಲಿ ನಿರ್ಮಿಸಿದ ದ್ಯಾಮಮ್ಮಾದೇವಿ ಸಭಾ ಮಂಟಪ ಏ.29 ರಂದು ಬೆಳಿಗ್ಗೆ 10ಗಂಟೆಗೆ ಉದ್ಘಾಟನಾ ಸಮಾರಂಭ ನೆರವೇರುವುದು.

ಸಾನ್ನಿಧ್ಯವನ್ನು ಘೋಡಗೇರಿ ಮಠದ ಮಲ್ಲಯ್ಯ ಸ್ವಾಮೀಜಿ, ಸಾನಿಧ್ಯವನ್ನು ಚಿದಾನಂದ ಸ್ವಾಮೀಜಿ ವಹಿಸುವರು. ಉದ್ಘಾಟಕರಾಗಿ ಶಾಸಕ ವಿಶ್ವಾಸ ವೈದ್ಯ, ಅಧ್ಯಕ್ಷತೆಯನ್ನು ಸುರೇಶ ಮುರಗೋಡ ವಹಿಸುವರು ಮುಖ್ಯ ಅತಿಥಿಗಳಾಗಿ ತಹಶೀಲ್ದಾರ ಎಮ್ ವ್ಹಿ ಗುಂಡಪ್ಪಗೋಳ, ತಾ.ಪಂ. ಇಓ ಆನಂದ ಬಡಕುಂದ್ರಿ, ಸಿಪಿಐ ಆಯ್ ಎಂ ಮಠಪತಿ, ಜಿ.ಪಂ. ಎಇಇ ಎಚ್. ಎ. ಕದ್ರಾಪೂರ, ಸೇರಿದಂತೆ ಅನೇಕರು ಆಗಮಿಸಲಿದ್ದಾರೆ ಎಂದು ದೇವಸ್ಥಾನದ ಆಡಳಿತ ಮಂಡಳಿ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಗ್ರಾಮದೇವಿ ಜಾತ್ರೆಯಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಭಾಗಿ: ಉಡಿ ಸೇವೆ

ಬೆಳಗಾವಿ: ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ತಾರಿಹಾಳ ಗ್ರಾಮದಲ್ಲಿ ವಿಜೃಂಭಣೆಯಿಂದ ನಡೆಯುತ್ತಿರುವಶ್ರೀ ಗ್ರಾಮದೇವಿಯ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ದೇವಿಗೆ ಪೂಜೆ ಸಲ್ಲಿಸಿ ಉಡಿ ತುಂಬಿದರು.

ದಶಕದ ನಂತರ ನಡೆಯುತ್ತಿರುವ ಈ ಜಾತ್ರೆ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಿಸಿದ್ದು, ಪ್ರತಿಯೊಂದು ಮನೆಯಲ್ಲೂ ಸಂಭ್ರಮ ಮತ್ತು ಉತ್ಸಾಹ ತುಂಬಿಸಿದೆ. ಜಾತ್ರಾ ಅಂಗವಾಗಿ ವಿಶೇಷ ಪೂಜೆಗಳು, ಶಾಸ್ತ್ರೋಕ್ತ ವಿಧಿವಿಧಾನಗಳು ನೆರವೇರಿಸಲ್ಪಟ್ಟಿದ್ದು, ಸಾವಿರಾರು ಭಕ್ತರು ದೇವಿಯ ದರ್ಶನ ಪಡೆದು ಆಶೀರ್ವಾದ ಪಡೆದರು.



ಈ ವೇಳೆ ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ, ಗ್ರಾಮದ ಮುಖಂಡರು, ಹಿರಿಯರು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದು, ಜಾತ್ರಾ ಮಹೋತ್ಸವ ಯಶಸ್ವಿಯಾಗಿ ನಡೆಯಲೆಂದು ಹಾರೈಸಿದರು.

ದೀರ್ಘ ವಿರಾಮದ ಬಳಿಕ ನಡೆಯುತ್ತಿರುವ ಈ ಜಾತ್ರೆ ಗ್ರಾಮದಲ್ಲಿ ಹೊಸ ಚೈತನ್ಯ ಮೂಡಿಸಿ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿದೆ.

ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ



ಹುಕ್ಕೇರಿ: ಪ್ರಸಕ್ತ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ತಾಲೂಕಿಗೆ ಮೊದಲ ಮೂರು ಸ್ಥಾನಗಳನ್ನು ಗಳಿಸುವ ಮೂಲಕ ಹೆಸರಾಗಿರುವ ವಿದ್ಯಾರ್ಥಿಗಳು

ಭವಿಷ್ಯದಲ್ಲೂ ಈ ಸಾಧನೆ ಪುನರಾವರ್ತನೆ ಮಾಡಬೇಕೆಂದು ಶಾಸಕ ನಿಖಿಲ ಕತ್ತಿ ಹೇಳಿದರು.

ಸೋಮವಾರದಂದು ಪಟ್ಟಣದ ಪಿಕಾರ್ಡ್ ಬ್ಯಾಂಕ್ ಆವರಣದಲ್ಲಿ ಎಸ್ ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಸಾಧನೆ ಮಾಡಿದ ತಾಲೂಕಿನ ಹೆಬ್ಬಾಳ ಸರಕಾರಿ ಕೆಪಿಎಸ್ ಪ್ರೌಢಶಾಲೆಯ ರೋಹಿಣಿ ದುಂಡಪ್ಪಾ ಜರಳಿ, ಹುಕ್ಕೇರಿ ಜಿಮಖಾನ ಆಂಗ್ಲ ಮಾಧ್ಯಮ ಪ್ರೌಢ ವಿಭಾಗದ ನಿಖಿತಾ ಶ್ರೀಕಾಂತ ಮುದವೀರ ಹಾಗೂ ಕೋಚರಿ ಸರಕಾರಿ ಪ್ರೌಢಶಾಲೆಯ ನಾಗರಾಜ ಮಂಜುನಾಥ ಕುರಬರ ಅವರನ್ನು ಸತ್ಕರಿಸಿ ಮಾತನಾಡಿದರು.

ಬಿಇಓ ಪ್ರಭಾವತಿ ಪಾಟೀಲ ಮಾತನಾಡಿದರು. ಮುಖಂಡರಾದ ಗುರುರಾಜ ಕುಲಕರ್ಣಿ,ಎಸ್.ಆರ್. ಕರ್ಕಿನಾಯಿಕ, ಎಂ.ಬಿ.ನಾಯಿಕ, ಶಹಜಾನ ಬಡಗಾಂವಿ, ಎಚ್.ಎಲ್ .ಪೂಜೇರಿ, ಭೀಮಗೌಡ

ಗಿರಿಗೌಡನವರ, ಗುರಪ್ಪಾ ತಳವಾರ, ದುರದುಂಡಿ ಪಾಟೀಲ, ರಾಜು ಮುಜಾವರ, ಶಿಕ್ಷಣ ಇಲಾಖೆಯ ಶಿವಾನಂದಗುಂಡಾಳೆ,ಬಿ.ಬಿ.ಪಾರ್ಥನಳ್ಳಿ, ಎಂ.ಡಿ.ಬಡಿಗೇರ,ಆರ್.ಬಿ.ವಠಾರೆ ಮತ್ತಿತರರಿದ್ದರು.

ಹಾಸ್ಯ ಬರಹಗಾರ ನರಸಿಂಹಮೂರ್ತಿಗೆ ಸನ್ಮಾನ

ಬೆಳಗಾವಿ: ಖ್ಯಾತ ಹಾಸ್ಯ ಬರಹಗಾರ ಎಂ.ಎಸ್ .ನರಸಿಂಹ ಮೂರ್ತಿ ಅವರನ್ನು ರಂಗಸೃಷ್ಟಿ ಸಾಂಸ್ಕೃತಿಕ ಸಂಘಟನೆ ವತಿಯಿಂದ ಸನ್ಮಾನಿಸಲಾಯಿತು.

ಕನ್ನಡಭವನದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ರಂಗಸೃಷ್ಟಿ ಪದಾಧಿಕಾರಿಗಳು ನರಸಿಂಹಮೂರ್ತಿ ಅವರನ್ನು ಸನ್ಮಾನಿಸಿದರು. ಸೆಕೆಂಡ್ ಹ್ಯಾಂಡ್ ಸದಾಶಿವ ಅಮೇರಿಕದಲ್ಲಿ ಅತ್ಯಂತ ಯಶಸ್ವಿಯಾಗಿ ಪ್ರದರ್ಶನ ಕಂಡ ನಾಟಕವಾಗಿದ್ದು, ರಂಗಸೃಷ್ಟಿ ತಂಡದ ಕಲಾವಿದರು ಮನೋಜ್ಞವಾಗಿ ಅಭಿನಯಿಸಿದ್ದಾರೆ. ನಿರ್ದೇಶನ ಮತ್ತು ಅಭಿನಯ ಎರಡೂ ಅತ್ಯುತ್ತಮವಾಗಿತ್ತು. ಸ್ಥಳೀಯವಾಗಿ ಭಾಷೆಗಳನ್ನು ಬದಲಾವಣೆ ಮಾಡಿಕೊಂಡಾಗ ನಾಟಕ ಹೆಚ್ಚು ಪರಿಣಾಮಕಾರಿಯಾಗಿ ಮೂಡಿಬರುತ್ತದೆ. ಅದನ್ನು ಇಲ್ಲಿ ಮಾಡಿರುವುದು ಶ್ಲಾಘನೀಯ ಎಂದರು.

ರಂಗಸೃಷ್ಟಿಯ ಅಧ್ಯಕ್ಷ ರಮೇಶ ಜಂಗಲ, ಉಪಾಧ್ಯಕ್ಷರಾದ ಎಂ.ಕೆ.ಹೆಗಡೆ, ಶೈಲಜಾ ಬಿಂಗೆ, ಕಾರ್ಯದರ್ಶಿ ಶರಣಗೌಡ ಪಾಟೀಲ, ಖಜಾಂಚಿ ಶಾಂತಾ ಆಚಾರ್ಯ, ನಿರ್ದೇಶಕರಾದ ಡಾ.ರಾಮಕೃಷ್ಣ ಮರಾಠೆ, ಶಿರೀಶ ಜೋಶಿ, ಶರಣಯ್ಯ ಮಠಪತಿ, ಕನ್ನಡ ಭವನದ ಕಾರ್ಯದರ್ಶಿ ಯ.ರು.ಪಾಟೀಲ, ಕಲಾವಿದರಾದ ವಾಮನ ಮಳಗಿ, ವಿಶ್ವನಾಥ ದೇಸಾಯಿ, ಅನುಶ್ರೀ ರಘುವೀರ, ನಿವೃತ್ತ ಪ್ರಾಚಾರ್ಯ ಡಾ.ಬಸವರಾಜ ಜಗಜಂಪಿ, ಮುಜರಾಯಿ ಇಲಾಖೆಯ ನಿವೃತ್ತ ಅಧಿಕಾರಿ ರವಿ ಕೊಟಾರಗಸ್ತಿ ಮೊದಲಾದವರು ಇದ್ದರು.



ಮಸೂದೆಗೆ ಕಾಂಗ್ರೆಸ್ ವಿರೋಧ: ವ್ಯಾಪಕ ಆಕ್ರೋಶ

ಬೈಲಹೊಂಗಲ: ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಭಾರತೀಯ ಜನತಾ ಪಕ್ಷದ ವತಿಯಿಂದ ರಸ್ತೆ ತಡೆದು ಪ್ರತಿಭಟನೆ ನಡೆಸಿ, ಕೇಂದ್ರ ಸರ್ಕಾರದ ನಾರೀಶಕ್ತಿ ವಂದನ ಅಧಿನಿಯಮ ಜಾರಿಗೆ ವಿಳಂಬವಾಗುತ್ತಿರುವುದನ್ನು ಖಂಡಿಸಲಾಯಿತು. ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯತೆ ನೀಡುವ ಮಹತ್ವದ ಕಾಯ್ದೆಯನ್ನು ತಡೆಹಿಡಿದಿರುವ ಕಾಂಗ್ರೆಸ್ ಹಾಗೂ ಅದರ ಮೈತ್ರಿ ಪಕ್ಷಗಳ ನೀತಿಯನ್ನು ತೀವ್ರವಾಗಿ ವಿರೋಧಿಸಿ ಪಕ್ಷದ ಕಾರ್ಯಕರ್ತರು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಬಿಜೆಪಿ ಪಂಚಾಯತರಾಜ್ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯೆ ರತ್ನಾ ಗೋಧಿ ಅವರು, ದೇಶದ ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ನಾರೀ ಶಕ್ತಿ ವಂದನ್

ಅಧಿನಿಯಮವನ್ನು ಜಾರಿಗೆ ತಂದಿದೆ. ಆದರೆ, ಮಹಿಳೆಯರ ರಾಜಕೀಯ ಸಬಲೀಕರಣಕ್ಕೆ ವಿರೋಧಿ ಮನೋಭಾವ ಹೊಂದಿರುವ ಕಾಂಗ್ರೆಸ್ ಪಕ್ಷ ಮತ್ತು ಅದರ ಮೈತ್ರಿಕೂಟಗಳು ಈ ಕಾಯ್ದೆಯ ಜಾರಿಗೆ ಅಡ್ಡಿಪಡಿಸುತ್ತಿವೆ ಎಂದು ಆರೋಪಿಸಿದರು.

ಪ್ರತಿಭಟನೆ ವೇಳೆ ಮಂಡಲ ಅಧ್ಯಕ್ಷ ಸುಭಾಷ ತುರಮರಿ, ಜಿಲ್ಲಾ ಉಪಾಧ್ಯಕ್ಷ ಗುರು ಮೆಟಗುಡ್ಡ, ಜಿಲ್ಲಾ ಮಾಧ್ಯಮ ಪ್ರಮುಖ ಸಚಿನ್ ಕಡಿ, ರಾಜ್ಯ ಮಾಧ್ಯಮ ಸಮಿತಿ ಸದಸ್ಯ ಎಫ್.ಎಸ್. ಸಿದ್ದನಗೌಡ್ರ, ರೈತ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರಾಜುಕುಡಸೋಮಣ್ಣವರ, ಲಕ್ಕಪ್ಪ ಕಾರಗಿ, ವಿಶಾಲ ಬೋಗುರ, ಶ್ರೀಶೈಲ ಯಡಳ್ಳಿ, ಮಡಿವಾಳಪ್ಪ ಹೋಟಿ, ಆನಂದ ಮೂಗಿ, ಪ್ರವೀಣ ಶಿಂಗಾರಿ, ಸದಾಶಿವ ಪಾಟೀಲ, ರಿತೇಶ್ ಪಾಟೀಲ, ಸುವರ್ಣ ರಾಮದುರ್ಗ, ಆಶಾ ಕಸಮಳಗಿ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.



ಕಿರುಸುದ್ದಿ

ಅರ್ಜಿ ಆಹ್ವಾನ

◆ **ಬೆಳಗಾವಿ:** 2026–27ನೇ ಸಾಲಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನಡೆಸಲಾಗುತ್ತಿರುವ ಮೊರಾರ್ಜಿ ದೇಸಾಯಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ/ಕಾಲೇಜುಗಳ ಪ್ರಥಮ ಪಿಯುಸಿ ದಾಖಲಾತಿಗಾಗಿ ಪ್ರಸ್ತುತ 10ನೇ ತರಗತಿ ವಾರ್ಷಿಕ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳಿಂದ https://kreis.karnataka.gov.in ಈ ಲಿಂಕ್ ಮೂಲಕ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಏಪ್ರಿಲ್ 29 ಅರ್ಜಿ ಸಲ್ಲಿಸಲು ಕೊನೆಯ ದಿನ. ಸರ್ಕಾರಿ ಶಾಲೆಗಳು ಮತ್ತು ಸರ್ಕಾರಿ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳನ್ನು ಒಟ್ಟಾರೆಯಾಗಿ ಪರಿಗಣಿಸಿ, ಪ್ರವೇಶಾವಕಾಶ ಕಲ್ಪಿಸಲಾಗುತ್ತದೆ ಎಂದು ಬೆಳಗಾವಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ಪ್ರೌಢಶಾಲೆಗೆ ಶೇ. 100 ಫಲಿತಾಂಶ





◆ **ಚಿಕ್ಕೋಡಿ:** ತಾಲೂಕಿನ ಬಸವನಾಳಗಡ್ಡೆ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೇ. 100ರಷ್ಟು ಫಲಿತಾಂಶ ಬಂದಿದೆ. 33 ವಿದ್ಯಾರ್ಥಿಗಳ ಪೈಕಿ 10 ಉನ್ನತ ಶ್ರೇಣಿ, 11 ಪ್ರಥಮ ಶ್ರೇಣಿ, 5 ದ್ವಿತೀಯ ದರ್ಜೆ, 7 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಪ್ರೀತಿ ವಡೇರ ಶೇ. 96.80, ಸ್ನೇಹಲ ಮಾಕಾವೆ ಶೇ.95.84, ಶಿಲ್ಪಾ ಹರಕೆ ಶೇ.92.16 ಅಂಕಗಳನ್ನು ಪಡೆದುಕೊಂಡಿದ್ದಾರೆ.

ಅರ್ಜಿ ಆಹ್ವಾನ

◆ **ಬೆಳಗಾವಿ:** 2026–27ನೇ ಸಾಲಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನಡೆಸಲಾಗುತ್ತಿರುವ ಮೊರಾರ್ಜಿ ದೇಸಾಯಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ/ಕಾಲೇಜುಗಳ ಪ್ರಥಮ ಪಿಯುಸಿ ದಾಖಲಾತಿಗಾಗಿ ಪ್ರಸ್ತುತ 10ನೇ ತರಗತಿ ವಾರ್ಷಿಕ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಏಪ್ರಿಲ್ 29 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದ್ದು, https://kreis.karnataka.gov.in ಈ ಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಸರ್ಕಾರಿ ಶಾಲೆಗಳು ಮತ್ತು ಸರ್ಕಾರಿ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳನ್ನು ಒಟ್ಟಾರೆಯಾಗಿ ಪರಿಗಣಿಸಿ, ಪ್ರವೇಶಾವಕಾಶವನ್ನು ಕಲ್ಪಿಸಲಾಗುತ್ತದೆ ಎಂದು ಬೆಳಗಾವಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಕಾಣೆ

◆ **ಬೆಳಗಾವಿ:** ನಗರದ ಖಾಸಬಾಗ ಉಪ್ಪಾರಗಲ್ಲಿಯ 53 ವಯಸ್ಸಿನ ನಿವಾಸಿ ಶಿವಾನಂದ ನಾಗೇಂದ್ರ ಬೆಟಗೇರಿ ಇತನು ತನ್ನ ಸೈಕಲ್ ತೆಗೆದುಕೊಂಡು ಮನೆಯಿಂದ ಹೋದವನು ವಾಪಾಸ ಮನೆಗೆ ಬಾರದೇ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾನೆ, ಈ ಕುರಿತು ಶಹಾಪೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಕಾಣೆಯಾದ ವ್ಯಕ್ತಿಯ ಚಹರೆ 5 ಪೂಟ 8 ಇಂಚ ಎತ್ತರ, ಗುಂಡು ಮುಖ, ಉದ್ದ ಮೂಗು, ಸದೃಢ ಮೈಕಟ್ಟು, ಗೋಧಿಗೆಂಪು ಮೈಬಣ್ಣ ಹೊಂದಿದ್ದು, ನಡೆಯುವಾಗ ಸ್ವಲ್ಪ ಕುಂಟುತ್ತಾರೆ, ಪರ್ಪಲ್ ಬಣ್ಣದ ಫುಲ್ ತೋಳಿನ ಶರ್ಟ, ಗ್ರೇ ಬಣ್ಣದ ಪ್ಯಾಂಟ ಧರಿಸಿರುತ್ತಾನೆ ಹಾಗೂ ಕನ್ನಡ, ಹಿಂದಿ, ಮರಾಠಿ ಭಾಷೆ ಮಾತನಾಡುತ್ತಾನೆ. ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬೆಳಗಾವಿ ನಗರ ಪೊಲೀಸ್ ಆಯುಕ್ತರು ಅಥವಾ ಪೊಲೀಸ್ ಇನ್ಸಪೆಕ್ಟರ್, ಶಹಾಪೂರ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆಗಳಿಗೆ ಸಂಪರ್ಕಿಸಬಹುದು ಎಂದು ಶಾಹಾಪೂರ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

◆ **ಗುಳೇದಗುಡ್ಡ:** ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಸಕ್ತ ಸಾಲಿಗಾಗಿ ಬಿಎ, ಬಿಕಾಂ, ಬಿಎಸ್ಸಿ ಕೋರ್ಸ್‌ಗಳ ಪ್ರವೇಶಕ್ಕೆ ಆಹ್ವಾನಿಸಲಾಗಿದೆ. ಕನ್ನಡ ಹಾಗೂ ಆಂಗ್ಲ ಭಾಷಾವಿಷಯಗಳು ಸೇರಿದಂತೆ ಬಿಎ ಕೋರ್ಸ್‌ನಲ್ಲಿ ಕನ್ನಡ, ಇಂಗ್ಲೀಷ, ಇತಿಹಾಸ, ಭೂಗೋಳಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಬಿಎಸ್‌ಸಿ ಕೋರ್ಸ್‌ನಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಕಂಪ್ಯೂಟರ್ ಸೈನ್ಸ್ ಐಚ್ಛಿಕ ವಿಷಯಗಳು ಹಾಗೂ ವಿಶ್ವವಿದ್ಯಾಲಯ ನಿಗಧಿಪಡಿಸಿದ ಬಿಕಾಂ ಪದವಿ ಕೋರ್ಸಗಳು ಕಾಲೇಜಿನಲ್ಲಿ ಲಭ್ಯಇದ್ದು, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಕಾಲೇಜಿಗೆ ಭೇಟಿ ನೀಡಿ ಪ್ರವೇಶಾತಿ ಪಡೆಯಬೇಕು ಎಂದು ಪ್ರಾಚಾರ್ಯ ರೇವಣಸಿದ್ಧ (ಮೊ. 9731775652) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ : ಶಿಂದೊಳ್ಳಿ ಗ್ರಾಮದ ರಾಣಿ ಚೆನ್ನಮ್ಮ ವೃತ್ತದಲ್ಲಿ ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿನ ಬಸ್ ಪ್ರಯಾಣಿಕರ ತಂಗುದಾಣದ ಕಾಮಗಾರಿಗೆ ಮಾಜಿ ಬಿಜೆಪಿ ಗ್ರಾಮೀಣ ಮಂಡಲ ಅಧ್ಯಕ್ಷ ಧನಂಜಯ್ ಜಾದವ ಭೂಮಿ ಪೂಜೆ ನೆರವೇರಿಸಿದರು.

ಶಿಕ್ಷಣ, ಜ್ಞಾನಪ್ರಜ್ಞೆ ಬೆಳೆಸಿಕೊಳ್ಳಿ: ಸಿಪಿಐ ತಳವಾರ

◆ **ಚಿಕ್ಕೋಡಿ:** ಸಮಾಜದಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಶಿಕ್ಷಣ ಹಾಗೂ ಜ್ಞಾನಪ್ರಜ್ಞೆ ಬೆಳೆಸಿಕೊಳ್ಳಬೇಕು. ಸಂವಿಧಾನಾತ್ಮಕ ಹಕ್ಕು ಪಡೆದುಕೊಂಡು ಜಾಗೃತರಾದರೆ ಸಮಾಜದಲ್ಲಿ ಸಮಾನತೆ ನೆಲೆಸಲು ಸಾಧ್ಯವಿದೆ ಎಂದು ನಿಪ್ಪಾಣಿ ಸಿಪಿಐ ಬಿ ಎಸ್ ತಳವಾರ ಹೇಳಿದರು. ನಿಪ್ಪಾಣಿ ತಾಲೂಕಿನ ಲಖನಾಪೂರ ಗ್ರಾಮದಲ್ಲಿ ಗಡಿನಾಡು ಸಾಹಿತ್ಯ ಮತ್ತು ಸಾಂಸ್ಕೃತಿಕ ಟ್ರಸ್ಟ್ ನಿಪ್ಪಾಣಿ ಸಹಯೋಗದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಅಂಬೇಡ್ಕರ್ ಗೀತಗಾಯನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಮಾಜದ ಏಳ್ಗೆಗಾಗಿ ಪ್ರತಿಯೊಬ್ಬರೂ ಕಂಕಣಬದ್ಧರಾಗಿ ದುಡಿಯಬೇಕು. ಸಮಾಜದ ಏಳ್ಗೆಯೊಂದಿಗೆ ಸ್ವ ಏಳ್ಗೆಯೂ ತಂತಾನೇ ಆಗುತ್ತದೆ ಎಂಬ ಅರಿವು ನಮ್ಮಲ್ಲಿ ಇರಬೇಕು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ದಲಿತ ಕ್ರಾಂತಿಸೇನಾ ರಾಜ್ಯಾಧ್ಯಕ್ಷ ಅಶೋಕಕುಮಾರ ಅಸೋದೆ ಮಾತನಾಡಿದರು. ಶಶಿಕಾಂತ ಜಂಗಿ ತಂಡ ವಚನ ಗಾಯನ ಹಾಗೂ ಚಿಕ್ಕೋಡಿಯ ಆಶಾದೀಪ ಸಮುದಾಯ ಕಲಾಕೇಂದ್ರ ತಂಡ ಜಾಗೃತಿ ಗಾಯನ ಮಾಡಿದರು. ಕಲಾವಿದರನ್ನು ಸನ್ಮಾನಿಸಿ ಗೌರವಿಸಲಾಯಿತು.ಈ ಸಂದರ್ಭದಲ್ಲಿ ನಿಪ್ಪಾಣಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಈರಣ್ಣ ಶಿರಗಾಂವೆ, ಲಕ್ಷ್ಮೀ ಮಗದುಮ್ಮ, ಮಲ್ಲಿಕಾರ್ಜುನ ಶಿಂಧೆ, ಅಪ್ಪಾಸಾಹೇಬ ಕೇಸರಕರ, ಜಯಶ್ರೀ ಲಾಟಕರ ಇತರರು ಇದ್ದರು. ರಾಜು ನಾಯಿಕ ಸ್ವಾಗತಿಸಿ, ಭಾವನಾ ಶಾಸ್ತ್ರಿ ನಿರೂಪಿಸಿ, ಗಜಾನನ ನಾಯಿಕ ವಂದಿಸಿದರು.



ಚಿಕ್ಕೋಡಿ: ನಿಪ್ಪಾಣಿ ತಾಲೂಕಿನ ಲಖನಾಪೂರ ಗ್ರಾಮದಲ್ಲಿ ಗಡಿನಾಡು ಸಾಹಿತ್ಯ ಮತ್ತು ಸಾಂಸ್ಕೃತಿಕ ಟ್ರಸ್ಟ್ ನಿಪ್ಪಾಣಿ ಸಹಯೋಗದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಅಂಬೇಡ್ಕರ್ ಗೀತಗಾಯನ ಕಾರ್ಯಕ್ರಮ ನಡೆಯಿತು.

ಕುಡಿಯುವ ನೀರಿನ ಪೂರೈಕೆಗೆ ತುರ್ತಾಗಿ ಸ್ಪಂದಿಸಿ: ಸಿಇಒ ಶಿಂಧೆ

◆ **ಬೆಳಗಾವಿ :** ಯಾವ ಗ್ರಾಮಗಳಲ್ಲೂ ಕುಡಿಯುವ ನೀರಿನ ಪೂರೈಕೆಯಲ್ಲಿ ಕೊರತೆಯಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ತುರ್ತಾಗಿ ಕ್ರಮವಹಿಸಬೇಕು ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಸೂಚನೆ ನೀಡಿದರು.

ಮಂಗಳವಾರ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಕುಡಿಯುವ ನೀರು ಹಾಗೂ ಮೇವು ಪೂರೈಕೆ ಕುರಿತು ಜಿಲ್ಲಾ, ತಾಲೂಕು ಮತ್ತು ಗ್ರಾಪಂಮಟ್ಟದ ಅಧಿಕಾರಿಗಳಿಗೆ ಹಮ್ಮಿಕೊಂಡಿದ್ದ ವಿಡಿಯೋ ಸಂವಾದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನೀರಿನ ಕೊರತೆ ಎದುರಾಗಿರುವಂತ ಗ್ರಾಮಗಳಲ್ಲಿ ಕಡ್ಡಾಯವಾಗಿ ಪ್ರತಿದಿನ ಅಥವಾ ಒಂದು ದಿನ ಬಿಟ್ಟು ಒಂದು ದಿನ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಬೇಕು. ಜನರಿಗೆ ನೀರಿನ ಬಳಕೆಯ ಕುರಿತು ಜಾಗೃತಿ ಮೂಡಿಸಬೇಕು ಎಂದು ನಿರ್ದೇಶನ ನೀಡಿದರು.

ಖಾಸಗಿ ಬೋರವೆಲ್ ಗಳನ್ನು ಗುರುತಿಸಿ: ಮೇ ತಿಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದಾದಂತಹ ಗ್ರಾಮಗಳಲ್ಲಿ ಕನಿಷ್ಟ ಮೂರು ಖಾಸಗಿ ಬೋರವೆಲ್ ಗಳನ್ನು ಗುರುತಿಸಿ ಇಟ್ಟುಕೊಳ್ಳಬೇಕು. ಅಗತ್ಯಬಿದ್ದರೆ ಸಂಬಂಧಪಟ್ಟವರನ್ನು ಸಂಪರ್ಕಿಸಿ ತುರ್ತಾಗಿ ನೀರು ಪೂರೈಸಲು ಕ್ರಮವಹಿಸಬೇಕು ಎಂದು ಸೂಚನೆ ನೀಡಿದರು.ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಮುನ್ನೆಚ್ಚರಿಕೆ ಸಿದ್ಧತೆ ಕೈಗೊಳ್ಳಬೇಕು. ಗ್ರಾಮಗಳಲ್ಲಿ ಜಾನುವಾರುಗಳಿಗೆ



ಕುಡಿಯುವ ನೀರಿನ ತೊಟ್ಟಿಗಳನ್ನು ನಿರ್ಮಿಸಬೇಕು ಎಂದು ಸೂಚಿಸಿದರು.

ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮ ಪಂಚಾಯತ ಆಡಳಿತಾಧಿಕಾರಿಗಳು, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಇಂಜಿನಿಯರ್ ರವರು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಕುಡಿಯುವ ನೀರಿನ ಕುಂದುಕೊರತೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು ಎಂದು ನಿರ್ದೇಶನ ನೀಡಿದರು.

ಈಗಾಗಲೇ ತಾಲೂಕುಮಟ್ಟದಲ್ಲಿ ಟಾಸ್ಕಫೋರ್ಸ್ ಸಭೆಗಳನ್ನು ನಡೆಸಲಾಗಿದೆ. ಮುಂಬರುವ ದಿನಗಳಲ್ಲಿ ಕೂಡ ಮತ್ತೊಮ್ಮೆ ಸಭೆ ಕೈಗೊಂಡು ಕುಡಿಯುವ ನೀರಿನ ಕೊರತೆಯಾಗದಂತೆ ಎಚ್ಚರ ವಹಿಸಬೇಕು. ನೀರಿನ ಟ್ಯಾಂಕರ್ ಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಬೇಕು. ಸ್ವಚ್ಛಗೊಳಿಸಿರುವ ಕುರಿತು ಪೇಂಟ್ ಮೂಲಕ ದಿನಾಂಕಗಳನ್ನು ಬರೆಯಿಸಬೇಕು ಎಂದು ಸೂಚಿಸಿದರು.

ಸಹಾಯವಾಣಿ ಕೇಂದ್ರ ಸ್ಥಾಪಿಸಿ: ಎಲ್ಲ ತಾಲೂಕುಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸಹಾಯವಾಣಿ ಕೇಂದ್ರ ಸ್ಥಾಪಿಸಿ, ದೂರುಗಳು ಬಂದರೆ ತುರ್ತಾಗಿ ಕ್ರಮವಹಿಸಬೇಕು. ಸಹಾಯವಾಣಿ ಸಂಖ್ಯೆಯ ಕುರಿತು ಪ್ರಚಾರ ಮಾಡಬೇಕು ಎಂದು ತಿಳಿಸಿದರು.

ಸಹಾಯವಾಣಿ ಸಂಖ್ಯೆಗಳು:
- ಅಥಣಿ: 9480854100/ 9342399715
- ಬೆಳಗಾವಿ: 9480854110/ 8971012514
- ಬೈಲಹೊಂಗಲ: 9480854105/ 9900575555
- ಚಿಕ್ಕೋಡಿ: 9480854115/ 9483250767
- ಗೋಕಾಕ: 9480854120/ 9448640217
- ಹುಕ್ಕೇರಿ: 9480854125/ 9113047775
- ಕಾಗವಾಡ: 9448121173/9342399715
- ಖಾನಾಪೂರ: 9480854130/ 9972691008
- ಕಿತ್ತೂರ: 9019795554/ 9900575555
- ಮೂಡಲಗಿ: 8861958929/ 9448640217
- ನಿಪ್ಪಾಣಿ: 8722384524/ 9483250767
- ರಾಮದುರ್ಗ: 9480854140/ 9481160120
- ರಾಯಬಾಗ: 9480854135/ 9945250262
- ಸವದತ್ತಿ- 9480854145/ 9900537972

ಕುಡಿಯುವ ನೀರಿನ ಸಮಸ್ಯೆಯಾಗದಿರಲಿ

◆ **ಸವದತ್ತಿ:** ದಿನದಿಂದ ದಿನಕ್ಕೆ ಬಿಸಿಲು ಹೆಚ್ಚಾಗುತ್ತಿದ್ದು, ಇದರಿಂದ ಮಾನವ ಕುಲಕಷ್ಟೇ ಅಲ್ಲದೆ ಇಡೀ ಜೀವರಾಶಿಗೂ ತೊಂದರೆಯಾಗುತ್ತಿದೆ. ಆದ್ದರಿಂದ ತಾಲೂಕಿನ ಕೆಲವು ಗ್ರಾಮಗಳಲ್ಲಿ ತಾಂತ್ರಿಕ ತೊಂದರೆಯಿಂದ ಮಾತ್ರ ಕುಡಿಯುವ ನೀರಿನ ಸಮಸ್ಯೆಯಾಗುತ್ತಿದೆ. ಆ ಸಮಸ್ಯೆಯನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಆ ಸಮಸ್ಯೆಯನ್ನು ಪರಿಹರಿಸುವೆ. ಆ ನಿಟ್ಟಿನಲ್ಲಿ ತಾಲೂಕಿನ ಎಲ್ಲಾ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸಾರ್ವಜನಿಕರಿಂದ ಸಹನೆಯಿಂದ ನಡೆದುಕೊಂಡು ಪರಿಸ್ಥಿತಿಯನ್ನು ನಿಭಾಯಿಸಬೇಕು ತಾಲೂಕಿನ ಯಾವುದೇ ಗ್ರಾಮಗಳಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಆಗಬಾರದು ಎಂದು ಶಾಸಕ ವಿಶ್ವಾಸ್ ವೈದ್ಯರವರು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ಅವರು ನಗರದ ಕೃಷಿ ಇಲಾಖೆಯ ಸಮುದಾಯ ಭವನದಲ್ಲಿ ತಾಲೂಕ ಆಡಳಿತ ವತಿಯಿಂದ ಕರೆದ ಕುಡಿಯುವ ನೀರಿನ ತುರ್ತು ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಹುತೇಕವಾಗಿ ತಾಲೂಕಿನ ಯಾವ ಗ್ರಾಮಗಳಲ್ಲಿಯೂ ಅಷ್ಟೊಂದು ಪರಿಣಾಮಕಾರಿಯಾದ ಕುಡಿಯುವ ನೀರಿನ ಸಮಸ್ಯೆ ಆಗಿಲ್ಲ. ವಿದ್ಯುತ್ ಕೊರತೆಯಿಂದಾಗಿ ಹಾಗೂ ತಾಂತ್ರಿಕ ತೊಂದರೆಯಿಂದಾಗಿ ಕುಡಿಯುವ ನೀರಿನ ಸಮಸ್ಯೆ ಆಗಿರಬಹುದು. ಆದ್ದರಿಂದ ಅಧಿಕಾರಿಗಳು ತಮ್ಮ ಪಂಚಾಯತ್

ವ್ಯಾಪ್ತಿಯಲ್ಲಿ ಬರುವ ಯಾವುದೇ ರೀತಿಯ ಕುಡಿಯುವ ನೀರಿನ ಯೋಜನೆಗೆ ಏನಾದರೂ ಕೊರತೆ ಇದ್ದಲ್ಲಿ ತಹಶೀಲ್ದಾರ್ ಹಾಗೂ ತಾಲೂಕು ಪಂಚಾಯತಿ ಅಧಿಕಾರಿಗಳಿಗೆ ಗಮನಕ್ಕೆ ತಂದು ಕೂಡಲೇ ಪರಿಹರಿಸಿಕೊಳ್ಳಬೇಕು, ತಾಲೂಕಿನ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗಬಾರದು. ಅದರಂತೆ ಜಾನುವಾರುಗಳಿಗೂ ಕೂಡ ನೀರಿನ ಸಮಸ್ಯೆ ಆಗ ಲಾರದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಕಡಕ್ ಎಚ್ಚರಿಕೆ ನೀಡಿದರು

ಸಭೆಯಲ್ಲಿ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಆನಂದ ಬಡಕುಂದ್ರಿ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಶಿವಪ್ರಸಾದ್ ಪಾಟೀಲ್ ವಿದ್ಯುತ್ ಪ್ರಸರಣ ನಿಗಮದ ಸಹಾಯಕ ಅಭಿಯಂತರ ಇಶಾಪುರಕರ ಎಚ್‌ಎ ಕದ್ರಾಪುರಕರ ಮತ್ತು ತಾಲೂಕ ಮಟ್ಟದ ಅಧಿಕಾರಿಗಳಾದ ಅಯ್ಯನಗೌಡರ ಗಿರೀಶ್ ಚೌಹಾಣ್ ಸೇರಿದಂತೆ ತಾಲೂಕ ಮಟ್ಟದ ಎಲ್ಲಾ ಅಧಿಕಾರಿಗಳು ಉಪಸ್ಥಿತರಿದ್ದರು.



ಕಾಲುಬಾಯಿ ರೋಗ ನಿಯಂತ್ರಣ ಅಗತ್ಯ

◆ **ಬೈಲಹೊಂಗಲ:** ಪಶುಸಂಗೋಪನೆ ಗ್ರಾಮೀಣ ಆರ್ಥಿಕತೆಯ ಪ್ರಮುಖ ಆಧಾರವಾಗಿದ್ದು, ಕಾಲುಬಾಯಿ ರೋಗದಂತಹ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವುದು ಅತ್ಯಂತ ಅಗತ್ಯವಾಗಿದೆ ಎಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.

ಅವರು ಸೋಮವಾರ ನಗರದ ಪಶು ಆಸ್ಪತ್ರೆ ಆವರಣದಲ್ಲಿ 9ನೇ ಸುತ್ತಿನ ರಾಷ್ಟ್ರೀಯ ಕಾಲುಬಾಯಿ ಲಸಿಕಾ ಕಾರ್ಯಕ್ರಮಕ್ಕೆ ಗೋ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿ ಮಾತನಾಡಿ, ಸರ್ಕಾರದಿಂದ ಜಾರಿಗೊಂಡಿರುವ ಲಸಿಕಾ ಕಾರ್ಯಕ್ರಮವನ್ನು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸುವ ಮೂಲಕ ರೈತರಿಗೆ ಹೆಚ್ಚಿನ ರಕ್ಷಣೆ ಒದಗಿಸಬೇಕು ಎಂದು ತಿಳಿಸಿದರು. ಜೊತೆಗೆ, ಪ್ರತಿಯೊಬ್ಬ ಪಶು ಮಾಲೀಕರು ತಮ್ಮ ಪಶುಗಳಿಗೆ ಸಮಯಕ್ಕೆ ಸರಿಯಾಗಿ ಲಸಿಕೆ ಹಾಕಿಸಿಕೊಳ್ಳುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಯಾದ ಸಂಜೀವ್ ಜುನ್ನೂರ್ ಹಾಗೂ ಪೌರಾಯುಕ್ತರಾದ ಭಾಗ್ಯಶ್ರೀ ಹುಗ್ಗಿ ಅವರು ಉಪಸ್ಥಿತರಿದ್ದು, ಲಸಿಕಾದಾರರಿಗೆ ನೇಮಕಾತಿ ಆದೇಶಗಳನ್ನು ವಿತರಿಸಿದರು. ಇದೇ ಸಂದರ್ಭದಲ್ಲಿ ಲಸಿಕಾ ಕಾರ್ಯಕ್ಕಾಗಿ ಅಗತ್ಯವಿರುವ ಕಿಟ್‌ಗಳನ್ನು ವಿತರಿಸಿ ಕಾರ್ಯಕ್ರಮಕ್ಕೆ ಉತ್ತೇಜನ ನೀಡಿದರು.

ಪಶು ಆಸ್ಪತ್ರೆಯ ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ)ರಾದ ಡಾ. ಮಲ್ಲಪ್ಪ ಸಜ್ಜನ್, ಡಾ. ಮಹಾಂತೇಶ್ ಕಳ್ಳಿ ಬಡ್ಡಿ, ಡಾ. ಮಹೇಶ್ ಮೇಟಿ, ಡಾ. ವಿಠಲ್ ತಡಕೋಡ, ಡಾ. ವಿರುಪಾಕ್ಷ ಅಡ್ಡಣಗಿ, ಡಾ. ಸಂಜೀವ್ ಗೋಯಿಮಠ, ಡಾ. ಸಿದ್ದು ಒಡೆಯರ್, ಡಾ. ಮಾಂತೇಶ್ ಮೇಟಿ ಹಾಗೂ ಡಾ. ಮೋಹನ್ ಬಿ.ಆರ್. ಸೇರಿದಂತೆ ಇಲಾಖೆಯ ಎಲ್ಲಾ ಸಿಬ್ಬಂದಿಗಳು ಹಾಗೂ ಪಶುಸಖಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.



ರಾಷ್ಟ್ರೀಯ ಕಾಲುಬಾಯಿ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ

ಗೋವು ರಕ್ಷಣೆಗೆ ಒತ್ತಾಯಿಸಿ ಶ್ರೀರಾಮಸೇನೆಯಿಂದ ಮನವಿ

◆ **ಚಿಕ್ಕೋಡಿ:** ಪಟ್ಟಣದ ಮಿನಿ ವಿಧಾನಸೌಧದಲ್ಲಿ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿ ರಾಷ್ಟ್ರವ್ಯಾಪಿ ಗೋ ರಕ್ಷಣೆ ಮತ್ತು ಗೋ ವಂಶ ಸಂರಕ್ಷಣೆಯ ಕ್ರಮಗಳನ್ನು ಸರ್ಕಾರ ಕೈಗೊಳ್ಳುವಂತೆ ಉಪ ವಿಭಾಗಾಧಿಕಾರಿಗಳಿಗೆ ಶ್ರೀರಾಮ ಸೇನೆಯ ಚಿಕ್ಕೋಡಿ ಜಿಲ್ಲಾ ಘಟಕದಿಂದ ಮನವಿ ಸಲ್ಲಿಸಲಾಯಿತು.

ಶ್ರೀರಾಮಸೇನೆಯ ಚಿಕ್ಕೋಡಿ ಜಿಲ್ಲಾ ಘಟಕದ ಅನಿತಾ ಬನಗೆ ಪ್ರತಿಭಟನೆ ಉದ್ದೇಶಿಸಿ ಮಾತನಾಡಿ, ಭಾರತದ ಕೃಷಿ ಹಾಗೂ ಪರಿಸರ ಸಮತೋಲನದಲ್ಲಿ ಹಸುವಿನ ಪಾತ್ರ ಬಹಳ ಮುಖ್ಯವಾಗಿದೆ. ಶತಶತಮಾನಗಳಿಂದ ಗೋವು ಸಾಕಾಣಿಕೆ ಭಾರತೀಯ ಪರಂಪರೆಯಾಗಿದೆ. ಗೋವಂಶಗಳನ್ನು ಸುರಕ್ಷಿತವಾಗಿರಿಸಲು ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಗೋವು ರಕ್ಷಣೆ ಮಾಡುವಂತೆ ಉಪವಿಭಾಗಾಧಿಕಾರಿ ಸುಭಾಷ ಸಂಪಗಾವಿ ಹಾಗೂ ತಹಶೀಲ್ದಾರ ರಾಜೇಶ ಬುರ್ಲಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.



ಈ ಸಂದರ್ಭದಲ್ಲಿ ಗಿರೀಶ ತಿಲಸಂಗೆ, ಗಜೇಂದ್ರ ಕಟ್ಟಿಕರ, ಕಿರಣ ಎರನೋಳೆ, ಸಂತೋಷ ಪೂಜಾರಿ, ಸಚಿನ ಗೌಡಿ, ಅರ್ಜುನ ಸೂರ್ಯವಂಶಿ, ರಾಮು ಕಮತೆ, ಗೋವಿಂದ ಶಾ, ಅನಿಲ ಮುಲ್ಲಟ್ಟೆ, ವಿನೋದ ಅಂಗಡಿ, ರಾಹುಲ ಕಟ್ಟಿಮನಿ, ಬೀರು ಪೂಜಾರಿ, ಸುಶಾಂತ ದನವಾಡೆ ಇತರರು ಇದ್ದರು.

ವಕೀಲ ವೃತ್ತಿಯಲ್ಲಿ ಸ್ಪರ್ಧಾತ್ಮಕ ಪೈಪೋಟಿಯಿರಲಿ: ನ್ಯಾ.ಸಂಕಣ್ಣವರ

◆ **ಹುಕ್ಕೇರಿ:** ವಕೀಲ ವೃತ್ತಿಯಲ್ಲಿ ಸೌಹಾರ್ದಯುತ ಮತ್ತು ಸ್ಪರ್ಧಾತ್ಮಕ ಪೈಪೋಟಿ ಇರಬೇಕು. ಯಾವುದೇ ವ್ಯಾಜ್ಯ ಸಣ್ಣದು, ದೊಡ್ಡದು ಎಂಬ ಬೇಧ ಭಾವ ಇಲ್ಲದೇ ನ್ಯಾಯ ಪರ ವಾದ ಮಂಡಿಸಬೇಕು. ಆಗ ಸಿಕ್ಕ ಯಶಸ್ಸು ನಿಜವಾದ ಶ್ರಮಕ್ಕೆ ಪ್ರತಿಫಲ ಆಗುತ್ತದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶ ರಾಜಣ್ಣ ಸಂಕಣ್ಣವರ ಹೇಳಿದರು.

ಸೋಮವಾರದಂದು ಸ್ಥಳೀಯ ನ್ಯಾಯಾಲಯದ ಇ-ಲೈಬ್ರರಿಯಲ್ಲಿ ವಕೀಲರ ಸಂಘದಿಂದ ಆಯೋಜಿಸಿದ್ದ ಉಚಿತ ರಕ್ತ ತಪಾಸಣೆ ಮತ್ತು ವಕೀಲ ವೃತ್ತಿಯಲ್ಲಿ 25 ವರ್ಷ ಪೂರೈಸಿದ ವಕೀಲರ ಸತ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬಿರು ಬಿಸಿಲಿನ ಜಳ ತಡೆದುಕೊಳ್ಳಲಾರದಂತಹ ವಾತಾವರಣ ನಿರ್ಮಾಣವಾಗಿದೆ. ಅದಕ್ಕಾಗಿ ವಕೀಲರು ವೃತ್ತಿಯ ಜತೆಗೆ ಆರೋಗ್ಯದತ್ತ ಕಾಳಜಿ ವಹಿಸಬೇಕು ಎಂದರು. ಕಿರಿಯ ನ್ಯಾಯಾಧೀಶ ಆದಿತ್ಯ ಕಲಾಲ ಮಾತನಾಡಿ, ಸೋದರತ್ವ ಭಾವನೆ ವಕೀಲ ವೃತ್ತಿಯಲ್ಲಿ ಹೆಚ್ಚಾಗಿ ಕಾಣುತ್ತದೆ. ಹಣಕ್ಕಿಂತ ವಾದ ಮಂಡನೆ ಯಶಸ್ವಿಯಾದಾಗ ಸಿಗುವ ತೃಪ್ತಿ ಎಲ್ಲಿಯೂ ದೊರಕದು. ವೃತ್ತಿ ನಿತ್ಯ ಹೋರಾಟ ಮನೋಭಾವ ಬೆಳೆಸುತ್ತದೆ. ನಿವೃತ್ತಿಯ ವಯೋಮಿತಿ ಇಲ್ಲದ ಕಾಯಕ ವಕೀಲರದ್ದಾಗಿದೆ ಎಂದರು.

ವಕೀಲರಾದ ಆರ್. ವಿ. ಜೋಶಿ, ಡಿ. ಕೆ. ಅವರಗೋಳ, ಎಂ. ಎಂ. ಪಾಟೀಲ, ಅನೀಶ ವಂಟಮೂರಿ ಅವರು ಮಾತನಾಡಿದರು. ವಕೀಲರ ಸಂಘದ ಅಧ್ಯಕ್ಷ



ಕೆ. ಬಿ. ಕುರಬೇಟ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ವೃತ್ತಿಯಲ್ಲಿ 25 ವರ್ಷ ಪೂರೈಸಿದ ವಕೀಲರನ್ನು ಸನ್ಮಾನಿಸಿದರು. ನಂತರ ವಕೀಲರಿಗೆ ರಕ್ತ ತಪಾಸಣಾ ಕಾರ್ಯಕ್ರಮ ಜರುಗಿತು. ವಕೀಲರ ಸಂಘದ ಅಧ್ಯಕ್ಷ ಕೆ. ಬಿ. ಕುರಬೇಟ, ಪದಾಧಿಕಾರಿಗಳಾದ ಅಂಬರೀಷ ಬಾಗೇವಾಡಿ, ಅನಿತಾ ಕುಲಕರ್ಣಿ, ಆಶಾ ಸಿಂಗಾಡಿ, ಅಪರ ಸರಕಾರಿ ವಕೀಲ ಅನೀಲ

ಕರೋಶಿ, ರಕ್ತ ತಪಾಸಣಾ ಮುಖ್ಯಸ್ಥ ವಿಶ್ವಾ ರಾಠೋಡ ಮತ್ತಿತರರಿದ್ದರು. ವಕೀಲರ ಸಂಘದ ಕಾರ್ಯದರ್ಶಿ ಎಸ್. ಜಿ. ನದಾಫ ಸ್ವಾಗತಿಸಿ, ನಿರೂಪಿಸಿದರು.

ಬಸವೇಶ್ವರ ಜಯಂತಿ: ಬೃಹತ್ ಮೆರವಣಿಗೆ

◆ **ಸಂಕೇಶ್ವರ:** ವಿಶ್ವಗುರು ಬಸವಣ್ಣನವರ ಜಯಂತಿ ನಿಮಿತ್ತವಾಗಿ ಪಟ್ಟಣದ ಪ್ರಮುಖ ರಸ್ತೆಯಲ್ಲಿ ಬಸವಣ್ಣನವರ ಬೃಹತ್ ಉತ್ಸವ ಮೂರ್ತಿ ಮೆರವಣಿಗೆಯು ವಿಜೃಂಭಣೆಯಿಂದ ನಡೆಯಿತು. ಗಾಂಧಿ ಚೌಕದಿಂದ ಪ್ರಾರಂಭವಾದ ಭವ್ಯ ಮೆರೆವಣಿಗೆಗೆ ಯಮಕನಮರಡಿಯ ಹುಣಸಿಕೊಳ್ಳ ಮಠದ ಸಿದ್ದ ಬಸವ ದೇವರು ಸ್ವಾಮೀಜಿ ಹಾಗೂ ಗಣ್ಯರಿಂದ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು.

ಮೆರವಣಿಗೆಯಲ್ಲಿ ಚಂಡೇ ಮದ್ದಳೆ ತಂಡ, ಗೊಂಬೆ ಕುಣಿತ ಸೇರಿದಂತೆ ನಾಡಿನ ಸಾಂಸ್ಕೃತಿಕ ವೈಭವವನ್ನು ಸೂಚಿಸುವ ವಿವಿಧ ರೀತಿಯ ಕಲಾ ತಂಡಗಳು ಮೆರವಣಿಗೆಗೆ ಮೆರಗು ತುಂಬಿದವು.

ಶಾಸಕ ನಿಖಿಲ್ ಕತ್ತಿ ಮಾತನಾಡಿ, ಬಸವಣ್ಣನವರು ವಚನಗಳ ಮೂಲಕ



ಜನರಲ್ಲಿ ಜಾಗೃತಿ ಮೂಡಿಸಿದರು ಹಾಗೂ ಆಗಿನ ಕಾಲದ ಶರಣರ ತತ್ವ, ಆದರ್ಶಗಳನ್ನು ಇಂದು ನಾವೆಲ್ಲರೂ ಪಾಲಿಸಬೇಕು ಎಂದರು.

ಅಪೆಕ್ಸ್ ಬ್ಯಾಂಕಿನ ನಿರ್ದೇಶಕರಾದ ರಾಹುಲ ಜಾರಕಿಹೋಳಿ ಮಾತನಾಡಿ, ಬಸವಣ್ಣನವರು 12ನೇ ಶತಮಾನದಲ್ಲಿಯೇ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದವರು ಅವರ ತತ್ವಗಳು ದೇಶಕ್ಕೆ ಅಷ್ಟೇ ಅಲ್ಲ, ವಿಶ್ವಕ್ಕೆ ಮಾದರಿಯಾಗಿವೆ ಎಂದು ಅಭಿಪ್ರಾಯಪಟ್ಟರು.

ಬಸವಣ್ಣನವರ ಬೃಹತ್ ಉತ್ಸವ ಮೂರ್ತಿಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಶ್ರೀ ದುರದುಂಡೀಶ್ವರ ಶಾಖಾ ಮಠಕ್ಕೆ ತಲುಪಿದ ನಂತರ ಬಸವಭಕ್ತರಿಗೆ ಹಾಗೂ ಅನುಯಾಯಿಗಳಿಗೆ ಬಸವ ಭೋಜನದ ವ್ಯವಸ್ಥೆ ಮಾಡಲಾಯಿತು.

ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಅಪ್ಪಾಸಾಹೇಬ್ ಶಿರಕೋಳಿ, ಶಿವಾನಂದ ಮುಡಶಿ, ಸಂತೋಷ ಮುಡಶಿ, ಬಸನಗೌಡ ಪಾಟೀಲ, ಅಮರ ನಲವಡೆ, ಶ್ರೀಕಾಂತ ಹತನೂರೆ, ಗಜಾನನ ಕ್ವಳ್ಳಿ, ರೋಹನ ನೇಸರಿ, ವಿಜಯ ಜರಳಿ , ಆನಂದ ಸಂಸುದ್ದಿ, ಚೇತನ ಬಶೆಟ್ಟಿ, ದೀಲಿಪ ಹೊಸಮನಿ, ಮಹೇಶ ಹಟ್ಟಿವಳಿ, ಸುಭಾಷ್ ಕಾಸರಕರ, ಸುನೀಲ ಪಾಟೀಲ, ಸಂತೋಷ ಪಾಟೀಲ, ಸಾಗರ ಜಕಾತಿ, ಬಸವದಳ ಪ್ರಮುಖರಾದ ಶಂಕರಗೌಡ ದೇಶಾಯಿ ಶಿವಶಂಕರ ಬಾಗೇವಾಡಿ, ಉಷಾ ರವದಿ, ಸಂಗೀತಾ ಕುಂಬಾರ ಸೇರಿದಂತೆ ಸರ್ವ ಸಮುದಾಯದ ಮುಖಂಡರು ಹಾಗೂ ಸಾವಿರಾರು ಯುವಕರು ಇದ್ದರು.

ಜೀವನ ಮೌಲ್ಯ ಕಲಿಸಿದ ವಿಶ್ವ ಗುರು ಬಸವಣ್ಣನವರು: ಗದ್ದಿಗೌಡರ

◆ **ಬೆಳಗಾವಿ :** ವಿಶ್ವಗುರು ಬಸವಣ್ಣವರು 12ನೇ ಶತಮಾನದ ಕನ್ನಡ ನಾಡಿನ ಮಹಾನ್ ಸಮಾಜ ಸುಧಾರಕ. ಆಧ್ಯಾತ್ಮಿಕ ಗುರು ಮತ್ತು ವಚನಕಾರ. ಅವರು ವಚನಗಳ ಮೂಲಕ ಜೀವನದ ಮೌಲ್ಯಗಳಾದ ಸಮಾನತೆ, ತಮ್ಮ ಸಾರಿ ಜಾತಿ,ಲಿಂಗ, ವರ್ಣ ಭೇದಗಳನ್ನು ಖಂಡಿಸಿದರು. ಎಲ್ಲರೂ ಸಮಾನರು ಎಂಬ ನೀತಿ ತಿಳಿಸಿ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಿದ್ದಾರೆ ಎಂದು ಸಾಹಿತಿ ಮತ್ತು ವಿಮರ್ಶಕ ಪ್ರೊ. ಎಫ್.ಡಿ.ಗದ್ದಿಗೌಡರ ಹೇಳಿದರು.

ನಗರದ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಕರ್ನಾಟಕ ರಾಜ್ಯ ಬರಹಗಾರರ ಸಂಘ ರಾಜ್ಯ ಘಟಕ ಹೂವಿನಹಡಗಲಿ ಜಿಲ್ಲಾ ಘಟಕ ಬೆಳಗಾವಿ ಕರ್ನಾಟಕ ರಾಜ್ಯ ಸರ್ಕಾರ ನೌಕರರ ಕ್ಷೇಮಾಭಿವೃದ್ಧಿ ಸಂಘ ಬೆಳಗಾವಿ ಇವರ ಸಂಯೋಗದಲ್ಲಿ ವಿಶ್ವಗುರು ಶ್ರೀ ಬಸವೇಶ್ವರ ಜಯಂತ್ಯುತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಕೆಲಸವೇ ದೇವರು. ಯಾವ ಕೆಲಸವೂ ಚಿಕ್ಕದು ಅಲ್ಲ ದೊಡ್ಡದು ಅಲ್ಲ ಎಂದು ಕಾಯಕವನ್ನು ಕೈಲಾಸ ಎಂದು ಕರೆದರು. ಅನ್ನ ದಾಸೋಹ, ಧನ ದಾಸೋಹ, ಜ್ಞಾನದಾಸೋಹ ಮೂಲಕ ಸಮಾಜದ ಸೇವೆ ಮಾಡಲು ಕರೆ ನೀಡಿದರು. ದಯವೇ ಧರ್ಮ. ಧರ್ಮದ ನಿಜ ಅರ್ಥ ತಿಳಿಸಿ ವಿಶ್ವವನ್ನು ಸುಂದರ ಹೂದೋಟ ಮಾಡಿದ ಕೀರ್ತಿ



ವಿಶ್ವ ಗುರು ಬಸವಣ್ಣನವರಿಗೆ ಸಲ್ಲುತ್ತದೆ. ಅವರ ವಚನಗಳಲ್ಲಿಯ ನೈತಿಕ ಮೌಲ್ಯಗಳನ್ನು ಇಂದಿನ ಯುವ ಪೀಳಿಗೆ ಅಳವಡಿಸಿಕೊಂಡು ಸುಂದರ ಸಮಾಜ ನಿರ್ಮಿಸಬೇಕಿದೆ ಎಂದರು.ಕಾರ್ಯಕ್ರಮ ಉದ್ಘಾಟಿಸಿದ ಮೋಹನಗೌಡ ಪಾಟೀಲ ಮಾತನಾಡಿ, ಎಲೆ ಮರೆಯ ಸಾಧಕರಿಗೆ ಪ್ರಶಸ್ತಿ ನೀಡಿ ಸನ್ಮಾನಿಸುವುದು ಶ್ಲಾಘನೀಯ ಕಾರ್ಯ ಎಂದರು.

ಇದೇ ಸಂದರ್ಭದಲ್ಲಿ ಪ್ರೊ. ಎಫ್ ಡಿ ಗಡ್ಡಿ ಗೌಡರ ವಿರಚಿತ ವಿಶ್ವ ಗುರು ಬಸವಾ ನೀನೇ ಬೇಕು ಬಸವಾ ಎಂಬ ಧ್ವನಿಸುರಳಿ ಬಿಡುಗಡೆ ಮಾಡಲಾಯಿತು. ಮತ್ತು ಗೀತಾ ಸು ಬಸ್ತವಾಡ ಅವರ ಗೀತ ಗುಚ್ಛ ಕವನ ಸಂಕಲನಕ್ಕೆ ಪುಸ್ತಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಡಾ.ದಾನಮ್ಮಾ ಝಳಕಿ ಅವರು ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾಧ್ಯಕ್ಷ ಕಲ್ಪವೃಕ್ಷ ಸಾಹಿತ್ಯ ವೇದಿಕೆ ಅಧ್ಯಕ್ಷ ಎಂ ವೈ ಮೆಣಸಿನಕಾಯಿ,ಡಾ ಹೇಮಾ ಸೊನ್ನಳ್ಳಿ,ಪೃಥ್ವಿ ಫೌಂಡೇಷನ್ ರಜನಿ ಜಿರಿಗಾಳ, ಸುಮಾ ದೊಡಮನಿ ಆಗಮಿಸಿದ್ದರು ಸುರೇಶ ಸಕ್ರಣ್ಣವರ ಸ್ವಾಗತಿಸಿದರು.

ಮಹಾದೇವಿ ಪಾಟೀಲ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಬರಹಗಾರರ ಸಂಘದ ಖಾನಾಪುರ ಅಧ್ಯಕ್ಷರು ಗಂಗಾಧರ ಬಡಿಗೇರ, ನದಾಫ, ಗಾಣಿಗಿ, ಹರ್ಷಾರಾಣಿ ಕಾಂಬಳೆ ಅವರನ್ನು ಸನ್ಮಾನಿಸಲಾಯಿತು. ಮಹೇಶ ನಿಲಜಿ,ಬಸವರಾಜಮೇದಾರ. ರುದ್ರೇಶ ಬಡಿಗೇರ,ನಿಂಗಪ್ಪ ಕೌಜಲಗಿ, ಗಂಗಾಧರಬಡಿಗೇರ,ಡಿ ಡಿ ಹೊಳಿ,ಪ್ರವೀಣ ಪಾಳೇಕರ,ಎ ಬಿ ಮಡಿವಾಳರ,ಪ್ರಕಾಶ ಬಾಗೇವಾಡಿ,ರಮೇಶ ಬಾಗೇವಾಡಿ,ಮಹಾದೇವ ನಿಚ್ಚಣಕಿ ಉಪಸ್ಥಿತರಿದ್ದರು.

ಕಿರುಸುದ್ದಿ

ಅಕ್ಕಿಮರಡಿ ಸರ್ಕಾರಿ ಪ್ರೌಢಶಾಲೆ ಶೇ.94ರಷ್ಟು ಫಲಿತಾಂಶ



ರನ್ನ ಬೆಳಗಲಿ: ಮುಧೋಳ ತಾಲೂಕಿನ ಅಕ್ಕಿಮರಡಿಯ ಸರ್ಕಾರಿ ಪ್ರೌಢ ಶಾಲೆಯು ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಶೇಕಡಾ 94 ರಷ್ಟು ಫಲಿತಾಂಶ ಸಾಧಿಸಿದೆ. 625ಕ್ಕೆ 604 ಅಂಕ ಪಡೆದು ಸಂಜನಾ ಲೋಗಾಂವಿ ಪ್ರಥಮ ಸ್ಥಾನವನ್ನು , 575 ಅಂಕ ಪಡೆದು ವಿಶ್ವನಾಥ ಸಂಕ್ರಟ್ಟಿ ದ್ವಿತೀಯ ಸ್ಥಾನವನ್ನು ಹಾಗೂ 568 ಅಂಕ ಪಡೆದು ಅಕ್ಷತಾ ಕಂಬಾರ ತೃತೀಯ ಸ್ಥಾನ ಪಡೆದಿದ್ದಾರೆ. ಶಾಲೆಯ ಮುಖ್ಯೋಪಾಧ್ಯಾಯರು, ಎಸ್‌ಡಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ಪ್ರಮುಖರು ವಿದ್ಯಾರ್ಥಿಗಳಿಗೆ ಅಭಿನಂದನೆ ತಿಳಿಸಿದ್ದಾರೆ.

ನಾಳೆಯಿಂದ ನವಗ್ರಹಗಳ ಪ್ರಾಣ ಪ್ರತಿಷ್ಠಾಪನೆ

ಮುಧೋಳ: ನಗರದ ಶಿಕ್ಷಕರ ಕಾಲೋನಿಯ ಶಿವಲಿಂಗೇಶ್ವರ ಹಾಗೂಮಾರುತೇಶ್ವರ ದೇವಸ್ಥಾನಗಳ ಆವರಣದಲ್ಲಿ ಜೀರ್ಣೋದ್ಧಾರ ಟ್ರಸ್ಟ ವತಿಯಿಂದ ಗಣಪತಿ, ಪಂಚಮುಖಿ ಮಾರುತೇಶ್ವರ, ನವಗ್ರಹಗಳ ಪ್ರಾಣಪ್ರತಿಷ್ಠಾಪನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಏ.30ರಂದು ಸಂಜೆ 3ಗಂಟೆಗೆ ನಗರದ ಕಲ್ಮೇಶ್ವರ ದೇವಸ್ಥಾನದಿಂದ ಭವ್ಯ ಮೆರವಣಿಯೊಂದಿಗೆ ಸಕಲ ವಾದ್ಯಮೇಳ ಹಾಗೂ ಪೂರ್ಣಕುಂಭದೊಂದಿಗೆ ಮೂರ್ತಿಗಳನ್ನು ಶಿಕ್ಷಕರ ಬಡಾವಣೆಗೆ ಬರಮಾಡಿಕೊಳ್ಳಲಾಗುವುದು. ಮೇ 4ರಂದು ವಿಧಿವತ್ತಾಗಿಪೂಜೆಯೊಂದಿಗೆ ಲೋಕಾರ್ಪಣೆಗೊಳಿಸಲಾಗುವುದೆಂದು ಸಂಘಟಕರು ತಿಳಿಸಿದ್ದಾರೆ. ಮೇ 4ರಂದು ಸೋಮವಾರ 10 ಗಂಟೆಗೆ ಕೊಣ್ಣೂರದ ಡಾ.ವಿಶ್ವಪ್ರಭುದೇವರು ಸ್ವಾಮಿಗಳು, ಗವಿಮಠ ಬಸವಲಿಂಗ ಸ್ವಾಮಿಗಳು, ಹಾಗೂ ಗಿರಗಾಂವದ ವೆಂಕಣ್ಣ ಮಹಾರಾಜರ ಸಾನ್ನಿಧ್ಯದಲ್ಲಿ ಸಚಿವ ಆರ್.ಬಿ.ತಿಮ್ಮಾಪುರಲೋಕಾಪ 'ಣೆಗೊಳಿಸುವರು. ಸಂಸದ ಗೋವಿಂದ ಕಾರಜೋಳ ಜ್ಯೋತಿ ಬೆಳಗಿಸುವರು. ಟ್ರಸ್ಟ ಅಧ್ಯಕ್ಷ ಕುಮಾರ ಹುಲಕುಂದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಆರ್.ಎಸ್.ತಳೇವಾಡ, ಸಂಗಮೇಶ ನಿರಾಣಿ, ಎಸ್.ಎಸ್.ಮಲಘಾಣ, ಆರ್.ವಿ.ಕರೆಹೊನ್ನ, ಡಾ.ಟಿ.ವಿ.ಅರಳಿಕಟ್ಟಿ, ದಯಾನಂದ ಪಾಟೀಲ, ಕಲ್ಲಪ್ಪ ಸಬರದ, ಅಶೋಕ ಕುಲಕರ್ಣಿ, ಪರಯ್ಯ ಗೋವಿಂದಪುರಮಠ, ಸಂತೋಷ ಪಾಲೋಜಿ, ಸಂಗಣ್ಣ ಹೊಸಮನಿ, ಚಂದ್ರಶೇಖರ ಪಮ್ಮಾರ ಆಗಮಿಸಲಿದ್ದಾರೆಂದುಸಂಘಟಕರು ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಗುಳೇದಗುಡ್ಡ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಸಕ್ತ ಸಾಲಿಗಾಗಿ ಬಿಎ, ಬಿಕಾಂ, ಬಿಎಸ್ಸಿ ಕೋರ್ಸ್‌ಗಳ ಪ್ರವೇಶಕ್ಕೆ ಆಹ್ವಾನಿಸಲಾಗಿದೆ. ಕನ್ನಡ ಹಾಗೂ ಆಂಗ್ಲ ಭಾಷಾವಿಷಯಗಳು ಸೇರಿದಂತೆ ಬಿಎ ಕೋರ್ಸ್‌ನಲ್ಲಿ ಕನ್ನಡ, ಇಂಗ್ಲೀಷ, ಇತಿಹಾಸ, ಭೂಗೋಳಶಾಸ್ತ್ರ ರಾಜ್ಯಶಾಸ್ತ್ರ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಬಿಎಸ್‌ಸಿ ಕೋರ್ಸ್‌ನಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಕಂಪ್ಯೂಟರ್ ಸೈನ್ಸ್ ಐಚ್ಛಿಕ ವಿಷಯಗಳು ಹಾಗೂ ವಿಶ್ವವಿದ್ಯಾಲಯ ನಿಗಧಿಪಡಿಸಿದ ಬಿಕಾಂ ಪದವಿ ಕೋರ್ಸಗಳು ಕಾಲೇಜಿನಲ್ಲಿ ಲಭ್ಯ ಇದ್ದು, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಕಾಲೇಜಿಗೆ ಭೇಟಿ ನೀಡಿ ಪ್ರವೇಶಾತಿ ಪಡೆಯಬೇಕು ಎಂದು ಪ್ರಾಚಾರ್ಯ ರೇವಣಸಿದ್ದ (ಮೊ. 9731775652) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಬಸವರಾಜ ಆಲಬಾಳ

ಜಮಖಂಡಿ: ಸಮೀಪದ ಹುನ್ನೂರಿನ ಗಣೇಶ ನಗರ ನಿವಾಸಿ, ಮೂಲತಃ ತಾಲೂಕಿನ ಹಿಪ್ಪರಗಿ ಗ್ರಾಮದ ಬಸವರಾಜ ಭೂಪಾಲ ಆಲಬಾಳ (49) ನಿಧನರಗಿದ್ದಾರೆ. ಮೃತರಿಗೆ ತಂದೆ, ಪತ್ನಿ, ಇಬ್ಬರು ಗಂಡು ಒಂದು ಹೆಣ್ಣು ಮಗಳು ಸೇರಿ ಅಪಾರ ಬಂಧು ಬಳಗ ಇದ್ದಾರೆ.



ಚಂದ್ರವ್ವ ಗೌಡರ



ಬೀಳಗಿ: ತಾಲೂಕಿನ ಮನ್ನಿಕೇರಿ ಗ್ರಾಮದ ಚಂದ್ರವ್ವ ಹುಲಿಯಪ್ಪ ಗೌಡರ (90) ನಿಧನ ಹೊಂದಿದರು. ಮೃತರಿಗೆ ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವಿದೆ.



ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ-2026ರ ಮತ ಎಣಿಕೆ ಕಾರ್ಯ ಮೇ 4ರಂದು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ನಡೆದಿದ್ದು, ಮತ ಎಣಿಕೆ ಸಿಬ್ಬಂದಿಗಳಿಗೆ ಮಂಗಳವಾರ ತರಬೇತಿ ಕಾರ್ಯಕ್ರಮ ನಡೆಯಿತು. ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ್ ವಾಸುದೇವ ಸ್ವಾಮಿ, ಡಾ.ಪ್ರದೀಪಕುಮಾರ ಸೇರಿದಂತೆ ಮೇಲ್ವಿಚಾರಕರು, ಸಹಾಯಕರು, ಮೈಕ್ರೋ ಆಬ್ಸರವರ್ ಪಾಲ್ಗೊಂಡಿದ್ದರು.

ಮತ ಎಣಿಕೆ ಸಿಬ್ಬಂದಿಗೆ ತರಬೇತಿ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ-2026ರ ಮತ ಎಣಿಕೆ ಕಾರ್ಯ ಮೇ 4ರಂದು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ನಡೆದಿದ್ದು, ಈ ಹಿನ್ನಲೆಯಲ್ಲಿ ಮತ ಎಣಿಕೆ ಸಿಬ್ಬಂದಿಗಳಿಗೆ ಮಂಗಳವಾರ ತರಬೇತಿ ಕಾರ್ಯಕ್ರಮ ನಡೆಯಿತು. ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಹಮ್ಮಿಕೊಂಡ ತರಬೇತಿಯಲ್ಲಿ ಮಾತನಾಡಿದ ಅವರು, ಮತ ಏಣಿಕೆ ಕಾರ್ಯಕ್ಕೆ ನೇಮಕಗೊಂಡ ಅಧಿಕಾರಿ ಹಾಗೂ ಸಿಬ್ಬಂದಿಗಳು ತಮ್ಮ ಕಾರ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಮತ ಎಣಿಕೆ ಕಾರ್ಯ ನಡೆಸಲಾಗುತ್ತಿದೆ. ಈಗಾಗಲೇ ಮತ ಎಣಿಕೆ ಕೇಂದ್ರ ಸಂಪೂರ್ಣ ಸಜ್ಜಾಗಿದ್ದು, ಚುನಾವಣಾ ಆಯೋಗದ ನಿರ್ದೇಶನಗಳನ್ವಯ ಎಣಿಕೆ ಕಾರ್ಯ ಯಶಸ್ವಿಯಾಗಿ ನಡೆಸಲು ತಿಳಿಸಿದರು. ಮತ ಎಣಿಕೆಗೆ ಒಟ್ಟು 14 ಟೇಬಲ್‌ಗಳನ್ನು ಇರಿಸಲಾಗಿದ್ದು, ಪ್ರತಿ ಟೇಬಲ್‌ಗೆ ತಲಾ ಒಬ್ಬರಂತೆ ಮತ ಎಣಿಕಾ ಮೇಲ್ವಿಚಾರಕ, ಸಹಾಯಕ ಮತ್ತು ಮೈಕ್ರೋ ವೀಕ್ಷಕರು ಸೇರಿದಂತೆ ಒಟ್ಟು 63 ಸಿಬ್ಬಂದಿಗಳು ಕಾರ್ಯನಿರ್ವಹಿಸಲಿದ್ದಾರೆ. ಅಂಚೆ ಮತಪತ್ರ ಎಣಿಕೆಗೆ ಪ್ರತ್ಯೇಕ ಕೊಠಡಿ ಇದ್ದು, 2 ಟೇಬಲ್ ಇರಿಸಲಾಗಿದೆ. ಸ್ಕ್ಯಾನಿಂಗ್ ಮಾಡಲು ಟೇಬಲ್ ಸಹ ಇರಿಸಲಾಗಿದೆ ಎಂದು ತಿಳಿಸಿದರು.ಮಾಸ್ಟರ ಟ್ರೈನರ್ ಶಶಿಶೇಖರ ರೆಡ್ಡಿ ಅವರು ಪ್ರಾತ್ಯಕ್ಷಿಕೆಯ ಮೂಲಕ ಮತ ಏಣಿಕೆ ಕುರಿತು ಮಾಹಿತಿ ತಿಳಿಸಿಕೊಟ್ಟರು. ವಿವಿಎಂ ಯಂತ್ರಗಳ ಬಳಕೆ, ವಿವಿಪ್ಯಾಟ್ ಸ್ಲಿಪ್‌ಗಳ ಪರಿಶೀಲನೆ, ಮತ ಎಣಿಕೆ ವೇಳೆ ಅನುಸರಿಸಬೇಕಾದ ನಿಯಮಗಳು ಹಾಗೂ ಎಚ್ಚರಿಕೆ ಕ್ರಮಗಳ ಕುರಿತು ಪ್ರಾಯೋಗಿಕ ತರಬೇತಿ ನೀಡಿದರು.



ರಬಕವಿ-ಬನಹಟ್ಟಿ: ಎಸ್‌ಟಿಸಿ ಕಾಲೇಜಿನ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿಗಳ ಸಾಧನೆಗೆ ಪ್ರೋತ್ಸಾಹ ನೀಡಿದ ಉಪನ್ಯಾಸಕರನ್ನು ಸನ್ಮಾನಿಸಲಾಯಿತು. ಜಮಖಂಡಿ ಬಿಎಲ್‌ಡಿಇ ಕಾಲೇಜಿನ ಪ್ರಾಚಾರ್ಯ ಪಿ.ಡಿ.ಪ್ರೋಳ, ಪ್ರಾಚಾರ್ಯಜಿ.ಆರ್.ಜುನ್ನಾಯ್ಕರ್, ನಿವೃತ್ತ ಪ್ರಾಚಾರ್ಯೆ ದಾಕ್ಷಾಯಣಿ ಕುಳ್ಳಿತ, ಜೆಎಸ್‌ಎಸ್ ಸಂಘದ ಆಡಳಿತ ಮಂಡಳಿಯ ಸದಸ್ಯ ಶ್ರೀಶೈಲ ಯಾದವಾಡ, ವಿ.ಆರ್. ಕುಳ್ಳಿ, ಪಂಡಿತ ಹನಗಂಡಿ, ಮಹಾದೇವಿ ಕೊಳಕಿ, ಉಪನ್ಯಾಸಕರಾದ ಜಿ.ಎಸ್.ಸಜ್ಜನ, ಎಸ್.ಬಿ.ಉಕ್ಕಲಿ, ರಮೇಶ ಮಾಗುರಿ ಇದ್ದರು.

ಮಹಿಳಾ ಮೀಸಲಾತಿ ಜಾರಿಗೆ ಮಹಿಳಾ ಕಾಂಗ್ರೆಸ್ ಘಟಕ ಆಗ್ರಹ


ಕಾಂಗ್ರೆಸ್ ಯಾವತ್ತೂ ಮಹಿಳೆಯರ ಪರ

ಬಾಗಲಕೋಟೆ: ದೇಶದಲ್ಲಿ ಶೇ.33ರಷ್ಟು ಮೀಸಲಾತಿ ಜಾರಿ ಮಾಡುವುದಕ್ಕೆ ಕಾಂಗ್ರೆಸ್ ಪಕ್ಷದಿಂದ ವಿರೋಧವಿಲ್ಲ, ಕಾಂಗ್ರೆಸ್ ಪಕ್ಷ ಯಾವತ್ತೂ ಮಹಿಳೆಯರ ಪರ ಇದೆ ಎಂದು ಮಹಿಳಾ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಸುಮಿತ್ರಾ ಗುಳಬಾಳ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಕಾಂಗ್ರೆಸ್ ಪಕ್ಷದ ಬಗ್ಗೆ ಅಪಪ್ರಚಾರ ಮಾಡುವುದನ್ನು ಬಿಟ್ಟು ಕೂಡಲೇ ದೇಶದಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ಹಿಂದೆ ಕಾಂಗ್ರೆಸ್ ಪಕ್ಷದ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಆಡಳಿತದಲ್ಲಿ ಮಹಿಳಾ ಸಬಲೀಕರಣ, ಮಹಿಳೆಯರ ಕಾಳಜಿ, ಯುವಕರ ಪರ ಇರುವ ಪಕ್ಷ ಎಂದು ಸಾಬೀತಾಗಿದೆ. ಆದರೆ ಈಗ ಮಹಿಳಾ ಮೀಸಲಾತಿಯನ್ನು ಕಾಂಗ್ರೆಸ್ ವಿರೋಧ ಮಾಡುತ್ತದೆ ಎಂದು ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ ಎಂದು ಆರೋಪಿಸಿದರು.

ಮಹಿಳಾ ಮೀಸಲಾತಿ ಕೇಳುವುದು ನಮ್ಮ ಹಕ್ಕು. ಮೀಸಲಾತಿ ನೀಡುವವರೆಗೆ ಹೋರಾಟ ಮಾಡುತ್ತೇವೆ. ಚರ್ಚೆ ಇಲ್ಲದೇ ದಿಡೀರಣೆ ಮೀಸಲಾತಿಯನ್ನು ಜಾರಿ ಮಾಡಲು ತಂದಿದ್ದಕ್ಕೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿದೆ ವಿನ: ಮೀಸಲಾತಿ ಜಾರಿಗೆಗೆ ವಿರೋಧ ಮಾಡಿಲ್ಲ ಎಂದರು.

ಮಹಿಳಾ ಕಾಂಗ್ರೆಸ್ ರಾಜ್ಯ ಕಾರ್ಯದರ್ಶಿ ಹಾಗೂ ಗ್ರಾಮೀಣ ಅಧ್ಯಕ್ಷೆ ಮಂಜುಳಾ ಕಮತಗಿ ಮಾತನಾಡಿ, ಕಾಂಗ್ರೆಸ್ ಯಾವತ್ತೂ ಮಹಿಳಾ ವಿರೋಧಿ ಅಲ್ಲ. ಮಹಿಳಾ ಸಬಲೀಕರಣಕ್ಕಾಗಿ ಹೋರಾಟ ಮಾಡಿದ ಇತಿಹಾಸ ನಮ್ಮ ಪಕ್ಷಕ್ಕಿದೆ. 1993ರಲ್ಲೆ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ



ಕಾಂಗ್ರೆಸ್ ಮೀಸಲಾತಿಯನ್ನು ಕಲ್ಪಿಸಿತು. ಆದರೆ ಬಿಜೆಪಿ ಮಹಿಳಾ ಮೀಸಲಾತಿ ವಿಷಯವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದೆ ಎಂದು ಹೇಳಿದರು.

ಮಹಿಳಾ ಮೀಸಲಾತಿ ಹೆಸರಿನಲ್ಲಿ ಕೇಂದ್ರ ಸರ್ಕಾರ ಮೋಸದ ಮಸೂದೆಯನ್ನು ತಂದಿದ್ದು, ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಮರು ವಿಂಗಡಣೆ ಬೇರೆ ಬೇರೆ ವಿಷಯವಾಗಿದ್ದರೂ ಎರಡನ್ನು ಒಟ್ಟಿಗೆ ತರಲಾಗಿತ್ತು. ಜನಸಂಖ್ಯೆ ಆಧಾರದಲ್ಲಿ ಕ್ಷೇತ್ರ ವಿಂಗಡಣೆ ಮಾಡುವುದರಿಂದ ದಕ್ಷಿಣ ರಾಜ್ಯಗಳಿಗೆ ಬಹುದೊಡ್ಡ ಅನ್ಯಾಯವಾಗಲಿದೆ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷಎಸ್.ಜಿ.ನಂಜಯ್ಯನಮಠ ಮಾತನಾಡಿ, ಮಹಿಳಾ ಮೀಸಲಾತಿಯನ್ನು ಹಿಂದೆ ದೇವೇಗೌಡರು ಪ್ರಧಾನಿಯಾಗಿದ್ದಾಗ, ರಾಜೀವ ಗಾಂಧಿ ನರಸಿಂಹರಾವ್ ಅವರು ಪ್ರಧಾನಿಯಾದ ಸಂದರ್ಭದಲ್ಲಿ ಜಾರಿಗೆ ತಂದಿದ್ದರ ಪರಿಣಾಮ ಜಿಲ್ಲಾ, ತಾಲೂಕು, ಗ್ರಾಮ ಪಂಚಾಯತಿ ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿದ್ದಾರೆ. ಹೀಗಾಗಿ ಮಹಿಳಾ ಮೀಸಲಾತಿಯನ್ನು ಜಾರಿ ತಂದಿದ್ದು ನಮ್ಮ ಪಕ್ಷ ಮೊದಲು. ಈಗ ಪ್ರಧಾನಿಯವರು ಮಹಿಳಾ ಮೀಸಲಾತಿಯನ್ನು ರಾಜಕೀಯ ಮಾಡಲು ಹೊರಟಿದ್ದಾರೆ ಎಂದರು.

ಪಂಚ ರಾಜ್ಯಗಳ ಚುನಾವಣೆ ನಡೆದಿರುವ ಸಂದರ್ಭದಲ್ಲಿ ಸಂಸದರು ಗೈರು ಉಳಿದಿರುವ ಸಂದರ್ಭ ಹಾಗೂ 2011ರಲ್ಲಿ ಜನಗಣತಿ ಮಾಡದೇ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ಹೊರಟಿರುವುದು ರಾಜಕೀಯ. ಕಾಂಗ್ರೆಸ್ ಪಕ್ಷ ಮಹಿಳಾ ಮೀಸಲಾತಿ ವಿರೋಧ ಮಾಡಿಲ್ಲ. ಅದನ್ನು ಸಂವಿಧಾನದ ವಿಧಿ ವಿಧಾನ ಮೂಲಕ ಜಾರಿಗೆ ತರಬೇಕು. ಜಾರಿಗೆ ತರುವ ಮುನ್ನ ವಿರೋಧ ಪಕ್ಷದವರ ಜತೆಗೆ ಚರ್ಚೆ ಮಾಡದೇ ಏಕಾಏಕಿ ಜಾರಿಗೆ ಮಾಡಲು ತಂದಿದ್ದಕ್ಕೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿದೆ ಎಂದು ಹೇಳಿದರು.

ಸಮಾಜಕ್ಕೆ ಉತ್ತಮ ನಾಗರಿಕರಾಗಿ ಬದುಕಿ

ಕಲಾದಗಿ: ಸರ್ಕಾರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ನೀವುಗಳು ಸವಲತ್ತು ಸದುಪಯೋಗ ಪಡಿಸಿಕೊಂಡು ಜ್ಞಾನಾರ್ಜನೆ ಪಡೆದು ಸಮಾಜಕ್ಕೆ ಉತ್ತಮ ನಾಗರಿಕರಾಗಿ ಬದುಕಿ ಎಂದು ರಾಮದುರ್ಗದ ಐ.ಎಸ್.ಯಾದವಾಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ಸಹಪ್ರಾಧ್ಯಾಪಕ ಅಶೋಕ ಹುಲ್ಲಳ್ಳಿ ಹೇಳಿದರು.

ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಮತ್ತು ವಾರ್ಷಿಕ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇವತ್ತಿನ ಕಾಲಮಾನದಲ್ಲಿ ನಾಯಕತ್ವ ಗುಣ ಮತ್ತು ಸಮಾಜ ಸೇವೆ ಅತ್ಯಂತ ಮುಖ್ಯವಾದ ಮೌಲ್ಯಗಳು ನೀವೇನಾದ್ರು ಕೊಡಬೇಕು ಎನ್ನುವುದಾದರೆ ನಿಮ್ಮ ಕುಟುಂಬ ಅಥವಾ ನಿಮ್ಮ ಪರಿಸರಸದಲ್ಲಿ ವಾಸ ಮಾಡುವ ವಿದ್ಯಾರ್ಥಿಗಳನ್ನು ಸರ್ಕಾರಿ ಕಾಲೇಜಿಗೆ ಸೇರಿಸುವಂತೆ ಮಾಡುವುದು ಸಹ ಉತ್ತಮ ಸಾಮಾಜಿಕ ಕಾರ್ಯವೆನಿಸುತ್ತದೆ ಎಂದು ಹೇಳಿದರು.

ಪಿಎಂಎಸ್ ಹಿರಿಯ ಪ್ರಾಥಮಿಕಶಾಲೆಯ ಮುಖ್ಯೋಪಾಧ್ಯಾಯ ಸಿ.ಎಲ್.ಹೂಗಾರ ಮಾತನಾಡಿ, ಕಲಿಕೆ ಜೊತೆಗಿನ ಒಡನಾಟ, ಜ್ಞಾನ ಮತ್ತು ಕನಸುಗಳನ್ನು ಕಟ್ಟಿಕೊಳ್ಳುವ ದಾರಿ ಶಿಕ್ಷಣದಿಂದ ಆಗಬೇಕು ಅದು ನಮ್ಮನ್ನು ಎತ್ತರಕ್ಕೆ ಬೆಳೆಸುವಂತಹ ಅದ್ಭುತ ಕೆಲಸವನ್ನು ಮಾಡುತ್ತದೆ. ಗುರುಗಳನ್ನು ಕಂಡೊಡನೆ ಗೌರವ ಭಾವದಿಂದ ತೋರುವ ದೃಷ್ಯಗಳು ಅಮೋಘವಾದವು. ಇದು ಶಿಕ್ಷಣಕ್ಕಿರುವ ತಾಕತ್ತು ಎಂದು ಹೇಳಿದರು.

ಪ್ರಾಂಶುಪಾಲ ಡಾ.ಎಚ್ .ಬಿ.ಮಹಾಂತೇಶ ಮಾತನಾಡಿ, ಬೀಳ್ಕೊಡುಗೆ ಎಂಬುದು ಕೇವಲ ತಾಂತ್ರಿಕವಾದ ಕಾರ್ಯಕ್ರಮ ಅಷ್ಟೇ, ಇಲ್ಲಿ ಕಲಿತ ಪ್ರತಿಯೊಬ್ಬರಲ್ಲಿಯೂ ಈ ಕಾಲೇಜಿನ ಅನುಭವಗಳನ್ನು ಬೀಳ್ಕೊಡಲು ಸಾಧ್ಯವಿಲ್ಲ ಎಂದು ಹೇಳಿದರು. ಯಂಕಮ್ಮ ಮಾತನಾಡಿದರು. ಡಾ.ಸರೋಜಿನಿ ಹೊಸಕೇರಿ ವಾರ್ಷಿಕ ವರದಿ ವಾಚನ ಮಾಡಿದರು. ಬಸವರಾಜ ಪಚ್ಚನ್ನವರ ವೇದಿಕೆ ಮೇಲಿದ್ದರು. ಡಾ.ಕೆ. ಎಂ.ಸಾರವಾನ, ಡಾ.ಯಲ್ಲಪ್ಪ ಜಿ, ಡಾ.ಲೋಕಣ್ಣ ಭಜಂತ್ರಿ, ಡಾ.ಪುಂಡಲೀಕ ಹುನ್ನಳ್ಳಿ, ಜಂಬೀರಸಾಬ ಕುರಣಿ ಸೇರಿದಂತೆ ಮಹಾವಿದ್ಯಾಲಯದ ಸಿಬ್ಬಂದಿ, ವಿದ್ಯಾರ್ಥಿಗಳು ಹಾಜರಿದ್ದರು.



ಸಾಧನೆಗೆ ಸಾಧಿಸುವ ಛಲ ಮುಖ್ಯ

ತೇರದಾಳ : ಸಾಧಿಸುವ ಛಲವಿದ್ದರೆ ಏನುಬೇಕಾದ್ದನ್ನು ಸಾಧನೆ ಮಾಡಬಹುದು ಎಂಬುದಕ್ಕೆ ಪ್ರತಿಕ್ಷಾ ಗೌಡರ ಸಾಕ್ಷಿಯಾಗಿದ್ದಾಳೆ. ತೇರದಾಳ ಪಟ್ಟಣದ ಪ್ರತಿಷ್ಠಿತ ಕುರಹಿನಶೆಟ್ಟಿ ನಿಲಕಂಠೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಈ ವಿದ್ಯಾರ್ಥಿನಿ ಎಸ್‌ಎಸ್ ಎಲ್‌ಸಿಯಲ್ಲಿ ಸುಮಾರು 608(97.28%) ಅಂಕಗಳಿಸಿ ಶಾಲೆಗೆ ಕೀರ್ತಿ ತಂದುಕೊಟ್ಟಿದ್ದಾಳೆ.

ಈ ಕುರಿತು ಮಾತನಾಡಿದ ಅವಳು ನಾನು ದಿನದಲ್ಲಿ ಸುಮಾರು ಆರು ಗಂಟೆಗಳ ಕಾಲ ನಿಯಮಿತವಾಗಿ ಓದುತ್ತಿದ್ದೆ. ನಮ್ಮ ಶಾಲೆಯಲ್ಲಿ ಹೇಳಿದ ಎಲ್ಲಾ ಪಾಠಗಳನ್ನು ಮನೆಗೆ ಬಂದು ಮತ್ತೊಮ್ಮೆ ನೋಡಿಕೊಳ್ಳುತ್ತಿದ್ದೆ. ಶಾಲೆಯ ಅಧ್ಯಕ್ಷ ಶಿವಶಂಕರ ಶಿವಾಚಾರ್ಯ ಪೂಜ್ಯರು ಸಹ ನಮಗೆಲ್ಲರಿಗೂ ಯೋಗ, ಅಧ್ಯಾತ್ಮ ಇನ್ನಿತರ ಚಟುವಟಿಕೆಗಳೊಂದಿಗೆ ಒಳ್ಳೆಯ ಸಂಸ್ಕಾರ ನೀಡಿ ನಮ್ಮನ್ನು ಭೌತಿಕವಾಗಿ ಹಾಗೂ ಮಾನಸಿಕವಾಗಿ ಸದೃಢರನ್ನಾಗಿ ಮಾಡಿದರು ಈ ಎಲ್ಲಾ ಅಂಶಗಳೆ ನಮ್ಮ ಸಾಧನೆಗೆ ಕಾರಣವಾಗಿದೆ ಎಂದರು. ತಾಯಿ ಅಶ್ವನಿ ಮಾತನಾಡಿ, ನನ್ನ ಮಗಳು ಯಾವಾಗಲೂ ಪುಸ್ತಕ ಬಿಟ್ಟು ಅಗಲುತ್ತಿರಲಿಲ್ಲ. ಒಂದೊಂದು ದಿನ ಇಡೀ ರಾತ್ರಿ ಓದುತ್ತಿದ್ದಳು. ಇದರಿಂದ ನಾನು ಅವಳ ಆರೋಗ್ಯದ ದೃಷ್ಟಿಯಿಂದ ಓದುವುದನ್ನು ಸಾಕು ಮಾಡು ಎಂದು ಗದರಿಸುತ್ತಿದ್ದೆ. ಆದರೆ ಅವಳು ನಮಗೇ ತಿಳಿ ಹೇಳುತ್ತಿದ್ದಳು. ಈಗ ಅವಳು ನಮ್ಮನ್ನು ಮೀರಿ ಬೆಳೆದಳು ತನ್ನೊಂದಿಗೆ ನಮಗೂ ಗೌರವ ತಂದು ಕೊಟ್ಟಳು ಎಂದು ಆನಂದ ಭಾಷ್ಪವನ್ನು ಹೊರಹಾಕಿದರು. ನಾವು ತುಂಬಾ ಬಡವರು ಬರುವ ಆದಾಯ ಬದುಕಿನ ನಿರ್ವಹಣೆಗೆ ಸಾಲದು, ನಮ್ಮ ಮಕ್ಕಳಿಗೆ ಶೈಕ್ಷಣಿಕವಾಗಿ ಮೂಲಭೂತ ಅವಶ್ಯಕತೆಗಳನ್ನು ಪೂರೈಸಬೇಕಾದರೂ ಸಹ ಬೇರೆಯವರ ಹತ್ತಿರ ಕೈಚಾಚುವ ಪ್ರಸಂಗ ಬಂದಿದೆ. ನನ್ನ ಮಗಳ ಸಾಧನೆಗೆ ಒಂದು ಕಡೆ ಖುಷಿಯಾದರೆ ಅವಳ ಮುಂದಿನ ಶಿಕ್ಷಣ ಹೇಗೆ ಎಂಬ ದುಗುಡ ನಮ್ಮನ್ನು ಕಾಡುತ್ತಲಿದೆ ದುಬಾರಿ ಕಾಲೇಜುಗಳು, ದುಬಾರಿ ಫೀ ನಡುವೆ ನನ್ನ ಮಗಳ ಶಿಕ್ಷಣ ಹೇಗೆ ಎಂದು ಚಿಂತೆಯಾಗಿದೆ ಎಂದು ತಮ್ಮ ಆತಂಕವನ್ನು ವ್ಯಕ್ತಪಡಿಸಿದರು.

ಬಡತನವಿದ್ದರೂ, ಕಿವಿಗಡಚ್ಚಿಕ್ಕುವ (ಮಗ್ಗದ) ಶಬ್ದದ ನಡುವೆಯೂ ಸಹೋದರಿ ಪ್ರತಿಕ್ಷಾ ಗೌಡರ ಉನ್ನತ ಸಾಧನೆ ಮಾಡಿ, ಸಾಧನೆಗೆ ಮೂಲಭೂತ ಅವಶ್ಯಕತೆಗಳಿಗಿಂತ ಸಾಧಿಸುವ ಮನಸ್ಸು ಇರಬೇಕು ಎಂಬುದನ್ನು ಸಾಧಿಸಿ ತೋರಿಸಿ ಇತರ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾಳೆ.



ಪರಿಶ್ರಮದಿಂದ ದುಡಿದು ಉಣ್ಣುವುದೇ ಶರಣ ಸಂಸ್ಕೃತಿ: ಶ್ರೀಗಳು

ಬೀಳಗಿ: ಯಾತ್ರೆಗೆ ಕಾಶಿ, ಜಾತ್ರೆಗೆ ಶ್ರೀಶೈಲ, ಜಾಗರಣೆಗೆ ಶಿವರಾತ್ರಿ, 7 ಲಕ್ಷ ಮಂತ್ರಗಳಲ್ಲಿ ಪಂಚಾಕ್ಷರಿ ಮಂತ್ರ ಶ್ರೇಷ್ಠ ಮತ್ತು ಪವಿತ್ರವಾಗಿವೆ ಎಂದು ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ತಾಲೂಕಿನ ಗಿರಿಸಾಗರದ ಕಲ್ಯಾಣ ಹಿರೇಮಠದಲ್ಲಿ ಮಹಾತಪಸ್ವಿ ಸಂಗನಬಸವ ಶಿವಾಚಾರ್ಯ ಸ್ವಾಮಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಸರ್ವಧರ್ಮ ಸಾಮೂಹಿಕ ವಿವಾಹ ಹಾಗೂ ಭಾವೈಕ್ಯ ಧರ್ಮ ಸಮ್ಮೇಳನದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದರು. ಇಲ್ಲಿಯವರೆಗೆ 2 ಸಾವಿರ ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದು, ಇಂದು ನಡೆದ 15 ಜೋಡಿಗಳ ಮದುವೆಗೆ ತಗಲಬಹುದಾಗಿದ್ದ ಅಂದಾಜು 1.50 ಕೋಟಿ ರೂ. ವೆಚ್ಚ ಉಳಿಸಿದ ಕೀರ್ತಿ ಶ್ರೀಮಠಕ್ಕೆ ಸಲ್ಲುತ್ತದೆ ಎಂದರು.

ಗಿರಿಸಾಗರ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಭಕ್ತರು ವರ್ಷಕ್ಕೊಮ್ಮೆ ಜಾತ್ರೆ ಮಾಡಿ ಉಂಡು ಮನೆಗೆ ಹೋದರೆ ಯಾವುದೇ ಪ್ರಯೋಜನವಾಗದೆಂದು ಅರಿತು ಬಡವರು ಲಕ್ಷಾಂತರ ರೂ. ಖರ್ಚು ಮಾಡಿ ಮದುವೆ ಮಾಡಿಕೊಳ್ಳುವದನ್ನು ತಪ್ಪಿಸುವದಕ್ಕಾಗಿ ಶ್ರೀಮಠದಿಂದ ಕಳೆದ 32 ವರ್ಷಗಳಿಂದ ಸರ್ವಧರ್ಮ ಸಾಮೂಹಿಕ ಮದುವೆಗಳನ್ನು ಮಾಡಿಕೊಂಡು ಬರಲಾಗುತ್ತಿದೆ. ಶ್ರೀಮಠದಿಂದ ಆಧ್ಯಾತ್ಮಿಕ,



ಧಾರ್ಮಿಕ, ಶೈಕ್ಷಣಿಕ, ಸಮಾಜಮುಖಿ ಕಾರ್ಯಗಳ ಮೂಲಕ ಭಕ್ತರನ್ನು ಸಂಸ್ಕಾರವಂತರನ್ನಾಗಿ ಮಾಡಲು ಶ್ರಮಿಸಲಾಗುತ್ತಿದೆ ಎಂದು ಹೇಳಿದರು.

ಬಾಗಲಕೋಟೆ ಎಪಿಎಂಸಿ ಮಾಜಿ ಅಧ್ಯಕ್ಷ ಕುಮಾರ ಯಳ್ಳಿಗುತ್ತಿ ಸಮಾರಂಭ ಉದ್ಘಾಟಿಸಿದರು. ಸಿಂದಗಿ ಡಾ.ಪ್ರಭುಸಾರಂಗದೇವ ಶ್ರೀಗಳು, ನಿಡಗುಂದಿಯ ರುದ್ರಮುನಿ ಶ್ರೀಗಳು, ಬಿಲ್‌ಕೆರೂರದ ಸಿದ್ದಲಿಂಗ ಶಿವಾಚಾರ್ಯ ಶ್ರೀಗಳು, ಮುತ್ತತ್ತಿಯ ಗುರುಲಿಂಗ ಶ್ರೀಗಳು, ಕೊಣ್ಣೂರದ ಡಾ.ವಿಶ್ವಪ್ರಭುದೇವ ಶ್ರೀಗಳು, ಮಸೂತಿಯ ಪ್ರಭುಕುಮಾರ ಶ್ರೀಗಳು, ಆಲಮಟ್ಟಿಯ ಡಾ.ರುದ್ರಮುನಿ ದೇವರು, ಗುರುಪಾದ ಶ್ರೀಗಳು, ವೀರಸಂಗಮೇಶ್ವರ ಶ್ರೀಗಳು, ಚಾಮರಾಜ ದೇಸಾಯಿ, ಉದ್ಯಮಿ ಪ್ರವೀಣ ಪಾಟೀಲ, ಕೃಷ್ಣಗೌಡ ಪಾಟೀಲ, ಶ್ರೀಶೈಲ ಯಂಕಂಚಿಮಠ, ಗುರುರಾಜ ಲೂತಿ, ಶ್ರೀಶೈಲ ನಂದ್ಯಾಳ ಇದ್ದರು.

ಬಸವಣ್ಣನವರ ಕಾಯಕ ಪ್ರಜ್ಞೆ ಅಳವಡಿಸಿಕೊಳ್ಳಿ: ಬರಗುಂಡಿ

ಗುಳೇದಗುಡ್ಡ: ಬಸವಣ್ಣನವರ ಸಾಮಾಜಿಕ ಪರಿಕಲ್ಪನೆ ಮತ್ತು ಕಾಯಕ ಪ್ರಜ್ಞೆಯನ್ನು ವಿದ್ಯಾರ್ಥಿಗಳು ಜೀವನದಲ್ಲಿ ರೂಢಿಸಿಕೊಂಡು ಸಾಮಾಜದ ಶಕ್ತಿಯಾಗಿ ಬೆಳೆಯಬೇಕು. ಕಾಯಕವೇ ಕೈಲಾಸವೆಂದು, ಕಾಯಕದಿಂದಲೇ ಮನುಷ್ಯನ ಮೌಲ್ಯ ಹೆಚ್ಚಾಗುತ್ತದೆ. ನುಡಿ ನಡೆ ಒಂದಾಗಿಸಿದ ಬಸವಣ್ಣನ ವಚನಗಳು ಸಮಾಜಕ್ಕೆ ಮಾದರಿಯಾಗಿವೆ ಎಂದು ಪ್ರೊ.ಸಿದ್ದಲಿಂಗಪ್ಪ ಬರಗುಂಡಿ ಹೇಳಿದರು.

ಪಟ್ಟಣದ ಭಂಡಾರಿ ಸಭಾಭವದಲ್ಲಿ ಹಮ್ಮಿಕೊಂಡಿದ್ದ ಬಿಎ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಬಸವಣ್ಣನವರ ವಚನ ಸಂವಾಹನ ಕಾರ್ಯಕ್ರಮದಲ್ಲಿ ಮಾತನಾಡಿ, ಬಸವಣ್ಣನವರ ವಚನಗಳನ್ನು ಅಧ್ಯಯನ ಮಾಡುವ ಮೂಲಕ ವಿದ್ಯಾರ್ಥಿಗಳು ಬಸವಣ್ಣನವರ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕಲಾ ವೇದಿಕೆ ಅಧ್ಯಕ್ಷ ಡಾ.ಸಣ್ಣವೀರಣ್ಣ ದೊಡ್ಡಮನಿ ಮಾತನಾಡಿದರು.



ಪ್ರಾಚಾರ್ಯ ಡಾ.ಎನ್.ವೈ.ಬಡಣ್ಣವರ ಅಧ್ಯಕ್ಷತೆ ವಹಿಸಿದ್ದರು. ಪಿಇಟಿ ಸದಸ್ಯ ಸಿದ್ದರಾಮಯ್ಯ ಪುರಾಣಿಕಮಠ, ವಚನ ಸಂವಹನ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಭಂಗಿ, ಸಿದ್ದು ಮಹಾಗುಂಡಪ್ಪನವರ, ಸುವರ್ಣ ಬಾವಿ, ಮಲ್ಲಿಕಾರ್ಜುನ ಹೂಲಿಗೇರಿ, ದೇವರಾಜ ಮುರುಡಿ, ಸೋಮವ್ವ ಪಾಲ್ತಿ, ದೀಪಾ ಸಂಕನಾಳ, ಮುದ್ದಪ್ಪ ಇಲಕಲ್ಲ, ಬೀರಪ್ಪ ಪೂಜಾರಿ ಇದ್ದರು.

ಶಿಕ್ಷಕ ವೃತ್ತಿಯಲ್ಲಿ ಅಣುಬೋಧನೆ ಅವಶ್ಯ



ಜಮಖಂಡಿ: ನಗರದ ಬಿಎಲ್‌ಡಿಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಅಣುಬೋಧನಾ ಕಾರ್ಯಗಾರ ಏರ್ಪಡಿಸಿದ್ದರು.

ವಿಜಯಪುರದ ಜೆಎಸ್‌ಎಸ್ ಬಿಎಡ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಹಾಗೂ ಸ್ನಾತಕೋತ್ತರ ವಿಭಾಗದ ಸಂಶೋಧನಾ ಮಾರ್ಗದರ್ಶಕ ಡಾ. ಮಂಜುನಾಥ ಕೋರಿ ಮಾತನಾಡಿ, ಶಿಕ್ಷಕ ವೃತ್ತಿಯಲ್ಲಿ ಅಣುಬೋಧನೆ ಎನ್ನುವುದು ಅತ್ಯಂತ ಪ್ರಮುಖವಾಗಿದ್ದು, ಈ ಅಣುಬೋಧನೆಯನ್ನು ತಾವು ಯಶಸ್ವಿಯಾಗಿ ಸ್ವೀಕರಿಸಬೇಕು. ಹಾಗೂ ಪಾಠ ಬೋಧನೆ ಯಶಸ್ವಿಯಾಗಲು ಇದು ಅವಶ್ಯವಾಗಿದೆ ಎಂದು ಹೇಳಿದರು.ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಪ್ರೊ.ಕೆ.ಜೆ.ಜಿರಾಗಳಿ ಮಾತನಾಡಿ, ಅಣುಬೋಧನೆ ಒಂದು ಅವಧಿಯ ಪಾಠ ಬೋಧನೆಯಲ್ಲಿರುವ ಸಣ್ಣ ಸಣ್ಣ ಚಟುವಟಿಕೆಗಳಾಗಿವೆ. ಹಾಗೂ ವಿವಿಧ ತರಹದ ಪಾಠ ಪರಿಚಯಿಸುವ, ವಿವರಣಾ, ಉಧಾಹರಣೆ ಬಳಸುವದು, ಕಪ್ಪು ಹಲಗೆ ಬಳಸುವದು, ಪ್ರಶ್ನಿಸುವದು ಈ ರೀತಿಯಾದ ಅಣುಬೋಧನಾ ಕೌಶಲ್ಯಗಳನ್ನು ತರಬೇತಿ ಅವಧಿಯಲ್ಲಿ ನೀಡಲಾಗುವದು ಎಂದರು.

ಪ್ರೊ.ಪ್ರೇಮಾನಂದ ಹಿರೇಮಠ, ದೈಹಿಕ ನಿರ್ದೇಶಕ ಮಹಾದೇವ ಗಲಬಿ, ಪ್ರೊ. ವಿಶಾಲಾಕ್ಷಿ ಸಿದರಡ್ಡಿ, ಮಧು ಮಠಪತಿ, ಸಂಜನಾ ಬಾಡಗಿ, ಮೇಘಾ ಶಿರಗುಪ್ಪಿ, ಪ್ರವೀಣ ಅವಟಿ, ಶ್ರೇಯಾ ಚವ್ಹಾಣ ಇದ್ದರು.


ಇಂದಿನಿಂದ ಗ್ರಾಮದೇವತೆ ಜಾತ್ರೆ

ಕೆರೂರ: ಪಟ್ಟಣದ ಗ್ರಾಮ ದೇವತೆಗಳ ಜಾತ್ರೆ ಏ.29ರಂದು ಗ್ರಾಮ ದೇವತೆಗಳ ರಥೋತ್ಸವವು ನಡೆಯಲಿದೆ. ಜಾತ್ರೆಗೆ ಬೃಹತ್ ರಥವು ಸಿದ್ಧವಾಗಿದ್ದು, ಬೆಳಗ್ಗೆ ದೇವಸ್ಥಾನದಲ್ಲಿ ದ್ಯಾಮಮ್ಮ ಹಾಗೂ ದುರ್ಗಮ್ಮ ದೇವಿಯರಿಗೆ ವಿಶೇಷ ಪೂಜೆ, ಹೋಮ ಹಾಗೂ ವಿವಿಧ ಧಾರ್ಮಿಕ ಪೂಜಾ



ಕಾರ್ಯಕ್ರಮಗಳು ನಡೆಯಲಿವೆ. ಏ.21ರಂದು ಗುಳೆದಲಕ್ಕಮ್ಮ ಜಾತ್ರೆ ಮಾಡುವ ಮೂಲಕ ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳಿಗೆ ಈಗಾಗಲೇ ಚಾಲನೆ ನೀಡಲಾಗಿದೆ. ಏ.29ರಂದು ಗ್ರಾಮ ದೇವತಗಳಾದ ದ್ಯಾಮಮ್ಮ ಹಾಗೂ ದುರ್ಗಮ್ಮ ದೇವಿಯರು ದೇವಸ್ಥಾನ ಗರ್ಭಗುಡಿಯಿಂದ ಹೊರಟು ಪಟ್ಟಣದ ರಾಜ ಬೀದಿಗಳಲ್ಲಿ ಸಂಚರಿ ಎ.ಆರ್.ಹಿರೇಮಠ ಹೈಸ್ಕೂಲ್ ಆವರಣದಲ್ಲಿ ಸ್ಥಾಪಿಸಿರುವ ಮಂಟಪದಲ್ಲಿ ಪ್ರತಿಷ್ಠಾಪಿಸಲಾಗುವುದು. ನಂತರ ಸಂಜೆ 4.30 ಗಂಟೆಗೆ ದೇವತೆಗಳ ಮಹಾರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಲಿದೆ. ಪಟ್ಟಣದ ಗಾಯಕ ವೆಂಕಟೇಶ ಮೂರ್ತಿ ಶಿರೂರ ಅವರ ನೇತೃತ್ವದಲ್ಲಿ ನಾಡಿನ ಹೆಸರಾಂತ ಕಲಾವಿದರಿಂದ ಏ.29, ಏ.30ರಂದು ಎರಡು ದಿನಗಳ ವಿವಿಧ ಬಗೆಯ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಮೇ 1ರಂದು ಗ್ರಾಮ ದೇವತೆಗಳಿಗೆ ಪಟ್ಟಣದ ಎಲ್ಲ ಜನರು ನೈವೇದ್ಯ ಕೊಟ್ಟು, ತಮ್ಮ ತಮ್ಮ ಇಷ್ಟಾರ್ಥ ಹರಕೆಗಳನ್ನು ನೆರವೇರಿಸುವ ಕಾರ್ಯ ನಡೆಯಲಿದೆ. ಮೇ 2ರಂದು ಸಂಜೆ 4 ಗಂಟೆಗೆ ಕರಬಾನ ಮಡಿಕೆ ಕಾರ್ಯಕ್ರಮ ಜರುಗಲಿದೆ. ಮೇ5ರಂದು ಪುನಃ ಗ್ರಾಮ ದೇವತೆಯರಿಗೆ ಉಡಿ ತುಂಬುವ ಮೂಲಕ ಜಾತ್ರೆ ಸಂಪನ್ನಗೊಳ್ಳಲಿದೆ.

ಸರ್ಕಾರಿ ಪ್ರೌಢಶಾಲೆ ಶೇ 94.7 ಸಾಧನೆ



ರನ್ನ ಬೆಳಗಲಿ: ಪಟ್ಟಣದ ಸಿದ್ಧಾರೂಢ ಸರ್ಕಾರಿ ಪ್ರೌಢ ಶಾಲೆಯ ಎಸ್ ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಶೇ 94.7 ರಷ್ಟು ಆಗಿದೆ. ಒಟ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತವರು,167ರಲ್ಲಿ 157 ವಿದ್ಯಾರ್ಥಿಗಳು ಪಾಸಾಗಿದ್ದಾರೆ. 9 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ ,74 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 35 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ, 38 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಕಾವೇರಿ ಡೊಳ್ಳಿ, ಶೇ 94.56 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ, ಲಕ್ಷ್ಮಿ ಒಂಟಗೋಡಿ ಶೇ 93.92 ದ್ವಿತೀಯ, ಲಕ್ಷ್ಮಿ ಉಪ್ಪಾರಟ್ಟಿ ಶೇ 89.28 ತೃತೀಯ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. ಸಿದ್ಧಾರೂಢ ಸರಕಾರಿ ಪ್ರೌಢಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ವಿದ್ಯಾರ್ಥಿಗಳನ್ನು ಗೌರವಪೂರ್ವಕ ಸನ್ಮಾನಿಸಲಾಯಿತು. ಶಾಲಾ ಮುಖ್ಯಗುರುಮಾತೆ ಎಸ್.ಎಸ್.ಉದಪುಡಿ, ಎಸ್ಡಿಎಂಸಿ ಅಧ್ಯಕ್ಷ ಗಿರೀಶ ಸಂಕ್ರಟ್ಟಿ, ಶಾಲಾ ಸಿಬ್ಬಂದಿ, ಶಾಲಾ ಉಸ್ತುವಾರಿ ಸಮಿತಿಯವರು ಮಕ್ಕಳಿಗೆ ಶುಭ ಕೋರಿದರು. ವಿಠ್ಠಲ ಡೊಳ್ಳಿ ,ಲಕ್ಷ್ಮಣ ವೆಂಕಪ್ಪ ಒಂಟಗೋಡಿ, ನಾರಾಯಣ ಒಂಟಗೋಡಿ, ಬಿ.ಪಿ.ಚೋಪಡೆ, ಕಿರಣ ಪವಾರ, ರವಿ ಹಿರೇಕಲ್ಮಠ ಉಪಸ್ಥಿತರಿದ್ದರು.

ಗ್ರಾಮದೇವತೆಗಳ ಜಾತ್ರೆ ಸಂಪನ್ನ

ಬಾದಾಮಿ: ಮಳೆ ಬೆಳೆಯ ಮೂಲಕ ಲೋಕ ಕಲ್ಯಾಣಾರ್ಥವಾಗಿ ಕಳೆದ ಐದು ವಾರಗಳಿಂದ ಮಂಗಳವಾರ ದಿನವನ್ನು ನಗರದ ಗ್ರಾಮ ದೇವತೆಯ ವಾರವನ್ನಾಗಿ ಆಚರಿಸಿ ಇಂದು ಕೊನೆ ಮಂಗಳವಾರ ಪುರವಾಸಿಗಳು ದೇವತೆಗೆ ಉಡಿ ತುಂಬಿ ಪ್ರಾರ್ಥಿಸುವ ಮೂಲಕ ವಾರವನ್ನು ಸಂಪನ್ನಗೊಳಿಸಿದರು.

ಬೆಳಗ್ಗೆಯಿಂದಲೇ ಹಳೆ ಬಾದಾಮಿಯಲ್ಲಿರುವ ಉಭಯ ದೇವಿಯರಾದ ದ್ಯಾಮವ್ವ, ದುರ್ಗವ್ವ ಎಂಬ ಗ್ರಾಮ ದೇವತೆಯ ದೇವಸ್ಥಾನಕ್ಕೆ ಭಕ್ತರು ತಮ್ಮ ಕೂಡು ಕುಟುಂಬದೊಂದಿಗೆ ಬಂದು ಶ್ರೀದೇವಿಯರಿಗೆ ಹಣ್ಣು, ಹಂಪಲ, ವಿವಿಧ ರೀತಿಯ ಆಹಾರ ಧಾನ್ಯಗಳ, ಖಾದ್ಯಗಳ ನೈವೇದ್ಯ ನೀಡುವ ಮೂಲಕ ಹರಕೆಯನ್ನು ತೀರಿಸಿದರು. ಮಲೆಗಾಲಕ್ಕೂ ಮುನ್ನ ಊರಿನ ಹಿರಿಯರು ಗ್ರಾಮದೇವತೆಯ ವಾರ ಹಿಡಿಯುವಿಕೆ ಎನ್ನುವುದು ಒಂದು ಸಾಂಪ್ರದಾಯಿಕ ಆಚರಣೆಯಾಗಿ ಬಂದಿದೆ. ಘೋಷಿತ ದಿನದಿಂದ ಐದು ಮಂಗಳವಾರದವರೆಗೆ ಉಗ್ರ ಸ್ವರೂಪಿಣಿಯರಿಗೆ ನೀರುಣಿಸಿ ಹರಕೆ ಹೊರುವುದು ಸೇರಿದಂತೆ ನಾನಾ ರೀತಿಯ ಪದ್ಧತಿಗಳನ್ನು ಆಚರಿಸಲಾಗುತ್ತಿದೆ. ಉಭಯ ದೇವಿಯರ ಅರ್ಚಕ ಮನೆತನದವರಾದ ಬಡಿಗೇರ ಕುಟುಂಬ ವರ್ಗದವರು ಅಂದು ಶ್ರೀದೇವಿಯರಿಗೆ ವಿಶೇಷ ಪೂಜಾಲಂಕಾರ ಮತ್ತು ನೈವೇದ್ಯ ಮಾಡಿ ಆಗಮಿಸಿದ್ದ ಭಕ್ತರಿಗೆ ಫಲ ಪ್ರಸಾದ ನೀಡುತ್ತಾರೆ. ಮಳೆ, ಬೆಳೆ ಮತ್ತು ಸುಭೀಕ್ಷೆಗಾಗಿ ಈ ಆಚರಣೆ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ.



ಕಿರುಸುದ್ದಿ

ನಾಳೆ ಕುಂದುಕೊರತೆ ಸಭೆ

ಬಸವನಬಾಗೇವಾಡಿ: ಪಟ್ಟಣದ ಪುರಸಭೆ ಸಭಾಭವನದಲ್ಲಿ ವಿಜಯಪುರ ಜಿಲ್ಲಾ ಉಪವಿಭಾಗಾಧಿಕಾರಿ(ಎಸಿ), ತಹಶೀಲ್ದಾರ್, ಡಿವೈಎಸ್ಪಿ ನೇತೃತ್ವದಲ್ಲಿ ಹಾಗೂ ವಿವಿಧ ಇಲಾಖೆಯ ಎಲ್ಲಾ ಅಧಿಕಾರಿಗಳ ಸಹಯೋಗದಲ್ಲಿ ಅಖಂಡ ತಾಲೂಕುಮಟ್ಟದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕುಂದುಕೊರತೆ ಸಭೆ ಏ.30ರಂದು ಸಂಜೆ 4ಗಂಟೆಗೆ ಏರ್ಪಡಿಸಿದೆ. ಕಾರಣ ತಾಲೂಕುಮಟ್ಟದ ಎಲ್ಲಾ ದಲಿತ ಮುಖಂಡರು ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಬೇಕೆಂದು ಜನಸ್ನೇಹಿ ಪೊಲೀಸ್ ಠಾಣೆ ಪ್ರಕಟಣೆಯಲ್ಲಿ ತಿಳಿಸಿದೆ.

ಸ್ನೇಹಾ ಚಿಗರಿಗೆ 613 ಅಂಕ



ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದ ಕೃಷಿ ಕುಟುಂಬದ ಸಂಗಮೇಶ ಚಿಗರಿ ಅವರ ಪುತ್ರಿ, ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟದ ಆಕ್ಸ್‌ಫರ್ಡ್ ಪಾಟೀಲ್ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿನಿ ಸ್ನೇಹಾ ಸಂಗಮೇಶ ಚಿಗರಿ 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 613 ಅಂಕಗಳನ್ನು ಗಳಿಸಿ ಪ್ರತಿಶತ 98ರಷ್ಟು ಸಾಧನೆ ಮಾಡಿದ್ದಾಳೆ. ಅವಳ ಸಾಧನೆ ಮೆಚ್ಚಿ ಕುಟುಂಬಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆಂದು ಶಿವಾಜಿ ಮೋರೆ ತಿಳಿಸಿದ್ದಾರೆ.

ಉತ್ತಮ ಸಾಧನೆ







ಝಳಕಿ: ಸಮೀಪದ ಅರ್ಜನಾಳ ಗ್ರಾಮದಲ್ಲಿ ನಡೆಯುತ್ತಿರುವ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು 2025 – 2026 ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ್ದಾರೆ. ಶ್ರುತಿ ನಾನಾಗೌಡ ಪಾಟೀಲ 95.36% ಪ್ರಥಮ ರಾಣಿ ಸುರೇಶ ಕೋಳಿ 93. 92% ದ್ವಿತೀಯ. ರಕ್ಷಿತಾ ಭೀಮಣ್ಣ ಬಿರಾದಾರ 93.12% ತೃತೀಯ. ಅಗ್ರ ಶ್ರೇಣಿ 13. ಪ್ರಥಮಶ್ರೇಣಿ 28 . ದ್ವಿತೀಯ ಶ್ರೇಣಿ 08 ತೃತೀಯ ಶ್ರೇಣಿಯಲ್ಲಿ 04 ವಿದ್ಯಾರ್ಥಿಗಳು ಪಾಸಾಗಿದ್ದಾರೆಂದು ಹೇಳಲು ಬಹಳ ಹೆಮ್ಮೆ ವಿಷಯವಾಗಿದೆ. ಎಸ್ಡಿಎಂಸಿ ಅಧ್ಯಕ್ಷರು ಸದಸ್ಯರು ಹಾಗೂ ಅಧಿಕಾರಿಗಳು ಮುಖ್ಯೋಪಾಧ್ಯಾಯರು ಸರ್ವ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

ದೇಹದಾನಕ್ಕೆ ವಾಗ್ದಾನ



ವಿಜಯಪುರ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿವೃತ್ತ ನಿರ್ದೇಶಕ ನಗರದ ನಿವಾಸಿ ಮಲ್ಲಿಕಾರ್ಜುನ ಗುರುಮೂರ್ತಿ ಕೆಳಗಡೆ (74) ಅವರು ಮರಣಾನಂತರ ತಮ್ಮ ದೇಹವನ್ನು ಇಲ್ಲಿನ ಬಿಎಲ್‌ಡಿಇ ಆಸ್ಪತ್ರೆಗೆ ದಾನ ಮಾಡುವುದಾಗಿ ವಾಗ್ದಾನ ಮಾಡಿದ್ದಾರೆ. ಜಿಲ್ಲೆಯಲ್ಲಿ ದೇಹದಾನದ ಮಹತ್ವದ ಕುರಿತು ಜನರಲ್ಲಿ ಜಾಗೃತಿ ಹೆಚ್ಚಾಗುತ್ತಿದೆ. ಸದ್ಯ ಮಲ್ಲಿಕಾರ್ಜುನ ಗುರುಮೂರ್ತಿ ಕೆಳಗಡೆ ಅವರು ಮರಣಾನಂತರ ತಮ್ಮ ದೇಹದಾನ ವಾಗ್ದಾನ ಮಾಡಿದ್ದಾರೆ. ಅಲ್ಲದೇ, ಬಿಎಲ್‌ಡಿಇ ಆಸ್ಪತ್ರೆಯ ಅಂಗರಚನಾಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಆರ್.ಎಸ್. ಬುಲಗೌಡ ಅವರನ್ನು ಭೇಟಿ ಮಾಡಿ ದೇಹ ದಾನವನ್ನು ಮಾಡಲು ತಮ್ಮ ಹೆಸರು ನೋಂದಾಯಿಸಿ, ದೇಹ ದಾನಮಾಡುವ ಅರ್ಜಿಯನ್ನು ಭರ್ತಿಮಾಡಿ, ಸಹಿಮಾಡಿ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸಿದರು. ಅವರ ನಿರ್ಧಾರಕ್ಕೆ ಬಿಎಲ್‌ಡಿಇ ಸಂಸ್ಥೆ ಮತ್ತು ಅಂಗರಚನಾಶಾಸ್ತ್ರ ವಿಭಾಗದ ಸಿಬ್ಬಂದಿ ಕೃತಜ್ಞತೆ ಸಲ್ಲಿಸಿದ್ದಾರೆ.

ರಾಥೋಡಗೆ ಪ್ರಶಸ್ತಿ ಪ್ರದಾನ



ದೇವರ ಹಿಪ್ಪರಗಿ: ತಾಲೂಕಿನ ಪಡಗಾನೂರ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ದಾನು ಹಾಬು ರಾಥೋಡ್ ಅವರಿಗೆ 2025/26ನೇ ಸಾಲಿನ ಶ್ರೀಕೃಷ್ಣದೇವರಾಯ ಸದ್ಭಾವನ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಅವರ ಸೇವೆ ಗುರುತಿಸಿ ಸದ್ಗುರು ಶಿವರಾಮ ಅವಧೂತರ ಆಶ್ರಮ ದಕ್ಷಿಣ ಕಾಶಿ ಹೇಮಕೂಟ ಹಂಪಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾನಂದ ಭಾರತಿ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕರ್ನಾಟಕ ವಿವಿ ಪ್ರಾಧ್ಯಾಪಕ ಹಾಗೂ ತ್ರಿಬಾಷಾ ಸಾಹಿತಿ ಡಾ.ಎಲ್.ಪಿ.ಲಮಾಣಿ ಕಾರ್ಯಕ್ರಮ ಉದ್ಘಾಟಿಸಿದರು. ಡಾ.ರಮೇಶ ಹಂಚಿನಮನಿ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿಗಳು, ಶಿಕ್ಷಕರು ಇದ್ದರು.



ಮುದ್ದೇಬಿಹಾಳ: ನಗರದಲ್ಲಿ ನಡೆಯುತ್ತಿರುವ ಮನೆಯಲ್ಲಿ ಮಹಾಮನೆ 22ನೇ ವಾರ್ಷಿಕೋತ್ಸವದ ಕಾರ್ಯಕ್ರಮ ವಚನ ನಿರೂಪಣೆ ಹಾಗೂ ಬಸವತತ್ವ ಪ್ರಚಾರದ ಕಾರ್ಯಕ್ರಮದೊಂದಿಗೆ ನಡೆಯಿತು. ಇಲಕಲ್ ನಗರದ ಮಹಾಂತೇಶ ಮುದಗಲ್ ಬಸವ ಶೀರ್ಷಿಕೆಯ ಕವನ ವಾಚಿಸಿದರು. ಹಿರಿಯ ಸಾಹಿತಿ ಬಿ.ಎಂ.ಹಿರೇಮಠ, ಶರಣ ಸಾಹಿತ್ಯ ಪರಿಷತ್ತಿನ ಬಸವರಾಜ ನಾಲತವಾಡ, ಬಿ.ಎಂ.ಇಟಗಿ, ಸಿ.ಜಿ.ನಾಗರಾಳ, ಚಂದ್ರಶೇಖರ ಪ್ಯಾಟೀಗೌಡರ ಸೇರಿ ಬಸವ ಬಳಗ ಸದಸ್ಯರು ಉಪಸ್ಥಿತರಿದ್ದರು.

ಮೇ 2ರಂದು ಗೋಪಾಲ ಕಾವಲಿ



ವಿಜಯಪುರ: ಜಿಲ್ಲೆಯ ಬಬಲೇಶ್ವರ ತಾಲೂಕಿನ ಉಪ್ಪಲದಿನ್ನಿಯ ಪುರಾತನ ಮಾರುತೇಶ್ವರ (ಹನುಮಂತ) ದೇವಾಲಯದಲ್ಲಿ ಉತ್ಸವ ಆರಂಭವಾಗಿದ್ದು ಮೇ 2 ರಂದು ಗೋಪಾಲ ಕಾವಲಿ ಹಮ್ಮಿಕೊಳ್ಳಲಾಗಿದೆ. ಸಂಗಮನಾಥನ ಪುರಾಣದಲ್ಲಿ ಈ ದೇವಾಲಯದ ಉಲ್ಲೇಖವಾಗಿದ್ದು, ಅದರ ಪ್ರಕಾರ ಹಾಗೂ ಗ್ರಾಮದ ಹಿರಿಯರಾಗಿದ್ದ ದಿವಂಗತ ಪಾಂಡುರಂಗಾಚಾರ್ಯ ಗಲಗಲಿ ಅವರು ಹೇಳಿದಂತೆ ಈ ದೇವಾಲಯಕ್ಕೆ ಸರಿ ಸುಮಾರು 350 ವರ್ಷಗಳ ಇತಿಹಾಸ ವಿರುವುದು ಕಂಡು ಬರುತ್ತದೆ. ಎರಡನೇ ಕಾಶಿ ಎಂದೇ ಪ್ರಖ್ಯಾತವಾಗಿರುವ ಉಪ್ಪಲದಿನ್ನಿಯ ಗ್ರಾಮದಲ್ಲಿನ ಈ ಹಳೆಯ ದೇವಾಲಯ 1990 ರಲ್ಲಿ ಶಿಥಿಲ ಗೊಂಡಿದ್ದರಿಂದ ಅದನ್ನು ಪುನಃ ಜೀರ್ಣೋದ್ಧಾರ ಮಾಡಿ ಸುಂದರ ಗೊಳಿಸಲಾಗಿದೆ. ನಿರಂತರ ಐದು ದಿನಗಳ ಕಾಲ ನಡೆಯುವ ಉತ್ಸವದ ಕಾಲಕ್ಕೆ ಅಭಿಷೇಕ, ಪವಮಾನ ಹೋಮ, ಪಲ್ಲಕ್ಕಿ ಸೇವೆ, ಪ್ರವಚನ, ಕೀರ್ತನ ಭಜನೆ ಮುಂತಾದವುಗಳು ಅತ್ಯಂತ ಶ್ರದ್ಧಾ ಭಕ್ತಿಯಿಂದ ನಡೆಯುತ್ತಿದ್ದು ಖ್ಯಾತ ನ್ಯಾಯವಾದಿ ಎಂ.ಕೆ.ಕುಲಕರ್ಣಿ(ಉಪ್ಪಲದಿನ್ನಿ) ನೇತೃತ್ವದಲ್ಲಿ ಕುಲಕರ್ಣಿ ಮನೆತನದ ಎರಡು ಕುಟುಂಬಗಳು, ಗಲಗಲಿ ಪರಿವಾರ ಹಾಗೂ ಗುಮಾಸ್ತ ಕುಟುಂಬದವರು ಉತ್ಸವದ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿರುವುದು ವಿಶೇಷ.



ಸಿಂದಗಿ: ತಾಲೂಕಿನ ಯಂಕಂಚಿಯ ಸಂತೋಷ ತಳಗೇರಿ, ಸುಂಗಠಾಣದ ಲಾಳೇಮಶ್ಯಾಕ ಕುರುಬತಹಳ್ಳಿ, ಬ್ಯಾಕೋಡದ ಮಡಿವಾಳಪ್ಪ ಕೊಂಡಗೂಳಿ, ಬಾಂದಕವಚೆಯ ಮಲಕಪ್ಪ ಭಂಟನೂರ ಇವರುಗಳ ಗ್ರಾಪಂ ವ್ಯಾಪ್ತಿಯಲ್ಲಿ ಶೇ.100ಕ್ಕೆ 100ರಷ್ಟು ತೆರಿಗೆ ವಸೂಲಾತಿ ಸಾಧನೆ ಮಾಡಿದ್ದ ಪ್ರಯುಕ್ತ ಜಿಪಂ ಸಿಇಒ ರಿಷಿ ಆನಂದ, ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಅವರು ತಾಪಂ ಇಒ ರಾಮು ಅಗ್ನಿ ಅವರಿಗೆ ಸನ್ಮಾನಿಸಿ ಪ್ರಮಾಣ ಪತ್ರ ವಿತರಣೆ ಮಾಡಿದರು.

ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಮೂರ್ತಿ ಎಲ್. ಸೂಚನೆ

ಎಸ್ಸಿ, ಎಸ್ಟಿ ಸಮಸ್ಯೆ ಪರಿಹಾರಕ್ಕೆ ಕ್ರಮ

ವಿಜಯಪುರ: ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಿಗೆ ಸಂಬಂಧಿಸಿದಂತೆ ರಾಜ್ಯಾದ್ಯಂತ ಅನೇಕ ಸಮಸ್ಯೆಗಳಿದ್ದು, ಅಂತಹ ಸಮಸ್ಯೆಗಳನ್ನು ಆಯೋಗವು ಗಂಭೀರವಾಗಿ ಆಲಿಸಿ ಅವುಗಳಿಗೆ ಪರಿಹಾರ ಒದಗಿಸಲು ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಲಿದೆ ಎಂದು ರಾಜ್ಯ ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಮೂರ್ತಿ ಎಲ್. ಹೇಳಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಮಂಗಳವಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳ ಕುಂದು ಕೊರತೆಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭೂವ್ಯಾಜ್ಯ, ಅಟ್ರಾಸಿಟಿ, ನಕಲಿ ಜಾತಿ ಪ್ರಮಾಣ ಪತ್ರ ಸೇರಿದಂತೆ ವಿವಿಧ ಸಮಸ್ಯೆ ಪರಿಗಣಿಸಲು ಅಧಿಕಾರಿಗಳು ಆಯೋಗದ ಜೊತೆಗೂಡಿ ಸರಿಪಡಿಸಬೇಕು. ಈ ಕಾರ್ಯವನ್ನು ರಾಜ್ಯಾದ್ಯಾಂತ ಚುರುಕುಗೊಳಿಸಲಾಗುವುದು ಎಂದರು.

ಪ್ರಕರಣಗಳ ವಿಳಂಬಕ್ಕೆ ಕಾರಣ ಸಂಪೂರ್ಣ ಅವಲೋಕನ ಮಾಡಿಕೊಂಡು ಸಮತೋಲನ ವಹಿಸಿ ಫಲಾನುಭವಿಗಳಿಗೆ ನ್ಯಾಯ ಕಲ್ಪಿಸಬೇಕು. ಈಗಾಗಲೇ 3850 ಪ್ರಕರಣಗಳ ಕಾರ್ಯ ನಡೆದಿದೆ. 4500 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಕಳೆದ ಆರು ತಿಂಗಳಿಂದ ಪ್ರತಿ ಗುರುವಾರ ಹಾಗೂ ಶುಕ್ರವಾರ ಆಲಿಸಿ, 300 ಪ್ರಕರಣಗಳನ್ನು ನ್ಯಾಯಾಲಯದಲ್ಲಿ ಇತ್ಯರ್ಥಪಡಿಸಲಾಗಿದೆ ಎಂದರು. ಇಂದಿನ ಸಭೆಯಲ್ಲಿ ಸ್ವೀಕರಿಸಲಾದ



> ಸರ್ಕಾರಿ ಸೌಲಭ್ಯಗಳು ಎಸ್ಸಿ, ಎಸ್ಟಿ ವರ್ಗದವರಿಗೆ ದೊರಕಿಸುವ ನಿಟ್ಟಿನಲ್ಲಿ ಆಯೋಗ ಕೆಲಸ ಮಾಡುತ್ತಿದೆ. ಆಯೋಗದ ಈ ಕಾರ್ಯಕ್ಕೆ ಆಯಾ ಜಿಲ್ಲೆಗಳ ಅಧಿಕಾರಿಗಳು ಕೈ ಜೋಡಿಸಬೇಕು.
>
> ■ ಡಾ.ಮೂರ್ತಿ ಎಲ್., ಅಧ್ಯಕ್ಷ ಎಸ್ಸಿ, ಎಸ್ಟಿ ಆಯೋಗ

ದೂರು, ನ್ಯೂನತೆಗಳನ್ನು ಆಯೋಗ ಗಂಭೀರವಾಗಿ ಪರಿಗಣಿಸಿ ಅವುಗಳಿಗೆ ತ್ವರಿತ ಪರಿಹಾರ ಕಲ್ಪಿಸಲಾಗುವುದು ಎಂದರು.

ಸಮಾಜ ಮುಖಂಡ ಅಭಿಷೇಕ ಚಕ್ರವರ್ತಿ, ರಾಜಶೇಖರ ಕೂಚಬಾಳ ಮಾತನಾಡಿ, ಭೂ ಒಡೆತನ, ಹೆಚ್ಚುವರಿ ಜಮೀನು ಸಮಸ್ಯೆಗಳಿವೆ. ಮುಗ್ಧ ಜನರು ಜಮೀನು ಕಳೆದುಕೊಂಡ ಪ್ರಕರಣಗಳಿವೆ. ಅಂತಹ ಪ್ರಕರಣಗಳನ್ನು ಆಯೋಗ ಗಂಭೀರವಾಗಿ ಪರಿಗಣಿಸಿ, ಆ ಪ್ರಕರಣಗಳಿಗೆ ನ್ಯಾಯ ಕಲ್ಪಿಸಬೇಕು ಎಂದರು.

ಸಂಜು ಕಂಬಾಗಿ, ರಾವುತ್ ತಳಕೇರಿ, ಪ್ರಕಾಶ ಗುಡಿಮನಿ, ಮಳಸಿದ್ದ ಲಕ್ಷ್ಮಣ ನಾಯ್ಕೋಡಿ, ರಮೇಶ ಆಸಂಗಿ, ಭೀಮರಾಯ ಜಿಗಜಿಣಗಿ, ಶ್ರೀನಾಥ ಪೂಜಾರಿ, ನಾಗಪ್ಪ ವಡ್ಡರ ಮಾತನಾಡಿ, ಸರ್ಕಾರದ ಮಾರ್ಗಸೂಚಿಗಳನ್ವಯ ಜಾತಿ ಪ್ರಮಾಣ ಪತ್ರ ನೀಡಲಿಕ್ಕೆ ಆಯೋಗ ಗಂಭೀರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸುತ್ತಿದ್ದಂತೆಯೇ ಆಯೋಗದ ಅಧ್ಯಕ್ಷ ಮೂರ್ತಿ ಮಧ್ಯ ಪ್ರವೇಶಿಸಿ, ನಕಲಿ ಜಾತಿ ಪ್ರಮಾಣ ಪತ್ರದ ವಿರುದ್ಧ ಆಯೋಗ ನಿದಾರ್ಕ್ಷಿಣ್ಯ ಕ್ರಮ ತೆಗೆದುಕೊಳ್ಳುತ್ತಿದೆ ಎಂದರು.

ಸಿದ್ದು ರಾಯಣ್ಣವರ, ದೇವಾನಂದ ಲಚ್ಯಾಣ, ಚನ್ನು ಕಟ್ಟಿಮನಿ, ಪರಶುರಾಮ ರೋಣಿಹಾಳ, ರಾಜಪಾಲ ಚವ್ಹಾಣ ಮಾತನಾಡಿದರು. ಆಯೋಗದ ಸದಸ್ಯರಾದ ಸುನೀಲ ಉಕ್ಕಲಿ, ಎನ್.ದಿವಾಕರ್, ಗೀತಾ ಥಾವಂಶಿ, ಜಿಲ್ಲಾಧಿಕಾರಿ ಡಾ.ಆನಂದ ಕೆ., ಜಿಪಂ ಸಿಇಒ ರಿಷಿ ಆನಂದ, ಎಸ್ಪಿ ಲಕ್ಷ್ಮಣ ನಿಂಬರಗಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ ಪೋತದಾರ, ಕಾರ್ಯದರ್ಶಿ ಎಚ್.ಎಂ. ಶಿವರಾಂ, ಸಂಶೋಧನಾ ಅಧಿಕಾರಿ ಸಿಂಧೂ ಎಚ್. ಎಸ್. ಸೇರಿದಂತೆ ಇತರರು ಇದ್ದರು.

ಸಮಾಜಕ್ಕೆ ವಿಶ್ವಕರ್ಮರ ಕೊಡುಗೆ ಅಪಾರ

ಇಂಡಿ: ವಿಶ್ವಕರ್ಮ ಸಮಾಜ ಕುಶಲಕರ್ಮಿ ಸಮುದಾಯಗಳಲ್ಲಿ ಒಂದಾಗಿದ್ದು, ಶಿಲ್ಪಕಲೆ ವಾಸ್ತುಶಿಲ್ಪ ಮತ್ತು ಲೋಹದ ಕೆಲಸಗಳಲ್ಲಿ ಪರಿಣಿತರಿದ್ದಾರೆ. ಸಮಾಜಕ್ಕೆ ವಿಶ್ವಕರ್ಮರ ಕೊಡುಗೆ ಅಪಾರವಾಗಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

ನಗರದಲ್ಲಿ ಕಾಳಿಕಾದೇವಿ ಜಾತ್ರಾ ಮಹೋತ್ಸ ಉಚಿತ ಸಾಮೂಹಿಕ ಉಪನಯನ ಹಾಗೂ ನೂತನ ರಥೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡಿದರು. ಕಾಳಿಕಾ ದೇವಸ್ಥಾನಕ್ಕೆ ಒಂದು ವ್ಯವಸ್ಥಿತ ರಸ್ತೆ , ದೇವಸ್ಥಾನ ಸುತ್ತ ವಿದ್ಯುತ ವ್ಯವಸ್ಥೆ ಮತ್ತು ಕುಡಿಯುವ ನೀರು ಸ್ವಚ್ಚತೆಗೆ ಆದ್ಯತೆ ನೀಡಲಾಗುವದು ಎಂದರು.

ಕಲಬುರಗಿಯ ಪ್ರಣಯ ನಿರಂಜನ ಶ್ರೀಗಳು ಮಾತನಾಡಿ, ವಿಶ್ವಕರ್ಮ ಸಮಾಜ ಮಾನವನ ಜೀವನದ ಪ್ರತಿಯೊಂದು ಹಂತದಲ್ಲೂ ಮಹತ್ವದ ಪಾತ್ರ ವಹಿಸುತ್ತಿದ್ದು ಮಗು ಹುಟ್ಟಿದಾಗಿನಿಂದಲೇ ವಿವಿಧ ಧಾರ್ಮಿಕ ಹಾಗೂ ಸಾಮಾಜಿಕ ಆಚರಣೆಗಳಲ್ಲಿ ತನ್ನ ಕೊಡುಗೆ ನೀಡುತ್ತದೆ. ಮದುವೆ ಸಂದರ್ಭಗಳಲ್ಲಿ ತಾಳಿ, ಕಾಲುಂಗರ ಓಲೆ ಸೇರಿದಂತೆ ವಿವಿಧ ವಸ್ತುಗಳನ್ನು ತಯಾರಿಸುವ ಮೂಲಕ ಮಂಗಳ ಕಾರ್ಯಗಳಿಗೆ ಸಹಕಾರ ನೀಡುತ್ತದೆ ಎಂದರು.

ಕನ್ನೂರ ಪ್ರಕಾಶ ಶ್ರೀಗಳು ಮಾತನಾಡಿ, ಭಾರತೀಯ ಸಂಸ್ಕೃತಿ ಉಳಿಸಿ ಬೆಳೆಸುವಲ್ಲಿ ಈ ಸಮಾಜದ ಪಾತ್ರ ಅಪಾರವಾಗಿದೆ ಎಂದರು.

ಪುರಾಣ ಮಹಾಮಂಗಲ, ಉಡಿ ತುಂಬುವ ಕಾರ್ಯಕ್ರಮ, ಉಚಿತ ಸಾಮೂಹಿಕ ಉಪನಯನ ಕಾರ್ಯಕ್ರಮ



ನಡೆದವು. ಮುರನಾಳದ ಜಗನ್ನಾಥ ಶ್ರೀಗಳು, ಬೌರಮ್ಮ ಕಣ್ಣಿ, ಉಪಸ್ಥಿತರಿದ್ದರು. ಕಾಳಿಕಾ ಸೇವಾ ಬೂಷಣ ಪ್ರಶಸ್ತಿ ಸಮಾರಂಭ, ಅಗರಖೇಡದ ಪ್ರಭುಲಿಂಗೇಶ್ವರ ಶ್ರೀಗಳು, ಹಿಕ್ಕಣಗುತ್ತಿ ಪ್ರಭುಲಿಂಗ ಶ್ರೀಗಳು, ಶಾಂತೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಕಾಸುಗೌಡ ಬಿರಾದಾರ ಮತ್ತಿತರರು.

ಬಸವರಾಜ ಕಣ್ಣಿ, ಡೊಮನಾಳದ ಶರಣಗೌಡ ನಾನಾಗೌಡ ಬಿರಾದಾರ, ದತ್ತಾತ್ರೇಯ ಸುತಾರ, ನರಸಿಂಹ ಬಡಿಗೇರ, ಮಲ್ಲಿಕಾರ್ಜುನ ಬಡಿಗೇರ, ಭಿಮರಾವ ಬಡಿಗೇರ, ಶಿವಾನಂದ ಬಡಿಗೇರ, ಸುಜಿತ ಲಾಳಸಂಗಿ, ರಮೇಶ ಪೋದ್ದಾರ, ಶಂಕರ ಕಮ್ಮಾರ, ಮೋನಮ್ಮ ಬಡಿಗೇರ ಜಯಶ್ರೀ ಪತ್ತಾರ, ವಿಠ್ಠಲಾಚಾರ್ಯ ಕಾಳಿಕಾ ದೇವಸ್ಥಾನದ ಅರ್ಚಕರು ಮತ್ತಿತರಿದ್ದರು.

ವಿಜಯಪುರ ಮಾದರಿ ನಗರವಾಗಿ ಅಭಿವೃದ್ಧಿ

ವಿಜಯಪುರ: 2018ರಲ್ಲಿ ನನ್ನನ್ನು ಶಾಸಕನನ್ನಾಗಿ ಮಾಡಿದ್ದರ ಪ್ರತಿಫಲವಾಗಿ ರಾಜ್ಯದಲ್ಲಿಯೇ ವಿಜಯಪುರ ಮಾದರಿ ನಗರವಾಗಿ ಅಭಿವೃದ್ಧಿ ಆಗಲು ಸಾಧ್ಯವಾಯಿತು. ರಾಜ್ಯದ ಮುಖ್ಯಮಂತ್ರಿ ಆಗಲು ಆಶೀರ್ವದಿಸಿದರೆ, ಇಡೀ ರಾಜ್ಯದ ಚಿತ್ರಣವನ್ನೇ ಬದಲಿಸುವೆ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದ ವಾರ್ಡ್ ನಂ.32ರಲ್ಲಿ ಬರುವ ಜೋರಾಪುರ ಪೇಠ ದುರ್ಗಾದೇವಿ ದೇವಸ್ಥಾನದ ಹತ್ತಿರ ಸನ್ 2025–26ನೇ ಸಾಲಿನ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ 20 ಲಕ್ಷ ರೂ. ಮತ್ತು ಧಾರ್ಮಿಕ ದತ್ತಿ ಇಲಾಖೆಯಿಂದ ಮಂಜೂರಿಸಲಾದ 10 ಲಕ್ಷ ರೂ. ಸೇರಿ ಒಟ್ಟು 30 ಲಕ್ಷ ರೂ. ಅನುದಾನದಲ್ಲಿ ಸಮುದಾಯ ಭವನ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಧೂಳಾಪುರವಾಗಿದ್ದ ವಿಜಯಪುರ ನಗರದಲ್ಲಿ ಸುಸಜ್ಜಿತ ಸಿಸಿ ರಸ್ತೆಗಳು, ಒಳಚರಂಡಿ ನಿರ್ಮಾಣ, ಉದ್ಯಾನವನಗಳ ಅಭಿವೃದ್ಧಿ, ರಸ್ತೆ ಮಹಾಪುರುಷರ ಹೆಸರು ನಾಮಕರಣ, ವೃತ್ತಗಳ ನಿರ್ಮಾಣ, ಕಾಯಿಪಲ್ಲೆ ಮಾರುಕಟ್ಟೆ, ದೇವಸ್ಥಾನಗಳು ಜೀರ್ಣೋದ್ಧಾರ, ಸಮುದಾಯ ಭವನಗಳ ನಿರ್ಮಾಣ, ಶಾಲಾ ಕೊಠಡಿಗಳು ಹೀಗೆ ಹತ್ತಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದರಿಂದ ಅತ್ಯಂತ ಶುದ್ಧ ಗಾಳಿ ಬಿಸುವ ಮತ್ತು ಮಾದರಿ ನಗರವಾಗಿ ರೂಪುಗೊಳ್ಳಲು ಸಾಧ್ಯವಾಗಿದೆ ಎಂದರು.

ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಶಿವಾಜಿ ವೃತ್ತದಿಂದ ಡಾ.ಬಾಬು ಜಗಜೀವನರಾಮ ವೃತ್ತದವರೆಗೆ ಶೀಘ್ರದಲ್ಲೇ ರಸ್ತೆಯನ್ನು ಅಗಲೀಕರಣಗೊಳಿಸಿ, ಅನುಷ್ಠಾನಗೊಳಿಸಲು ಅಗತ್ಯವಿರುವ 32 ಕೋಟಿ ರೂ. ಅನುದಾನವನ್ನು ನೀಡುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದು, ಈ ರಸ್ತೆ ಅಗಲೀಕರಣದಲ್ಲಿ ಬರುವ ಖಾಸಗಿ ಒಡೆತನದ ಆಸ್ತಿಗಳಿಗೆ ಪರಿಹಾರ ನೀಡಿಯೇ ಆದಷ್ಟು ಬೇಗ ಕಾಮಗಾರಿ ಆರಂಭಿಸಲಾಗುವುದು ಎಂದರು.

ಮಹಾನಗರ ಪಾಲಿಕೆಯಲ್ಲಿ ಇ-ಸ್ವತ್ತು ಮಾಡಲು ಮತ್ತಿತರೆ ಕೆಲಸಗಳಿಗಾಗಿ ವಿನಾಕಾರಣ ವಿಳಂಬ ಮಾಡಿದರೆ, ಲಂಚ ಕೇಳಿದರೆ ನನ್ನ ವಾಟ್ಸಪ್ ನಂಬರಿಗೆ ಮಾಹಿತಿ ನೀಡಿ, ತಕ್ಷಣ ಸಂಬಂಧಿಸಿದ ಅಧಿಕಾರಿ, ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಪಾಲಿಕೆ ಸದಸ್ಯ ಶಿವರುದ್ರ ಬಾಗಲಕೋಟೆ ಮಾತನಾಡಿದರು. ಪಾಲಿಕೆ ಸದಸ್ಯ ರಾಹುಲ್ ಜಾಧವ ಸೇರಿದಂತೆ ಇತರರು ಇದ್ದರು.



ಬ್ರಾಹ್ಮಣ ವಿದ್ಯಾರ್ಥಿಯ ಜನಿವಾರ ತೆಗೆಸಿದ್ದನ್ನು ಖಂಡಿಸಿ ಪ್ರತಿಭಟನೆ

ವಿಜಯಪುರ: ಬೆಂಗಳೂರಿನ ಮಡಿವಾಳದ ಕೃಪಾನಿಧಿ ಪಿಯು ಕಾಲೇಜಿನಲ್ಲಿ ಸಿಇಟಿ ಪರೀಕ್ಷೆಗೆ ಹಾಜರಿದ್ದ ಬ್ರಾಹ್ಮಣ ವಿದ್ಯಾರ್ಥಿಯ ಜನಿವಾರ ತೆಗೆಸಿದ್ದನ್ನು ಖಂಡಿಸಿ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಹಾಸಭಾ, ಮೌನೇಶ್ವರ ಫೌಂಡೇಶನ್ ಹಾಗೂ ಕಾಳಿಕಾ ದೇವಿ ದೇವಸ್ಥಾನ ಮಹಿಳಾ ಮಂಡಳಿಯ ಪದಾಧಿಕಾರಿಗಳು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ್‌ಗೆ ಮನವಿ ಸಲ್ಲಿಸಿದರು.

ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಕೃಷ್ಣಾಜಿ ಕುಲಕರ್ಣಿ ಮಾತನಾಡಿ, ಜನಿವಾರ ಉಪನಯನದ ನಂತರ ಜನಿವಾರ ಧರಿಸುವ ಎಲ್ಲ ಸಮುದಾಯದ ಗಂಡು ಮಕ್ಕಳ ಅವಿಭಾಜ್ಯ ಅಂಗವಾಗಿದೆ. ಸೂತಕ ಹಾಗೂ ಜನಿವಾರ ಛೇದವಾಗದೇ ಇನ್ಯಾವ ಕಾರಣಕ್ಕೂ ಅದನ್ನು ದೇಹದಿಂದ ತೆಗೆಯುವಂತಿಲ್ಲ. ಇದನ್ನು ಯಾವುದೇ ಕಾರಣಕ್ಕೂ ನಮ್ಮ ಸನಾತನ ಹಿಂದೂ ಸಮಾಜ ಸಹಿಸುವುದಿಲ್ಲ. ಇನ್ನು ಮುಂದೆ ಯಾವುದೇ ಕಾರಣಕ್ಕೂ ಈ ರೀತಿಯ ಘಟನೆಗಳು ಮರುಕಳಿಸದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕೆಂದು ಆಗ್ರಹಿಸಿದರು.

ಕಾಳಿಕಾ ದೇವಿ ದೇವಸ್ಥಾನ ಮಹಿಳಾ ಸಂಘದ ಅಧ್ಯಕ್ಷ ಮೀನಾ ಕುಂದನಗಾರ ಮಾತನಾಡಿ, ಜನಿವಾರವೂ ಬ್ರಾಹ್ಮಣ, ವಿಶ್ವಕರ್ಮ, ಮರಾಠಾ ಸಮಾಜ ಸೇರಿದಂತೆ ಒಟ್ಟು 16 ಸಮಾಜದ ಬಾಂಧವರ ಅಸ್ಮಿತೆಯಾಗಿದೆ. ಇಂತಹ ಶ್ರೇಷ್ಠ ಜನಿವಾರವನ್ನು ತೆಗೆಸಿರುವುದು ನಮ್ಮೆಲ್ಲ ಸಮಾಜಗಳಿಗೆ ಮಾಡಿದ ಘೋರ



ಅಪಮಾನವಾಗಿದೆ ಎಂದರು.

ರೈತಪರ ಹೋರಾಟಗಾರ ಅರವಿಂದ ಕುಲಕರ್ಣಿ ಮಾತನಾಡಿ, ನಮ್ಮ ಸಂವಿಧಾನದಲ್ಲಿ ಪ್ರತಿಯೊಬ್ಬ ಧರ್ಮದವರಿಗೂ ಅವರ ಧಾರ್ಮಿಕ ಸಂಪ್ರದಾಯಗಳನ್ನು ಪಾಲಿಸುವ ಹಕ್ಕಿದೆ ಎಂದರು.

ಮೌನೇಶ್ವರ ಫೌಂಡೇಶನ್ ಅಧ್ಯಕ್ಷ ವಿನೋದ ಪತ್ತಾರ ಮಾತನಾಡಿದರು. ಬ್ರಾಹ್ಮಣ ಸಮಾಜದ ಮುಖಂಡ ವಿವೇಕ ತಾವರಗೇರಿ, ಗೋವಿಂದ ದೇಶಪಾಂಡೆ, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಹಾಸಭಾದ ಜಿಲ್ಲಾಧ್ಯಕ್ಷ ಗುರುರಾಜ ಜೋಶಿ, ವಿಲಾಸ ಕುಲಕರ್ಣಿ, ರವಿ ಕುಲಕರ್ಣಿ, ನಾರಾಯಣ ಕುಲಕರ್ಣಿ, ವಿನಾಯಕ ಕುಂದನಗಾರ, ರಾಧಾ ಕುಲಕರ್ಣಿ, ಜಯಶ್ರೀ ಇಂಗಳೇಶ್ವರ, ರೂಪಾ ಕುಲಕರ್ಣಿ, ವಂದನಾ ನಾಯಕ, ಶಾರದಾ ಪತ್ತಾರ, ಕಾಳಮ್ಮ ಪತ್ತಾರ ಇದ್ದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ: ಶಾಸಕ ಮನಗೂಳಿ

ಸಿಂದಗಿ: ಹಳ್ಳಿಗಳು ಅಭಿವೃದ್ಧಿಯಾದಾಗ ಮಾತ್ರ ದೇಶದ ನಿಜವಾದ ಅಭಿವೃದ್ಧಿ ಸಾಧ್ಯ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ತಾಲೂಕಿನ ಬಂದಾಳ ಗ್ರಾಮದಲ್ಲಿ ಹಳ್ಳದ ಬ್ರಿಡ್ಜ್ ನಿರ್ಮಾಣಕ್ಕೆ ಸಣ್ಣ ನೀರಾವರಿ ಇಲಾಖೆಯಿಂದ ಮಂಜೂರಾದ 1.81 ಕೋಟಿ ಮೊತ್ತದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಹಳ್ಳಿಗಳಲ್ಲಿ ಉತ್ತಮ ಪರಿಸರ, ಮೂಲಭೂತ ಸೌಕರ್ಯ ಹಾಗೂ ಆರೋಗ್ಯ, ಶಿಕ್ಷಣ ಮುಖ್ಯವಾಗಿ ಬೇಕು. ನಮ್ಮ ಕ್ಷೇತ್ರದ ರಸ್ತೆಗಳ ಅಭಿವೃದ್ಧಿಯ ಜೊತೆಗೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರದಿಂದ ಅನುದಾನ ತರಲಾಗಿದ್ದು, ಗುತ್ತಿಗೆದಾರರು ಉತ್ತಮ ಗುಣಮಟ್ಟದ ಕಾಮಗಾರಿ ಮಾಡಬೇಕು ಎಂದರು.

ಸಾರ್ವಜನಿಕರು ಕಳಪೆ ಕಾಮಗಾರಿಯ ಬಗ್ಗೆ ನಿಗಾವಹಿಸಬೇಕು. ಮುಂದಿನ ದಿನಮಾನಗಳಲ್ಲಿ ಇನ್ನೂ ಹೆಚ್ಚಿನ ಮೂಲಸೌಕರ್ಯಗಳನ್ನು ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನನಗೆ ನೀಡಿದ ಪ್ರತಿಯೊಂದು ಮತವು ಅದು ಅಭಿವೃದ್ಧಿಗಾಗಿ ಮೀಸಲಿಡುತ್ತೇನೆ ಎಂದರು.

ಮುಖಂಡರಾದ ಬಸಯ್ಯ ಹಿರೇಮಠ, ವಿ.ಬಿ.ಕುರಡೆ, ಮುತ್ತು



ಮುಂಡೇವಾಡಗಿ, ನಾರಾಯಣ ಕುಲಕರ್ಣಿ, ಕುಮಾರ ದೇಸಾಯಿ, ಷಣ್ಮುಖಯ್ಯ ಹಿರೇಮಠ, ದಯಾನಂದ ಹಿರೇಮಠ, ದುಂಡಪ್ಪ ಬಿರಾದಾರ, ಸುರೇಶ ಬೆನಕನಳ್ಳಿ, ಶಿರಪ್ಪ ಉಕ್ಕಲಿ, ಪದಮಣ್ಣ ದೇವೂರ, ಬಸಣ್ಣ ಯಲಮೇಲಿ, ರಜಾಕ ಸೋಂಪುರ, ಸಿದ್ದು ಬಿಸನಾಳ, ಶರಣಪ್ಪ ಜಮಾದಾರ, ಗೊಲ್ಲಾಳಪ್ಪ ನಾಯ್ಕೋಡಿ, ರಾಮು ಯಳಮೇಲಿ, ಧರ್ಮರಾಜ ಬಡಾನೂರ, ಜಾನಪ್ಪ ನಾಯ್ಕೋಡಿ, ಸಿದ್ದಪ್ಪ ಜಮಾದಾರ, ಕಾರ್ಯಕರ್ತರು, ಅಭಿಮಾನಿಗಳು, ಗ್ರಾಮಸ್ಥರು ಸೇರಿದಂತೆ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು.

ಸಾಮಾಜಿಕ ಚಟುವಟಿಕೆಗೆ ಬಸವಸೈನ್ಯದಿಂದ ಉತ್ತೇಜನ

ಬಸವನ ಬಾಗೇವಾಡಿ: ರಾಷ್ಟ್ರೀಯ ಬಸವಸೈನ್ಯ ಸಂಘಟನೆಯು ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾಗದೆ, ಜನಪರ, ಸಾಮಾಜಿಕ, ಧಾರ್ಮಿಕ ಮತ್ತು ಕ್ರೀಡಾ ಚಟುವಟಿಕೆಗಳಿಗೆ ನಿರಂತರವಾಗಿ ಉತ್ತೇಜನ ನೀಡುತ್ತಾ ಬಂದಿರುವುದು ಹೆಮ್ಮೆಯ ಸಂಗತಿ ಬಸವ ಜಯಂತಿಯಂತಹ ಪವಿತ್ರ ಸಂದರ್ಭದಲ್ಲಿ ಯುವಶಕ್ತಿಯನ್ನು ಒಗ್ಗೂಡಿಸಲು ಇಂತಹ ಪಂದ್ಯಾವಳಿಗಳು ಪೂರಕವಾಗಿವೆ ಎಂದು ಬಿಡಿಸಿಸಿ ಬ್ಯಾಂಕಿನ ನಿರ್ದೇಶಕಿ ಸಂಯುಕ್ತ ಪಾಟೀಲ ಶ್ಲಾಘಿಸಿದರು.

ಪಟ್ಟಣದ ಬಸವೇಶ್ವರ ಸರ್ಕಾರಿ ಪದವಿಪೂರ್ವ ಮಹಾವಿದ್ಯಾಲಯದ ಆವರಣದಲ್ಲಿ ರಾಷ್ಟ್ರೀಯ ಬಸವಸೈನ್ಯ ಹಾಗೂ ಗೆಳೆಯರ ಬಳಗ ಆಯೋಜಿಸಿದ್ದ ಬಸವನಬಾಗೇವಾಡಿ ಪ್ರಿಮೀಯರ್ ಲೀಗ್ 2026 ಸೀಜನ1ರ ಕ್ರಿಕೆಟ್ ಟೋರ್ನಾಮೆಂಟಗೆ ಚಾಲನೆ ನೀಡಿ ಮಾತನಾಡಿದರು.

ಪಿಎಲ್‌ಡಿ ಬ್ಯಾಂಕ್‌ನ ಅಧ್ಯಕ್ಷ ಈರಣ್ಣ



ಪಟ್ಟಣಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕ್ರೀಡಾಪಟುಗಳು ಶಿಸ್ತು ಮತ್ತು ಕ್ರೀಡಾ ಸೂತರ್ತಿಯಿಂದ ಆಟವಾಡಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ರಾಷ್ಟ್ರೀಯ ಬಸವಸೈನ್ಯದ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ ಮಾತನಾಡಿ, ಬಸವನಬಾಗೇವಾಡಿ ಹಾಗೂ ದೇವರಹಿಪ್ಪರಗಿ ಮತಕ್ಷೇತ್ರದ ಯುವ ಪ್ರತಿಭೆಗಳಿಗೆ ಸೂಕ್ತ ವೇದಿಕೆ ಕಲ್ಪಿಸಿಕೊಡುವುದು ಮತ್ತು ಕ್ರೀಡೆಯ ಮೂಲಕ ಯುವಕರಲ್ಲಿ ಒಗ್ಗಟ್ಟು ಹಾಗೂ ಸಾಮಾಜಿಕ ಸೌಹಾರ್ದತೆಯನ್ನು ಬೆಳೆಸುವುದು ಸಂಘಟನೆಯ ಮುಖ್ಯ ಉದ್ದೇಶವಾಗಿದೆ. ಬಸವಸೈನ್ಯ ಸದಾ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಬೆಂಬಲವಾಗಿ ನಿಲ್ಲುತ್ತದೆ. ಆಟಗಾರರು ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಅತ್ಯುತ್ತಮ ಪ್ರದರ್ಶನ ನೀಡಲಿ ಎಂದು ಹೇಳಿದರು.

ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಸಾನಿಧ್ಯವಹಿಸಿ ಮಾತನಾಡಿದರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ಡಾ.ಬಸವರಾಜ ಕೋಟಿ, ಮುಖಂಡರಾದ ಜಟ್ಟಿಂಗರಾಯ ಮಾಲಗಾರ, ರವಿ ರಾಠೋಡ, ಪ್ರಶಾಂತ ಮುಂಜಾನೆ, ಪಂಚಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಮೈಬೂಬ ನಾಯ್ಕೋಡಿ, ಮಾಂತೇಶ ಪಾರಶೆಟ್ಟಿ, ಶಾನನವಾಜ ಮುಲ್ಲಾ ಸೇರಿದಂತೆ ಇತರರು ಇದ್ದರು. ಶಿಕ್ಷಕ ಶಿವು ಮಡಿಕೇಶ್ವರ ನಿರೂಪಿಸಿದರು.

ಅಂಬೇಡ್ಕರ್ ವ್ಯಕ್ತಿತ್ವ ಜಗತ್ತಿಗೆ ಮಾದರಿ

ಮುದ್ದೇಬಿಹಾಳ: ಬೆಟ್ಟದಷ್ಟು ಬಡತನ ಬೆನ್ನ ಹಿಂದೆ ಇದ್ದರೂ ಹೆಜ್ಜೆ ಹೆಜ್ಜೆಗೂ ಅಪಮಾನ ಅವಮಾನ ಅನುಭವಿಸುತ್ತಾ ಕಷ್ಟ ಕೊಟಲೆಯಲ್ಲಿಯೇ ಜೀವನವನ್ನು ಸವೆಸಿ ತಮಗಾದ ಅನ್ಯಾಯದ ವಿರುದ್ಧ ಮೈಕೊಡವಿ ಮೇಲೆದ್ದು, ಕಷ್ಟಗಳನ್ನೇ ಮೆಟ್ಟಿಲುಗಳಾಗಿ ಮಾಡಿಕೊಂಡು ಸಾಧನೆಯ ಶಿಖರಕ್ಕೇರಿದವರು ಬಾಬಾಸಾಹೇಬ ಅಂಬೇಡ್ಕರ್ ಅವರ ವ್ಯಕ್ತಿತ್ವ ಇಡೀ ಜಗತ್ತಿಗೆ ಮಾದರಿ ಎಂದು ಸಾಹಿತಿ ಶಿವಪುತ್ರ ಅಜಮನಿ ಹೇಳಿದರು.

ಸಮೀಪದ ದೇವೂರ ಗ್ರಾಮದಲ್ಲಿ ನಡೆದ ಡಾ.ಬಾಬಾಸಾಹೇಬ ಅಂಬೇಡ್ಕರರ 135ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ದೇಶದ ಸಂವಿಧಾನವನ್ನು ಕೇವಲ ಪೆನ್ನಿನಿಂದ ಬರೆದಿದ್ದಲ್ಲ, ಬದಲಾಗಿ, ದೇಶದ ಶೋಷಿತರಿಗೆ, ನಿರ್ಗತಿಕರಿಗೆ, ದೀನದಲಿತರಿಗೆ, ಸಾಮಾಜಿಕ ನ್ಯಾಯವನ್ನು ಕೊಡಿಸಲು ದೇಶದಲ್ಲಿ ಸರಿ ಸಮಾನತೆ ತರಲು, ಹದಗೆಟ್ಟ ಆರೋಗ್ಯವನ್ನೂ ಲೆಕ್ಕಿಸದೆ ದೇಶಕ್ಕೆ ಬಹು ದೊಡ್ಡ ತ್ಯಾಗವನ್ನು ಮಾಡಿದ್ದಾರೆ. ಭಾರತೀಯರು ಅವರ ತ್ಯಾಗ ಮರೆಯಬಾರದು ಎಂದು ಹೇಳಿದರು.

ಡಾ.ಪಿ.ಎಚ್.ಉಪ್ಪಲದಿನ್ನಿ ಕಂದಾಯ ನಿರೀಕ್ಷಕ ವೆಂಕಟೇಶ ಅಂಬಿಗೇರ, ಹಿರಿಯ ಪತ್ರಕರ್ತ ಪರಶುರಾಮ ಕೊಣ್ಣೂರ, ಡಿ.ಕೆ.ದ್ಯಾವಪ್ಪ, ಸಿದ್ದಾರ್ಥ ರೂಗಿ ದೇವರಹಿಪ್ಪರಗಿ, ಪ್ರವೀಣ ಕಟ್ಟಿಮನಿ, ಮುತ್ತಣ್ಣ ಕಟ್ಟಿಮನಿ, ಬಸಂತ ಕಟ್ಟಿಮನಿ, ಹಣಮಂತ ಅಡಿಹಾಳ, ಹಣಮಂತ ಎಮ್ಮೆಟ್ಟಿ, ಸಂಗಪ್ಪ ಚೌರಿ, ಪರಶುರಾಮ ಮಾದರ, ಲವ ಚಲವಾದಿ, ಸಂಗಮೇಶ ಚಲವಾದಿ ಇದ್ದರು. ಬಿ.ಎಸ್.ಚಲವಾದಿ ನಿರೂಪಿಸಿದರು.



ಭವಿಷ್ಯದ ಬದುಕಿಗೆ ನೀರಿನ ಮಿತ ಬಳಕೆ ಅಗತ್ಯ



ವಿಜಯಪುರ: ವಿಶ್ವದ ಸಕಲ ಜೀವರಾಶಿಗಳಿಗೆ ನೀರು ಜೀವನಾಧಾರ. ಹೆಚ್ಚಾದ ಜನಸಂಖ್ಯೆ, ನಗರೀಕರಣ, ಜಾಗತಿಕ ತಾಪಮಾನದಿಂದ ಜಲ ಸಂಪನ್ಮೂಲ ಮೇಲೆ ಒತ್ತಡವಿದ್ದು, ನೀರನ್ನು ಮಿತವಾಗಿ ಬಳಸಿ, ಮರುಬಳಕೆ ಮಾಡುವುದು ನಮ್ಮೆಲ್ಲರ ಮುಖ್ಯ ಗುರಿಯಾಗಬೇಕಿದೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ವಿಜಯಪುರ ತಾಲೂಕಿನ ನಾಗಠಾಣ ಗ್ರಾಮದ ಮಲ್ಲಿಕಾರ್ಜುನ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಜಲ ಶಕ್ತಿ ಅಭಿಯಾನದಡಿ ಜಲ ಪಖ್ವಾಡ್ ಕಾರ್ಯಕ್ರಮದ ನಿಮಿತ್ತ ಮಂಗಳವಾರ ಹಮ್ಮಿಕೊಂಡ ನೀರು ಭವಿಷ್ಯದ ಬದುಕಿಗೆ ಆಧಾರ ಎಂಬ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. ನೀರು ಉಳಿಸಿ, ಜೀವ ಉಳಿಸಿ ಎಂಬುದು ಕೇವಲ ಘೋಷಣೆಯಲ್ಲ, ಅದು ಭವಿಷ್ಯದ ಬದುಕಿಗೆ ಅತ್ಯಗತ್ಯ. ನೀರನ್ನು ಅನಗತ್ಯವಾಗಿ ಪೋಲುಮಾಡದೆ ಹನಿ ಹನಿ ನೀರನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೆ ಉಳಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು.

ಸಂಸ್ಥೆಯ ಕಾರ್ಯದರ್ಶಿ ಸುನಂದಾ ಹುಣಶ್ಯಾಳ ಅಧ್ಯಕ್ಷತೆ ವಹಿಸಿ ಮಾತನಾಡಿ, ನೀರು ಜೀವಕ್ಕೆ ಅತ್ಯಗತ್ಯ. ನೀರಿನ ಕೊರತೆಯು ಪ್ರಪಂಚದಾದ್ಯಂತ ಲಕ್ಷಾಂತರ ಜನರನ್ನು ಬಾಧಿಸುವ ಒಂದು ತುರ್ತು ಸಮಸ್ಯೆಯಾಗಿದೆ. ನೀರನ್ನು ಉಳಿಸುವುದು ಕೇವಲ ವ್ಯಕ್ತಿಯ ಜವಾಬ್ದಾರಿಯಲ್ಲ, ಬದಲಾಗಿ ಜಾಗತಿಕ ಜವಾಬ್ದಾರಿಯಾಗಿದೆ ಎಂದರು.

ಶಿಕ್ಷಕರಾದ ಸಂಗೀತಾ ಅಂಕಲಗಿ, ರೇಣುಕಾ ಭಜಂತ್ರಿ, ವೀರೇಶ ಹುಣಶ್ಯಾಳ ಇದ್ದರು.

ಕಿರುಸುದ್ದಿ

ಸಹಾಯಕ ಪ್ರಾಧ್ಯಾಪಕ ಈರಣ್ಣಗೆ ಪಿಎಚ್‌ಡಿ

ಯಲಬುರ್ಗಾ: ತಾಲೂಕಿನ ಸಂಗನಾಳ ಗ್ರಾಮದವರಾದ ಸರ್ಕಾರಿ ವಸತಿಯುಕ್ತ ಮಾದರಿ ಪ್ರಥಮ ದರ್ಜೆ ಕಾಲೇಜು ತಳಬಾಳ ಸಹಾಯಕ ಪ್ರಾಧ್ಯಾಪಕರಾದ ಈರಣ್ಣ ರಾಮಪ್ಪ ಲಗಳೂರ ಇವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಅರ್ಥಶಾಸ್ತ್ರ ವಿಭಾಗದಲ್ಲಿ ಮಂಡಿಸಿದ ಪ್ರಬಂಧ 'ಇನ್ ಇವ್ಯಾಲ್ಯುಯೇಷನ್ ಆಫ್ ಮುದ್ರಾ ಯೋಜನಾ ಇನ್ ಕರ್ನಾಟಕ ಎ ಕೇಸ್ ಸ್ಟಡಿ ಆಫ್ ಗದಗ ಡಿಸ್ಟ್ರಿಕ್ಟ್'ಗೆ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಗಿದೆ.

ಇತ್ತೀಚೆಗೆ ನಡೆದ 75ನೇಯ ವಾರ್ಷಿಕ ಘಟಿಕೋತ್ಸವದಲ್ಲಿ ಕುಲಪತಿ ಹಾಗೂ ರಾಜ್ಯಪಾಲ ಥಾವರ್‌ಚಂದ ಗೆಹ್ಲೋಟ ಹಾಗೂ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಹಾಗೂ ಉಪಕುಲಪತಿ ಕುಲ ಸಚಿವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲರು ಮತ್ತು ವಿದ್ಯಾರ್ಥಿ ಬಳಗ,ಸಂಗನಾಳ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದರು.

ಉತ್ಪಾದನಾ ಘಟಕ ಶಾಶ್ವತವಾಗಿ ನಿಷೇಧಿಸಿ



ಸಿಂಧನೂರು: ತಾಲೂಕಿನ ನಾಲ್ಕು ಮೈಲ್ ಕ್ಯಾಂಪ್ ಬಳಿ ಇರುವ ಮಹಾನಂದ ಫರ್ನಿಚರ್ ಹಾಗೂ ಕರ್ನಾಟಕ ಎಂಟರ್‌ಪ್ರೈಸಸ್ ಈ ಎರಡು ಉತ್ಪಾದನಾ ಘಟಕಗಳನ್ನು ಶಾಶ್ವತವಾಗಿ ನಿಷೇಧಿಸುವಂತೆ ಆಗ್ರಹಿಸಿ ತಹಶೀಲ್ದಾರ್ ಮೂಲಕ ಜಿಲ್ಲಾಧಿಕಾರಿಗೆ ಸೋಮವಾರ ಪರಿಸರ ರಕ್ಷಣಾ ವೇದಿಕೆಯಿಂದ ಮನವಿ ಸಲ್ಲಿಸಿದ್ದಾರೆ.

ಚೇರ್ ಮಾರುಕಟ್ಟೆ ಹೆಸರಿನಲ್ಲಿ ಪರವಾನಗಿ ಪಡೆದು ಕೈಗಾರಿಕೆ ಚಟುವಟಿಕೆ ನಡೆಸುತ್ತಿರುವ ಮಹಾನಂದ ಇಂಡಸ್ಟ್ರೀಸ್ ಶಾಶ್ವತವಾಗಿ ನಿಷೇಧ ಮಾಡಬೇಕು. ವಿರುಪಾಪುರ ಗ್ರಾಮ ಪಂಚಾಯತಿಯಲ್ಲಿ ವ್ಯಾಪಾರ ನಡೆಸಲು ಪುನಃ ಅರ್ಜಿ ಸಲ್ಲಿಸಿದ್ದನ್ನು ತಿರಸ್ಕರಿಸಬೇಕು,ಸ್ಥಳೀಯರ ಆರೋಗ್ಯ, ಪರಿಸರ, ಜೀವನ ಹಕ್ಕು ಕಾಪಾಡಬೇಕು. ಈಗಾಗಲೇ 18 ತಿಂಗಳು ಅನಧಿಕೃತ ವ್ಯವಹಾರ ನಡೆಸಿರುವ ಮಹಾನಂದ ಮಾಲೀಕರು ಹಾಗೂ ವಿದ್ಯುತ್ ಒದಗಿಸಿದ ಜೆಸ್ಕಾಂ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂಬ ಹಲವು ಬೇಡಿಕೆಗಳನ್ನು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಮನವರಿಕೆ ಮಾಡಲಾಗಿದೆ. ಸಮಿತಿಯ ಸಂಚಾಲಕ ಎಂ.ಗಂಗಾಧರ,ಕನಕಪ್ಪ ಮುರುಣಿ, ಎಂ.ಭಾಸ್ಕರ್, ನಿರುಪಾದಿ, ಹನುಮಂತ, ನಾಗರಾಜ, ರಾಜಪ್ಪ, ರಂಗಪ್ಪ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಸಿಡಿಲು ಬಡಿದು ಹಾನಿ

ಯಲಬುರ್ಗಾ: ತಾಲೂಕು ಚಿಕ್ಕಮ್ಯಾಗೇರಿ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪಕ್ಕದಲ್ಲಿ ಇರುವ ಗವಿಸಿದ್ದಪ್ಪ ಅವರ ಮನೆಯ ಕಾಂಪೌಂಡಿನಲ್ಲಿ ಸೋಮವಾರ ಸಂಜೆ ಏಕಾಏಕಿ ತೆಂಗಿನ ಮರಕ್ಕೆ ಸಿಡಿಲು ಬಡೆದು ಸಿಡಿಲಿನ ತೀವ್ರತೆಗೆ ಮರದಲ್ಲಿ ಬೆಂಕಿ ಕಾಣಿಸಿಕೊಂಡು, ಅದರ ಜ್ವಾಲೆ ಹತ್ತಿರದಲ್ಲಿದ್ದ ಇನ್ನೆರಡು ತೆಂಗಿನ ಮರಗಳಿಗೂ ವ್ಯಾಪಿಸಿ ಅವು ಕೂಡ ಸುಟ್ಟು ಹಾನಿಗೊಂಡಿವೆ. ಮೂರು ತೆಂಗಿನ ಮರ ಹಾಗೂ ಮರದ ಕೆಳಗೆ ಕೃಷಿ ಕಾರ್ಯಗಳಿಗೆ ಬಳಸುವ ಬಿತ್ತುವ ಕೂರಿಗೂ ಬೆಂಕಿ ತಗುಲಿ ಅದು ಕೂಡ ಸಂಪೂರ್ಣ ಹಾನಿಗೊಳಗಾಗಿದೆ. ನಷ್ಟವನ್ನು ಅನುಭವಿಸಿದಂತ ರೈತ ಗವಿಸಿದ್ದಪ್ಪ ಆಟಮಾಳಗಿ ಪರವಾಗಿ ಊರಿನ ಗ್ರಾಮಸ್ಥರು ಗುರುಹಿರಿಯರು ಎಲ್ಲರೂ ಸೇರಿ ಪರಿಹಾರ ನೀಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಆಗ್ರಹಿಸಿದರು. ಸಿಡಿಲು ಬಡೆದ ಕೆಲವು ಗಂಟೆಗಳವರೆಗೂ ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ನಿಧನ ಸುದ್ದಿ

ಗ್ಯಾನವ್ವ ರಾಮಪ್ಪ ಪೂಜಾರಿ



ಕುಷ್ಟಗಿ: ತಾಲೂಕಿನ ಹಿರೇಮನ್ನಾಪೂರ ಗ್ರಾಮದ ಹಿರಿಯ ನಿವಾಸಿ ಶತಾಯುಷಿ ಗ್ಯಾನವ್ವ ರಾಮಪ್ಪ ಪೂಜಾರಿ (103) ಸೋಮವಾರ ನಿಧನರಾಗಿದ್ದಾರೆ. ಅವರಿಗೆ ಮೊಮ್ಮಕ್ಕಳು ಸೇರಿದಂತೆ ಅಪಾರ ಬಳಗ ಇದೆ. ಸ್ವ-ಗ್ರಾಮದಲ್ಲಿ ಮಂಗಳವಾರ ಅಂತ್ಯಕ್ರಿಯೆ ನೇರವೇರಿತು.



ಯಲಬುರ್ಗಾ: ತಾಲೂಕಿನ ಸಂಗನಾಳ ಗ್ರಾಮದವರಾದ ಸರ್ಕಾರಿ ವಸತಿಯುಕ್ತ ಮಾದರಿ ಪ್ರಥಮ ದರ್ಜೆ ಕಾಲೇಜು ತಳಬಾಳ ಸಹಾಯಕ ಪ್ರಾಧ್ಯಾಪಕರಾದ ಈರಣ್ಣ ರಾಮಪ್ಪ ಲಗಳೂರ ಇವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಅರ್ಥಶಾಸ್ತ್ರ ವಿಭಾಗದಲ್ಲಿ ಮಂಡಿಸಿದ ಪ್ರಬಂಧ 'ಇನ್ ಇವ್ಯಾಲ್ಯುಯೇಷನ್ ಆಫ್ ಮುದ್ರಾ ಯೋಜನಾ ಇನ್ ಕರ್ನಾಟಕ ಎ ಕೇಸ್ ಸ್ಟಡಿ ಆಫ್ ಗದಗ ಡಿಸ್ಟ್ರಿಕ್ಟ್'ಗೆ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಗಿದೆ.

ಗೋಸಮ್ಮಾನ ಆಹ್ವಾನ ಅಭಿಯಾನ: ಮನವಿ

ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ಗೋರಕ್ಷಣ ಸಮಿತಿಯ ವತಿಯಿಂದ ನಡೆದ ಗೋ ಸಮ್ಮಾನ ಆಹ್ವಾನ ಅಭಿಯಾನ ಅಂಗವಾಗಿ ಮುಖ್ಯಮಂತ್ರಿಗೆ ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್ ಅವರ ಮೂಲಕ ಮನವಿ ಸಲ್ಲಿಸಲಾಯಿತು.

ಕಲ್ಮಠ ಶ್ರೀವಿರೂಪಾಕ್ಷ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಗೋವಿನಲ್ಲಿ ಮೂರು ಕೋಟಿ ದೇವತೆಗಳು ಇರುವುದಾಗಿ ಹಿಂದೂಗಳು ನಂಬುತ್ತಾರೆ. ರೈತರ ಜೀವನಕ್ಕೆ ಮುಖ್ಯ ಆಧಾರ ಗೋವುಗಳಾಗಿವೇ. ರಾಜ್ಯದಲ್ಲಿ ಗೋಹತ್ಯ ನಿಷೇಧ ಕಾನೂನು ಅನ್ನು ಜಾರಿಗೆ ತರುವುದಕ್ಕೆ ಭರವಸೆ ನೀಡಿದ ಇದುವರೆಗೆ ಆಡಳಿತ ನಡೆಸಿದ ಮುಖ್ಯಮಂತ್ರಿಗಳು ಜಾರಿಗೆ ತರೆದೆ ಇರುವುದು ದುರಂತದ ಸಂಗತಿಯಾಗಿದೆ. ಪ್ರತಿಯೊಂದು ಮನೆಯಲ್ಲಿ ಗೋವುಗಳನ್ನು ಸಾಕಣಿಕೆ ಮಾಡಬೇಕು, ಗೋವುಗಳನ್ನು ರಕ್ಷಿಸಬೇಕು ಎಂದು ಆಗ್ರಹಿಸಿದರು. ಚೀಕಲಪರ್ವಿ ಶ್ರೀರುದ್ರಮುನೀಶ್ವರ ಮಠದ ಸದಾಶಿವ ಸ್ವಾಮೀಜಿ, ಅಡವಿ ಅಮರೇಶ್ವರ ಸುವರ್ಣಗಿರಿ ಮಠದ ಶ್ರೀತೋಟಾಂದರ್ಯ ಮಹಾಸ್ವಾಮಿಗಳು, ಮಾನ್ವಿ ಸುವರ್ಣಗಿರಿಮಠ ಶ್ರೀಶಂಕರಯ್ಯ ಸ್ವಾಮಿಗಳು ಮಾತನಾಡಿದರು. ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ, ನಗರೇಶ್ವರ ವೈಶ್ಯ ಸಂಘದ ತಾ.ಅಧ್ಯಕ್ಷರಾದ ಆರ್.ಮುತ್ತುರಾಜ್ ಶೆಟ್ಟಿ, ಸುರೇಶನಾಡಗೌಡ, ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರಪಾಟೀಲ್, ಟಿಎಪಿಸಿಎಂಸಿ ಅಧ್ಯಕ್ಷ ತಿಮ್ಮರೆಡ್ಡಿ ಭೋಗವತಿ, ಮ್ಯಾಕಲ್ ಅಯ್ಯಪ್ಪನಾಯಕ, ಅಮರೇಶ ಗವಾಯಿ, ಶಿವಶಂಕರಯ್ಯಸ್ವಾಮಿ, ನಾಗರಾಜ ಶೆಟ್ಟಿ, ಜಲ್ಲಿ ಆಂಜನೇಯ ಇತರರಿದ್ದರು.



ಮಾನ್ವಿ; ಪಟ್ಟಣದ ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ಗೋರಕ್ಷಣ ಸಮಿತಿಯ ವತಿಯಿಂದ ನಡೆದ ಗೋ ಸಮ್ಮಾನ ಆಹ್ವಾನ ಅಭಿಯಾನ ಅಂಗವಾಗಿ ಮುಖ್ಯಮಂತ್ರಿಗೆ ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್ ಅವರ ಮೂಲಕ ಮನವಿ ಸಲ್ಲಿಸಲಾಯಿತು.

ಹುಲಿಗೆಮ್ಮದೇವಿ ಜಾತ್ರಾ ಮಹೋತ್ಸವಕ್ಕೆ ಸಕಲ ಸಿದ್ಧತೆ

ಮೂಲ ಸೌಕರ್ಯಕ್ಕೆ ಕ್ರಮ: ಹಿಟ್ನಾಳ

ಕೊಪ್ಪಳ: ಶ್ರೀಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 2026ನೇ ಸಾಲಿನ ವಾರ್ಷಿಕ ಜಾತ್ರಾ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು, ಶ್ರೀ ಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳಿಗೆ ಮೂಲಸೌಕರ್ಯ ಒದಗಿಸಲಾಗುವುದು ಎಂದು ಸಂಸದ ಕೆ.ರಾಜಶೇಖರ ಹಿಟ್ನಾಳ ಹೇಳಿದರು.

2026ರ ಶ್ರೀ ಹುಲಿಗೆಮ್ಮದೇವಿ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಶ್ರೀ ಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳ ಕಛೇರಿ ಸಭಾಂಗಣದಲ್ಲಿ ಏಪ್ರಿಲ್ 28ರಂದು ಕರೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರವು ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿದ್ದು, ಇದರಿಂದ ಶ್ರೀ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳಾಗುತ್ತಿವೆ. ಕಳೆದ ವರ್ಷದಂತೆ ಈ ಬಾರಿಯೂ ಭಕ್ತಾದಿಗಳಿಗೆ ಸಕಲ ಸೌಲಭ್ಯಗಳನ್ನು ಕಲ್ಪಿಸಿ ಅದ್ದೂರಿಯಾಗಿ ಜಾತ್ರಾ ಮಹೋತ್ಸವವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. 2026ನೇ ಸಾಲಿನ ಜಾತ್ರಾ ಮಹೋತ್ಸವವು ಮೇ 2 ರಿಂದ ಮೇ 14ರವರೆಗೆ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಮತ್ತು ಜಾತ್ರಾ ಮಹೋತ್ಸವವು ಸುಮಾರು ಒಂದು ತಿಂಗಳ ಕಾಲ ಜರುಗಲಿದ್ದು, ಈ ಸಮಯದಲ್ಲಿ ಕರ್ನಾಟಕದಾದ್ಯಂತ ಹಾಗೂ ಆಂಧ್ರ, ಮಹಾರಾಷ್ಟ್ರ ಹಾಗೂ ಇನ್ನಿತರೆ ಪ್ರದೇಶಗಳಿಂದ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತಾದಿಗಳು ಶ್ರೀ ದೇವಿಯವರ ದರ್ಶನವನ್ನು ಪಡೆಯಲು ಆಗಮಿಸಲಿದ್ದಾರೆ ಎಂದರು. ಕಳೆದ ವರ್ಷ ಜಾತ್ರೆಗೆ ಬರುವವರ ಸಂಖ್ಯೆಯನ್ನು ಲೆಕ್ಕಿಸಲು ಮಾಬ್ ಕೌಂಟಿಂಗ್ ಮಷಿನ್ ಅಳವಡಿಸಲಾಗುತ್ತು. ಜಾತ್ರಾ ಅವಧಿಯಲ್ಲಿ ಸುಮಾರು 28 ಲಕ್ಷ ಜನರು ಅಮ್ಮನ ದರ್ಶನ ಪಡೆದಿದ್ದಾರೆ. ಈ ಬಾರಿ 30 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಭಕ್ತಾದಿಗಳು ಆಗಮಿಸುವ ನಿರೀಕ್ಷೆಯಿದೆ ಎಂದು ಹೇಳಿದರು. ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಹೆಚ್.ಪ್ರಕಾಶ್‌ರಾವ್, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಮುಖಂಡರಾದ ಪಾಲಾಕ್ಷಪ್ಪ ಗುಂಗಾಡಿ, ಈರಣ್ಣ ಈಳಿಗೇರ ಸೇರಿದಂತೆ ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿ ಹಾಗೂ ಇತರರು ಉಪಸ್ಥಿತರಿದ್ದರು.



> ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಜಾತ್ರಾ ಮಹೋತ್ಸವದಲ್ಲಿ, ಮಹಾ ದಾಸೋಹ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಮತ್ತು ಮಹಾದಾಸೋಹ, ಅಭಿವೃದ್ಧಿ ಕಾಮಗಾರಿ ಕೆಲಸಕ್ಕೆ ಉದಾರವಾಗಿ ದೇಣಿಗೆಯನ್ನು ನೀಡಿ ಸಹಕರಿಸಿ.
> ■ ಕೆ.ರಾಜಶೇಖರ ಹಿಟ್ನಾಳ್, ಸಂಸದ

ವಿವಿಧ ಅಭಿವೃದ್ಧಿ ಕಾಮಗಾರಿಗಳು

ಶ್ರೀಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಕೊಳ್ಳಲಾಗಿದ್ದು, ರೂ. 985 ಲಕ್ಷಗಳ ಅಂದಾಜು ಮೊತ್ತದ ಅಮ್ಮಾ ನಿಲಯ ವಸತಿ ಸಂಕೀರ್ಣ 2, 3ನೇ ಮಹಡಿ ನಿರ್ಮಾಣ ಕಾಮಗಾರಿಗೆ ರೂ. 492.50 ಲಕ್ಷ ರೂ. ಗಳನ್ನು ಪ್ರಾಧಿಕಾರದಿಂದ ಒದಗಿಸಲಾಗಿದೆ. ರೂ. 999.50 ಲಕ್ಷಗಳ ಅಂದಾಜು ಮೊತ್ತದಲ್ಲಿ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಹಾಲಿ ಕಟ್ಟಡವನ್ನು ತೆರವುಗೊಳಿಸಿ ನೂತನ ದೇವಸ್ಥಾನ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ರೂ. 250 ಲಕ್ಷ ಗಳನ್ನು ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬಿಡುಗಡೆ ಮಾಡಲಾಗಿದೆ.

ಗೋಮಾತೆ ರಾಷ್ಟ್ರೀಯ ಪ್ರಾಣಿಯಾಗಿ ಘೋಷಿಸಿ

ಯಲಬುರ್ಗಾ: ಗೋಮಾತೆ ಭೂಮಾತೆಯ ಪ್ರತೀಕವಾಗಿದ್ದು ಸರ್ಕಾರ ಕೂಡಲೇ ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸುವಂತೆ ಸ್ಥಳಿಯ ಶ್ರೀಧರ ಮುರಡಿ ಹಿರೇಮಠದ ಬಸವಲಿಂಗೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಪಟ್ಟಣದ ವೀರರಾಣಿ ಕಿತ್ತೂರು ಚನ್ನಮ್ಮ ವೃತ್ತ ಬಳಿ ಗೋಮಾತೆಯ ಗೌರವ ಅಭಿಯಾನ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಭಾಗವಹಿಸಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು. ಬಳಿಕ ಸ್ಥಳೀಯ ಶ್ರೀಧರ ಮುರಡಿ ಹಿರೇಮಠದ ಪೀಠಾಧಿಪತಿ ಶ್ರೀ ಬಸವಲಿಂಗೇಶ್ವರ ಸ್ವಾಮೀಜಿ ಮಾತನಾಡಿ, ಕಾಮಧೇನುವೆಂದೇ ಪರಿಗಣಿಸುವ ಮೂಲಕ ಗೋಮಾತೆಯನ್ನು ಪೂಜನೀಯ ಭಾವದಿಂದ ಪೊಷಿಸುತ್ತ ಬಂದಿದ್ದೇವೆ,ಗೋಮಾತೆ ಭಾರತೀಯ ಸನಾತನ ಹಿಂದೂ ಧರ್ಮದ ಆರಾಧ್ಯ ದೈವವಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಗೋವಂಶ ಸಂರಕ್ಷಣೆಗಾಗಿ ಕೂಡಲೇ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಕಳುಹಿಸಬೇಕು. ಸಂವಿಧಾನದ 48ನೇ ವಿಧಿಗೆ ತಿದ್ದುಪಡಿ ತಂದು ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಬೇಕೆಂದು ಮನವಿ ಮಾಡಿದರು.

ಪಪಂ ಮಾಜಿ ಅಧ್ಯಕ್ಷ ಸುರೇಶಗೌಡ ಶಿವನಗೌಡ, ಬಿಜೆಪಿ ವಕ್ತಾರ ವೀರಣ್ಣ ಹುಬ್ಬಳ್ಳಿ,ರೈತ ಮುಖಂಡ ವೀರನಗೌಡ ಬನಪ್ಪಗೌಡ್ರ,ಯೋಗೇಶ ರಾಜಪುರೋಹಿತ.ಅಮರೇಶ ಹುಬ್ಬಳ್ಳಿ ಮಾತನಾಡಿ ಗ್ರಾಮೀಣ ಜೀವನ,ಕೃಷಿ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಗೋವಂಶದ ಮಹತ್ವ ಅಪಾರವಾಗಿದ್ದು ಅದರ ಸಂರಕ್ಷಣೆ ಅತ್ಯಗತ್ಯ ಜತೆಗೆ ಗೋ ಕಳ್ಳಸಾಗಣೆ ಮತ್ತು ಹತ್ಯೆಯನ್ನು ಜಾಮೀನು ರಹಿತ ಅಪರಾಧವಾಗಿ ಪರಿಗಣಿಸಿ ಕಠಿಣ ಶಿಕ್ಷೆ ವಿಧಿಸುವ ಕಾನೂನು ತರಬೇಕು ಎಂದು ಆಗ್ರಹಿಸಿದರು.

ಸಹಿ ಸಂಗ್ರಹದ ಮೂಲಕ ಶಿರಸ್ತೆದಾರ ದೇವರಡ್ಡಿಯವರಿಗೆ ಮನವಿ ಸಲ್ಲಿಸಿ, ಸರ್ಕಾರ ಕೂಡಲೇ ಗೋವನ್ನು ರಾಷ್ಟ್ರೀಯ ಪ್ರಾಣಿಯಾಗಿ ಘೋಷಿಸುವಂತೆ ಮನವಿ ಮಾಡಿದರು.

ವೀರಣ್ಣ ಉಳ್ಳಾಗಡ್ಡಿ, ಸಂತೋಷಿಮಾ ಜೋಶಿ, ಸಂಗಪ್ಪ ರಾಮತಾಳ, ಸುನೀಲ ಕುಲಕರ್ಣಿ, ಶೀತಲ ದೇಸಾಯಿ, ಶ್ರೀಶೈಲಪ್ಪ ಗೊಂಡಬಾಳ, ಮಂಜುನಾಥ ಅಧಿಕಾರಿ, ಸಿದ್ದರಾಮೇಶ ಬೇಲೇರಿ, ಶರಣಪ್ಪ ಕೊಡಗಲಿ, ಗುರುಲಿಂಗನಗೌಡ ಪಾಟೀಲ, ಜಗನ್ನಾಥ ದೇಸಾಯಿ, ಕಲ್ಲೇಶ ಕರಮುಡಿ, ಮಲ್ಲಪ್ಪ ಭೂತೆ, ಬಸವರಾಜ ಬನ್ನಿಗೋಳ ಮತ್ತಿತರರು ಇದ್ದರು.



ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘ

ಅಧ್ಯಕ್ಷರಾಗಿ ಸಿದ್ದಲಿಂಗಯ್ಯ ಅವಿರೋಧ ಆಯ್ಕೆ

ಕಲಬುರಗಿ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘ ನಿ. ಕಲಬುರಗಿ ಇದರ 2026 ರಿಂದ ಮುಂದಿನ ಐದು ವರ್ಷದ ಅವಧಿಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ(ಕೆಜಿಐಡಿ) ಸಿದ್ದಲಿಂಗಯ್ಯ ವಿ.ಮಠಪತಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಮಂಗಳವಾರ ಇಲ್ಲಿನ ರಾಜ್ಯ ಸರ್ಕಾರಿ ನೌಕರರ ಸಂಘದ ಕಚೇರಿಯಲ್ಲಿ ಜರುಗಿದ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಸಭೆಯಲ್ಲಿ ಸಿದ್ದಲಿಂಗಯ್ಯ ವಿ. ಮಠಪತಿ ಅವರನ್ನು ಅಧ್ಯಕ್ಷರನ್ನಾಗಿ ಮತ್ತು ಮರೆಪ್ಪ ಹಾವೇರಿ ಅವರನ್ನು ಅವಿರೋಧವಾಗಿ ಉಪಾಧ್ಯಕ್ಷರನ್ನಾಗಿ ಮಾಡುವ ನಿರ್ಣಯ ಕೈಗೊಂಡಿದೆ.

ಸಿದ್ದಲಿಂಗಯ್ಯ ಮಠಪತಿ ಅವರು ನೂತನ ಅಧ್ಯಕ್ಷರಾಗಿ ಆಗುತ್ತಿದ್ದಂತೆ ಸಂಘದ ಕಳೆದ ಎರಡು ಅವಧಿಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಹಣಮಂತ್ರಾಯ ಗೊಳಸಾರ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ, ಜಿಲ್ಲಾಧ್ಯಕ್ಷ ಬಸವರಾಜ ಬಳೂಂಡಗಿ, ನಿಕಟಪೂರ್ವ ಜಿಲ್ಲಾಧ್ಯಕ್ಷ ರಾಜು ಲೇಂಗಟಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಜಿಲ್ಲಾಧ್ಯಕ್ಷ ಅರುಣಕುಮಾರ ಪಾಟೀಲ ಸೇರಿದಂತೆ ನೌಕರರ ಸಂಘದ ಅನೇಕ ಪದಾಧಿಕಾರಿಗಳು ಹರ್ಷವ್ಯಕ್ತಪಡಿಸಿದ್ದಾರೆ.

ಇದಕ್ಕೂ ಮುನ್ನ ನಡೆದ ಆಡಳಿತ ಮಂಡಳಿ ನೂತನ ನಿರ್ದೇಶಕರ ಆಯ್ಕೆ ಪ್ರಕ್ರಿಯೆ ಚುನಾವಣೆಯಲ್ಲಿ ಕಲಬುರಗಿ ತಾಲೂಕು ಮಟ್ಟದ ಈ ಸಂಘಕ್ಕೆ ಸಾಮಾನ್ಯ ಕ್ಷೇತ್ರದಿಂದ ಸಿದ್ದಲಿಂಗಯ್ಯ ಮಠಪತಿ, ವೀರೇಂದ್ರಕುಮಾರ ಸಿದ್ರಾಮಪ್ಪ, ಖಲೀಲ್ ಅಹ್ಮದ ಕೆ. ಭಾಗೋಡಿ, ಬಸವರಾಜ ಅಂಬಾರಾಯ ಹತ್ತಿ, ಸುನೀಲಕುಮಾರ ಹಾಲ್ವಿ, ಶರಣಬಸಪ್ಪ ಎ.ಚಿಂಚನಸೂರು, ಅಂಕುಶ್ ಆರ್. ದಂಡಿ, ಬಸಪ್ಪ ಭೀಮಣ್ಣ ನೆಲೋಗಿ, ಶರಣಪ್ಪ ಮಹಾದೇವಪ್ಪ ನಂದರ್ಗಿ, ಮಹಿಳಾ ಕ್ಷೇತ್ರದಿಂದ ಸುನಂದಾ ಎಸ್.ಪಾಟೀಲ ಮತ್ತು ವೆಂಕಮ್ಮ ಎಮ್. ಹಾವೇರಿ, ಹಿಂದುಳಿದ ವರ್ಗ 'ಅ' ಕ್ಷೇತ್ರದಿಂದ ಶರಣಪ್ರಕಾಶ ರಾಮಣ್ಣ, ಹಿಂದುಳಿದ ವರ್ಗ 'ಬ' ಕ್ಷೇತ್ರದಿಂದ ಬಸವರಾಜ ಜಿ.ವಾಲಿ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ರವೀಂದ್ರ ಎನ್. ಹಳಿಪೇಟ್ ಹಾಗೂ ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಿಂದ ಮರೆಪ್ಪ ಹಾವೇರಿ ಹೀಗೆ ಒಟ್ಟು 15 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ರಿಟರ್ನಿಂಗ್ ಅಧಿಕಾರಿ ಬಸವರಾಜ ಪುಲಾರಿ ಘೋಷಿಸಿದ್ದರು. ಸಂಘದ ಕಾರ್ಯದರ್ಶಿ ಶಶಿಧರ ಆರ್. ಶಿವಗೊಂಡ ಇದ್ದರು.

ಕುಡಿಯುವ ನೀರಿನ ಸಮಸ್ಯೆ ಆಗದಂತೆ ಕ್ರಮ ವಹಿಸಿ: ಅಶೋಕ

ಕುಷ್ಟಗಿ: ಬಿಸಿಲಿನ ತಾಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಇದರ ಹಿನ್ನೆಲೆ ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತಿದೆ. ಆದ್ದರಿಂದ ಪ್ರತಿಯೊಬ್ಬ ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು ಕುಡಿಯುವ ನೀರಿನ ಸಮಸ್ಯೆ ಬರದಂತೆ ನೋಡಿಕೊಳ್ಳಬೇಕು ಎಂದು ತಹಶೀಲ್ದಾರ್ ಅಶೋಕ ಶಿಗ್ಗಾವಿ ಖಡಕ್ಕಾಗಿ ಎಚ್ಚರಿಕೆಯನ್ನು ನೀಡಿದರು.

ಇಂದು ನಡೆದ ತಹಶೀಲ್ದಾರ್ ಕಚೇರಿಯ ಕಾರ್ಯಾಲಯದಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳ ಜಂಟಿ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಕುಡಿಯುವ ನೀರಿನ ಟಾಸ್ಕ್‌ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈಗಾಗಲೇ ಕೊಪ್ಪಳ ಜಿಲ್ಲಾಧಿಕಾರಿ ಹಾಗೂ ಶಾಸಕ ಹಾಗೂ ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಇವರ ನೇತೃತ್ವದಲ್ಲಿ ಸಭೆ ನಡೆಸಲಾಗಿದ್ದು, ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಬರದಂತೆ ಎಚ್ಚರಿಕೆ ನೀಡಲಾಗಿದೆ. ಆದ್ದರಿಂದ ಪ್ರತಿಯೊಬ್ಬ ಗ್ರಾಪಂ ಅಧಿಕಾರಿಗಳು ಮತ್ತು ಕುಡಿಯುವ ನೀರಿನ ಇಲಾಖೆ ಅಧಿಕಾರಿಗಳು ಗಮನಹರಿಸಿ ಎಚ್ಚರಿಕೆಯಿಂದ ಕೆಲಸ ಮಾಡಿ ಎಂದು ಹೇಳಿದರು.



ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀನೈ ಉಪವಿಭಾಗ ಕುಷ್ಟಗಿ, ಎಲ್ಲಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತ ಅಧಿಕಾರಿಗಳು ಇದ್ದರು.

ಜಾನಪದ ಸಾಹಿತ್ಯಕ್ಕೆ ಪ್ರೋತ್ಸಾಹ ಅಗತ್ಯ

ಮಸ್ಕಿ: ಜಾನಪದ ಸಾಹಿತ್ಯ ಗ್ರಾಮೀಣ ಪ್ರತಿಭೆಯನ್ನು ಅನಾವರಣಗೊಳಿಸುತ್ತದೆ. ಜಾನಪದ ಸಾಹಿತ್ಯವನ್ನು ಪ್ರತಿಯೊಬ್ಬರು ಉಳಿಸಿ ಬೆಳೆಸಬೇಕಾದ ಜವಾಬ್ದಾರಿ ನಮ್ಮ ನಿಮ್ಮ ಮೇಲಿದೆ. ಪ್ರತಿಯೊಬ್ಬರು ಜಾನಪದ ಸಾಹಿತ್ಯಕ್ಕೆ ಪ್ರೋತ್ಸಾಹಿಸಬೇಕು. ಅಂದಾಗ ಮಾತ್ರ ಜನಪದ ಸಾಹಿತ್ಯ ಉಳಿಯುತ್ತದೆ ಎಂದು ಗಚ್ಚಿನ ಹಿರೇಮಠದ ವರರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ಗಚ್ಚಿನ ಹಿರೇಮಠದ ಆವರಣದಲ್ಲಿ ಮಂಗಳವಾರ ನಡೆದ ಶ್ರೀಬಹುರೂಪಿ ಚೌಡಯ್ಯ ಹಗಲುವೇಷ ಕಲಾವಿದರ ಟ್ರಸ್ಟ್ ಹಸಮಕಲ್ ಹಾಗು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಯಚೂರು ಇವರ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಜಾನಪದ ಕಲಾ ಸಂಭ್ರಮ 2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಗಳು ಶ್ರೀಬಹುರೂಪಿ ಚೌಡಯ್ಯ ಹಗಲುವೇಷ ಕಲಾವಿದರ ಟ್ರಸ್ಟ್‌ನ ಸೇವೆ ಅನನ್ಯವಾಗಿದ್ದು, ಜಾನಪದ ಸಾಹಿತ್ಯ ಉಳಿಸಿ ಬೆಳೆಸಲು ಇವರ ಪರಿಶ್ರಮ ಮೆಚ್ಚುವಂತದ್ದಾಗಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಕಲಾವಿದರ ಮೆರವಣಿಗೆ ತಂಡಕ್ಕೆ ಪುರಸಭೆ ಅಧ್ಯಕ್ಷ ಸುರೇಶ ಹರಸೂರು ಚಾಲನೆ ನೀಡಿದರು. ಹಗಲುವೇಷ, ಕೀಲುಕುದುರೆ, ಹೆಜ್ಜೆಮೇಳ ಕಲಾ ತಂಡ ಸೇರಿದಂತೆ ವಿವಿಧ ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.



ಕಸಾಪ ಮಾಜಿ ಜಿಲ್ಲಾಧ್ಯಕ್ಷ ಮಹಾಂತೇಶ ಮಸ್ಕಿ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ರಂಗಪ್ಪ ಮಾಸ್ತರ ತಡಕಲ್, ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಜಂಬಣ್ಣ ಹಸಮಕಲ್, ಹಗಲುವೇಷ ಕಲಾವಿದರ ಅಧ್ಯಕ್ಷ ಅಮರೇಶ ಹಸಮಕಲ್, ದಲಿತ ಸಾಹಿತಿ ದಾನಪ್ಪ ಸಿ.ನಿಲೋಗಲ್, ಕಸಾಪದ ತಾಲೂಕ ಅಧ್ಯಕ್ಷೆ ವಿದ್ಯಾವತಿ ಎಲ್.ವನಕೆ, ನಾರಾಯಣಪ್ಪ ಮಾಡಶಿರವಾರ ಸೇರಿದಂತೆ ವಿವಿಧ ಹಳ್ಳಿಯ ಕಲಾತಂಡಗಳು ಹಾಗೂ ಕಲಾವಿದರು ಭಾಗವಹಿಸಿದ್ದರು.

ಕುಡಿಯುವ ನೀರಿನ ಸಮಸ್ಯೆ ಆಗದಂತೆ ಜಾಗೃತಿ ವಹಿಸಿ

ಕನಕಗಿರಿ: ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ತಹಶೀಲ್ದಾರ್ ವಿಶ್ವನಾಥ ಮುರುಡಿ ಹೇಳಿದರು.

ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಕುಡಿಯುವ ನೀರು, ನೈರ್ಮಲ್ಯ, ಸ್ವಚ್ಚತೆ ಕಾಪಾಡುವುದು ಪಪಂ ಹಾಗೂ ಗ್ರಾಪಂ ಅಧಿಕಾರಿಗಳ ಮುಖ್ಯ ಕರ್ತವ್ಯವಾಗಿದ್ದು, ಅಧಿಕಾರಿ ಹಾಗೂ ಸಿಬ್ಬಂದಿ ಟೀಮ್ ವರ್ಕ್ ಮಾಡಿ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ಎಚ್ಚರ ವಹಿಸಿ ಕೆಲಸ ನಿರ್ವಹಿಸಬೇಕು ಎಂದು ತಹಶೀಲ್ದಾರ್ ವಿಶ್ವನಾಥ ಮುರುಡಿ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದರು.

ಸಚಿವ ಶಿವರಾಜ್ ತಂಗಡಿಗೆ ಸೂಚನೆ ಮೇರೆಗೆ ಕನಕಗಿರಿ ತಾಲೂಕಿಗೆ ಒಳಪಡುವ ಎಲ್ಲಾ ಗ್ರಾಮಗಳಲ್ಲಿ ಕುಡಿಯುವ ನೀರು ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು. ಪಟ್ಟಣ ಸೇರಿದಂತೆ ತಾಲೂಕಿನ ಗ್ರಾಮೀಣ ಮಟ್ಟದಲ್ಲಿ ಸಮಸ್ಯಾತ್ಮಕ ಪ್ರದೇಶ ಹಾಗೂ ಗ್ರಾಮಗಳನ್ನು ಗುರ್ತಿಸಿ ಆದ್ಯತಾನುಸಾರವಾಗಿ ಪಟ್ಟಿ ಮಾಡಿ ನೀರಿನ ತೊಂದರೆಯಾಗದಂತೆ ನಿಗಾ ವಹಿಸಬೇಕು. ಕೆಲ ಗ್ರಾಮಗಳಲ್ಲಿ ಆರೋಪ್ಲಾಂಟ್‌ಗಳು ಸ್ಥಗಿತಗೊಂಡಲ್ಲಿ ಮಾಹಿತಿ ನೀಡಿ.ನೀರಿನ ಸಮಸ್ಯೆ ಇದ್ದ ಕಡೆ ಮೊದಲ ಆದ್ಯತೆ ನೀಡಿ ಖಾಸಗಿ ಬೋರವೆಲ್,ಟ್ಯಾಂಕರ್ ಮೂಲಕ ಪೂರೈಸುವಲ್ಲಿ ಮುಂಜಾಗ್ರತೆ ವಹಿಸಬೇಕು.ದುರಸ್ತಿ ಇದ್ದರೆ ತ್ವರಿತವಾಗಿ ಮಾಡಬೇಕು. ಕಡಿಮೆ ಕ್ವಾಲಿಟಿ ಪೈಪ್ ಅಥವಾ ಸಾಮಗ್ರಿ ಬಳಸಬೇಡಿ, ನೀರು ಸರಬರಾಜು ಯಾವುದೇ ಕಾರಣಕ್ಕೂ ತಡೆಯಾಗಬಾರದು. ಅನುದಾನದ ಕೊರತೆ ಇದ್ದಲ್ಲಿ ಮಾಹಿತಿ ನೀಡಿ ಕ್ರಿಯಾಯೋಜನೆ ಮಾಡಿ ತುರ್ತು ಕಾಮಗಾರಿ ಕೈಗೊಳ್ಳಲು ಬೇಡಿಕೆ ಪಟ್ಟಿ ಸಲ್ಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.



ಬಳಿಕ ತಾಪಂ ಇಒ ಕೆ.ರಾಜಶೇಖರ್ ಮಾತನಾಡಿ, ಯಾವುದೇ ಗ್ರಾಮದಲ್ಲಿ ನೀರಿನ ಸಮಸ್ಯೆ ಹಾಗೂ ಕಲುಷಿತ ನೀರು ಸರಬರಾಜು ಉಂಟಾದಲ್ಲಿ ಗ್ರಾಪಂ ಪಿಡಿಓಗಳು ನೇರ ಹೊಣೆಗಾರರಾಗಿದ್ದು, ಅಚ್ಚುಕಟ್ಟಾಗಿ ಕೆಲಸ ಮಾಡಬೇಕು. ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದರು.

ಸಾರ್ವಜನಿಕರಿಗಾಗಿ ಹೆಲ್ಪ್‌ಲೈನ್ ತಾಪಂ 8073051234-ಪಪಂ 8951133577-7022332763 ತಹಶೀಲ್ದಾರ್ ಕಚೇರಿ 9164258531 ಈ ನಂಬರಿಗೆ ಕರೆ ಮಾಡಿ.

ಗ್ರೇಡ್-2 ತಹಶೀಲ್ದಾರ್ ಮಾಂತಗೌಡ ಸೇರಿದಂತೆ ಹಿರೇಖೇಡ, ಜೀರಾಳ, ಚಿಕ್ಕಮಾದಿನಾಳ, ಮುಸಲಾಪುರ್, ಕರಡೋಣ, ಸುಳೇಕಲ್, ನವಲಿ, ಹುಲಿಹೈದರ್ ಸೇರಿದಂತೆ ವಿವಿಧ ಗ್ರಾಮ ಪಂಚಾಯತಿ ಪಿಡಿಓಗಳು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಪೊಲೀಸ್ ಸಿಬ್ಬಂದಿ ಕ್ಷೇಮಾಭಿವೃದ್ಧಿಗೆ ಬದ್ಧ: ಜಿ.ಪರಮೇಶ್ವರ

ಕಲಬುರಗಿ: ನಾಡಿನಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ಹೊಂದಿರುವ ಪೊಲೀಸ್ ಸಿಬ್ಬಂದಿಗಳ ಕ್ಷೇಮಾಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ರಾಜ್ಯದ ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ಮಂಗಳವಾರ ಕಲಬುರಗಿ ನಗರದ ಸಿ.ಎ.ಆರ್. ಪೊಲೀಸ ಮೈದಾನದಲ್ಲಿ ಕಲಬುರಗಿ ನಗರ ಪೊಲೀಸ್ ಹಾಗೂ ಕಲಬುರಗಿ ಜಿಲ್ಲಾ ಪೊಲೀಸ್ ಮತ್ತು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ ಸಂಯುಕ್ತ ಆಶ್ರಯದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಜಿಲ್ಲೆಯಲ್ಲಿ ಸುಮಾರು 20.88 ಕೋಟಿ ರೂ. ಮೊತ್ತದ 72 ಪೊಲೀಸ ವಸತಿ ಗೃಹಗಳನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ನಗರದಲ್ಲಿ 24 ಪೊಲೀಸ್ ವಸತಿ ಗೃಹ ಕಟ್ಟಡಗಳು, ಅಫಜಲಪುರ ಪಟ್ಟಣದಲ್ಲಿ 24, ದೇವಲ ಗಾಣಗಾಪುರದಲ್ಲಿ 12, ಆಳಂದ ಪಟ್ಟಣದಲ್ಲಿ 12 ಪೊಲೀಸ್ ವಸತಿ ಗೃಹ ಕಟ್ಟಡಗಳನ್ನು ಇಂದಿಲ್ಲಿ ಪೊಲೀಸ್ ಸಿಬ್ಬಂದಿಗೆ ಸಮರ್ಪಿಸಲಾಗಿದೆ ಎಂದರು.

ಬ್ರಿಟಿಷರ ಕಾಲದ ಹಳೆಯ 'ಪೊಲೀಸ್ ಲೈನ್' ಮನೆಗಳ ಬದಲಿಗೆ, ಆಧುನಿಕ ಸೌಲಭ್ಯವುಳ್ಳ 'ಪೊಲೀಸ್ ಗೃಹ' ಯೋಜನೆಯಡಿ ರಾಜ್ಯಾದ್ಯಂತ ಈಗಾಗಲೇ 40,712 ಮನೆಗಳನ್ನು ನಿರ್ಮಿಸಲಾಗಿದೆ. ಇನ್ನೂ 1,830 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಪೊಲೀಸ್ ಸಿಬ್ಬಂದಿ ಮತ್ತು ಅವರ ಕುಟುಂಬದವರಿಗೆ ಉತ್ತಮ ಸೌಲಭ್ಯ ಒದಗಿಸುವುದು ಸರ್ಕಾರದ ಉದ್ದೇಶವಾಗಿದೆ ಎಂದರು

ವೈದ್ಯಕೀಯ ಶಿಕ್ಷಣ, ಸಚಿವ ಡಾ. ಶರಣಪ್ರಕಾಶ್ ಪಾಟೀಲ ಮಾತನಾಡಿ, ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಪೊಲೀಸ್ ಇಲಾಖೆಯಲ್ಲಿ ತರುತ್ತಿರುವ ಅನೇಕ ಬದಲಾವಣೆ ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ ಅವರು, ಇಡೀ ದೇಶದಲ್ಲೇ ಕರ್ನಾಟಕ ಪೊಲೀಸ್ ಇಲಾಖೆ ಉತ್ತಮ ಸ್ಥಾನದಲ್ಲಿರಲು ಅವರ ದೂರದೃಷ್ಟಿ ಮತ್ತು ನಿಸ್ವಾರ್ಥ ಸೇವೆ ಕಾರಣ ಎಂದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಮಾತನಾಡಿದರು.ಕಾರ್ಯಕ್ರಮದಲ್ಲಿ ಶಾಸಕ ಬಿ.ಆರ್. ಪಾಟೀಲ್, ಶಾಸಕಿ ಖನೀಜಾ ಫಾತಿಮಾ, ಎಂ.ವೈ. ಪಾಟೀಲ್, ಎಂಎಲ್ಸಿ ಜಗದೇವ್ ಗುತ್ತೇದಾರ್, ತಿಪ್ಪಣ್ಣಪ್ಪ ಕಮಕನೂರ್, ಸೈಯದ್ ಮೊಹಮ್ಮದ್ ಚಿಸ್ತಿ, ಮಜಹರ್ ಆಲಂ ಖಾನ್, ಮಹಾಪೌರ ವರ್ಷಾ ರಾಜೀವ ಜಾನೆ ಚಂದ್ರಿಕಾ ಪರಮೇಶ್ವರ್, ರಾಜ್ಯದ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎಸ್. ಸಲೀಂ, ಡಿ.ಐ.ಜಿ ಶಾಂತನು ಸಿನ್ಹಾ, ಕಲಬುರಗಿ ಎಸ್.ಪಿ. ಅಡ್ಡೂರು ಶ್ರೀನಿವಾಸುಲು, ಬೀದರ್ ಎಸ್.ಪಿ. ಪ್ರದೀಪ್ ಗುಂಟಿ, ಯಾದಗಿರಿ ಎಸ್.ಪಿ. ಪೃಥ್ವಿಕ್ ಶಂಕರ್ ಸೇರಿದಂತೆ ಇಲಾಖೆಯ ಪ್ರಮುಖ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ ಸ್ವಾಗತಿಸಿದರು.

ಕಿರುಸುದ್ದಿ

ಹಿರೇಮಲ್ಲನಕೆರೆ ಟಾಪರ್ ವಿದ್ಯಾರ್ಥಿನಿಯರಿಗೆ ಸನ್ಮಾನ

ಹೂವಿನಹಡಗಲಿ: ತಾಲೂಕಿನ ಹಿರೇಮಲ್ಲನಕೆರೆ ಸರ್ಕಾರಿ ಪ್ರೌಢಶಾಲೆ ಎಸ್ಸೆಸ್ಸೆಲ್ಸಿ ಫಲಿತಾಂಶ 100 ಲಭಿಸಿದೆ ಎಂದು ಮುಖ್ಯ ಗುರುಗಳಾದ ಜಿ.ಎಂ. ಕಾಂತೇಶ್ ತಿಳಿಸಿದ್ದಾರೆ.ಮಂಗಳವಾರ ಶಾಲೆಯ ಅತ್ಯಧಿಕ ಅಂಕ ಪಡೆದ ವಿದ್ಯಾರ್ಥಿಗಳ ಮನೆಗಳಿಗೆ ಎಸ್‌ಡಿಎ ಸಿ ಪದಾಧಿಕಾರಿಗಳು ಶಿಕ್ಷಕರೊಂದಿಗೆ ಭೇಟಿ ನೀಡಿ ಗೌರವ ಸನ್ಮಾನ ನೆರವೇರಿಸಿದರು.ಡಿಸ್ಟಿಂಕ್ಷನ್ 16 ಪ್ರಥಮ 25, ದ್ವಿತೀಯ 4 ತೃತೀಯ 5 ಪರೀಕ್ಷೆಗೆ ಹಾಜರಾದ ಎಲ್ಲಾ 50 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ತಿಳಿಸಿದರು.ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಅಪ್ಸನಾ ಎಸ್. 599, ಶ್ವೇತಾ ಎಸ್. 592, ಸರಸ್ವತಿ ಟಿ. 581 ಅಂಕಗಳನ್ನು ಪಡೆದಿದ್ದಾರೆ. ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ರೇಣುಕಾರಾಜಾ ರೆಡ್ಡಿ ಡಿ., ಸದಸ್ಯ ಹೊಂಬಳ ನಾಗರಾಜ್, ಸರ್ವ ಸದಸ್ಯರು, ಶಿಕ್ಷಕರಾದ ಬಸಯ್ಯ ನರೇಗಲ್, ಕವಿತಾ ಕೆ.ಎಂ., ರೇಣುಕಾ ಕೆ., ಸತೀಶ್ ಎಚ್., ನೇತ್ರಾವತಿ ಬಿ., ಲಕ್ಯಾನಾಯ್ಕ್, ಲಿಂಗರಾಜು ಕೆ., ವಿಶ್ವನಾಥ್ ಎಸ್., ಟಿ.ಭಾರತಿ ಇದ್ದರು.



ಹೂವಿನಹಡಗಲಿ: ಮಂಗಳವಾರ ಶಾಲೆಯ ಅತ್ಯಧಿಕ ಅಂಕ ಪಡೆದ ವಿದ್ಯಾರ್ಥಿಗಳ ಮನೆಗಳಿಗೆ ಎಸ್‌ಡಿಎಸಿ ಪದಾಧಿಕಾರಿಗಳು ಶಿಕ್ಷಕರೊಂದಿಗೆ ಭೇಟಿ ನೀಡಿ ಗೌರವ ಸನ್ಮಾನ ನೆರವೇರಿಸಿದರು.

ಮೇ 7ರಂದು ಪ್ರತಿಭಾ ಪುರಸ್ಕಾರ

ಹುಣಸಗಿ: ತಾಲೂಕಿನ ವಿವಿಧ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜಿನಲ್ಲಿ ಅಭ್ಯಾಸ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಡಾ.ಎಸ್.ಪಿ.ದಯಾನಂದ ತಿಳಿಸಿದ್ದಾರೆ.



ಮೇ 7ರಂದು ಬೆಳಗ್ಗೆ 9 ಗಂಟೆಗೆ ಅಮ್ಮನ ಮನೆಯ ಆವರಣದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಮಾತೋಶ್ರೀ ಸುಶೀಲಮ್ಮ ಪಟ್ಟಣಶೆಟ್ಟಿ ಸ್ಮಾರಕ ಪ್ರತಿಷ್ಠಾನ ವತಿಯಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ತಾಲೂಕಿನ ವಿವಿಧ ಪ್ರೌಢಶಾಲೆಗಳಲ್ಲಿ ಅಭ್ಯಾಸ ಮಾಡಿ ಶೇಕಡ 95ಕ್ಕಿಂತ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ ಹಾಗೂ ತಾಲೂಕಿನ ಪಿಯು ಕಾಲೇಜುಗಳಲ್ಲಿ ಅಭ್ಯಾಸ ಮಾಡಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಗೌರವ ಪುರಸ್ಕಾರ ನೀಡಲಾಗುತ್ತಿದೆ.ಸ್ಪರ್ಧಾತ್ಮಕ ದಿನಮಾನಗಳಲ್ಲಿ ಇನ್ನೂ ಹೆಚ್ಚು ಮಕ್ಕಳು ತೊಡಗಿಕೊಳ್ಳುವಂತಾಗಲು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಮ್ಮ ಪ್ರತಿಷ್ಠಾನದ ಸಂಚಾಲಕರಾದ ಭೀಮಸೇನರಾವ್ ಕುಲಕರ್ಣಿ 81230 70 448 ಅವರನ್ನು ಸಂಪರ್ಕಿಸಲು ಕೋರಿದೆ.

ಕಲಮಂಗಿ ಸರ್ಕಾರಿ ಪ್ರೌಢ ಶಾಲೆಗೆ ಶೇ.100 ಫಲಿತಾಂಶ





ಸಿಂಧನೂರು: ತಾಲೂಕಿನ ಕಲಮಂಗಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆ ಈ ವರ್ಷದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ದಾಖಲಿಸಿ ಗಮನ ಸೆಳೆದಿದೆ ಎಂದು ಶಾಲೆಯ ಮುಖ್ಯೋಪಾಧ್ಯಾಯರಾದ ಮಲ್ಲಪ್ಪ ಬಾದರ್ಲಿ ತಿಳಿಸಿದ್ದಾರೆ. 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ ಶಾಲೆಯ ಒಟ್ಟು 22 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು,ಅದರಲ್ಲಿ ಉನ್ನತ ಶ್ರೇಣಿ 2,ಪ್ರಥಮ ಶ್ರೇಣಿ 13, ದ್ವಿತೀಯ ಶ್ರೇಣಿ 5, ತೃತೀಯ ಶ್ರೇಣಿ 2 ವಿದ್ಯಾರ್ಥಿಗಳು ಉತ್ತಮ ಫಲಿತಾಂಶದೊಂದಿಗೆ ಉತ್ತೀರ್ಣರಾಗಿದ್ದು ಶಾಲೆಗೆ ಶೇ.100ರಷ್ಟು ಫಲಿತಾಂಶ ದೊರೆತಿದೆ. ಈ 22 ವಿದ್ಯಾರ್ಥಿಗಳಲ್ಲಿ ಬಸನಗೌಡ ತಂದೆ ಈರನಗೌಡ 564 ಅಂಕ ಪಡೆದು (ಶೇ.90.24) ಪ್ರಥಮ ಸ್ಥಾನ, ಬಸಮ್ಮ ತಂದೆ ಸೋಮಲಿಂಗಪ್ಪ 540 ಅಂಕ ಪಡೆದು (ಶೇ.86.40) ದ್ವಿತೀಯ ಸ್ಥಾನ,ರಮೇಶ ತಂದೆ ಮರಿಸ್ವಾಮಿ 504 ಅಂಕ ಪಡೆದು (ಶೇ.80.64) ತೃತೀಯ ಸ್ಥಾನ ಪಡೆದಿರುವುದು ತಾಲೂಕು ಮಟ್ಟದಲ್ಲಿ ವಿಶಿಷ್ಟ ಸಾಧನೆ ಮಾಡಿದೆ ಎಂದು ಹೇಳಬಹುದು.

ಅಭಿನಂದನೆಗಳ ಸುರಿಮಳೆ: ಈ ಸಾಧನೆಗೆ ಕಾರಣರಾದ ಶಿಕ್ಷಕರಾದ ರವಿಚಂದ್ರ, ವೀರೇಶ ಗೋನವಾರ, ಎಂ.ಮಾರುತಿ, ರೂಪಾ ಎಸ್., ಬಸವರಾಜ, ಮೌನೇಶ ಹಾಗೂ ಶಾಲೆಯ ಎಲ್ಲ ಸಿಬ್ಬಂದಿ ವರ್ಗ ಮತ್ತು ಪೋಷಕರಿಗೆ ಅಭಿನಂದನೆಗಳು ವ್ಯಕ್ತವಾಗಿವೆ. ಪ್ರೋತ್ಸಾಹಕ ಬಹುಮಾನ ಘೋಷಣೆ: ಶಾಲೆಯ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದಲ್ಲಿ ಬಸನಗೌಡ ಎಂಬ ವಿದ್ಯಾರ್ಥಿ ಪ್ರಥಮ ಸ್ಥಾನ ಪಡೆದಿದ್ದರಿಂದ ಅವರಿಗೆ ಗ್ರಾಮದ ಯುವ ಮುಖಂಡ ಶಿವಪ್ರಸಾದ ಹೊನ್ನನಗೌಡ ಕುಲಕರ್ಣಿ ಅವರು 5,000 ನಗದು ಬಹುಮಾನ ಘೋಷಣೆ ಮಾಡಿದ್ದಾರೆ.



ಕುಷ್ಟಗಿ: ತಾಲೂಕಿನ ನಂದಾಪೂರ ಗ್ರಾಮದಲ್ಲಿ ಕೆಕೆಆರ್‌ಡಿಬಿ ಮೈಕ್ರೋ ಯೋಜನೆಯ ಅನುದಾನದಡಿಯಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆಯ ಕಾಮಗಾರಿ ಭೂಮಿಪೂಜೆ ಕಾರ್ಯಕ್ರಮಕ್ಕೆ ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಎಚ್ .ಪಾಟೀಲ ಚಾಲನೆ ನೀಡಿದರು.

ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಚಾಲನೆ

ಕುಷ್ಟಗಿ: ಕ್ಷೇತ್ರದಲ್ಲಿ ಬರುವ ಎಲ್ಲಾ ಹಳ್ಳಿಗಳಿಗೆ ಅಭಿವೃದ್ಧಿಗೊಳಿಸಲು ಮೊದಲಾದ್ಯತೆ ನೀಡಲಾಗವುದು ಎಂದು ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಎಚ್.ಪಾಟೀಲ ಹೇಳಿದರು.

ತಾಲೂಕಿನ ನಂದಾಪೂರ ಗ್ರಾಮದಲ್ಲಿ ಕೆಕೆಆರ್‌ಡಿಬಿ ಮೈಕ್ರೋ ಯೋಜನೆಯ ಅನುದಾನದಡಿಯಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆಯ ಕಾಮಗಾರಿ ಭೂಮಿಪೂಜೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಂಗಳವಾರ ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ವಿವಿಧ ಸಮಸ್ಯೆಗಳು ತಾಂಡವವಾಡುತ್ತಿವೆ. ಹಳ್ಳಿಗಳಿಗೆ ಸಮರ್ಪಕವಾಗಿ ಸೌಲಭ್ಯ ಕಲ್ಪಿಸುವ ಮೂಲಕ ರಸ್ತೆ, ಕುಡಿಯುವ ನೀರು, ಸಾರಿಗೆ ಸಂಪರ್ಕ ಸೇರಿ ಜನರಿಗೆ ಮೂಲಭೂತ ಸೌಲಭ್ಯ ಕಲ್ಪಿಸುವುದು ನನ್ನ ಮೊದಲ ಗುರಿ. ಗ್ರಾಮೀಣ ಭಾಗಕ್ಕೆ ಅಭಿವೃದ್ಧಿಗೆ ಪ್ರಾಧಾನ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಸಿದ್ದಪ್ಪ ಹಳ್ಳದ ಹನಮಂತ ಕತ್ತಿ ರಾಜು ನಾಯಕ ಸಣ್ಣ ಬರಮಣ್ಣ ಹೊಮ್ಮಿನಾಳ ಮರೇಗೌಡ ಮುಂಡ ಗೌಡ್ರ ಮಹಾದೇವಪ್ಪ ಮೆಣೆದಾಳ ರಾಜು ನಾಯಕ ಬಾಳಪ್ಪ ಹೊಸಮನಿ ಸಣ್ಣ ಸಂಗಯ್ಯ ಹಿರೇಮಠ ಮಂಜುನಾಥ ಕತ್ತಿ ಶ್ರೀಶೈಲ್ ಸಜ್ಜನ ಇನ್ನಿತರರು ಇದ್ದರು.

ಖರ್ಗೆ ಹೇಳಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ | ಬಂಧನ ಬಿಡುಗಡೆ

ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಯತ್ನ

ಬಳ್ಳಾರಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಭಯೋತ್ಪಾದಕ ಎಂದು ಹೇಳಿಕೆ ನೀಡಿದ ಕ್ರಮ ಖಂಡಿಸಿ ಇಲ್ಲಿನ ಬಳ್ಳಾರಿ ನಗರ ಕ್ಷೇತ್ರದ ಮಾಜಿ ಶಾಸಕ, ಕೆಎಂಎಫ್ ಮಾಜಿ ಅಧ್ಯಕ್ಷ ಗಾಲಿ ಸೋಮಶೇಖರ್ ರೆಡ್ಡಿ, ಎಮ್ಮೆಲ್ಸಿ ವೈ.ಎಂ.ಸತೀಶ್ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್ ಮೊಕ ಅವರ ನೇತೃತ್ವದಲ್ಲಿ ಬಿಜೆಪಿ ನೂರಾರು ಕಾರ್ಯಕರ್ತರು ಮಂಗಳವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ನಂತರ ನಗರದ ಇನ್‌ಫೆಂಟ್ರಿ ರಸ್ತೆಯ ನಗರ ಕಾಂಗ್ರೆಸ್ ಜಿಲ್ಲಾ (ಡಿಸಿಸಿ) ಕಚೇರಿಗೆ, ಬಿಜೆಪಿ ಕಾರ್ಯಕರ್ತರು ಮುಖಂಡರು, ಮುತ್ತಿಗೆ ಹಾಕಲು ಮುಂದಾದಾಗ ಪೊಲೀಸರು ಬಂಧಿಸಿ, ನಂತರ ಬಿಡುಗಡೆಗೊಳಿಸಿದರು.

ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಮಾತನಾಡಿ, ಭಾರತವಷ್ಟೇ ಅಲ್ಲ, ಇಡೀ ವಿಶ್ವವೇ ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಹಾಗೂ ಅವರ ನೇತೃತ್ವದ ಸರ್ಕಾರವನ್ನು ಮೆಚ್ಚುಗೆ ವ್ಯಕ್ತಪಡಿಸುತ್ತಿದೆ. ನಮ್ಮ ಭಾರತವನ್ನು ಇಡೀ ವಿಶ್ವದಲ್ಲೇ ಘನತೆಯನ್ನು ಹೆಚ್ಚಿಸಿದ್ದಾರೆ. ಅಂತಹ ನಮ್ಮ ಪ್ರಧಾನ ಮಂತ್ರಿ ಮೋದಿ ಅವರ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಯೋತ್ಪಾದಕ ಎಂದು ಕರೆದಿರುವುದು ಅತ್ಯಂತ ಖಂಡನೀಯ.

ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಮಾತನಾಡಿ, ಪ್ರಧಾನಿ ಮೋದಿ ಅವರು ವ್ಯಕ್ತಿಯಲ್ಲ, ಅವರೊಬ್ಬ ದೇಶದ ಶಕ್ತಿ, ಇಂತಹ ನಾಯಕರನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು



ಭಯೋತ್ಪಾದಕ ಎಂದು ಹೇಳಿಕೆ ನೀಡಿರುವುದು ಅತ್ಯಂತ ದೊಡ್ಡ ದುರಂತ, ಖಂಡನೀಯ. ಮೋದಿ ಅವರು ಅಧಿಕಾರಕ್ಕೆ ಬಂದಾಗಿನಿಂದಲೂ ದೇಶಕ್ಕಾಗಿ, ದೇಶದ ಜನರಿಗಾಗಿ ಬಿಡುವಿಲ್ಲದೇ ಹಗಲಿರುಳು ಶ್ರಮಿಸುತ್ತಿದ್ದಾರೆ. ಇಂತಹ ನಾಯಕರ ಬಗ್ಗೆ ಈ ಹೇಳಿಕೆ ಸರಿಯಲ್ಲ, ಅವರ ಘನತೆಗೆ ಶೋಭೆ ತರೋಲ್ಲ, ಕೂಡಲೇ ಮಲ್ಲಿಕಾರ್ಜುನ ಖರ್ಗೆ ಅವರು ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್ ಮೊಕ ಮಾತನಾಡಿ, ನಮ್ಮ ಹೆಮ್ಮೆಯ ಮೋದಿ ಅವರ ಬಗ್ಗೆ ಕಾಂಗ್ರೆಸ್ ನವರು ಬಳಸುವ ಭಾಷೆ ಗಮನಿಸಿದರೆ ಕಾಂಗ್ರೆಸ್ ನವರ ಪ್ರವೃತ್ತಿ ಹೇಗಿದೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಕೂಡಲೇ ಮಲ್ಲಿಕಾರ್ಜುನ ಖರ್ಗೆ ಅವರು ಮೋದಿ ಅವರನ್ನು ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ನಗರ ಅಧ್ಯಕ್ಷ ಜಿ.ವೆಂಕಟರಮಣ ಅವರು ಮಾತನಾಡಿದರು. ಹಿರಿಯ ಮುಖಂಡರಾದ ಡಾ.ಮಹಿಪಾಲ್,ಧರಪ್ಪನಾಯಕ,ಸೋಮಶೇಖರ್, ಕೊಳಗಲ್ ಅಂಜನಿ, ಸಿದ್ದೇಶ್ ಉಳುರ್, ಶರಣು ಸೇರಿದಂತೆ ನೂರಾರು ಕಾರ್ಯಕರ್ತರು, ಮಹಿಳಾ ಮುಖಂಡರು ಇತರರಿದ್ದರು.

> **ನಮ್ಮ ಪ್ರಧಾನ ಮಂತ್ರಿ ಮೋದಿ ಅವರ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ದೇಶ ವಿರೋಧಿ ಹೇಳಿಕೆ ನೀಡಿರುವುದು ಅತ್ಯಂತ ಖಂಡನೀಯ. ನಮ್ಮ ಮೋದಿ ಅವರ ನಾಯಕತ್ವವನ್ನು ಇಡೀ ವಿಶ್ವವೇ ಒಪ್ಪಿಕೊಂಡಿದೆ. ಹೀಗಿರುವಾಗ ಕಾಂಗ್ರೆಸ್ ನಾಯಕರ ಕಣ್ಣಿಗೆ ಕಾಣಿಸುತ್ತಿಲ್ಲ, ಇದು ಬಹುದೊಡ್ಡ ದುರಂತ.**
> ■ ಅನಿಲ್‌ಕುಮಾರ್ ಮೊಕ, ಬಿಜೆಪಿ ಜಿಲ್ಲಾಧ್ಯಕ್ಷ

ಮಹಿಳಾ ವಕೀಲರ ಗುಂಡಿನ ದಾಳಿ: ಆರೋಪಿಗಳ ಬಂಧನಕ್ಕೆ ಆಗ್ರಹ

ವಿಜಯನಗರ: ಬೆಳಗಾವಿ ಮಹಿಳಾ ವಕೀಲೆ ಪೂಜಾ ಕಾಕಟಕರ್ ಅವರ ನಿವಾಸದ ಮೇಲೆ ಗುಂಡು ಹಾರಿಸಿದ ದುಷ್ಕರ್ಮಿಗಳನ್ನು ಶೀಘ್ರ ಬಂಧಿಸುವಂತೆ ನಗರದಲ್ಲಿ ಮಂಗಳವಾರ ವಕೀಲರು ಪ್ರತಿಭಟನೆ ನಡೆಸಿದರು.

ಹೊಸಪೇಟೆ ನಗರದ ಡಾ.ಅಂಬೇಡರ್ ವೃತ್ತದಲ್ಲಿ ಜಮಾವಣೆಗೊಂಡ ವಕೀಲರು, ಘಟನೆಗೆ ಕಾರಣರಾದ ಆರೋಪಿಗಳನ್ನು ತಕ್ಷಣವೇ ಬಂಧನ ಮಾಡಬೇಕು ಆಗ್ರಹಿಸಿ, ವಿವಿಧ ಘೋಷಣೆಗಳನ್ನು ಕೂಗಿದರು.

ನ್ಯಾಯಾಂಗಿಕ ಕಣ್ಗಾವಲಿನಲ್ಲಿ ತನಿಖೆ ನಡೆಸಬೇಕು. ವಕೀಲರಿಗೆ ಸೂಕ್ತ ಭದ್ರತೆ ಕಲ್ಪಿಸಬೇಕು. ವಕೀಲರ ಸಂರಕ್ಷಣಾ ಕಾಯ್ದೆಗೆ ತಕ್ಷಣವೇ ತಿದ್ದುಪಡಿ ಮಾಡಿ ಕಾಯ್ದೆಯಲ್ಲಿ ಅಪರಾಧಗಳನ್ನು ಜಾಮೀನು ರಹಿತ ಅಪರಾಧಗಳನ್ನಾಗಿ ಪರಿಗಣಿಸಬೇಕು.

ಪ್ರತಿಭಟನೆಯನ್ನು ಉದ್ದೇಶಿಸಿ ವಕೀಲರ ಒಕ್ಕೂಟದ ರಾಜ್ಯ ಮುಖಂಡ ಎ. ಕರುಣಾನಿಧಿ ಮಾತನಾಡಿ, ಪ್ರಕರಣವು ರಾಜ್ಯದ ವಕೀಲರನ್ನು ಬೆಚ್ಚಿ ಬೀಳಿಸಿದೆ. ಮಹಿಳಾ ವಕೀಲರ ಮೇಲೆ ಗುಂಡಿನ ದಾಳಿ ಪ್ರಕರಣ ರಾಜ್ಯದಲ್ಲಿ ಮೊದಲ ಪ್ರಕರಣವಾಗಿದೆ. ಮಹಿಳೆಯರು ವಕೀಲ ವೃತ್ತಿಗೆ ಬರುವುದೇ ಅಪರೂಪ, ಇಂತಹ ಪ್ರಕರಣಗಳಿಂದಾಗಿ ಮಹಿಳಾ ವಕೀಲರು ಆತಂಕ ಪಡುವ ಅಗತ್ಯವಿಲ್ಲ, ವಕೀಲರ ಒಕ್ಕೂಟ ವಕೀಲರ ಕಷ್ಟಗಳಿಗೆ ನೆರಳಾಗಿ ಸದಾ ನಿಲ್ಲುತ್ತದೆ ಎಂದು ಭರವಸೆ ನೀಡಿದರು.

ಮಹಿಳಾ ವಕೀಲ ಪುಷ್ಪಲತಾ ಮಾತನಾಡಿ, ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿದೆ, ವಕೀಲರ ಮೇಲಿನ ಧಾಳಿಯು ಕಾನೂನಿನ ಮೇಲಿನ ಧಾಳಿಗೆ ಸಮ ಎಂದರು.

ಹಿಳಾ ವಕೀಲೆ ಕರಿಬಸಮ್ಮ ಮಾತನಾಡಿ, ಮಹಿಳೆಯರ ಕುರಿತಾದ ಕೇಂದ್ರ ಸರ್ಕಾರದ ಭೇಟಿ ಬಚಾವ್ ಭೇಟಿ ಪಡಾವ್ ಎಲ್ಲಿ ಹೋಯಿತು ಎಂದರು.

ಯುವ ವಕೀಲ ಹರಪನಹಳ್ಳಿ ಮಂಜುನಾಥ ಮಾತನಾಡಿ, ಸರ್ಕಾರ ಘಟನೆ ಕುರಿತು ನಿರ್ದಿಷ್ಟ ಅವಧಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಮುಂಬರುವ ದಿನಗಳಲ್ಲಿ ಬೆಳಗಾವಿ ಅಧಿವೇಶನದಲ್ಲಿ ಮುತ್ತಿಗೆ ಹಾಕಲಾಗುವುದು ಎಂದರು. ವಕೀಲರಾದ ವೇಣುಗೋಪಾಲ್, ಮರಿಯಪ್ಪ, ಮದನ್, ಕಟಿಗಿ ಜಂಬಯ್ಯನಾಯಕ, ತಾರಿಹಳ್ಳಿ ಗೋಪಾಲ್, ದೇವೇಂದ್ರ ಇತರರಿದ್ದರು.



ಶೈಕ್ಷಣಿಕ ಅಭಿವೃದ್ಧಿಗೆ ಸಂಕಲ್ಪ: ಕೃಷ್ಣನಾಯಕ

ಹೂವಿನಹಡಗಲಿ: ಎಸ್ಸೆಸ್ಸೆಲ್ಸಿ ಶೈಕ್ಷಣಿಕ ಕ್ರಾಂತಿಗೆ ಪ್ರತಿಭಾವಂತ ವಿದ್ಯಾರ್ಥಿಗಳು ನಾಂದಿ ಹಾಡಿದ್ದಾರೆ. ಮಲ್ಲಿಗೆ ನಾಡಿನ ಶೈಕ್ಷಣಿಕ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುತ್ತೇನೆ ಎಂದು ಶಾಸಕ ಎಲ್.ಕೃಷ್ಣನಾಯಕ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ತಾಪಂ ರಾಜೀವ್ ಗಾಂಧಿ ಸಭಾಂಗಣದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಸಾಧಕ ವಿದ್ಯಾರ್ಥಿಗಳಿಗೆ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಗೌರವ ಸಮರ್ಪಣೆ ನೆರವೇರಿಸಿ ಅವರು ಮಾತನಾಡಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದವರು ಈ ಬಾರಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು. ಇಟಿಗಿ ಹಾಗೂ ನಂದಿಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಸಾಧನೆ ಮಾಡಿರುವುದು ವಿಶೇಷ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಟಾಪರ್ ಸನ್ಮಾನ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಎ.ಪೂಜಶ್ರೀ 620, ಕೆ.ಬಿ.ಪೂಜಾ 619, ನಾಗರಾಜ 619, ದಯಾನಂದ ಅಕ್ಕಿ 619, ಬಿ.ಆಶಾಬಾನು 618, ಎ.ಕೆ.ಗಣೇಶ 618 ವಿದ್ಯಾರ್ಥಿಗಳಿಗೆ ಶಾಸಕರು ಗೌರವ ಸಮರ್ಪಣೆ ನೆರವೇರಿಸಿ ಶುಭ ಹಾರೈಸಿದರು.

ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಪೂಜಾರ ಮಾತನಾಡಿದರು.ಈ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇಕಡಾ ನೂರರಷ್ಟು ಫಲಿತಾಂಶ ಪಡೆದ 13 ಸರ್ಕಾರಿ, 5 ಅನುದಾನಿತ, 5 ಮೊರಾರ್ಜಿ ಹಾಗೂ 9 ಅನುದಾನ ರಹಿತ ಒಟ್ಟು 32 ಪ್ರೌಢಶಾಲಾ ಮುಖ್ಯ ಗುರುಗಳಿಗೆ ಶಾಸಕರು ಸನ್ಮಾನಿಸಿದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಕೊಟ್ರಗೌಡ, ಪುರಸಭೆ ಮಾಜಿ ಅಧ್ಯಕ್ಷ ವಾರದ ಗೌಸ್ ಮೊಹಿದ್ದೀನ್, ಬಿಆರ್ ಎಸ್ ಎ.ಕೋಟೆಪ್ಪ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವಿ.ಹನುಮಂತಪ್ಪ, ದೈಹಿಕ ಪರಿವೀಕ್ಷಕ ರಫಿ ಅಹಮದ್ ಖವಾಸ್ ಸಿಡಿಪಿಒ ರಾಮನಗೌಡ, ಎಂಪಿಎಂ ಅಶೋಕ್ ಮುಖ್ಯ ಗುರುಗಳ ಸಂಘದ ಅಧ್ಯಕ್ಷ ಜಿ.ಎಂ. ಕಾಂತೇಶ್, ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಶಿವಲಿಂಗಪ್ಪ, ಡಿ.ಕೆ.ಪರಶುರಾಮ, ಸಿ.ಚಂದ್ರಪ್ಪ ಇತರರು ಉಪಸ್ಥಿತರಿದ್ದರು. ಕೆ.ಮಾದೇಶ್ವರ, ಹೊಂಬಾಳೆ ಕೊಟ್ರೇಶ್ ನಿರ್ವಹಿಸಿದರು.



ಪುರಸಭೆ ಅಧ್ಯಕ್ಷರ ಚುನಾವಣೆ: ಬಿಜೆಪಿ ಸದಸ್ಯರಿಗೆ ವಿಪ್ ಜಾರಿ

ಹಗರಿಬೊಮ್ಮನಹಳ್ಳಿ: ಪಟ್ಟಣದ ಪುರಸಭೆಯ ಅಧ್ಯಕ್ಷರ ಚುನಾವಣೆ ಏ.30ರಂದು ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಹಗರಿಬೊಮ್ಮನಹಳ್ಳಿ ಬಿಜೆಪಿ ಬೆಂಬಲಿತ ಪುರಸಭೆ ಸದಸ್ಯರಿಗೆ ಮಂಡಲ ಅಧ್ಯಕ್ಷ ಬೆಣಕಲ್ಲು ಪ್ರಕಾಶ್ ಅವರು ವಿಪ್ ಜಾರಿ ಮಾಡಿದ್ದಾರೆ.



ಸೋಮವಾರ ಬಿಜೆಪಿ ಪಕ್ಷದ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು. ಹಿಂದಿನ ಬಾರಿ ಪುರಸಭೆ ಅಧ್ಯಕ್ಷ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಚಿಹ್ನೆಯಲ್ಲಿ ಗೆದ್ದ ಬೋವಿ ವೀರಣ್ಣ ,ಮಲ್ಲೇಶ್ವರಿ ಭರತ್ ಬಿಜೆಪಿ ಸದಸ್ಯರು ಕಾಂಗ್ರೆಸ್ ಪಕ್ಷದವರನ್ನು ಬೆಂಬಲಿಸಿದರು ಎಂದು ಉಲ್ಲೇಖಿಸಿದ ಅವರು ಈ ಬಾರಿ ಬಿಜೆಪಿ ಸದಸ್ಯ ಬಣಕಾರ್ ಸುರೇಶ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲಿದ್ದು, ಸುರೇಶ್‌ರನ್ನು ಬೆಂಬಲಿಸುವಂತೆ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸುವಂತೆ ಬಿಜೆಪಿಯ ಎಲ್ಲ ಸದಸ್ಯರಿಗೆ ವಿಪ್ ನೀಡುತ್ತೇವೆ ಎಂದರು.

ಪುರಸಭೆ ಸದಸ್ಯರಾದ ಬಣಕಾರ್ ಸುರೇಶ್, ದೀಪಕ್ ಕಠಾರೆ ,ನಾಗರಾಜ್ ಜನ್ನು ,ನವೀನ್ ಕುಮಾರ್,ಜೋಗಿ ಹನುಮಂತಪ್ಪ,ನಗರ ಘಟಕ ಅಧ್ಯಕ್ಷ ಮಂಜುನಾಥ ಹಿರೇಮಠ , ಕಾರ್ಯದರ್ಶಿ ಕೋಗಳಿ ಹನುಮಂತಪ್ಪ, ಮುಖಂಡರಾದ ಶಿವಮೊಗ್ಗ ಸಂದೀಪ್,ರವೀಂದ್ರ ಗೌಡ,ದಿವಾಕರ್ ಸೇರಿದಂತೆ ಇತರರು ಇದ್ದರು.

ಶಾಸಕ ಕಂದಕೂರಿಗೆ ನೀರಾವರಿ ಬಗ್ಗೆ ಅರಿವಿಲ್ಲ: ಸಾಯಿಬಣ್ಣ

ಯಾದಗಿರಿ: ಗುರಮಠಕಲ್ ಕ್ಷೇತ್ರದ ಹತ್ತಿಕುಣಿ ಜಲಾಶಯ ನಾಲಾ ಆಧುನೀಕರಣ ಕಾಮಗಾರಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದಡಿ ನಡೆಯಲಿದ್ದು, ಇದರಲ್ಲಿ ಸ್ಥಳೀಯ ಶಾಸಕ ಶರಣಗೌಡ ಕಂದಕೂರ ಅವರದ್ದು ಯಾವುದೇ ಪಾತ್ರವಿಲ್ಲ ಎಂದು ಕಾಂಗ್ರೆಸ್ ಹಿರಿಯ ನಾಯಕ ಹಾಗೂ ಗುರಮಠಕಲ್ ಶಾಶ್ವತ ನೀರಾವರಿ ಹೋರಾಟ ಸಮಿತಿ ಮುಖ್ಯಸ್ಥ ಸಾಯಿಬಣ್ಣ ಬೋರಬಂಡ ಸ್ಪಷ್ಟಪಡಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಗುರಮಠಕಲ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ವೇಳೆ 1975ರಲ್ಲಿ ಹತ್ತಿಕುಣಿ ಕೆರೆಗೆ ಜಲಾಶಯ ನಿರ್ಮಿಸಿದ್ದಾರೆ. ಇದು ಒಟ್ಟು 0.352 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ. ಅಲ್ಲದೆ ಈ ಭಾಗದ ಹತ್ತಿಕುಣಿ, ಕಟಗಿ ಶಹಾಪುರ, ಬಂದಳ್ಳಿ, ದಸಸರಬಾದ್, ಯಡ್ಡಳ್ಳಿ ಹಾಗೂ ಹೊನಗೇರಾ ಗ್ರಾಮಗಳ ಒಟ್ಟು 5300 ಎಕರೆ ರೈತರ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಿದೆ ಎಂದಿದ್ದಾರೆ.



ನಮ್ಮ ಭಾಗದಲ್ಲಿ ಮುಂಗಾರು ಜೂನ್ ತಿಂಗಳಿನಲ್ಲಿ ಆರಂಭಗೊಂಡು ಪ್ರತಿಶತ 711 ಮಿ.ಮೀಟರ್ ಮಳೆ ಬೀಳುತ್ತಿದೆ. ವಾಡಿಕೆಯಂತೆ 755 ಮೀಟರ್ ಮಳೆಯಾಗಬೇಕು. ಹೀಗಾಗಿ ಕಾಲುವೆ ನೀರು ಆವಿಯಾಗುವುದರಿಂದ ಭೂಮಿಯಲ್ಲಿ ತೇವಾಂಶ ಕೊರತೆಯಾಗಿ ರೈತರಿಗೆ ಎರಡನೇ ಅವಧಿಯ ಬೆಳೆಗೆ ನೀರಿಲ್ಲದೆ ತೊಂದರೆ ಅನುಭವಿಸುವಂತಾಗಿದೆ.

ಇದನ್ನು ಮನಗೊಂಡ ಕೇಂದ್ರ ಸರ್ಕಾರ ಪ್ರಧಾನಮಂತ್ರಿ ಕೃಷಿಸಿಂಚಾಯಿ ಯೋಜನೆಯಡಿ ಶೇ.60 ರಷ್ಟು ರಾಜ್ಯ, ಶೇ.40 ರಷ್ಟು ಕೇಂದ್ರ ಸರ್ಕಾರದ ಅನುದಾನದೊಂದಿಗೆ ರಾಜ್ಯದಲ್ಲಿ ಮೊದಲ ಬಾರಿಗೆ ಹತ್ತಿಕುಣಿ ಜಲಾಶಯಕ್ಕೆ ಪೈಲಟ್ ಯೋಜನೆಯಡಿ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದಿದ್ದಾರೆ.

ವಾಸ್ತವಾಂಶ ಹೀಗಿದ್ದರೂ ಕ್ಷೇತ್ರದ ಶಾಸಕ ಶರಣಗೌಡ ಕಂದಕೂರ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮಾಡಿದ ಕೆಲಸವನ್ನು ತಮ್ಮ ಸಾಧನೆ ಎಂದು ಬಿಂಬಿಸಿಕೊಳ್ಳುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಹರಿಹಾಯ್ದಿದ್ದಾರೆ.

ಕ್ರೀಡೆಗಳು ಮಕ್ಕಳ ಬೆಳವಣಿಗೆಗೆ ಪೂರಕ

ಬಳ್ಳಾರಿ: ಕ್ರೀಡೆಗಳು ಮಕ್ಕಳ ಬೆಳವಣಿಗೆಗೆ ಪೂರಕವಾಗಿದೆ. ದೇಹ ಸದೃಢವಾಗಿರುವುದರ ಜೊತೆಗೆ ಮಕ್ಕಳ ನೆನಪಿನ ಶಕ್ತಿ ಹೆಚ್ಚಲಿದೆ. ಖಾಯಿಲೆಗಳು ಹತ್ತಿರಕ್ಕೆ ಸುಳಿಯೋಲ್ಲ, ಚಿಕ್ಕ ಮಕ್ಕಳಿದ್ದಾಗ ತರಬೇತಿಗಳನ್ನು ನೀಡಿದರೆ, ಚೈನಾ, ರಷ್ಯಾ, ಜರ್ಮನಿ ಸೇರಿದಂತೆ ವಿವಿಧ ದೇಶಗಳಂತೆ ನಮ್ಮ ಭಾರತದ ಮಕ್ಕಳು ಒಲಂಪಿಕ್ ಕ್ರೀಡಾಕೂಟದಲ್ಲಿ ಅಭೂತಪೂರ್ವ ಗೆಲವು ಸಾಧಿಸಲಿದ್ದಾರೆ, ಇದರಲ್ಲಿ ಅನುಮಾನವೇ ಬೇಡ ಎಂದು ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರೀಡಾ ಇಲಾಖೆ, ಬಳ್ಳಾರಿ ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್ ಆಶ್ರಯದಲ್ಲಿ 22 ದಿನಗಳ ಕಾಲ ಹಮ್ಮಿಕೊಂಡಿದ್ದ ಕ್ರೀಡಾ ಪ್ರತಿಭೆಗಳ ಹುಡುಕಾಟದ ಉಚಿತ ಅಥ್ಲೆಟಿಕ್ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಂಗಳವಾರ ಮಾತನಾಡಿದರು.

ಇಂತಹ ಶಿಬಿರಗಳು ಆಗಾಗ್ಗೆ ಆಯೋಜಿಸಬೇಕು, ಮಕ್ಕಳ ಕ್ರೀಡೆಗಳಿಗೆ ಪೂರಕವಾಗಿರಲಿದೆ. ಒಲಂಪಿಕ್‌ನಲ್ಲಿ ನಮ್ಮ ಮಕ್ಕಳು ಉತ್ತಮ ತರಬೇತಿ ಪಡೆದು ದೇಶದ ಕೀರ್ತಿ ಹೆಚ್ಚಿಸಬೇಕು ಎಂದು ಸಲಹೆ ನೀಡಿದರು.

ಬಳ್ಳಾರಿ ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್ ಅಧ್ಯಕ್ಷ ಡಾ.ರವಿ ಶಂಕರ್ ಮಾತನಾಡಿ, ಪ್ರತಿಯೊಬ್ಬ ಮಕ್ಕಳಲ್ಲಿ ಕ್ರೀಡೇ ಸೇರಿದಂತೆ ಯಾವುದಾದರೊಂದು ಪ್ರತಿಭೆ ಇದ್ದೇ



ಇರಲಿದೆ. ಅವುಗಳನ್ನು ಗುರುತಿಸುವ ಕಾರ್ಯವಾಗಬೇಕು. ಮಕ್ಕಳಲ್ಲಿ ಕ್ರೀಡಾ ಮನೋಭಾವ ಬೆಳೆಸಬೇಕು. ಪ್ರೋತ್ಸಾಹಿಸಬೇಕು. ಮಕ್ಕಳು ಒಳ್ಳೆಯ ಕ್ರೀಡಾಪಟುಗಳಾಗಿ ದೇಶದ ರಾಜ್ಯದ ಕೀರ್ತಿ ಹೆಚ್ಚಿಸಲಿದ್ದಾರೆ ಎಂದರು.ನೂರಾರು ಮಕ್ಕಳು ಪ್ರತಿದಿನ ಬೆ.6.30ರಿಂದ 8.30ರ ವರೆಗೆ ಹಾಗೂ ಸಂಜೆ 5 ರಿಂದ 7ರ ವರೆಗೆ ಬೇಸಿಕ್ ಶಿಬಿರದಲ್ಲಿ ಭಾಗವಹಿಸಿ ಗಮನಸೆಳೆದರು. ಈ ಬೇಸಿಕ್ ತರಬೇತಿಯಲ್ಲಿ 92 ಮಕ್ಕಳನ್ನು ಆಯ್ಕೆ ಮಾಡಿದ್ದು, ಮೇ 1ರಿಂದ ಒಂದು ತಿಂಗಳ ಕಾಲ ತರಬೇತಿ ನೀಡಲಾಗುವುದು ಎಂದರು.

ಆಯ್ಕೆ ಮಾಡಿದ ಮಕ್ಕಳನ್ನು ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಅವರು ಬಹುಮಾನ ವಿತರಿಸಿ ಪ್ರೋತ್ಸಾಹಿಸಿದರು.ತರಬೇತುದಾರ ಬಾಲು ಹಾಗೂ ಸಂತೋಷ್, ಅಸೋಸಿಯೇಷನ್ ಉಪಾಧ್ಯಕ್ಷ ಡಾ.ಅನುರಾಧಾ, ಮಹಾನಗರ ಪಾಲಿಕೆ ಸದಸ್ಯರಾದ ಎಂ.ಗೋವಿಂದರಾಜಲೂ, ಎಂ.ಜಗನ್ನಾಥ ಇತರರಿದ್ದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಸನ್ಮಾನ

ಹೂವಿನಹಡಗಲಿ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪಟ್ಟಣದ ಎಸ್‌ಎಂಎನ್ ಜ್ಯುವೆಲರ್ಸ್ ಮಾಲೀಕ, ಸಮಾಜ ಸುಧಾರಕ ಎಸ್‌ಎಂಎನ್ ಶಿವರಾಜ್ ಅವರ ಜನ್ಮದಿನಾಚರಣೆ ನಿಮಿತ್ತ ಪಟ್ಟಣದ ಗವಿಮಠದಲ್ಲಿ ಸನ್ಮಾನಿಸಲಾಯಿತು.

ಬೆಳಿಗ್ಗೆ ಜ್ಞಾನಗಂಗಾ ಪ್ರೌಢಶಾಲೆಯಲ್ಲಿ ಜ್ಞಾನ ಬೆಳಕು ಅಕಾಡೆಮಿ ಆಯೋಜಿಸಿರುವ ಬೇಸಿಗೆ ಶೈಕ್ಷಣಿಕ ಶಿಬಿರದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗೆ ನೋಟ್ ಪುಸ್ತಕ ಲೇಖನಿ ಉಡುಗೊರೆಯಾಗಿ ನೀಡಿದರು.

ಪತ್ರಕರ್ತ ಗೋಣಿಸ್ವಾಮಿ, ಗವಿಮಠದ ಡಾ ಹಿರಿಶಾಂತವೀರ ಮಹಾಸ್ವಾಮೀಜಿ ಮಾತನಾಡಿದರು.ಜೆಸಿಐ ಅಧ್ಯಕ್ಷ ಹಿತೇಶ್‌ಕುಮಾರ್, ಕರ್ನಾಟಕ ಪ್ರೆಸ್‌ಕ್ಲಬ್ ಗೌರವಾಧ್ಯಕ್ಷ ಎಂ.ದಯಾನಂದ, ತಾಲೂಕು ಅಧ್ಯಕ್ಷ ಬಿಚ್ಚುಗತ್ತಿ ಖಾಜಾ ಹುಸೇನ್, ಜ್ಞಾನ ಬೆಳಕು ಅಕಾಡೆಮಿಯ ಬಾರಿಕರ ವಿಶ್ವನಾಥ್, ವಿಜಯ್ ಲಿಂಗದಹಳ್ಳಿ, ಉಮೇಶ್ ಸೊಪ್ಪಿನ, ಲೋಕೇಶ್ ಅಂಗಡಿ, ಮುಖಂಡರಾದ ಪುನೀತ್ ದೊಡ್ಡಮನಿ, ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.



ಜಮೀನು ಅಕ್ರಮ ನೋಂದಣಿಗೆ ವಿರೋಧ

ಸಿರುಗುಪ್ಪ: ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕು ಸಮಿತಿ ವತಿಯಿಂದ ವಿವಿಧ ಬೇಡಿಕೆ ಮತ್ತು ಜಮೀನು ಅಕ್ರಮ ನೋಂದಣಿ ವಿರೋಧಿಸಿ ನಗರದ ಮಹಾತ್ಮ ಗಾಂಧಿ ವೃತ್ತದಿಂದ ಬಳ್ಳಾರಿ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆಯನ್ನು ಮಂಗಳವಾರ ಆರಂಭಿಸಿದರು.

ತಾಲೂಕು ಅಧ್ಯಕ್ಷ ವಿ.ಮಾರುತಿ ಮಾತನಾಡಿ, ಕಳೆದ ಸುಮಾರು ವರ್ಷಗಳಿಂದ ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕು ಸಮಿತಿ ವತಿಯಿಂದ ನಿರಂತರ ಹೋರಾಟಗಳು ಮಾಡುತ್ತಾ ಬಂದಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿದ್ಯುತ್ ಖಾಯ್ದೆ ರೈತರಿಗೆ ಮಾರಕವಾಗಿದೆ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಮುಂದಾಗಿರುವ ಕೇಂದ್ರ ಸರ್ಕಾರ ಈ ಖಾಯ್ದೆಯನ್ನು ರದ್ದು ಪಡಿಸಬೇಕು. 64-ಹಳೇಕೋಟೆ ದೇವಲಾಪುರ ಗ್ರಾಮದಲ್ಲಿರುವ 15ಕ್ಕೂ ಹೆಚ್ಚು ಸರ್ವೇ ನಂಬರ್‌ಗಳ ಪೈಕಿ 130.6ಸೆಂಟ್ಸ್ ಜಮೀನುಗಳಲ್ಲಿ ಸುಮಾರು 80ಕ್ಕೂ ಹೆಚ್ಚು ಕುಟುಂಬಗಳು 2-3ತಲೆಮಾರುಗಳಿಂದ ಸಾಗು ಮಾಡುತ್ತಾ ಅದೇ ಭೂಮಿಯನ್ನು ನಂಬಿ ಉಳುಮೆ ಮಾಡುವಂತ ಕಡುಬಡವರು ವಾಲ್ಮೀಕಿ ಜನಾಂಗದವರು ಇರುತ್ತಾರೆ ಅಲ್ಪ ಸ್ವಲ್ಪ ಇದ್ದ ಭೂಮಿಯನ್ನು ಸಿರುಗುಪ್ಪ ಟಾನ್ ಜನತೆಗೆ ಕುಡಿಯುವ ನೀರಿಗಾಗಿ ಸರ್ಕಾರ ಕೆರೆ ನಿರ್ಮಾಣ ಮಾಡಿ ಆ ಜನರ ಕೈಯಲ್ಲಿ ಭೂಮಿಯನ್ನು ಕಸಿದುಕೊಂಡಿದೆ. ಅದೇ ಜನ ಈ ಭೂಮಿಯಲ್ಲಿ ಸ್ವಲ್ಪ ಜನ ಭೂಮಿ ಹಿಡಿದಿದ್ದಾರೆ. ಕೆಲವು ಪಟ್ಟ ಭದ್ರ ಹಿತಾಶಕ್ತಿಗಳು ಈ ಭೂಮಿ ನಮ್ಮದು ನಾವುಗಳು ಬೇರೆಯವರಿಂದ ಖರೀದಿ ಮಾಡಿಸಿ ಕೊಂಡಿದ್ದೇವೆ ಎಂದು ದೌರ್ಜನ್ಯ ದಬ್ಬಾಳಿಕೆಗಳಿಂದ ಒಕ್ಕಲೆಬ್ಬಿಸಲು ಬಂದಿದ್ದಾರೆ. ನಮ್ಮನ್ನು ಒಕ್ಕಲೆಬ್ಬಿಸಲು ಬಂದವರು ನಿಜವಾದ ಭೂಮಾಲೀಕರಲ್ಲ, ಅವರನ್ನು ಕೂಡಲೇ ಬಂಧಿಸಬೇಕೆಂದು ಎಡಿಸಿಗೂ ಮತ್ತು ಸಹಾಯ ಆಯುಕ್ತರಿಗೆ ಮನವಿ ನೀಡಿದೆ. ಆದರೂ ಇಲ್ಲಿವರೆಗೆ ಕ್ರಮವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಡೋಣಿ ಹುಲೆಪ್ಪ, ಎಚ್.ಗಾಳೆಪ್ಪ, ಹನುಮೇಶ್, ಸಿಲ್ವಡಿ, ಎಂ.ದುರುಗಪ್ಪ, ಜಿ.ಹಂಸಪ್ಪ, ಬಿ.ರಾಮಣ್ಣ, ಮಾರೆಮ್ಮ, ಎ.ಸರ್ದಾರಪ್ಪ, ಎಂ.ಈರಣ್ಣ, ಹನುಮಂತಪ್ಪ, ವೆಂಕಟೇಶ್, ಗೋವಿಂದ, ಲಕ್ಷ್ಮಣ ಇತರರಿದ್ದರು.